ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಮಂತ್ರಿಗಳು).—ಸಂಬಂಧಪಟ್ಟ ಸಚಿವರಿಗೆ ಈ ವಿಷಯವನ್ನು ತಿಳಿಸಿ, ನಂತರ ಮಾಹಿತಿಯನ್ನು ತರಿಸಿ, ಉತ್ತರ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರು ಗಂಭೀರವಾದ ವಿಷಯ ಎತ್ತಿದ್ದರಿಂದ, ನಾನು ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಮತ್ತೆ ನೀವು ಏತಕ್ಕಾಗಿ ಮಾತನಾಡುತ್ತೀರಿ? ದಯವಿಟ್ಟು ಕೂತುಕೊಳ್ಳಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಶೂನ್ಯ ವೇಳೆಯಲ್ಲಿ ವಿಷಯಗಳನ್ನು ಎತ್ತಿದಮೇಲೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿದ್ದು ಉತ್ತರ ಕೊಡಬೇಕು.

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ. ಉತ್ತರ ಕೊಡಿಸುವ ಜವಾಬ್ದಾರಿ ನನಗೆ ಬಿಡಿ.

ಶ್ರೀ ಜಿ. ಎಸ್. ಬಾಗಲಕೋಟೆ.—ಸನ್ಮಾನ್ಯ ಅಧ್ಯಕ್ಷರೆ, ಜಮಖಂಡಿ ತಾಲ್ಲೂಕಿನಲ್ಲಿ ವಿಶೇಷವಾಗಿ ರಬ್‌ಕವಿ—ಬನಹಟ್ಟಿ ನಗರಪಾಲಿಕೆ ಹಟ್ಟಿಯಲ್ಲಿ ಕಾಮಾಲೆ ರೋಗ ವಿಪರೀತವಾಗಿ ಹಬ್ಬಿ, ಗಂಭೀರವಾದ ಸಮಸ್ಯೆ ಜನತೆಯ ಆರೋಗ್ಯದೃಷ್ಟಿಯಿಂದ ಉದ್ಭವಿಸಿದೆ. ಈ ರೋಗದಿಂದ ಬಳಲುವವರ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ತಾತ್ಕಾಲಿಕ ಕ್ರಮ ಕೈಕೊಳ್ಳುವಲ್ಲಿ ವಿಫಲರಾದ ಬಗ್ಗೆ ಸನ್ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ. ರಘುಪತಿ (ವಿದ್ಯಾಮಂತ್ರಿಗಳು ಮಾನ್ಯ ಆರೋಗ್ಯ ಮಂತ್ರಿಗಳವರ ಪರವಾಗಿ).—

೧. ಬಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕು, ರಭಕವಿ—ಬನಹಟ್ಟಿ ನಗರ ಸರಹದ್ದಿನಲ್ಲಿ ಕಳೆದ ಎರಡು ತಿಂಗಳುಗಳಿಂದ ೨೭ ಮಂದಿಗೆ ಕಾಮಾಲೆ ರೋಗ ತಲೆದೋರಿ ದಿನಾಂಕ; ೭–೭–೮೫ ರವರೆಗೆ ೩ ಮಂದಿ ಮೃತಪಟ್ಟಿರುತ್ತಾರೆ. ರೋಗ ತಗುಲಿದವರಿಗೆ ತಕ್ಕ ಚಿಕಿತ್ಸಾ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ. ಬಿಜಾಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರು ಸ್ಥಳಕ್ಕೆ ಭೇಟಿ ಕೊಟ್ಟು ಚಿಕಿತ್ಸೆಗೆ ಬೇಕಾದ ಔಷಧ ಹಾಗೂ ಸಲಕರಣೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಿರುತ್ತಾರೆ.

೨. ಸ್ಥಳೀಯ ಕುಡಿಯುವ ನೀರು ಕಾಯಿಲೆ ಹರಡಲಿಕ್ಕೆ ಕಾರಣವೆಂದು ಊಹಿಸಲಾಗಿದೆ. ಆದ್ದರಿಂದ ನೀರನ್ನು ಅಪಾಯರಹಿತ ಮಾಡಲು ಚೆಲುವೆಪುಡಿಯ (ಕ್ಲೋರಿನ್) ಉಪಯೋಗವನ್ನು ಮಾಡಲಾಗುತ್ತಿದೆ.

೩. ಜಿಲ್ಲಾ ಆರೋಗ್ಯ ಅಧಿಕಾರಿಯವರು ಸ್ಥಳೀಯ ನಗರಸಭೆಯವರಿಗೆ ಪೂರ್ಣ ಶುದ್ಧ ಹಾಗೂ ಅಪಾಯ ರಹಿತ ನೀರಿನ ಪೂರೈಕೆ ಹಾಗೂ ಪರಿಸರದ ನೈರ್ಮಲ್ಯದ ಬಗ್ಗೆ ಪೂರ್ಣ ಗಮನ ಹರಿಸಲು ಸೂಚನೆ ನೀಡಿರುತ್ತಾರೆ.

ವಿತ್ತೀಯ ಕಾರ್ಯಕಲಾಪಗಳು

೧೯೮೫–೮೬ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಬೇಡಿಕೆಗಳ ಸಂಖ್ಯೆ ೯, ೧೦, ೧೪ ಮತ್ತು ೧೩ (ವಿದ್ಯಾ ಇಲಾಖೆ)

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲ್).—ಮಾನ್ಯ ಸಭಾಧ್ಯಕ್ಷರೆ, ಜನತಾ ಸರ್ಕಾರ ೧೯೮೦ ರೊಳಗೆ ಪೂರ್ಣವಾಗಿ ಸಾರ್ವತ್ರಿಕವಾಗಿ ಅನಕ್ಷರತೆಯನ್ನು ಹೋಗಲಾಡಿಸುವುದರ ಬಗ್ಗೆ ಒಂದು ವಿಚಾರವನ್ನು ಹೇಳಿದರು. ಆದರೆ, ಈಗಿರುವ ಪರಿಸ್ಥಿತಿ ಕೂಡ ಬದಲಾವಣೆ ಏನೂ ಆಗಿಲ್ಲ. ಅದು ಇದೇರೀತಿಯಲ್ಲಿದೆ. ಇದರ ಬಗ್ಗೆ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ ಬರೆದ "ರಂಗಣ್ಣನ ಕನಸಿನ ದಿನಗಳು' ಎಂಬ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ. "ರಂಗಣ್ಣ ರೇಂಜಿನಲ್ಲಿ ಅಧಿಕಾರ ವಹಿಸಿ ನಾಲ್ಕು ತಿಂಗಳಾದವು. ಸುಮಾರು ನಲವತ್ತು ಐವತ್ತು ಪಾಠಶಾಲೆಗಳ ತನಿಖೆ ಮತ್ತು ಭೇಟಿಗಳಿಂದ ಪ್ರಾಥಮಿಕ ವಿದ್ಯಾಭ್ಯಾಸದ ಸ್ಥಿತಿ ತಕ್ಕಮಟ್ಟಿಗೆ ಅವನಿಗೆ ಪರಿಚಯವಾಯಿತು. ಹಲವು ಕಡೆಗಳಲ್ಲಿ ಪಾಠಶಾಲೆಗಳಲ್ಲಿ ಕಟ್ಟಡಗಳಿಲ್ಲ. ಮಾರಿಗುಡಿ, ಆಂಜನೇಯನ ದೇವಸ್ಥಾನ, ಚಾವಡಿ, ಹಳೆಯ ಮುರುಕಲು ಮನೆ...ಇವುಗಳಲ್ಲೇ ಬಹುಮಟ್ಟಿಗೆ ಪಾಠಶಾಲೆಗಳು ನಡೆಯುತ್ತಿದ್ದುವು. ಸರ್ಕಾರದ

ಕಟ್ಟಡಗಳು ಕೆಲವು ಹಳ್ಳಿಗಳಲ್ಲಿ ಮಾತ್ರ ಇದ್ದವು. ಅವುಗಳಲ್ಲಿ ಹಲವುದರ ನೆಲ ಕಿತ್ತು ಹೋಗಿ, ಹೆಂಚುಗಳು ಹಲವು ಮುರಿದುಹೋಗಿ ಆ ಕಟ್ಟಡಗಳೂ ಬಹಳ ಹೀನಸ್ಥಿತಿಯಲ್ಲಿದ್ದವು. ಸಾಕಾವಷ್ಟು ಬೆಂಚುಗಳಿರಲಿಲ್ಲ. ಹಲಗೆಗಳಿರಲಿಲ್ಲ. ಕೆಲವು ಪಾಠಶಾಲೆಗಳಲ್ಲಿ ಬೋರ್ಡ್ ಸಹ ಇರಲಿಲ್ಲ. ಸಾಮಾನ್ಯವಾಗಿ ಒಬ್ಬರೇ ಮೇಸ್ಟರು ಇರುವ ಪಾಠಶಾಲೆಗಳ ಸಂಖ್ಯೆ ಹೆಚ್ಚು. ಶೇಕಡಾ ಎಪ್ಪತ್ತರವರೆಗೆ ಎಂದು ಹೇಳಬಹುದಾಗಿತ್ತು. ಅಲ್ಲೆಲ್ಲ ಸರಾಸರಿ ಹುಡುಗರ ಸಂಖ್ಯೆ ಹದಿನೈದು. ಕೆಲವು ಪಾಠಶಾಲೆಗಳಲ್ಲಿ ಆರು–ಏಳು ಮಕ್ಕಳು ಮಾತ್ರ. ಎಲ್ಲೊ ಅಪರೂಪವಾಗಿ ಒಂದೊಂದು ಕಡೆ ಮುವತ್ತೈದು ನಲವತ್ತು ಹುಡುಗರು. ಮೊದಲನೆಯ ತರಗತಿಯಲ್ಲಿ ನಾಲ್ಕು, ಐದೂ ವರ್ಷ ಹಿಂದೆ ಬಿದ್ದಿದ್ದ ಹುಡುಗರು ಇರುತ್ತಿದ್ದರು. ಅದರ ಪ್ರಕಾರವೇ ನಮ್ಮ ಪ್ರಾಥಮಿಕ ವಿದ್ಯಾಭ್ಯಾಸವೂ ಇಂದು ಚಾವಡಿಗಳು, ಮಾರಮ್ಮನ ಗುಡಿ, ದೇವಸ್ಥಾನ ಇಂತಹ ಕಡೆ ನಡೆಯುತ್ತಿವೆ. ಶಾಲೆಗಳಿಗೆ ಕಟ್ಟಡಗಳಿಲ್ಲ. ಅಲ್ಲದೆ, ಇದೇ ರೀತಿ ಪುಟ ೫೨ರಲ್ಲಿ......'' ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಗಳ ಸಮಸ್ಯೆ ಬಹಳ ದೊಡ್ಡದು ಎಂದು ರಂಗಣ್ಣನಿಗೆ ತಿಳಿದುಬಂತು. ಮೇಲಿನವರು ಬರೆಯು ವರದಿಗಳನ್ನು ತಯಾರುಮಾಡುವುದರಲ್ಲಿಯೂ ಹೊರಗಿನ ಪ್ರಾಂತದವರಿಗೆ ಅದರಲ್ಲಿಯೂ ಮುಖ್ಯವಾಗಿ ಇಂಗ್ಲೀಷು ಜನರಿಗೆ–ಇದೊಂದು ಮಾದರಿ ಸಂಸ್ಥಾನ ಎಂಬ ಅಭಿಪ್ರಾಯ ಹುಟ್ಟುವ ರೀತಿಯಲ್ಲಿ ಅಭಿವೃದ್ಧಿ ಪ್ರಕಾಶನ ಮಾಡುವುದರಲ್ಲಿಯೂ, ಕೇವಲ ಸಂಖ್ಯಾಬಾಹುಳ್ಯದಿಂದ ವಿದ್ಯಾಪ್ರಚಾರವನ್ನು ಅಳೆಯುವುದರಲ್ಲಿಯೂ ನಿರತರಾಗಿರುವರೆಂದು ಅವನಿಗೆ ಬೋಧೆಯಾಯಿತು. ಪ್ರಾಥಮಿಕ ದರ್ಜೆಯಲ್ಲಿ ಎರಡು ಲಕ್ಷಕ್ಕಿಂತ ಹೆಚ್ಚು ಮಕ್ಕಳು ಓದುತ್ತಿರಬಹುದು. ಆದರೆ, ಪ್ರಯೋಜನವೇನು ? ಅದರಲ್ಲಿ ಒಂದೂವರೆ ಲಕ್ಷಕ್ಕಿಂತ ಹೆಚ್ಚಾಗಿ ಮೊದಲನೆಯ ತರಗತಿಯಲ್ಲೇ ಕೊಳೆಯುತ್ತಿರುವರು. ನಾಲ್ಕನೆಯ ತರಗತಿಗೆ ಬರುವ ಮಕ್ಕಳ ಸಂಖ್ಯೆ ಬಹಳ ಕಡಿಮೆ. ಮಧ್ಯೆ ಬಿಟ್ಟುಹೋಗುವವರ ಸಂಖ್ಯೆ ಹೆಚ್ಚು. ಈ ಸಂಖ್ಯೆಗಳನ್ನು ಕಟ್ಟಿಕೊಂಡು ಏನು ಮಾಡಬೇಕು ?.........ಹೀಗೆ. ನಮ್ಮಲ್ಲಿ ಈಗಲೂ ಕೂಡ ಇಂಗ್ಲೀಷ್‌ನ ಪ್ರಾಮುಖ್ಯತೆ ಹೋಗಿಲ್ಲ. ಕನ್ನಡಕ್ಕೂ ಪ್ರಾಮುಖ್ಯತೆ ಬಂದಿಲ್ಲ. ನಿಜವಾಗಿಯೂ ಕೂಡ ವಿದ್ಯಾಭ್ಯಾಸದಲ್ಲಿ ಹೇಳಿಕೊಳ್ಳುವಂತಹ ಹೆಚ್ಚಿನ ಪರಿಸ್ಥಿತಿಯನ್ನು ಕಾಣುತ್ತಾ ಇಲ್ಲ. ನಿನ್ನೆ ಮಾನ್ಯ ಖರ್ಗೆಯವರು ಭಾಷಣ ಮಾಡುತ್ತಾ ಈ ಬಗ್ಗೆ ಹೇಳಿದರು. ಜನತಾ ಸರ್ಕಾರದವರು ಮಧ್ಯಾಹ್ನ ಉಪಹಾರ ಕೊಡಬೇಕು ಎಂದು ಹೇಳಿದರು. ೧೯೭೭ರಿಂದ ತೆಗೆದುಕೊಂಡರೂ ಕೂಡ ಈ ಪರಿಸ್ಥಿತಿ ಬದಲಾವಣೆ ಆಗಿಲ್ಲ. ಅದನ್ನು ಕೇಂದ್ರ ಸರ್ಕಾರದವರು ಕಾಂಕರೆನ್ಸ್ ಲಿಸ್ಟಿಗೆ ಸೇರಿಸಿ, ನೂತನ ಶಿಕ್ಷಣ ನೀತಿಯ ಪ್ರಶ್ನೆಯನ್ನು ಈ ಶುರು ಮಾಡಿದರು.

"Eradication of illiteracy in our country must be accompanied by sweeping *socio-econmic* reforms, particulaly land reforms. Nevertheless, even within these contstraints, removal of illiteracy must be based on a massive programme involving the people for which adequate funds must be allocated. The vast army of educated unemployed must be pressed into service, along with the help of the democratic teachers and students organisations. It is feasible for such a programme to be implimented. It requires a concious political will on the part of Government. Thus, however, is not in conformity with the needs of the ruling classes."

"The new education policy is a strategy that will ensure India's entry into the 21st Century with the highest number of illiterates in the world. It is a strategy that is directed at condemning the vast masses of Indian people to illiteracy and ignorance. It is a strategy that seeks to regiment the minds of the Indian people and coerce them to servile conformism. A strategy that must be opposed, tooth and nail."

ನಾವು ಯೋಚನೆ ಮಾಡಿದರೆ ಕನ್ಕರೇಟ್ ಲಿಸ್ಟಗಳಲ್ಲಿ ನೋಡಿದರೆ ಅಷ್ಟು ಉಪಯೋಗವಿಲ್ಲವೆಂದು ನನಗೆ ಅನಿಸುತ್ತದೆ. ಅದೇ ರೀತಿಯಲ್ಲಿ ನಾವು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದ ಬಡ್ಜೆಟ್‌ನಲ್ಲಿ ಕೂಡ ಶಿಕ್ಷಣ ಕ್ಷೇತ್ರಕ್ಕೆ ಒದಗಿಸಿ ಕೊಟ್ಟಿರುವ ಹಣ ಬಹಳ ಕಡಿಮೆ ಎಂದು ಹೇಳಬೇಕಾಗುತ್ತದೆ. ಹಳೇ ಮೈಸೂರು ಏರಿಯಾದಲ್ಲಿ ಸುಮಾರು ೪೦-೫೦ ಪರ್ಸೆಂಟ್‌ನಷ್ಟು ಹಣ ವನ್ನು ಖರ್ಚು ಮಾಡುತ್ತಿದ್ದರು. ಆದರೆ ನಾವು ಕಳೆದ ಮೂರು ವರ್ಷಗಳ ಬಡ್ಜೆಟನ್ನು ತೆಗೆದುಕೊಂಡರೆ ಈ ಶಿಕ್ಷಣ ಕ್ಷೇತ್ರಕ್ಕೆ ಶೇಕಡಾ ೧೫-೧೬ ಪರ್ಸೆಂಟ್ ನಷ್ಟು ಹಣವನ್ನು ಮಾತ್ರ ಖರ್ಚು ಮಾಡುತ್ತಿದ್ದೇವೆ. ಈ ವರ್ಷ ನಮ್ಮ ಶಿಕ್ಷಣ ಕ್ಷೇತ್ರಕ್ಕೆ ಒದಗಿಸಿಕೊಟ್ಟಿರುವ ಹಣ ಸುಮಾರು ೭೫ ಕೋಟಿ ರೂಪಾಯಿಗಳು. ಇದರ ಜೊತೆಗೆ ಕೇಂದ್ರ ಸರ್ಕಾರದವರು ಕೊಡ ತಕ್ಕಂಥ ಹಣ ಕೇವಲ ಒಂದು ಪರ್ಸೆಂಟ್ ಮಾತ್ರ. ಕೇಂದ್ರ ಸರ್ಕಾರದವರು ತಮ್ಮ ಒಟ್ಟು ಬಡ್ಜೆಟ್ ನಲ್ಲಿ ಸುಮಾರು ೫೦೦ ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕೆ ಒದಗಿಸಿಕೊಟ್ಟಿದ್ದಾರೆ. ಅದೇ ಪಶ್ಚಿಮ ಬಂಗಾಳವನ್ನು ತೆಗೆದುಕೊಂಡರೆ ಅವರು ಶಿಕ್ಷಣ ಕ್ಷೇತ್ರಕ್ಕೆ ಸುಮಾರು ೫೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ ಅಂದರೆ ಶೇಕಡ ೨೫ ಪರ್ಸೆಂಟ್‌ನಷ್ಟು ಹಣವನ್ನು ಅವರು ಈ ಶಿಕ್ಷಣ ಕ್ಷೇತ್ರಕ್ಕೆ ಖರ್ಚು ಮಾಡುತ್ತಿದ್ದಾರೆ. ನಿಜವಾಗಿಯೂ ಕೂಡ ಇದನ್ನು ನಾವು ಯೋಚನೆ ಮಾಡಿ ನೋಡಬೇಕಾಗುತ್ತದೆ. ನಮ್ಮ ರಾಜ್ಯದ ಶಿಕ್ಷಣ ಮಟ್ಟವನ್ನು ನಾವು ಹೆಚ್ಚು ಮಾಡಬೇಕಾಗುತ್ತದೆ. ನಮ್ಮಲ್ಲಿ ಶೇಕಡ ೧೫-೧೬ ಪರ್ಸೆಂಟ್‌ನಷ್ಟು ಹಣವನ್ನು ಮಾತ್ರ ನಾವು ಖರ್ಚು ಮಾಡುತ್ತಿದ್ದೇವೆ. ನಾವು ನಮ್ಮ ಖಾಸಗಿ ಶಿಕ್ಷಣ ಮಟ್ಟವನ್ನು ಸಹ ಯೋಚನೆ ಮಾಡಬೇಕಾಗುತ್ತದೆ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ನಮ್ಮಲ್ಲಿ ಹೆಚ್ಚಾಗಿ ಡ್ರಾಪ್ ಔಟ್ಸ್ ಹೆಚ್ಚಾಗುತ್ತಿದೆ ಈ ಡ್ರಾಪ್ ಔಟ್ಸ್ ಆಗದಂತೆ ನೋಡಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ತಾವು ಇನ್ನೂ ಎಷ್ಟು ಸಮಯ ಮಾತನಾಡುತ್ತೀರಿ ?

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಇನ್ನೂ ಒಂದು ೧೫ ನಿಮಿಷ ಮಾತ ನಾಡುತ್ತೇನೆ. ನಮ್ಮಲ್ಲಿ ೧೦೦ಕ್ಕೆ ೭೫ ಪರ್ಸೆಂಟ್‌ನಷ್ಟು ಪಿ.ಯು.ಸಿ. ಗೆ ಹೋಗುವಷ್ಟರಲ್ಲಿ ಡ್ರಾಪ್‌ಔಟ್ಸ್ ಆಗಿರುತ್ತಾರೆ. ಆಮೇಲೆ ಪಿ.ಯು.ಸಿ. ಗೆ ಹೋದ ನಂತರ ಡ್ರಾಪ್ ಔಟ್ಸ್ ೧೦೦ಕ್ಕೆ ೮೫ ಪರ್ಸೆಂಟ್ ನಷ್ಟು ಜಾಸ್ತಿಯಾಗುತ್ತದೆ. ಇನ್ನು ಉಳಿದ ೧೫ ಪರ್ಸೆಂಟ್ ಮಾತ್ರ ವಿದ್ಯಾವಂತರಾಗುತ್ತಾರೆ. ಪಟ್ಟಣಗಳಲ್ಲಿ ೧೦೦ಕ್ಕೆ ೧೫ ಪರ್ಸೆಂಟ್ ಮಾತ್ರ ಡ್ರಾಪ್ ಔಟ್ಸ್ ಆಗಬಹುದು. ಆದರೆ ಹಳ್ಳಿಗಳಲ್ಲಿ ಇವತ್ತು ೧೦೦ಕ್ಕೆ ೯೦ ಪರ್ಸೆಂಟ್‌ನಷ್ಟು ಡ್ರಾಪ್ ಔಟ್ಸ್ ಆಗುವಂತಹ ಪರಿಸ್ಥಿತಿ ಇದೆ. ಇದನ್ನು ನಾವು ಯೋಚನೆ ಮಾಡಿ ಈ ಬಗ್ಗೆ ಏನಾದರೂ ಪ್ರಯತ್ನ ಮಾಡಿ ಡ್ರಾಪ್ ಔಟ್ ಆಗುವುದನ್ನು ತಪ್ಪಿಸಬೇಕಾ ಗುತ್ತದೆ. ನಮ್ಮ ಕೇಂದ್ರ ಸರ್ಕಾರದವರು ಈ ಶಿಕ್ಷಣ ಬಾಬಿಗೆ ಕೊಡುವಂತಹ ಒಂದು ಪರ್ಸೆಂಟ್, ಎರಡು ಪರ್ಸೆಂಟ್ ಹಣ ಏನು ಜಾಸ್ತಿ ಇಲ್ಲ. ಇದರಲ್ಲಿ ಎನ್‌ರೋಲ್‌ಮೆಂಟ್ ಮಾಡುವುದು ಕೂಡ ಕಡಿಮೆ. ನಾವು ತಮಿಳುನಾಡಿಗೆ ಹೋಲಿಕೆ ಮಾಡಿ ನೋಡಿದರೆ ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಹಣವನ್ನು ಈ ಶಿಕ್ಷಣ ಕ್ಷೇತ್ರಕ್ಕೆ ಖರ್ಚು ಮಾಡುತ್ತಿದ್ದೇವೆಂದು ಹೇಳಬಹುದು.

(ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ನಮ್ಮ ರಾಜ್ಯದ ಗ್ರಂಥಾಲಯಗಳ ಬಗ್ಗೆ ಕೂಡಾ ನಾವು ಯೋಚನೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯದ ಸಂಸ್ಕೃತಿ ಸಂಪತ್ತು ಜಾಸ್ತಿಯಾಗಬೇಕಾದರೆ ಗ್ರಂಥಾಲಯಗಳು ಅವಶ್ಯಕವಾಗಿ ಬೇಕಾಗುತ್ತವೆ. ನಮ್ಮಲ್ಲಿ ಪುಸ್ತಕಗಳು ಬೆಳೆಯಬೇಕು, ನಮ್ಮಲ್ಲಿ ಗ್ರಂಥಾಲಯಗಳು ಇರುವುದು ಕೇವಲ ೨೮೭ ಮಾತ್ರ. ಆದೇ ನಾವು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ಬಹಳ ಕಡಿಮೆ. ಪಶ್ಚಿಮ ಬಂಗಾಳದಲ್ಲಿ ಸುಮಾರು ೩೧೨೨ ಗ್ರಂಥಾಲಯಗಳು ಇವೆ. ನಮ್ಮಲ್ಲಿ ಗ್ರಂಥಾಲಯಗಳಿಗಾಗಿ ಖರ್ಚು ಮಾಡುತ್ತಿರುವ ಹಣ ಕೇವಲ ೨೫ ಲಕ್ಷ ರೂಪಾಯಿಗಳು ಮಾತ್ರ. ಆದರೆ ಪಶ್ಚಿಮ ಬಂಗಾಳ ದಲ್ಲಿ ಸುಮಾರು ೧ ಕೋಟಿ ೫೪ ಲಕ್ಷ ರೂಪಾಯಿಗಳನ್ನು ಗ್ರಂಥಾಲಯಗಳಿಗಾಗಿ ಖರ್ಚು ಮಾಡು ತ್ತಿದ್ದಾರೆ. ಅದೇ ರೀತಿಯಾಗಿ ತಮಿಳುನಾಡಿನಲ್ಲಿ ಕೂಡ ಗ್ರಂಥಾಲಯಗಳಿಗೆ ಸುಮಾರು ೬೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮಲ್ಲಿ ಕಳೆದ ವರ್ಷ ಕೊಟ್ಟಂತಹ ಹಣವನ್ನೇ ಸರಿಯಾಗಿ ವೆಚ್ಚ ಮಾಡಿಲ್ಲ. ನಮ್ಮಲ್ಲಿ ಕನ್ನಡ ಪುಸ್ತಕಗಳ ಪ್ರಚಾರ ಇಲ್ಲ. ಗ್ರಂಥಾಲಯಗಳ ಮುಖಾಂತರವಾಗಿ ಕನ್ನಡ ಪುಸ್ತಕಗಳ ಪ್ರಕಾಶನ ಜಾಸ್ತಿಯಾಗಬೇಕು. ನಮ್ಮ ರಾಜ್ಯದಲ್ಲಿ ಕನ್ನಡ ಸಂಸ್ಕೃತಿ ಬೆಳೆಯಬೇಕು. ಆದರೆ ಅಂತಹ ಪರಿಸ್ಥಿತಿಗೆ ಕೈ ಹಾಕುವುದಕ್ಕೆ ನಾವು ಹೋಗಿಲ್ಲ. ಮತ್ತೆ ಗ್ರಂಥಾಲಯಗಳಿಗೆ ಒಬ್ಬ ಡೈರೆಕ್ಟರ್ ಇಲ್ಲ. ಇದು ಬಹಳ ಅವಮಾನಕರವಾದಂಥ ಪರಿಸ್ಥಿತಿ. ನಮ್ಮ ರಾಜ್ಯದಲ್ಲಿ ಸಾರ್ವತ್ರಿಕ ಶಿಕ್ಷಣ ಮಾಡಬೇಕೆಂದು ಹೇಳಿ ಸುಮಾರು ೩೫ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದರೂ ಕೂಡ ಇದುವರೆವಿಗೂ ಸಾರ್ವತ್ರಿಕ ಶಿಕ್ಷಣ ಕೊಡಲು ಸಾಧ್ಯವಾಗಿಲ್ಲ. ನಮ್ಮಲ್ಲಿ

ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ನೂರಕ್ಕೆ ಎಪ್ಪತ್ತು ಪರ್ಸೆಂಟಿನಷ್ಟು ಖಾಸಗಿಯವರು ನಡೆಸುತ್ತಿದ್ದಾರೆ. ಅದೇ ರೀತಿಯಲ್ಲಿ ಕಾಲೇಜು ಶಿಕ್ಷಣದ ಮಟ್ಟದಲ್ಲಿ ನೂರಕ್ಕೆ ಎಂಬತ್ತೈದು ಭಾಗದಷ್ಟು ಖಾಸಗಿಯವರು ನಡೆಸುತ್ತಿದ್ದಾರೆ. ತಾಂತ್ರಿಕ ಶಿಕ್ಷಣ ಮಟ್ಟವನ್ನು ತೆಗೆದುಕೊಂಡರೂ ಸಹ ನೂರಕ್ಕೆ ತೊಂಬತ್ತು ಭಾಗದಷ್ಟು ಖಾಸಗಿಯವರೇ ನಡೆಸುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಶಿಕ್ಷಣ ಖಾಸಗಿಯವರ ವ್ಯಾಪಾರ ಸಂಸ್ಥೆಯಾಗಿ ರಚನೆಗೆ ಬಂದಿದೆ! ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ನಮ್ಮ ರಾಜ್ಯದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಸುಮಾರು ೧೩೦೦ ಸಂಸ್ಥೆಗಳನ್ನು ಖಾಸಗಿಯವರಿಗೆ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ನಾನು ಒಂದು ಮಾತನ್ನು ಹೇಳುವುದಾದರೆ ಕ್ಯಾಪಿಟೇಷನ್ ಶುಲ್ಕ ನಮ್ಮ ರಾಜ್ಯದಲ್ಲಿ ಎಲ್ಲಿಯವರೆವಿಗೆ ಹೋಗಿ ಮುಟ್ಟಿದೆ ಎಂದರೆ ಆಂಧ್ರಪ್ರದೇಶದ ಮದುವೆಗೆ ಬೆಂಗಳೂರು ನಗರ ಕೇಂದ್ರವಾಗಿದೆ, ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟು ಐದು ಲಕ್ಷ ರೂಪಾಯಿಗಳ ವ್ಯಾಪಾರ ಮಾಡಿ ಒಬ್ಬ ಹುಡುಗನಿಗೆ ಸೀಟು ಕೊಡಿಸಿ ಆ ಹುಡುಗನ ಮದುವೆ ಮಾಡಿಸುತ್ತಾರೆ. ಈ ಒಂದು ಪರಿಸ್ಥಿತಿಗೆ ಕ್ಯಾಪಿಟೇಷನ್ ಶುಲ್ಕದ ವ್ಯಾಪಾರ ನಡೆಯುತ್ತಿದೆ. ಇವತ್ತು ಖಾಸಗಿ ಸಂಸ್ಥೆಗಳು ಪೂರ್ತಿಯಾಗಿ ವ್ಯಾಪಾರಿ ಸಂಸ್ಥೆಗಳಾಗಿವೆ. ಪಶ್ಚಿಮ ಬಂಗಾಲದಲ್ಲಿ ಇಂತಹದನ್ನು ಕಂಟ್ರೋಲ್ ಮಾಡಬೇಕೆಂದು ಹೇಳಿ ಸುಮಾರು ೭೫ ಪರ್ಸೆಂಟ್‌ನಷ್ಟು ಹಣವನ್ನು ಸರ್ಕಾರದಲ್ಲಿ ಸೆಕ್ಯೂರಿಟಿ ಹಣವನ್ನಾಗಿ ಇಡಬೇಕೆಂದು ಮಾಡಿದ್ದಾರೆ. ಇಲ್ಲಿ ಅಂತಹ ಯಾವುದೇ ಒಂದು ವ್ಯವಸ್ಥೆ ಇಲ್ಲ. ಇವತ್ತು ನಮ್ಮಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಎರಡು ಸಾವಿರ ರೂಪಾಯಿಗಳಿಗೆ ಮಾತ್ರ ರಸೀದಿಯನ್ನು ಕೊಡುತ್ತಾರೆ. ಇನ್ನು ಉಳಿದ ಎಂಟು ಸಾವಿರ ರೂಪಾಯಿಗಳು ಮ್ಯಾನೇಜ್‌ಮೆಂಟ್‌ಗೆ ಹೋಗುತ್ತದೆಯೋ ಅಥವಾ ಸರ್ಕಾರಕ್ಕೆ ಹೋಗುತ್ತದೆಯೋ, ಯಾರಿಗೂ ಗೊತ್ತಿಲ್ಲ. ಇವತ್ತು ಈ ಖಾಸಗೀ ಸಂಸ್ಥೆಗಳಲ್ಲಿ ವಿಪರೀತವಾದ ಭ್ರಷ್ಟಾಚಾರ ನಡೆಯುತ್ತಿದೆ. ಇದನ್ನು ಸರಿ ಮಾಡುವುದಕ್ಕೆ ಇದುವರೆವಿಗೂ ಯಾರೂ ಪ್ರಯತ್ನ ಮಾಡಿಲ್ಲ. ಇವತ್ತು ಪ್ರಾಥಮಿಕ ಶಿಕ್ಷಣದಲ್ಲಿ ವಿಪರೀತವಾದ ಅನ್ಯಾಯ ನಡೆಯುತ್ತಿದೆ. ಮಾನ್ಯ ಗೋವಿಂದೇಗೌಡರ ಗಮನಕ್ಕೆ ನಾನು ಒಂದು ವಿಷಯವನ್ನು ತರಬಯಸುತ್ತೇನೆ, ಅದೇನೆಂದರೆ ನನ್ನ ಕ್ಷೇತ್ರವಾದ ಮುಳಬಾಗಿಲು ತಾಲ್ಲೂಕಿನಲ್ಲಿ ಸುಮಾರು ಎರಡು ವರ್ಷಗಳಿಂದ ಸರಿಯಾಗಿ ಉಪಧ್ಯಾಯರು ಇಲ್ಲ. ನಾನು ಅಲ್ಲಿರುವ ಎ. ಇ. ಓ. ರವರನ್ನು ಡಿ. ಡಿ. ಪಿ. ಐ. ಯವರನ್ನು ನೋಡಿದಾಗ ಅವರು ನನಗೆ ಹೇಳಿದರು ಸ್ವಾಮಿ ನಮ್ಮಲ್ಲಿ ಉಪಧ್ಯಾಯರೇ ಇಲ್ಲ. ನಾವು ಏನು ಮಾಡುವುದಕ್ಕೆ ಆಗುತ್ತದೆಂದು ಹೇಳಿದರು. ಶಾಲೆಗಳುಗಳು ಪ್ರಾರಂಭವಾಗಿ ಸುಮಾರು ಎರಡು ಮೂರು ತಿಂಗಳುಗಳು ಆಗಿವೆ. ಆದರೆ ಇದುವರೆವಿಗೂ ಆ ಪಾಠಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲ. ಶಾಲೆಗಳು ಪ್ರಾರಂಭವಾಗಿಲ್ಲ. ಮತ್ತೆ ಕಳೆದ ವರ್ಷ ಈ ಶಾಲೆಗಳಲ್ಲಿ ಅಂದರೆ ೪-೫ ಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲದ ಕಾರಣ ಪರೀಕ್ಷೆಗಳೇ ನಡೆದಿಲ್ಲ ಮಕ್ಕಳು ಮೂರನೇ ತರಗತಿಯಲ್ಲಿ ಇದ್ದವರು ಮೂರನೇ ತರಗತಿಯಲ್ಲಿಯೇ ಇದ್ದಾರೆ. ನಾಲ್ಕನೆ ತರಗತಿಯಲ್ಲಿದ್ದವರು ನಾಲ್ಕನೆ ತರಗತಿಯಲ್ಲಿಯೇ ಇದ್ದಾರೆ. ಅವರಿಗೆ ಮುಂದಿನ ತರಗತಿಗೆ ಪ್ರಮೋಷನ್ ಇಲ್ಲ. ಬೇರೆ ಶಾಲೆಯ ಉಪಾಧ್ಯಾಯರನ್ನು ಕಂಡು ಅವರಿಗೆ ತಾವು ಪರೀಕ್ಷೆಗಳನ್ನು ನಡೆಸಿ ಎಂದು ಕೇಳಿದರೆ ಅವರು ಹೇಳಿದರು ನಮಗೆ ನಮ್ಮ ಶಾಲೆಯ ಕೆಲಸವೇ ಜಾಸ್ತಿಯಾಗಿದೆ ನಾವು ಬೇರೆ ಶಾಲೆಗಳ ಕೆಲಸವನ್ನು ಯಾವ ರೀತಿ ಮಾಡುವುದು ಎಂದು ಕೇಳುತ್ತಾರೆ. ಈ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಇನ್ನು ಡಿ.ಎಲ್.ಆರ್.ಸಿ. ಕಮಿಟಿಗಳನ್ನು ನೇಮಕ ಮಾಡಿದರು. ತಮಗೆ ತಿಳಿದಿರುವಂತೆ ಅಲ್ಲಿ ಲಂಚಾವತಾರವೇ ನಡೆಯಿತು. ಯಾವ ರೀತಿಯಲ್ಲಿ ಲಂಚಾವತರ ನಡೆಯಿತು ಎಂದರೆ ಎಸ್.ಸಿ/ಎಸ್.ಟಿ. ಯವರು ಆದರೆ ಮೂರು ಸಾವಿರ ರೂಪಾಯಿಗಳು ಬೇರೆಯವರು ಆದರೆ ಹತ್ತು ಸಾವಿರ ರೂಪಾಯಿಗಳು ಈ ರೀತಿ ವಸೂಲು ಮಾಡಲು ಶುರು ಮಾಡಿದರು. ಕಡೆಗೆ ಮಾನ್ಯ ಸದಸ್ಯರಾದ ಕೆ.ಎಚ್. ಪಾಟೀಲ್‌ರವರು ಹೇಳಿದ ರೀತಿ ಧಾರವಾಡ ಜಿಲ್ಲೆಯವರು ಕೋಲಾರ ಜಿಲ್ಲೆಗೆ ಒಂದು ಕೆಲಸ ಗಿಟ್ಟಿಸಿದರು. ಬೆಂಗಳೂರು ಜಿಲ್ಲೆಯವರು ಹೋಗಿ ಧಾರವಾಡ ಜಿಲ್ಲೆಯಲ್ಲಿ ಕೆಲಸ ಗಿಟ್ಟಿಸಿದರು. ಸ್ವಾಮಿ ಇವತ್ತು ನಮ್ಮ ಕೋಲಾರ ಜಿಲ್ಲೆಯಲ್ಲಿ ಸುಮಾರು ೫೦೦ ಜನ ಉಪಾಧ್ಯಾಯರು ಬೇಕಾಗಿದ್ದಾರೆ. ಇದುವರೆವಿಗೂ ತಾವು ಏತಕ್ಕೆ ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ ? ಇನ್ನು ಕಟ್ಟಡಗಳ ಬಗ್ಗೆ ನಾವು ಪ್ರಸ್ತಾಪ ಮಾಡುವುದಾದರೆ ೧೯೧೪ನೇ ಇಸವಿಯಲ್ಲಿ ಯಾವ ಕಟ್ಟಡಗಳು ಇದ್ದವೋ ಅದೇ ಕಟ್ಟಡಗಳು ಇವತ್ತು ಸಹ ಇವೆ. ಮತ್ತೇ ಈ ಶಾಲೆಗಳಲ್ಲಿ ಸರಿಯಾದ ಪಿಠೋಪಕರಣಗಳು ಇಲ್ಲ. ನಮ್ಮ ಜಿಲ್ಲೆಯ ಡಿ.ಡಿ.ಪಿ.ಐ ಯವರು ಒಂದು ಹೈಸ್ಕೂಲಿಗೆ ವಿಜಿಟ್ ಬಂದಿದ್ದರು. ಅವರು ಹೆಂಗಸರು, ಆ ಶಾಲೆಯಲ್ಲಿ ಇದ್ದಿದ್ದು ಬರೀ ನಾಲ್ಕು ಕುರ್ಚಿಗಳು ಮಾತ್ರ. ಅವರಲ್ಲಿ ಒಂದು ಕುಂಟು ಕುರ್ಚಿ, ಅದರ ಮೇಲೆ ಒಂದು ಬಟ್ಟೆಯನ್ನು ಹಾಕಿ ಆ ಕುರ್ಚಿಯನ್ನು ಸಹ ಅಲ್ಲಿ ಹಾಕಿದರು. ಪಾಪ ಆಕೆ ಕುರ್ಚಿಯಮೇಲೆ ಕುಳಿತು ಬಿದ್ದುಬಿಟ್ಟರು.

ಹೆಡ್ ಮಾಸ್ಟರ್ ರಾಮರಾವ್ ಎಂಬುವವರೂ ಸಹ ಅಲ್ಲಿದ್ದರು. ಮಾನ್ಯ ಡಿ.ಡಿ.ಪಿ.ಐ. ರವರು ಯಾವಾಗ ಬಿಮ್ದು ಬಿಟ್ಟರೋ ಆಗ ಅವರಿಗೆ ಕೋಪ ಬಂದು ಅಲ್ಲಿರುವ ಟೀಚರ್ಸ್‌ನ್ನೆಲ್ಲಾ ಟ್ರಾನ್ಸ್‌ಫರ್ ಮಾಡಿದರು. ಬೇಕೆಂದೇ ನನಗೆ ಅವಮಾನ ಮಾಡಿರುತ್ತೀರಿ. ಕುಂಟು ಕುರ್ಚಿಯನ್ನು ಹಾಕಿ ನನಗೆ ಬೀಳಿಸಿರುತ್ತೀರಿ ಎಂದು ಹೇಳಿ, ಎಲ್ಲರನ್ನೂ ಟ್ರಾನ್ಸ್‌ಫರ್ ಮಾಡಿದರು. ಈಗಿರುವುದೂ ಕೂಡ ಅಂತಹ ಖುರ್ಚಿಯೇ. ಈ ಕುಂಟು ಖುರ್ಚಿಯ ವ್ಯವಸ್ಥೆ ೧೯೪೪ನೇ ಇಸವಿಯಿಂದಲೂ ಇದೆ. ಯಾವ ಖುರ್ಚಿಗಳನ್ನೂ ಬದಲಾಯಿಸಿಲ್ಲ. ಒಟ್ಟು ಕ್ಯಾಪಿಟಲ್ ಎಕ್ಸ್‌ಪೆಂಡೀಚರ್ ಹಾಕಿದ್ದಾರೆ. ಒಟ್ಟು ೧ ಕೋಟಿ ೫೬ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಕ್ಯಾಪಿಟಲ್ ಎಕ್ಸ್‌ಪೆಂಡೀಚರ್ ಎಂದರೆ ಸ್ಕೂಲ್ ಬಿಲ್ಡಿಂಗೋಸ್ಕರ ಉಪಯೋಗಿಸುವ ಒಂದು ಹಣ. ಇದು ಏನು ಸಾಕಾಗುತ್ತದೆ ? ಅದನ್ನು ಪೂರ್ತಿಯಾಗಿ ಪಟ್ಟಣಗಳಲ್ಲಿ ಪ್ರತಿಷ್ಠಿತ ವ್ಯಕ್ತಿಗಳು ಇರುವ ಕಡೆ ಹಾಕುತ್ತಾರೆ. ಹಳ್ಳಿಗಾಡಿಗೆ ಗ್ರಾಂಟ್ಸ್ ಹಾಕುವುದಿಲ್ಲ. ಇದನ್ನು ಗಮನಿಸಬೇಕು. ಸ್ಕೂಲ್‌ಗೆ ಹೋದರೆ ಸ್ಕೂಲ್ ಬಿಲ್ಡಿಂಗ್ ಯಾವಾಗ ತಲೆಯಮೇಲೆ ಬೀಳುತ್ತದೋ ಎನ್ನುವಹಾಗೆ ಇರುತ್ತದೆ. ಎನ್. ಆರ್. ಇ. ಪಿ. ಪ್ರೋಗ್ರಾಂನಲ್ಲಿ ಸ್ಕೂಲ್ ಬಿಲ್ಡಿಂಗ್ ಕಟ್ಟುತ್ತಾರೆ. ಒಂದು ಸ್ಕೂಲ್ ಬಿಲಿಂಗ್‌ಗೆ ೫ ಸಾವಿರ ೧೦ ಸಾವಿರ ಕೊಡುತ್ತಾರೆ. ಒಂದು ವರ್ಷ ಆದಮೇಲೆ ಅದು ರಾಮನ ಬಿಲ್ಲು ಬಗ್ಗಿದ ಹಾಗೆ ಬಗ್ಗಿರುತ್ತದೆ. ಮಳೆ ಬಂದರೆ ಓಡಿಹೋಗುತ್ತಾರೆ. ಗಾಳಿ ಬಂದರೂ ಇರುವುದಕ್ಕೆ ಆಗುವುದಿಲ್ಲ. ಈಗ ಸ್ಕೂಲ್ ನಡೆಯುತ್ತಿರುವುದು, ಗುಡಿಒಳಗೆ, ಮರದ ಕೆಳಗೆ. ಇಂತಹ ಒಂದು ಪರಿಸ್ಥಿತಿ ಇದ್ದರೂ ಕೂಡಾ ಕೇವಲ ೧ ಕೋಟಿ ೫೬ ಲಕ್ಷ ರೂಪಾಯಿಗಳನ್ನು ಸ್ಕೂಲ್ ಬಿಲ್ಡಿಂಗ್ ಗ್ರಾಂಟ್‌ಗೋಸ್ಕರ ಇಟ್ಟಿರುತ್ತಾರ ಇವರಲ್ಲಿ ಹಳ್ಳಿಗಾಡುಗಳಿಗೆ ಎಷ್ಟು ? ಪಟ್ಟಣಗಳಿಗೆ ಎಷ್ಟು ? ಎಂದರೆ, ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ವೆಸ್ಟೆಡ್ ಇಂಟರೆಸ್ಟ್ಸ್ ಎಲ್ಲಿ ಇರುತ್ತಾರೋ, ಎಲ್ಲಿ ಇನ್‌ಫ್ಲೂಯೆನ್ಸ್ ಜಾಸ್ತಿ ಮಾಡುತ್ತಾರೆಯೋ, ಅಲ್ಲಿಗೆ ಜಾಸ್ತಿ ಹೋಗುತ್ತದೆಯೇ ಹೊರತು, ಹಳ್ಳಿಗಾಡಿಗೆ ಜಾಸ್ತಿ ಉಪಯೋಗ ಆಗುವುದಿಲ್ಲ. ಇದರ ಬಗ್ಗೆ ಗಮನ ಕೊಡಬೇಕು. ಪಟ್ಟಣಗಳಿಗೇ ಒಂದು ಕೋಟಿ ರೂಪಾಯಿಗಿಂತ ಜಾಸ್ತಿ ಖರ್ಚಾಗುತ್ತದೆ ಎಂದು ನಾನು ಅಂದು ಕೊಳ್ಳುತ್ತೇನೆ. ಒಂದೊಂದು ತರಗತಿಯಲ್ಲೂ ೭೦–೮೦ ಜನ ಇರುತ್ತಾರೆ. ಸಿಂಗಲ್ ಟೀಚರ್ ಸ್ಕೂಲ್‌ರದ್ದು ಮಾಡುತ್ತೇವೆಂದು ಅದನ್ನೆಲ್ಲಾ ಡಬಲ್ ಟೀಚರ್ ಸ್ಕೂಲ್ ಮಾಡುತ್ತೇವೆ ಎಂದು ಸರಕಾರದವರು ಹೋದ ವರ್ಷ ಘೋಷಣೆ ಮಾಡಿದರು. ಈಗ ೮೦–೯೦ ಜನ ಮಕ್ಕಳಿಗೆ ಒಬ್ಬ ಟೀಚರ್ ಇರುತ್ತಾರೆ. ಆ ಕೊಠಡಿಗಳೋ ೨೦ ಅಡಿ ೩೦ ಅಡಿ ಇರುತ್ತವೆ. ಎನ್.ಆರ್.ಇ.ಪಿ. ನಲ್ಲಿ ೧೪ ಅಡಿ ೨೦ ಅಡಿ ಅಳತೆಯ ಸ್ಕೂಲ್ ಬಿಲ್ಡಿಂಗ್ ಕಟ್ಟುತ್ತಾರೆ. ಆ ಕೊಠಡಿಯಲ್ಲಿ ಉತ್ತರಕ್ಕೆ ಮುಖ ತಿರುಗಿಸಿಕೊಂಡಿರುವವರು ಮೊದಲನೇ ವರ್ಗ, ದಕ್ಷಿಣಕ್ಕೆ ಮುಖ ತಿರುಗಿಸಿಕೊಂಡಿರುವವರು ಸೆಕೆಂಡ್ ಇಯರ್, ಇನ್ನೊಂದು ಕಡೆ ಮುಖ ಮಾಡಿಕೊಂಡಿರುವವರು ಮೂರನೇ ವರ್ಷ. ನಾವು ಹೋದಾಗ ಅವರು ಮುಖ ನೋಡಿ ಹೇಳುತ್ತಾರೆ. ಒಂದೊಂದು ದಿಕ್ಕಿಗೆ ಮುಖ ಮಾಡಿ ಕುಳಿತಿರುವವರು ಒಂದೊಂದು ತರಗತಿಗೆ ಸೇರಿದವರೆಂದು ಹೇಳುತ್ತಾರೆ. ಸಾಧಾರಣವಾಗಿ ನಾವು ಹಳ್ಳಿಗೆ ಹೋದಾಗ ಸ್ಕೂಲಿಗೆ ಹೋಗುತ್ತೇವೆ. ಅಲ್ಲಿ ಹೋಗಿ ನೋಡಿದಾಗ ಸಿಂಗಲ್ ಟೀಚರ್ ಸ್ಕೂಲುಗಳಲ್ಲಿ ೭೦–೮೦ ಜನ ಮಕ್ಕಳು ಇರುತ್ತಾರೆ. ಅಲ್ಲಿನ ಉಪಾಧ್ಯಾಯರು ಸುಮ್ಮನೆ ಕಟ್ಟಿಗೆ ಇಟ್ಟುಕೊಂಡು ಹುಡುಗರನ್ನು ಕಂಟ್ರೋಲ್ ಮಾಡುತ್ತಾ ಕುಳಿತಿರುತ್ತಾರೆ. ಅವರಿಗೆ ಅದೊಂದೆ ಕೆಲಸ. ೮ ಗಂಟೆಗಳ ಕಾಲ ೭೦–೮೦ ಜನ ಹುಡುಗರನ್ನು ಕಂಟ್ರೋಲ್ ಮಾಡುವುದರಲ್ಲೇ ಅವರು ಇರುತ್ತಾರೆ. ಒಂದೊಂದು ಕಡೆ ೧೨೦ ಜನ ಮಕ್ಕಳೂ ಇರುತ್ತಾರೆ. ಇನ್ನು ಮಿಡ್ಲ್ ಸ್ಕೂಲ್ ಎಂದು ಮಾಡಿದರು. ಅಲ್ಲಿಗೆ ಒಬ್ಬ ಉಪಾಧ್ಯಾಯರನ್ನು ಜಾಸ್ತಿಕೊಡುವುದು ಅಲ್ಲಿ ಒಬ್ಬರು ಇರುತ್ತಾರೆ, ಅವರ ಜೊತೆಗೆ ಎರಡನೆಯವನ್ನು ಕೊಟ್ಟರೆ ಅದು ಅಫ್‌ಗ್ರೇಡೆಡ್ ಸ್ಕೂಲ್ ಆಗುತ್ತದೆ. ಇಂತಹ ಪರಿಸ್ಥಿತಿ ನಮ್ಮ ಹಳ್ಳಿಗಾಡುಗಳಲ್ಲಿ ಇದ್ದರೆ ಅಭಿವೃದ್ಧಿ ಹೇಗಾಗುತ್ತದೆಂದು ಯೋಚನೆ ಮಾಡಬೇಕು. ಒಂದು ಊರಿನ ಪ್ರಗತಿಯನ್ನು ನೋಡಬೇಕಾದರೆ ಆ ಊರಿನಲ್ಲಿರುವ ಸ್ಕೂಲ್ ಪ್ರಗತಿಯನ್ನು ನೋಡಬೇಕು. ಸ್ಕೂಲ್ ಯಾವ ರೀತಿ ಇದೆಯೋ ಆ ಊರು ಆ ರೀತಿ ಇರುತ್ತದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಪ್ರೈಮರಿ ಎಜುಕೇಷನ್‌ಗೆ ನಿಜವಾಗಿಯೂ ಕೂಡಾ ಹೆಚ್ಚು ಗಮನಕೊಡಬೇಕು. ಪ್ರೈಮರಿ ಎಜುಕೇಷನ್ ಪರಿಸ್ಥಿತಿ ನೋಡಿದರೆ ಹೊಟ್ಟೆ ಉರಿಯುತ್ತದೆ. ಸ್ವಲ್ಪವಾದರೂ ಅಭಿವೃದ್ಧಿ ಮಾಡಿದರೆ ಡ್ರಾಪ್‌ಔಟ್ಸ್ ಆಗದೇ ಇರುವುದಕ್ಕೆ ಸಾಧ್ಯ ಇದೆ, ಮಾನ್ಯ ಭೂಪತಿಯವರು ಮಾತನಾಡುತ್ತಾ ಹೇಳಿದರು, ಇನ್ನೂ ಶಾಲೆಗಳಿಗೆ ಪೂರ್ತಿಯಾಗಿ ಪಠ್ಯಪುಸ್ತಕಗಳನ್ನು ಕೊಟ್ಟಿಲ್ಲ. ಇವರು ಸುಮ್ಮನೆ ಇದ್ದಿದ್ದರೆ ಚೆನ್ನಾಗಿತ್ತು. ಯೂನಿಫಾರಂ ಕೊಡುತ್ತೇವೆ ಎಂದು ಪ್ರಚಾರ ಮಾಡಿದರು. ಆದರೆ ಇನ್ನೂ ಕೊಟ್ಟಿಲ್ಲ. ಇವರು ಕೊಡುವುದಿಲ್ಲ ಎಂದು ಹೇಳಿದ್ದರೆ ಚೆನ್ನಾಗಿತ್ತು. ನಾವು ಹಳ್ಳಿಗಳ ಕಡ ಹೋಗುತ್ತಲೇ ಕೇಳುತ್ತಾರೆ, ಯೂನಿಫಾರಂ ಕೊಟ್ಟಿದ್ದಾರೆಯೇ ಎಂದು ಕೇಳುತ್ತಾರೆ. ಯೂನಿಫಾರಂ ಸರ್ಕಾರದವರು

ಕೊಟ್ಟಿದ್ದು, ಅನನ್ನು ಯಾರಾದರೂ ತಿಂದು ಹಾಕಿದ್ದಾರೋ ಏನೋ ಎನ್ನುವ ಅನುಮಾನ ಬಂದಿದೆ. ಇಂತಹ ಪರಿಸ್ಥಿತಿಯನ್ನೂ ಮಾನ್ಯ ಮಂತ್ರಿಗಳು ನೋಡಬೇಕು.

ಇನ್ನು ಪ್ರಿಮೆಟ್ರಿಕ್ ಬಿಟ್ಟು, ಪೋಸ್ಟ್‌ಮ್ಯಾಟ್ರಿಕ್ ಸ್ಟೇಜ್‌ಗೆ ಹೋದರೆ, ಕಾಲೇಜು ವಿದ್ಯಾಭ್ಯಾಸಕ್ಕೆ ಹೋದರೆ ಇದೇ ಪರಿಸ್ಥಿತಿ ಇದೆ. ಯಾವ ಒಂದು ಕಾಲೇಜಿಗೇ ಹೋಗಲಿ ೨೦ ಜನ ಲೆಕ್ಚರರ್ಸ್ ಬೇಕೆಂದರೆ, ಅಲ್ಲಿ ೧೦ ಜನ ಇರುತ್ತಾರೆ. ಕಳೆದ ಎರಡು ಮೂರು ವರ್ಷಗಳಲ್ಲಿ ವಿದ್ಯಾರ್ಥಿಗಳ ಚಳುವಳಿ ಆಗಿಲ್ಲ, ಇದಕ್ಕೆ ಜನತಾ ಪಕ್ಷ ಸರಕಾರದವರು ಸ್ಟೂಡೆಂಟ್ ಪಾಪುಲೇಷನ್‌ಗೆ ಥ್ಯಾಂಕ್ಸ್ ಕೊಡಬೇಕು. ಆದರೆ ತಾವು ತಕ್ಷಣ ಏನಾದರೂ ಆಗಬೇಕು. ಪರೀಕ್ಷೆಯಲ್ಲಿ ಹೆಚ್ಚು ಜನ ವಿದ್ಯಾರ್ಥಿಗಳು ಪಾಸಾಗಬೇಕೆಂದು ಹೇಳುತ್ತೀರಿ. ದಿನಾ ಕೂಡಾ ಇದರ ಬಗ್ಗೆ ತಕರಾರು ನಡೆಯುತ್ತಿದೆ. ಆದರೂ ಸಹ ತಾವು ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಳ್ಳುತ್ತೇವೆ, ಇದ್ದವರನ್ನೂ ಕಂಟಿನ್ಯೂ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ನಿಜವಾಗಿಯೂ ಕೂಡ ಕಂಟಿನ್ಯೂ ಮಾಡುತ್ತಿಲ್ಲ. ಎಲ್ಲದಕ್ಕೂ ನೀವು ಸೆಂಟ್ರಲೈಸ್ಡ್ ಅಥಾರಿಟಿ ಮಾಡಿರುತ್ತೀರಿ. ನಾನು ಹೇಳುತ್ತೇನೆ. ಎಜುಕೇಷನ್ ಬಗ್ಗೆ ಇವತ್ತು ಸೀರಿಯಸ್ ಆಗಿ ಯೋಚನೆ ಮಾಡಬೇಕಾಗಿರುವುದು ಎಂದರೆ ಡಿಸೆಂಟ್ರಲೈಸೇಷನ್ ಮಾಡಿ, ಪ್ರತಿಯೊಂದು ಜಿಲ್ಲೆಗೂ ಕೂಡಾ ಎಜುಕೇಷನ್ ಬೋರ್ಡ್ ಮಾಡಿದರೆ ಚೆನ್ನಾಗಿರುತ್ತದೆ. ಯಾವ ಮಿನಿಸ್ಟರ್ ಮನೆ ಹತ್ತಿರ ಹೋದರೂ ಸಾವಿರಾರು ಜನ ಇರುತ್ತಾರೆ. ನಮಗೂ ಕೂಡಾ ಇವರ ಹತ್ತಿರ ಹೇಗೆ ಮಾತನಾಡುವುದು ಎನ್ನಿಸುತ್ತದೆ. ಆದಕಾರಣ ತಾವು ಕೆಲವು ಗೈಡ್‌ಲೈನ್ಸ್ ಕೊಟ್ಟು ಅಧಿಕಾರ ಕೊಟ್ಟು, ಬೋರ್ಡ್ ಮಾಡಿ ಅಧಿಕಾರ ಕೊಡುವುದನ್ನು ಬಿಟ್ಟು, ಎಲ್ಲವನ್ನೂ ಸೆಂಟ್ರಲೈಸ್ ಮಾಡಿದರೆ ಹೇಗೆ ? ಗುಲಬರ್ಗಾದಲ್ಲಿರುವವರು ಏನಾದರೂ ಹೆಚ್ಚು ಕಡಿಮೆ ಯಾದರೆ ಬೆಂಗಳೂರಿಗೆ ಬರಬೇಕು. ಮಾನ್ಯ ಭೂಪತಿಯವರು. ರಿಸಲ್ಟ್ ಪೇಪರಿನಲ್ಲಿ ಬಂದರೂ ಅದನ್ನು ನಂಬುವಕಾಲ ಹೊರಟು ಹೋಯಿತು. ಪುನಃ ವಿಧ್ಯಾರ್ಥಿಯೇ ಬಂದು ಪರಿಶೀಲನೆ ಮಾಡಿ, ನಿಜವಾಗಿಯೂ ನಾನು ಪಾಸ್ ಆಗಿರುತ್ತೇನೆಯೇ ಎಂಬುದನ್ನು ಒರಿಜಿನಲ್ ಸರ್ಟಿಫಿಕೇಟ್ಸ್ ತೆಗೆದುಕೊಳ್ಳುವವರೆಗೆ ನಂಬುವ ಹಾಗೆ ಇಲ್ಲ. ಇಂಥಾ ಪರಿಸ್ಥಿತಿ ಆಗಿದೆ. ಆದಕಾರಣ ಅಧಿಕಾರವನ್ನು ಡಿಸೆಂಟ್ರಲೈಸ್ ಮಾಡಿ, ಒಂದೊಂದು ಜಿಲ್ಲೆಗೂ ಒಂದೊಂದು ಬೋರ್ಡ್ ಮಾಡಿ ಒಳ್ಳೆಯ ಎಜುಕೇಷನ್ನಿಸ್ಟ್‌ನ್ನು ಟೀಚರ್ಸ್‌ನ್ನು, ಅಪಾಯಿಂಟ್ ಮಾಡಿದರೆ ಚೆನ್ನಾಗಿರುತ್ತದೆ. ಈ ರೀತಿಯ ಡಿಸೆಂಟ್ರಲೈಸೇಷನ್ ಕೆಲವು ರಾಜ್ಯಗಳಲ್ಲಿ ಇದೆ. ಇದು ನಮಗೆ ಹೊಸದಲ್ಲ. ವೆಸ್ಟ್ ಬೆಂಗಾಲ್‌ನಲ್ಲಿ ೩೦ ಜನರ ಒಂದು ಬೋರ್ಡ್ ಮಾಡಿ ಈ ಡಿಸೆಂಟ್ರಲೈಸ್ ಮಾಡಿರುತ್ತಾರೆ. ಅಂತಹದನ್ನು ಇಲ್ಲಿಯೂ ಕೂಡಾ ಮಾಡಿದರೆ ಈ ಪರಿಸ್ಥಿತಿ ಬರುವುದಿಲ್ಲ. ನಮ್ಮ ವಿಶ್ವವಿದ್ಯಾನಿಲಯಗಳನ್ನು ತೆಗೆದುಕೊಂಡರೆ ಅವು ಸ್ವಾಯತ್ತ ಸಂಸ್ಥೆಗಳೆಂದು ಹೇಳುತ್ತೀರಿ. ಆದರೆ ಅವು ಒಂದು ಅಟಾನಮಸ್ ಬಾಡಿಗಳಾಗಿಲ್ಲ. ಅವು ಸಂಪೂರ್ಣವಾಗಿ ಸರಕಾರದ ಕಂಟ್ರೋಲ್‌ನಲ್ಲಿರುವ ಬಾಡಿಗಳಾಗಿವೆ. ಸೆನೆಟ್‌ನಲ್ಲಿ ಮೊದಲಿನಿಂದಲೂ ಒಂದು ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಕೊಡಬೇಕೆಂದು ಬೇಡಿಕೆ ಇದೆ. ಎಲೆಕ್ಷನ್ ಮಾಡಿ ಪ್ರಾತಿನಿಧ್ಯ ಕೊಡಿ ಎಂದು ಕೇಳುತ್ತಿದ್ದಾರೆ. ಇದು ಕೇರಳದಲ್ಲಿ, ಬಂಗಾಳದಲ್ಲಿ, ತಮಿಳುನಾಡಿನಲ್ಲಿ ಇದೆ. ಆದರೆ ಇಲ್ಲಿ ಅಂತಹದೇನೂ ಇಲ್ಲ. ಅಂತಹ ಒಂದು ಯೋಚನೆಯನ್ನೂ ಮಾಡುತ್ತಿಲ್ಲ. ಇದರಿಂದ ಏನಾಗುತ್ತದೆ ವಿದ್ಯಾರ್ಥಿಗಳು ಎಜುಕೇಷನಿಸ್ಟ್ಸ್ ಎಲ್ಲರೂ ಒಟ್ಟಿಗೆ ಕುಳಿತುಕೊಂಡು ವಿಶ್ವವಿದ್ಯಾನಿಲಯವನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಇಂತಹ ಯೋಜನೆಯನ್ನು ಮಾಡುವಾಗ ಇದನ್ನು ಯಾವ ರೀತಿ ಪಾಲಿಸಬೇಕೆಂದು ನೋಡಬೇಕು.

ಇನ್ನು ಹೈಸ್ಕೂಲುಗಳ ವಿಚಾರ ಅಲ್ಲೂ ಸಹ ಸಾಕಷ್ಟು ಟೀಚರ್ಸ್ ಇಲ್ಲ. ಸಾಕಷ್ಟು ಪ್ರೈವೇಟ್ ಹೈಸ್ಕೂಲುಗಳನ್ನು ಕೊಟ್ಟಿರುತ್ತೀರಿ. ಗೌರ್ನಮೆಂಟ್ ಹೈಸ್ಕೂಲುಗಳನ್ನೂ ಕೊಟ್ಟಿರುತ್ತೀರಿ. ಗೌರ್ನಮೆಂಟ್ ಹೈಸ್ಕೂಲುಗಳಿಗೆ ಬಿಲ್ಡಿಂಗ್ಸ್ ಇಲ್ಲ. ಇನ್ನೊಂದು ದುರಾದೃಷ್ಟ ಪರಿಸ್ಥಿತಿ ಎಂದರೆ, ಪ್ರೈವೇಟ್ ಹೈಸ್ಕೂಲುಗಳಲ್ಲಿ ೧೦೦ ರೂಪಾಯಿಗೆ ಒಬ್ಬ ಹೈಸ್ಕೂಲ್ ಟೀಚರ್ಸ್‌ನ್ನು ಅಪಾಯಿಂಟ್ ಮಾಡಿರುತ್ತಾರೆ. ಟೆಂಪೊರರಿ ಟೀಚರ್ಸ್ ಎಂದು ಹೆಸರು ಹೇಳಿ, ಎಕ್ಸ್‌ಪ್ಲಾಯಿಟೇಷನ್ ಮಾಡುತ್ತಿದ್ದಾರೆ. ಅವರು ಟೀಚರ್ಸ್ ಕೆಲಸದಲ್ಲಿ ಒಂದು ವರ್ಷ ಕೆಲಸ ಮಾಡಿದರೆ, ನನಗೆ ಏನಾದರೂ ಖಾಯಂ ಆಗುತ್ತದೋ ಏನೋ ಎಂದು ೧೦೦-೧೨೦ ರೂಪಾಯಿಗಳಿಗೆ ಬಂದು ಕೆಲಸ ಮಾಡುತ್ತಿದ್ದಾರೆ. ಅವರನ್ನು ಖಾಯಂ ಮಾಡುವ ಯೋಚನೆ ಸರಕಾರಕ್ಕೆ ಇಲ್ಲ. ಹೈಸ್ಕೂಲ್ ಟೀಚರ್ಸ್, ಲೆಕ್ಚರರ್ಸ್, ರೆಕ್ರೂಟ್‌ಮೆಂಟ್ ಆಗಬೇಕು. ಪ್ರೈಮರಿ ಸ್ಕೂಲ್ ಟೀಚರ್ಸ್ ರೆಕ್ರೂಟ್‌ಮೆಂಟ್ ಆಗಬೇಕು. ಕಾಂಟ್ರಾಕ್ಟ್ ಟೀಚರ್ಸ್ ಹಾಗೂ ಲೆಕ್ಚರರ್ಸ್‌ಗಳನ್ನು ಖಾಯಂ ಮಾಡಬೇಕು. ಎಜುಕೇಷನ್ ಮಿನಿಸ್ಟರ್‌ಗೆ ಆಗಲೀ, ಕಮಿಷನರಿಗೆ ಆಗಲಿ, ಜಾಯಿಂಟ್ ಡೈರೆಕ್ಟರ್‌ಗೇ ಆಗಲಿ, ಸೆಂಟ್ರಲೈಸ್ ಮಾಡಿ ಪವರ್‌ಕೊಟ್ಟರೆ, ಈ ವಿಶಾಲವಾದ

ಕರ್ನಾಟಕರಾಜ್ಯದಲ್ಲಿ ಒಬ್ಬರಿಗೆ, ಇಬ್ಬರಿಗೆ ಅಧಿಕಾರವನ್ನು ಕೊಟ್ಟು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡು, ಡಿಸ್ಟ್ರಿಕ್ಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಯನ್ನು ಆಕ್ಟಿವೈಸ್ ಮಾಡಬೇಕು. ಎಲ್ಲಾ ಶಾಲೆಗಳಿಗೂ ಉಪಾಧ್ಯಾಯರನ್ನು ಕೊಡಬೇಕು. ಎನ್.ಆರ್.ಇ.ಪಿ. ಪ್ರೋಗ್ರಾಂ ಇರಲಿ, ಬೇರೆ ಯಾವ ಪ್ರೋಗ್ರಾಂ ಆಗಲೀ ಎಲ್ಲಿ ಸ್ಕೂಲ್ ಇಲ್ಲವೋ ಅಲ್ಲಿಗೆ ಸ್ಕೂಲನ್ನು ಕೊಡುವುದಕ್ಕೆ ಕ್ರಮ ತೆಗದುಕೊಳ್ಳಬೇಕು.

ಪಟ್ಟಣಗಳಿಗೆ ಈ ಒಂದು ವಿಚಾರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ, ಕೊಡಲಿ ಅದರಬಗ್ಗೆ ನನ್ನ ವಿರೋಧವಿಲ್ಲ. ಇದೇ ಹಣವನ್ನು ಹಳ್ಳಿಗಾಡುಗಳಿಗೆ ಕೊಟ್ಟರೆ ಪ್ರತಿಯೊಂದು ಹಳ್ಳಿಗಳಿಗೂ ಅಂದರೆ ಎಲ್ಲೆಲ್ಲಿ ಸ್ಕೂಲ್ ಇಲ್ಲವೋ ಅಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಬಿಲ್ಡಿಂಗ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಜಾಸ್ತಿ ಗ್ರಾಂಟ್ ಕೊಡಬೇಕು. ಆದುದರಿಂದ ಎಜುಕೇಷನ್ ಬಗ್ಗೆ ಯೋಚನೆಮಾಡಬೇಕಾಗಿದೆ. ನಮ್ಮ ಮಾನ್ಯ ಖರ್ಗೆಯವರು ಹೇಳಿದರು. ಅವರ ಕಾಲದಲ್ಲೇ ಇದನ್ನು ಅಭಿವೃದ್ಧಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಸರಿಯಾದ ಎಜುಕೇಷನ್ ಕೊಟ್ಟರೆ ಈ ಡ್ರಾಪ್‌ಔಟ್ಸ್ ಕಡಿಮೆಯಾಗುತ್ತದೆ. ತಮಿಳುನಾಡು, ವೆಸ್ಟ್ ಬಂಗಾಳದವರು ಮಾಡಿರತಕ್ಕ ಪ್ರಯೋಗಗಳನ್ನು ತೆಗೆದುಕೊಂಡರೆ, ಅವರಲ್ಲಿ ೬೫ ಪರ್ಸೆಂಟ್ ಡ್ರಾಪ್ ಔಟ್ಸ್ ಆಗುತ್ತಿದ್ದುದು ೪೫ ಪರ್ಸೆಂಟ್‌ಗೆ ಇಳಿದಿದೆ. ಅಲ್ಲಿ ಮಿಡ್ ಡೇ ಮೀಲ್ಸ್ ಇಂಟ್ರಡ್ಯೂಸ್ ಮಾಡಿದ್ದಾರೆ. ಕೇರ್ ಕಾರ್ಯಕ್ರಮ ಎಲ್ಲವನ್ನೂ ಸೇರಿಸಿ ಮಾಡಿದ್ದಾರೆ. ಅದರಂತೆ ಆಂಧ್ರ ರಾಜ್ಯದಲ್ಲೂ ಮಾಡಿದರು. ದುರಾದೃಷ್ಟವಶಾತ್ ಕೈಬಿಟ್ಟಿದ್ದಾರೆ. ಈ ಮಿಡ್ ಡೇ ಮೀಲ್ಸ್ ಸ್ಕೀಂ, ಬಟ್ಟೆ ಕೊಡುವ ಸ್ಕೀಂ ಉಚಿತವಾಗಿ ಬಟ್ಟೆ ಕೊಡುವ ಯೋಜನೆಗಳಿಂದ ಏನಾಗುತ್ತಿದೆ ಎಂದರೆ. ಮಕ್ಕಳನ್ನು ಆಕರ್ಷಣೆ ಮಾಡಿಕೊಂಡಹಾಗೆ ಆಗುತ್ತದೆ. ಸ್ಕೂಲ್ ಬಿಟ್ಟುಹೋಗುವುದಿಲ್ಲ. ಇನ್ನು ಹೈಸ್ಕೂಲುಗಳು ಎಲ್ಲೆಲ್ಲಿವೆಯೋ ಅಲ್ಲಿ ಬಿ.ಸಿ. ಹಾಸ್ಟಲುಗಳು ಎಸ್. ಸಿ. ಹಾಸ್ಟಲುಗಳನ್ನು ಮಾಡಬೇಕು. ಇದರ ಬಗ್ಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಒಂದು ಯೋಜನೆ ಹಾಕಿಕೊಂಡಿಲ್ಲ ಈ ಬಗ್ಗೆ ಒಂದು ಕೋ-ಆರ್ಡಿನೇಷನ್ ಇಲ್ಲ. ಎಜುಕೇಷನ್, ಡಿಪಾರ್ಟ್‌ಮೆಂಟಿನವರು, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಒಂದು ಕಡೆ ಕುಳಿತು, ಈ ಹಾಸ್ಟಲುಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಇನ್ನು ಪರೀಕ್ಷೆಯಲ್ಲಿ ವಿಪರೀತ ಕಾಪಿ ಹೊಡೆಯುವುದು ಜಾಸ್ತಿಯಾಗಿದೆ. ಇದನ್ನು ಈವರ್ಷ ಸ್ವಲ್ಪ ಕಂಟ್ರೋಲ್ ಮಾಡಿದರು. ಇದು ಬಹಳ ಸಂಕಟವಾದ ಪರಿಸ್ಥಿತಿ. ನಾನೇ ಒಂದು ಸಾರಿ ಒಂದು ಯೂನಿಯನ್ ಮೀಟಿಂಗ್‌ಗೆ ಹೋಗಿದ್ದೆ. ಅಲ್ಲಿಗೆ ಡಿ.ಎಸ್.ಪಿ. ಅಧಿಕಾರಿಗಳನ್ನೂ ಹಾಕಿದ್ದರು. ಅಲ್ಲಿ ಯೂನಿಯನ್ ಪ್ರೆಸಿಡೆಂಟ್ ಭಾಷಣ ಮಾಡುತ್ತಿದ್ದರು. ನಮ್ಮ ಕಾಲೇಜಿನಲ್ಲಿ ಅನ್ಯಾಯ ನಡೆಯುತ್ತಿದೆ. ಯೂನಿಯನ್ ಅಧಿಕಾರಿಗಳು ಕಾಪಿ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದಾರೆ ಎಂದೆಲ್ಲಾ ಭಾಷಣ ಮಾಡುತ್ತಿದ್ದರು. ಅಲ್ಲಿ ಪ್ರಿನ್ಸಿಪಾಲ್ ಮತ್ತು ಎಲ್ಲರೂ ಇದ್ದಾರೆ. ಅಲ್ಲಿ ಈ ತರಹ ಭಾಷಣ ಮಾಡುವಂತಹ ಪರಸ್ಥಿತಿ ಬಂದಿದೆ ಅಲ್ಲದೆ ಬೇರೆ ಎಲ್ಲಾ ಕಡೆಯೂ ಈ ಕಾಪಿ ನಡೆಯುವುದರಿಂದ ಕೋಲಾರದಲ್ಲಿ ಏಕೆ ಕಾಪಿಮಾಡಬಾರದು ಎನ್ನತಕ್ಕಂಥ ಪ್ರಶ್ನೆಯೂ ಬಂದಿದೆ. ದಾವಣಗೆರೆಯಲ್ಲಿ ಹೋಗಿ, ಧಾರವಾಡದಲ್ಲಿ ಹೋಗಿ ಒಬ್ಬ ಟೀಚರನ್ನು ನೂರು ಗಜ ದೂರದಲ್ಲಿ ಇಡುತ್ತಾರೆ. ಯಾರಾದರೂ ಬಂದರೆ ಚೆಕ್ ಮಾಡುತ್ತಾರೆ. ಹೀಗಿದ್ದರೂ ಟೀಚರುಗಳೇ ಕಾಪಿ ಮಾಡಿಸುವುದೂ ಒಂದು ಹೈಸ್ಕೂಲಿಗೂ ಇನ್ನೊಂದು ಹೈಸ್ಕೂಲಿಗೂ ಈ ಪರೀಕ್ಷೆ ಫಲಿತಾಂಶದ ವಿಚಾರದಲ್ಲಿ ಹೊಟ್ಟೆಕಿಚ್ಚು ಬರುತ್ತದೆ. ಎಲ್ಲೋ ಒಂದು ಕಡೆ ಪೂರ್ತಿ ಉತ್ತರ ಬರೆಸಿ ಕೊಂಡು ಬಂದು ಇವನ್ನು ಸೇರಿಸಿ ಬಿಡುತ್ತಿದ್ದರು. ಈಗ ಒಂದು ಉದಾಹರಣೆ ಎಂದರೆ, ಒಬ್ಬ ಹುಡುಗ ಪಿ.ಯು.ಸಿ. ಓದುತ್ತಿದ್ದಾನೆ. ಆತನಿಗೆ ೭೮ ಪರ್ಸೆಂಟ್ ಬಂದರೆ ಮೆಡಿಕಲ್ ಕಾಲೇಜಿನಲ್ಲಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಸಿಗುವುದು. ಕಡಿಮೆ ಬಂದರೆ ೪೦ ಸಾವಿರ ರೂಪಾಯಿ ಕೊಡುವುದಕ್ಕೆ ಬದಲಾಗಿ ೮೦ ಸಾವಿರ ಕೊಡಬೇಕಾಗುತ್ತದೆ. ಆದುದರಿಂದ ಈ ಪಿ. ಯು. ಸಿ. ನಲ್ಲಿ ೨ ಸಾವಿರ ೩ ಸಾವಿರ ಖರ್ಚು ಮಾಡಿದರೆ ಮಾರ್ಕ್ಸ್ ಹೆಚ್ಚು ಪಡೆಯುವುದು ಇದೆ. ಈ ಬಾರಿ ಈ ಕಾಪಿ ಹೊಡೆಯುವುದನ್ನು ನಿಲ್ಲಿಸಲು ಮಾನ್ಯ ರಘುಪತಿಯವರು ಹೊರಟರು. ೫-೬ ಸಾವಿರ ಜನ ಸ್ಟೂಡೆಂಟ್ಸ್ ಡಿಬಾರ್ ಆಗಿದ್ದಾರೆ. ಇನ್ನು ಕೆಲವು ನ್ಯೂನತೆಗಳು ನಡೆಯುತ್ತವೆ. ಕೆಮಿಸ್ಟ್ರಿ ಪರೀಕ್ಷೆ ನಡೆಯುತ್ತಿದ್ದರೆ ಅಲ್ಲಿ ಫಿಸಿಕ್ಸ್ ಪೇಪರ್ಸ್ ಬಿದ್ದಿರುತ್ತದೆ. ಇಂಥಾ ನ್ಯೂನ್ಯತೆಗಳ ಬಗ್ಗೆ ತಾವು ಯೋಚನೆ ಮಾಡಿಲ್ಲ. ಕಾಪಿ ಮಾಡುವ ವಿಚಾರದಲ್ಲಿ ಒಳ್ಳೆಯವರು, ಕೆಟ್ಟವರು ಎನ್ನುವುದನ್ನು ಯೋಚನೆ ಮಾಡಿಲ್ಲ. ೫೦ ಭಾಗ ಕೆಟ್ಟವರು ಇದ್ದರೆ, ೫೦ ಭಾಗ ಒಳ್ಳೆಯವರೂ ಇರುತ್ತಾರೆ, ಕೆಟ್ಟವರ ಗುಂಪಿನಲ್ಲಿ ಒಳ್ಳೆಯವರನ್ನೂ ಹಿಡಿದುಕೊಂಡು ಬಂದು ಡಿಬಾರ್ ಮಾಡಿದ್ದಾರೆ. ಒಟ್ಟಿನಲ್ಲಿ ಈಗ ಪರೀಕ್ಷೆ ಇಡಬೇಕೋ ಬೇಡವೋ ಎನ್ನುವ ಪರಿಸ್ಥಿತಿ ಬಂದಿದೆ. ನಮ್ಮ ಭೂಪತಿಯವರು ಸ್ಪಷ್ಟವಾಗಿ ಹೇಳಿದರು. ಪೇಪರ್ಸ್ ಲೀಕ್ಕ ಆಗುವುದನ್ನೂ ಹೇಳಿದರು. ಪೇಪರ್ಸ್‌ನ್ನು ಕೆಲವು ಕಡೆ ಟ್ರಜರಿಯಲ್ಲಿ ಇಡುತ್ತಾರೆ, ಟ್ರಜರಿ ಇಲ್ಲದ ಕಡೆ ಬ್ಯಾಂಕ್

ನಲ್ಲಿಡುತ್ತಿದ್ದರು. ಮೊದಲನೇ ದಿವಸವೇ ಹುಡುಗರಿಗೆ ಗೊತ್ತಾಗುತ್ತದೆ. ೫ ಮಾರ್ಕ್ಸ್‌ಗೆ, ಎಷ್ಟು ೧೦ ಮಾರ್ಕ್ಸ್‌ಗೆ, ಎಷ್ಟು ಪಾಠ ಬಂದಿರುತ್ತದೆ ಎಂಬುದು. ಭೂಪತಿಯವರು ಹೇಳಿದ ಹಾಗೆ ಒಂದು ಸ್ವಲ್ಪ ದುಡ್ಡು ಖರ್ಚು ಮಾಡಿದರೆ, ಪೇಪರ್ಸ್ ಸಿಗುತ್ತದೆ. ಬೆಂಗಳೂರಿನಲ್ಲಿ ತೆಗೆದುಕೊಂಡು ಬರಬಹುದು, ಮೈಸೂರಿನಲ್ಲಿ ಹುಡುಕಿಕೊಂಡು ಬರಬಹುದು, ಸ್ವಲ್ಪ ಜಾಸ್ತಿ ದುಡ್ಡು ಖರ್ಚು ಮಾಡಿದರೆ ಪರೀಕ್ಷೆಯಲ್ಲಿ ಬರೆಯುವಷ್ಟೇ ಇಲ್ಲ. ಅಂತಹ ಪರಿಸ್ಥಿತಿ ಬಂದಿದೆ. ಪರೀಕ್ಷೆ ನಡೆಯಬೇಕೇ ನಡೆಯಬಾರದೇ ಎನ್ನುವ ಯೋಚನೆ ಬಂದಿದೆ. ಇನ್ನು ಬಡವರಿಗೆ ಮಧ್ಯಮ ವರ್ಗದವರಿಗೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ, ಸೀಟು ಸಿಗುವ ಸಾಧ್ಯತೆ ಇಲ್ಲವೇ ಇಲ್ಲ. ಏಕೆಂದರೆ, ೪೦ ಪರ್ಸೆಂಟ್ ಇದ್ದುದನ್ನು ೬೦ ಪರ್ಸೆಂಟ್ ಎಂದು ಆರ್ಡರ್ ಮಾಡಿದರು. ಇದಕ್ಕೆ ಕಾಲೇಜಿನವರು ಕೋರ್ಟಿನಿಂದ ಸ್ಟೇ ತಂದರು. ತಕ್ಷಣ ಸ್ಟೇ ತೆಗೆಯುವ ಯೋಚನೆ ಮಾಡಲಿಲ್ಲ. ಇದಕ್ಕೂ ಈಗ ಏನು ಮಾಡಬೇಕು ಎನ್ನುವ ಪರಿಸ್ಥಿತಿ ಬಂದಿದೆ. ೪೦ ಪರ್ಸೆಂಟ್ ಬರುತ್ತದೆ ಎಂದರೆ ಹಳ್ಳಿಗಾಡುಗಳಲ್ಲಿ ಯಾರಿಗೂ ಸೀಟು ಸಿಗುವುದಿಲ್ಲ. ದೊಡ್ಡ ದೊಡ್ಡ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಹಾಗೂ ಹಣವಂತರಿಗೆ ಸೀಟು ಸಿಗುತ್ತದೆ. ಆದುದರಿಂದ ಬಡ ಮಕ್ಕಳಿಗೆ ಸೀಟು ಸಿಗುವ ಬಗ್ಗೆ ಯೋಚನೆ ಮಾಡುವುದಕ್ಕಾಗುವುದಿಲ್ಲವೇ? ಅಲ್ಲಿ ಅಡ್ಮಿಷನ್ ಫೀ ಮತ್ತು ವಂತಿಕೆ ಒಂದು ಲಕ್ಷ ಅರವತ್ತೈದು ಸಾವಿರ ಎಂದು ಹೇಳುತ್ತಾರೆ. ಮೂರು ಲಕ್ಷ ನಾಲ್ಕು ಲಕ್ಷ ಕೊಡಬೇಕಾದ ಪರಿಸ್ಥಿತಿಯೂ ಇದೆ. ಆದ್ದರಿಂದ ನಮ್ಮಂಥವರಿಗೆ ಸಿಗುವ ಯೋಚನೆ ಇಲ್ಲ. ಬೆಂಗಳೂರು ನಗರದಲ್ಲಿ ವಿದ್ಯಾಭ್ಯಾಸಕ್ಕೆ ಮಾರ್ಗವಿದೆ. ಆದರೂ ಇಲ್ಲಿ ಬಡವರಿಗೆ ಸೀಟು ಸಿಗುವ ಬಗ್ಗೆ ಯೋಚನೆ ಮಾಡಬೇಕಾಗಿದೆ ಇನ್ನು ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಅಂದರೆ ಟಿ. ಸಿ. ಹೆಚ್. ನಲ್ಲಿ ಚಿಕ್ಕಬಳ್ಳಾಪುರದಲ್ಲಿ ೭೫ ಪರ್ಸೆಂಟ್ ಕೇರಳದವರು ಇದ್ದಾರೆ. ಅಲ್ಲಿ ಕನ್ನಡಿಗರು ಇಲ್ಲವೇ ಇಲ್ಲ. ಕೇರಳದವರು ೫೦ ಪರ್ಸೆಂಟ್, ಆಂಧ್ರದವರು ೨೫ ಪರ್ಸೆಂಟ್, ಕರ್ನಾಟಕದವರು ೨೫ ಪರ್ಸೆಂಟ್ ಕೂಡ ಇಲ್ಲ. ಈ ತಾಂತ್ರಿಕ ಶಾಲೆಗಳನ್ನು ಸರ್ಕಾರದವರೇ ಮಾಡಿದರೆ ಒಳ್ಳೆಯದಿದೆ. ಈಗ ಹಾಲಿ ಪ್ರೈವೇಟ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳು ಜಾಸ್ತಿಯಾಗಿವೆ. ಟಿ. ಸಿ. ಹೆಚ್. ಕಾಲೇಜಿಗೆ ೩ ಸಾವಿರ ರೂಪಾಯಿ ೫ ಸಾವಿರ ರೂಪಾಯಿಗಳನ್ನು ವಸೂಲ್ಮಾಡುತ್ತಿದ್ದಾರೆ. ಅದಕ್ಕೆ ರಸೀತಿ ಕೂಡ ಕೊಡುವುದಿಲ್ಲ. ದುಡ್ಡು ತೆಗೆದುಕೊಳ್ಳುವುದು. ಜೇಬಿಗೆ ಹಾಕಿಕೊಳ್ಳುವುದೇ ಅವರ ಕೆಲಸವಾಗಿದೆ. ಹಾಗೂ ಒಂದು ವೇಳೆ ರಸೀತಿಯನ್ನು ಕೇಳಿದರೆ, ೫ ಸಾವಿರಕ್ಕೆ ೧ ಸಾವಿರ ರೂಪಾಯಿಯ ರಸೀತಿ ಕೊಡುತ್ತಾರೆ. ಈ ಎಜುಕೇಷನ್ ಯಾವ ಮಟ್ಟಕ್ಕೆ ಹೋಗುತ್ತಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು.

ನಮ್ಮ ವಿದ್ಯಾ ರಂಗ ಎಲ್ಲಿಗೆ ಹೋಗುತ್ತಿದೆ ಎಂದರೆ ದಿನೇದಿನೇ ಬಡವರಿಗೆ ಎಟಕದ ಪರಿಸ್ಥಿತಿಯಾಗಿ ಕೆಲವು ಪ್ರತಿಷ್ಠಿತ ವ್ಯಕ್ತಿಗಳಿಗೆ, ಅನುಕೂಲಸ್ಥರಿಗೆ ಹೋಗುತ್ತಿದೆ. ಮೊದಲು ನಮ್ಮ ಕರ್ನಾಟಕ ರಾಜ್ಯ ವಿದ್ಯಾಭ್ಯಾಸದಲ್ಲಿ ಒಂದು ಒಳ್ಳೆಯ ಹೆಸರನ್ನು ಗಳಿಸಿತ್ತು. ಅದು ಈವತ್ತು ಕೇವಲ ಉಳ್ಳವರ ಸ್ವತ್ತಾಗಿಬಿಟ್ಟಿದೆ. ಶಕ್ತಿ ಇಲ್ಲದಿರುವವರಿಗೆ ಇದು ಆಗುವುದಿಲ್ಲ. ಆಗುದರಿಂದ ಬಡವರು ಈ ಎಜುಕೇಷನ್ ಅನ್ನು ಪೂರ್ತಾ ಬಿಟ್ಟು ಬಿಡಬೇಕಾಗುತ್ತದೆ. ಇದನ್ನು ಸೆಂಟ್ರಲ್ ಕನ್ ಕರೆನ್ಸ್ ಲಿಸ್ಟ್‌ಗಾದರೂ ಸೇರಿಸಿದರೆ ಇದನ್ನು ಕಂಟ್ರೋಲ್ ಮಾಡಬಹುದು. ಅವರು ಇದಕ್ಕಾಗಿ ೫೦೦ ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತಾರೆ. ಜನತಾ ಪಕ್ಷದವರು ತಮ್ಮ ಪ್ರಣಾಳಿಕೆಯಲ್ಲಿ ಡೊನೇಷನ್ ಅನ್ನು ರದ್ದು ಮಾಡುತ್ತೇವೆಂದು ಹೇಳಿದರು. ಆದರೆ ಅವರು ತಮ್ಮ ಮಾತಿನಂತೆ ಅದನ್ನು ಉಳಿಸಿಕೊಳ್ಳಲಿಲ್ಲ. ನಾನು ಆಗಲೇ ಹೇಳಿದೆ ಹೋದವರ್ಷ ಸುಮಾರು ಸಾವಿರದಷ್ಟು ಪ್ರೈವೇಟ್ ಸ್ಕೂಲ್ಸ್‌ಗಳನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟರು ಎಂದು. ಈ ವರ್ಷ ಸುಮಾರು ೩೫೦ ಸ್ಕೂಲ್ಸ್‌ಗಳನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮ ದುರಾದೃಷ್ಟವೋ ಏನೋ ಸರ್ಕಾರದವರು ಒಂದು ಹೈಸ್ಕೂಲನ್ನಾಗಲಿ, ಕಾಲೇಜನ್ನಾಗಲಿ ಪ್ರಾರಂಭ ಮಾಡಿಲ್ಲ. ಈವೊತ್ತಿನ ದಿವಸ ಈ ಶಾಲೆಗಳನ್ನು ಪ್ರೈವೇಟ್‌ನವರು ಪ್ರಾರಂಭ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಈ ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಇದನ್ನು ಒಂದು ವ್ಯಾಪಾರದ ದೃಷ್ಟಿಯಿಂದ ಮಾಡುತ್ತಿದ್ದಾರೆ. ನಿಜವಾಗಿ ಬಡವರಿಗೆ ಅನುಕೂಲ ಮಾಡಿಕೊಡಬೇಕು, ವಿದ್ಯಾಭ್ಯಾಸ ಪ್ರಗತಿಯಾಗಬೇಕು, ವಿದ್ಯಾಭ್ಯಾಸ ಎಲ್ಲರಿಗೂ ಕೊಡಬೇಕು ಅನ್ನುವ ದೃಷ್ಟಿಯಿಂದ ಅವರು ಮಾಡುತ್ತಾ ಇಲ್ಲ. ಒಂದು ಊರಿನಲ್ಲಿ ಒಂದು ಕಿರಿಯ ಕಾಲೇಜು ಮಾಡಿದರೂ ಕೂಡ ಡೊನೇಷನ್ ೫೦೦ ರೂಪಾಯಿ ತೆಗೆದು ಕೊಳ್ಳುತ್ತಾರೆ. ಇದನ್ನು ನಾವು ವಿಚಾರ ಮಾಡಬೇಕಾಗಿದೆ. ಇದು ಒಂದು ರೀತಿ ವ್ಯಾಪಾರದ ಕೇಂದ್ರವಾಗಿದೆಯೇ ವಿನಾಃ ಇದು ಸಾರ್ವತ್ರಿಕವಾದ ಶಿಕ್ಷಣ ಉಚಿತ ಶಿಕ್ಷಣ ಹಾಗೂ ನ್ಯಾಯವಾದ ಶಿಕ್ಷಣಕ್ಕೆ ಬದ್ಧ ಎನ್ನುವುದು ಇಲ್ಲವಾಗಿದೆ. ಈ ಶಿಕ್ಷಣ ಈವೊತ್ತಿನ ದಿವಸ ಈರೀತಿಯಾಗಿ ಬಿಗಡಾಯಿಸಿದೆ. ಮೂಲಭೂತವಾಗಿ ಹೇಳಬೇಕಾದರೆ ಈ ಶಿಕ್ಷಣ ಖಾಸಗಿ ಜನಕ್ಕೆ ಏನು ಹೋಗಿದೆ ಇದನ್ನು ಮೊದಲು ತಪ್ಪಿಸಬೇಕು. ಈ ಖಾಸಗೀಕರಣದ ಶಿಕ್ಷಣದ ಬಗ್ಗೆ ಎಲ್ಲರಲ್ಲೂ ಏನು ಒಂದು ಯೋಚನೆ ಮಾಡಿಕೊಂಡಿದ್ದಾರೆ ಎಂದರೆ ಈ ಖಾಸಗೀ ವಿದ್ಯಾಲಯದಲ್ಲಿ ಸ್ವಲ್ಪ ಮಟ್ಟಿಗೆ ಎಫಿಷಿಯೆನ್ಸಿ ಇದೆ ಎಂದು. ಇದು ಸುಳ್ಳು. ಇದನ್ನು

ನಾನು ನಂಬುವುದಿಲ್ಲ. ಇದನ್ನು ತಾವು ಕಂಟ್ರೋಲ್ ಮಾಡಬೇಕು. ಈಗ ಬೆಂಗಳೂರಿನಲ್ಲಿ ಕೆಲವು ಖಾಸಗಿ ಕಾಲೇಜುಗಳು ಇವೆ. ಉದಾಹರಣೆಗೆ ನ್ಯಾಷನಲ್ ಕಾಲೇಜಿಗೆ ಸೇರಬೇಕಾದರೆ ೮೦ ಪರ್ಸೆಂಟ್ ಬರಬೇಕು, ಎಂ ಇ ಎಸ್ ಕಾಲೇಜಿಗೆ ಸೀಟು ಸಿಗಬೇಕಾದರೆ ೮೫ ಪರ್ಸೆಂಟ್ ಬರಬೇಕು ಎಂದು ಹೇಳುತ್ತಾರೆ. ಇದನ್ನು ಒಂದು ವ್ಯಾಪಾರದ ಕೇಂದ್ರವನ್ನಾಗಿ ಮಾಡಿದ್ದಾರೆ. ಈ ಸರ್ಕಾರಿ ಕಾಲೇಜುಗಳಲ್ಲಾದರೂ ಎಲ್ಲರನ್ನೂ ಅಡ್ಮಿಟ್ ಮಾಡಿಕೊಳ್ಳುತ್ತಾರೆ. ನಾನು ಮೊದಲೇ ಹೇಳಿದ ಹಾಗೆ ಈ ಖಾಸಗೀ ವಿದ್ಯಾ ಸಂಸ್ಥೆಗಳಲ್ಲಿ ಎಫಿಸಿಯೆನ್ಸಿ ಜಾಸ್ತಿ ಇದೆ. ನಮ್ಮ ಮಕ್ಕಳು ಚೆನ್ನಾಗಿ ಓದುತ್ತಾರೆ ಎಂದು ತಿಳಿದುಕೊಳ್ಳುವುದು ಸುಳ್ಳು, ನಾನು ನಂಬುವುದಿಲ್ಲ. ಈ ಅಪಪ್ರಚಾರದಿಂದ ಎಲ್ಲರೂ ಕೂಡ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುವ ಒಂದು ಪದ್ಧತಿ ಬಂದು ಬಿಟ್ಟಿದೆ. ಇನ್ನೊಂದು ವಿಚಾರ ಏನೆಂದರೆ ನಮ್ಮಲ್ಲಿ ಇನ್ನೂ ಇಂಗ್ಲೀಷ್‌ನ ವ್ಯಾಮೋಹ ತಪ್ಪಲಿಲ್ಲ. ಎಲ್ಲ ಕಡೆಯೂ ಕನ್ನಡ ಬೇಕು, ಕನ್ನಡ ಬೇಕು ಎಂದು ಘೋಷಣೆಯನ್ನು ಮಾಡುತ್ತಿದ್ದರೂ ಕೂಡ ಅವರು ತಮ್ಮ ಮಕ್ಕಳನ್ನು ಕಾನ್‌ವೆಂಟ್‌ಗೆ ಕಳುಹಿಸುತ್ತಾರೆ. ಇನ್ನೂ ಸಹ ಅವರು ಕನ್ನಡ ಕ್ಲಾಸ್‌ಗೆ ತಮ್ಮ ಮಕ್ಕಳನ್ನು ಸೇರಿಸುವುದು ಆಚರಣೆಗೆ ಬಂದಿಲ್ಲ. ಕಾನ್‌ವೆಂಟ್‌ನಲ್ಲಿ ಓದಿದರೆ ಡಿಸಿಪ್ಲೀನ್ ಬರುತ್ತದೆ ಎನ್ನುವ ಒಂದೇ ಒಂದು ಉದ್ದೇಶವಿದೆ. ಇನ್ನೊಂದು ವಿಚಾರ ಏನೆಂದರೆ ಖಾಸಗಿ ಪ್ರೈಮರಿ ಶಾಲೆಗಳಲ್ಲಿ ಹೆಚ್ಚು ಸ್ಟ್ರೆಂತ್ ಇದ್ದರೆ ಹೆಚ್ಚು ಉಪಾಧ್ಯಾಯರು ಇರುತ್ತಾರೆ. ಆದರಿಂದಾಗಿ ಅಲ್ಲಿ ಎಫಿಷಿಯನ್ಸಿ ಇರುತ್ತದೆ. ಅದೇ ಸರ್ಕಾರೀ ಶಾಲೆಗಳಲ್ಲಿ ಒಂದು ಕ್ಲಾಸ್‌ನಲ್ಲಿ ೮೦ ಜನ ಹುಡುಗರು ಇದ್ದರೆ ಒಬ್ಬರೇ ಉಪಾಧ್ಯಾಯರು ಇರುತ್ತಾರೆ. ಹೀಗಿದ್ದರೆ ಎಫಿಷಿಯೆನ್ಸಿ ಹೇಗೆ ಬರುತ್ತದೆ ? ಆದುದರಿಂದ ನಾನು ಹೇಳುವುದೇನೆಂದರೆ ಪ್ರೈಮರಿ ಶಾಲೆಗಳಲ್ಲಾಗಲಿ, ಹೈಸ್ಕೂಲ್‌ನಲ್ಲಾಗಲೀ ಕಾಲೇಜಿನಲ್ಲಾಗಲಿ ಹುಡುಗರ ಸಂಖ್ಯೆ ಜಾಸ್ತಿಯಾದ ಹಾಗೆ ಉಪಾಧ್ಯಾಯರ ಸಂಖ್ಯೆಯನ್ನೂ ಸಹ ಜಾಸ್ತಿ ಮಾಡಬೇಕು. ೧೯೪೭ ರ ಹಿಂದೆ ಈ ವಿದ್ಯಾಭ್ಯಾಸದ ಬಗ್ಗೆ 'ರಂಗಣ್ಣನ ಕನಸು ಎಂದು ಎಂ.ಆರ್.ವಿ. ಬರೆದಿದ್ದರು. ಅದೇ ಸಿಸ್ಟಂ ಈವೊತ್ತು ಸಹ ಕಂಟಿನ್ಯೂ ಆಗುತ್ತಾ ಇದೆ. ಇಂದೂ ಕೂಡ ಶಾಲೆಗಳು ಮಾರಮ್ಮನ ಗುಡಿಯಲ್ಲಿ, ದೇವಸ್ಥಾನಗಳಲ್ಲಿ, ಚಾವಡಿಗಳಲ್ಲಿ ನಡೆಯುತ್ತಾ ಇದೆ. ತಮಗೆ ಹೇಳಬೇಕಾದರೆ ನಮ್ಮ ಊರಿನಲ್ಲಿ ಒಂದು ಸ್ಕೂಲ್ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯುತ್ತಾ ಇದೆ. ಹಾಗೆಯೇ ಮುಸ್ಲಿಂ ಸ್ಕೂಲ್ ಇನ್ನೊಂದರಲ್ಲಿ ನಡೆಯುತ್ತಾ ಇದೆ. ಇಂಥಾ ಪರಿಸ್ಥಿತಿಯನ್ನು ತಪ್ಪಿಸಬೇಕು. ನಿಜವಾಗಿಯೂ ನಮ್ಮ ವಿದ್ಯಾಭ್ಯಾಸ ಇನ್ನೂ ಕೆಳಮಟ್ಟದಲ್ಲಿದೆ. ಸ್ವಾತಂತ್ರ್ಯ ಬಂದಮೇಲೂ ಕೂಡ ನಮ್ಮ ವಿದ್ಯಾಭ್ಯಾಸ ೩೭ ಪರ್ಸೆಂಟ್ ಮೇಲಕ್ಕೆ ಹತ್ತಿಲ್ಲ. ಆಲ್ ಇಂಡಿಯಾ ಆವರೇಜ್‌ನಲ್ಲಿ ನಾವು ಬಹಳ ಕಡಿಮೆ ಇದ್ದೇವೆ. ನಾವು ಈ ವಿದ್ಯಾಭ್ಯಾಸಕ್ಕೆ ೧೬ ಪರ್ಸೆಂಟ್ ಹಣ ಏನು ಖರ್ಚು ಮಾಡುತ್ತಿದ್ದೇವೆ ಅದು ಬಹಳ ಕಡಿಮೆ. ಜಾಸ್ತಿ ಖರ್ಚು ಮಾಡಬೇಕೆಂದು ಹೇಳುತ್ತೇನೆ. ಇನ್ನು ಇದರ ಅಪಾಯಿಂಟ್‌ಮೆಂಟ್ಸ್‌ನಲ್ಲಿ ವಿಪರೀತ ಭ್ರಷ್ಟಾಚಾರ ಇದೆ. ಇದು ತಪ್ಪಬೇಕು. ಈಗ ಇದರ ಬಗ್ಗೆ ಸೆಂಟ್ರಲೈಸೇಷನ್ ಆಫ್ ಪವರ್ಸ್ ಏನು ಇದೆ ಇದನ್ನು ತಪ್ಪಿಸಿ ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳಿಗೆ ಕೊಡಬೇಕು. ಹಾಗೆಯೇ ಈ ಖಾಸಗೀಕರಣವನ್ನು ತಪ್ಪಿಸಿ ಪೂರ್ತಿಯಾಗಿ ಎಲ್ಲಾ ಶಾಲೆಗಳನ್ನೂ ಸಹ ಸರ್ಕಾರದವರು ರಾಷ್ಟ್ರೀಕರಣ ಮಾಡಬೇಕು ಎಲ್ಲಾ ಶಾಲಾಕಾಲೇಜುಗಳು, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ಇವೆಲ್ಲವನ್ನೂ ಸಹ ನಮ್ಮ ಸರ್ಕಾರ ಉಳಿಸಿಕೊಳ್ಳಬೇಕು ಹಾಗಾದರೆ ಬಡಜನರಿಗೆ ಅನುಕೂಲವಾಗುತ್ತದೆ. ಮೊನ್ನೆ ಎಲ್ಲ ಸದಸ್ಯರೂ ಸಹ ಈ ವೈದ್ಯಕೀಯ ಶಿಕ್ಷಣದ ಸೀಟಿನ ಬಗ್ಗೆ ಗಲಾಟೆ ಮಾಡಿದಾಗ ಹಳ್ಳಿಗಳಲ್ಲಿರತಕ್ಕಂಥಾ ಹುಡುಗರಿಗೆ ಹೆಚ್ಚು ಸೀಟುಗಳು ಕೊಡಬೇಕೆಂದು ಗಲಾಟೆ ಮಾಡಿದಾಗ ೫೦ ಇದ್ದುದನ್ನು ೭೦ ಕ್ಕೆ ಏರಿಸಿದರು. ಅದೂ ಸಹ ಸಾಕಾಗುವುದಿಲ್ಲ. ಏತಕೆಂದರೆ ೧೦೦ ಕ್ಕೆ ೮೫ ಜನರಷ್ಟು ಹಳ್ಳಿಗಾಡಿನಿಂದ ಬಂದಂಥಾ ಜನ ಇರುವುದರಿಂದ ಹೆಚ್ಚು ಸೀಟುಗಳು ಹಳ್ಳಿಜನರಿಗೆ ಕೊಡಬೇಕು ಇಲ್ಲವೆ ಒಟ್ಟು ಸೀಟಿನಲ್ಲಿ ಶೇಕಡಾ ೨೫ ರಷ್ಟನ್ನಾದರೂ ಕೂಡ ರಿಸರ್ವೇಷನ್ ಮಾಡಬೇಕೆಂದು ಸರ್ಕಾರದಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಎಸ್.ಸಿ. ಮತ್ತು ಎಸ್.ಟಿ.ಯ ವಿದ್ಯಾರ್ಥಿಗಳಿಗೆ ಬಹಳ ಅನುಕೂಲತೆಗಳನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. ಬಹಳ ಅನುಕೂಲ ಕೊಟ್ಟಿದ್ದೀರಿ. ಹಾಗೆಯೇ ಅದಕ್ಕೆ ತಕ್ಕಂತೆ ಹಾಸ್ಟಲ್ಸ್ ಸೌಕರ್ಯವನ್ನೂ ಸಹ ಕೊಟ್ಟರೆ ಅನುಕೂಲ ಇಲ್ಲದೆ ಹೋದರೆ ಅವರಿಗೆ ಈ ವಿದ್ಯಾಭ್ಯಾಸಕ್ಕೆ ಎನ್‌ಕರೇಜ್‌ಮೆಂಟ್ ಕೊಟ್ಟ ಹಾಗೆ ಆಗುವುದಿಲ್ಲ. ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ ಪ್ರತಿಯೊಂದು ಹೋಬಳಿಯ ಹೆಡ್‌ಕ್ವಾರ್ಟರ್ಸ್‌ನಲ್ಲಿ ಹೈಸ್ಕೂಲ್‌ಗಳನ್ನು ಏನು ಕೊಟ್ಟಿದ್ದೀರಿ ಅಲ್ಲಿ ಎಸ್‌ಸಿ ಮತ್ತು ಎಸ್‌ಟಿ ಹಾಸ್ಟಲ್ಸ್‌ನ್ನೂ ಸಹ ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ. ಅವರಿಗೆ ವಿದ್ಯಾಭ್ಯಾಸಕ್ಕೂ ಅನುಕೂಲವಾಗುತ್ತದೆ. ಈ ಬಗ್ಗೆ ಎಲ್ಲರೂ ಸಹ ಡಿಮ್ಯಾಂಡ್ ಮಾಡಿದರೂ ಅದರ ಬಗ್ಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ಪ್ರತಿಯೊಂದು ಹೋಬಳಿಯ

ಹೆಡ್‌ಕ್ವಾರ್ಟರ್ಸ್‌ನಲ್ಲಿ ಹೈಸ್ಕೂಲ್‌ಗಳನ್ನು ಏನು ಕೊಟ್ಟಿದ್ದೀರೋ ಅಲ್ಲಿ ಎಸ್‌ಸಿ ಮತ್ತು ಎಸ್‌ಟಿ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಹಾಸ್ಟಲ್ ಸೌಲಭ್ಯಗಳನ್ನು ಒದಗಿಸಿಕೊಡುವ ಹಾಗೆ ಮಾಡಿಕೊಡ ಬೇಕೆಂದು ನಾನು ಮತ್ತೊಮ್ಮೆ ಕೇಳುತ್ತೇನೆ. ಇನ್ನು ಕಟ್ಟಡದ ವಿಚಾರ ಹೇಳಬೇಕಾದರೆ ಇದನ್ನು ಪಿ. ಡಬ್ಲ್ಯೂ.ಡಿ.ಯವರ ಬಜೆಟ್‌ನಲ್ಲಿ ಸೇರಿಸಿಲ್ಲ. ಎಜುಕೇಷನ್ ಡಿಪಾರ್ಟ್‌ಮೆಂಟಿನವರನ್ನು ಕೇಳಿದರೆ ನಮಗೆ ಇದರಲ್ಲಿ ೧೫ ಪರ್ಸೆಂಟ್ ಮಾತ್ರ ಕೊಡುತ್ತಾರೆ ಸಾಕಾಗುವುದಿಲ್ಲ ಎಂದು ಹೇಳುತ್ತಾರೆ. ನೀವು ಇದರಲ್ಲಿ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ೧ ಕೋಟಿ ೩೬ ಲಕ್ಷ ಏನು ಇಟ್ಟಿದ್ದೀರೋ ಇದನ್ನು ಸ್ವಲ್ಪ ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ತಾವು ಒಂದು ಯೋಜನೆ ಹಾಕಿಕೊಂಡು ಪ್ರತಿಯೊಂದು ಹಳ್ಳಿಯಲ್ಲೂ ಸಹ ಒಂದೊಂದು ಕ್ಲಾಸ್‌ಗೆ ಒಂದೊಂದು ರೂಂ ಅನ್ನು ಕಟ್ಟಿಕೊಡುವ ಹಾಗೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಇಲ್ಲದೇಹೋದರೆ ಅಲ್ಲಿ ಸ್ಕೂಲ್‌ಗಳನ್ನು ನಡೆಸುವುದಕ್ಕಾಗುವುದಿಲ್ಲ. ಜೊತೆಗೆ ಪ್ರೈಮರಿ ಉಪಾಧ್ಯಾಯರುಗಳ ಸಂಖ್ಯೆ ಜಾಸ್ತಿ ಮಾಡಬೇಕು. ಈಗ ಶಾಲಾ ಕಾಲೇಜುಗಳಲ್ಲಿ ತಾತ್ಕಾಲಿಕವಾಗಿ ತೆಗೆದುಕೊಂಡಿರತಕ್ಕಂಥಾ ಉಪಾಧ್ಯಾಯರುಗಳು, ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಿಂದ ತೆಗೆದುಕೊಂಡಿರತಕ್ಕಂಥಾ ಉಪಾಧ್ಯಾಯರುಗಳು, ಕಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡಿರತಕ್ಕಂಥಾ ಲೆಕ್ಚರರ್ಸ್ ೩-೪ ವರ್ಷಗಳಿಂದ ಯಾವ್ಯಾವ ಉಪಾಧ್ಯಾಯರುಗಳು, ಲೆಕ್ಚರರ್‌ಗಳು ಏನು ಕೆಲಸ ಮಾಡುತ್ತಿದ್ದಾರೋ ಅವರನ್ನೆಲ್ಲಾ ತಾವು ದಯವಿಟ್ಟು ಖಾಯಂ ಮಾಡಬೇಕು ಎಂದು ಹೇಳುತ್ತೇನೆ. ಈಗ ಕಾಲುಭಾಗದಷ್ಟು ಉಪಾಧ್ಯಾಯರುಗಳು ಯಾವ್ಯಾವ ಶಾಲಾ ಕಾಲೇಜುಗಳಲ್ಲಿ ಕಡಿಮೆ ಇದ್ದಾರೆ. ಆ ಜಾಗಕ್ಕೆ ಅವರುಗಳನ್ನೆಲ್ಲಾ ಭರ್ತಿ ಮಾಡಿ. ಜೊತೆಗೆ ಸೆಕೆಂಡರಿ ಗ್ರಾಜುಯೇಟ್ ಟೀಚರ್ಸ್ ಏನು ಇದ್ದರು ಅವರನ್ನು ಉಪಾಧ್ಯಾಯರ ಕೆಲಸದಿಂದ ಬಿಡಲಾಯಿಸಿ ತಾಲ್ಲೂಕ್ ಆಫೀಸಿನ ಫಸ್ಟ್ ಡಿವಿಷನ್ ಕ್ಲರ್ಕ್ ಆಗಿ ಹಾಕಿದ್ದಾರೆ. ಆದುದರಿಂದ ಎಲ್ಲೆಲ್ಲಿ ಸೆಕೆಂಡರಿ ಗ್ರಾಜುಯೇಟ್ಸ್ ಟೀಚರ್ಸ್ ಇದ್ದರೋ ಅಲ್ಲಲ್ಲೇ ಅವರನ್ನು ಖಾಯಂ ಮಾಡಿಕೊಟ್ಟರೆ ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ಆ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆ. ಜೊತೆಗೆ ನಮ್ಮ ವಿದ್ಯಾಭ್ಯಾಸಕ್ಕೂ ಸಹ ಅನುಕೂಲವಾಗುತ್ತದೆ. ಈ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಹೈಸ್ಕೂಲುಗಳಲ್ಲಿ ಮತ್ತು ಕಾಲೇಜುಗಳಲ್ಲಿ ಕಾಂಟ್ರಾಕ್ಟ್ ಲೆಕ್ಚರರ್ಸ್‌ನ್ನು ಖಾಯಂ ಮಾಡಬೇಕು ಎಂದು ಹೇಳುತ್ತೇನೆ. ೧೦೦ ರೂಪಾಯಿಗಳಿಗೆ ಟೀಚರ್ಸನ್ನು ಇಟ್ಟಿರುವುದು ಬಹಳ ಅನ್ಯಾಯ. ಆದ್ದರಿಂದ ರೆಕ್ರೂಟ್‌ಮಾಡಿ ಸರ್ಕಾರ ವಿದ್ಯಾಭ್ಯಾಸದ ಬಗ್ಗೆ ಹೆಚ್ಚು ಗಮನ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಕೋಲಾರ ಜಿಲ್ಲೆಯ ಬಗ್ಗೆ ಹೇಳ ಬೇಕಾಗಿದೆ, ಕೋಲಾರ ಜಿಲ್ಲೆ ಬೆಂಗಳೂರಿಗೆ ಹತ್ತಿರ ಇದ್ದರೂ ಕೂಡ, ಸಾಧಾರಣವಾಗಿ ೨೫-೩೦ ವರ್ಷಗಳಿಂದ ಸತತವಾಗಿ ಹೋರಾಡಿದ್ದರೂ ಕೂಡ ಕೋಲಾರ ಜಿಲ್ಲೆಯ ಬಗ್ಗೆ ಗಮನ ಕೊಡುತ್ತಾ ಇಲ್ಲ. ಕೋಲಾರದಲ್ಲಿ ಮೆಡಿಕಲ್ ಕಾಲೇಜು ಬೇಕು ಎಂಬ ಬೇಡಿಕೆ ಇದೆ. ಇದರ ಬಗ್ಗೆ ಗಮನ ಕೊಡುತ್ತಾ ಇಲ್ಲ. ಜೊತೆಗೆ ಚಿಕ್ಕಬಳ್ಳಾಪುರದಲ್ಲಿ ಇಂಜನೀಯರಿಂಗ್ ಕಾಲೇಜು ಕೊಡಬೇಕು ಎಂಬ ಬೇಡಿಕೆ ಇದೆ. ಅದನ್ನು ತತ್ವಶಃ ಒಪ್ಪಿಕೊಂಡಿದ್ದಾರೆ. ಹೀಗೆ ಮುಂದಕ್ಕೆ ತಳ್ಳುತ್ತಿದ್ದಾರೆಯೇ ಹೊರತು ಕೋಲಾರದಲ್ಲಿ ಮಾಡುತ್ತಾ ಇಲ್ಲ ಮತ್ತೆ ಕೋಲಾರದಲ್ಲಿ ಲಾ ಕಾಲೇಜು ಬೇಕು ಎಂಬ ಬೇಡಿಕೆ ಮೊದಲಿನಿಂದಲೂ ಇದೆ. ಮುಳಬಾಗಿಲಿನಲ್ಲಿ ಪಾಲಿಟೆಕ್ನಿಕ್ ಕೊಡಬೇಕು ಎಂದು ಅನೇಕ ಸಾರಿ ಬೇಡಿಕೊಂಡಿದ್ದೇವೆ. ಸಾಮಾನ್ಯವಾಗಿ ಪಾಲಿಟೆಕ್ನಿಕ್ ಎಲ್ಲಾ ಕಡೆ ಇದೆ. ಒಂದೊಂದು ಜಿಲ್ಲೆಯಲ್ಲಿ ಎರಡು, ಮೂರು ಲಾ ಕಾಲೇಜು ಉಂಟು, ಇಂಜನಿಯರಿಂಗ್ ಕಾಲೇಜು ಉಂಟು. ಇಂತಹ ಒಂದು ಪರಿಸ್ಥಿತಿಯಲ್ಲಿ ಕೋಲಾರದ ಕಡೆಗೆ ಹೆಚ್ಚಿನ ಗಮನಕೊಡದೇ ಇರತಕ್ಕಂಥಾದ್ದು ಸರಿಯಲ್ಲ. ಕೋಲಾರದಲ್ಲಿ ಮೆಡಿಕಲ್ ಕಾಲೇಜನ್ನು ಸ್ಥಾಪನೆ ಮಾಡದೇ ಬಿಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಮಾಡ ಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಗವರ್ನಮೆಂಟ್ ಮೆಡಿಕಲ್ ಕಾಲೇಜು ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಸರ್ಕಾರದ ಮೆಡಿಕಲ್ ಕಾಲೇಜು, ಸರ್ಕಾರದ ಇಂಜನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಕೊಡಬೇಕು. ಪ್ರೈವೇಟ್ ಮೆಡಿಕಲ್ ಕಾಲೇಜು ಮಾಡಿದರೂ ಕೂಡ ಆಂಧ್ರದವರು ೨೦ ಸೀಟ್ ಕೊಂಡುಕೊಳ್ಳುತ್ತಾರೆ, ಕೇರಳದವರು ೩೦ ಸೀಟ್ ಕೊಂಡುಕೊಳ್ಳುತ್ತಾರೆ. ಇರಾನಿಯವರು ಒಳ್ಳೆಯ ಪರಿಸ್ಥಿತಿಯನ್ನೆಲ್ಲಾ ಹದಗೆಡಿಸಿ, ಪರಿಸರ ಹಾಳುಮಾಡಿ, ೧೦-೧೫ ಸೀಟ್ ಕೊಂಡುಕೊಂಡು ವ್ಯಾಪಾರ ಮಾಡುವುದಕ್ಕೆ ಶುರು ಮಾಡುತ್ತಾರೆ. ಕೋಲಾರದವ

ರಿಗೆ ಸೀಟು ಸಿಕ್ಕುವುದಿಲ್ಲ. ಕೋಲಾರದಲ್ಲಿ ೨ ಲಕ್ಷ ರೂಪಾಯಿ ಕೊಟ್ಟು ಸೀಟು ಕೊಂಡುಕೊಳ್ಳು ವವರು ಕಡಿಮೆ. ಕೋಲಾರ ಬಡತನ ಇರುವ ಜಿಲ್ಲೆ, ಇನ್‌ಕಂನಲ್ಲಿ ೧೯ನೇ ಸ್ಥಾನದಲ್ಲಿದೆ. ಅದ್ದ ರಿಂದ ದಯಮಾಡಿಟ್ಟು ಸರ್ಕಾರ ಕಾಲೇಜುಗಳನ್ನು ಕೋಲಾರಕ್ಕೆ ತಕ್ಷಣ ಕೊಡಬೇಕು. ಪಾಲಿಟೆಕ್ನಿಕ್ ಕೋಲಾರ ಡಿವಿಜನ್‌ಗೆ ಒಂದು ಚಿಕ್ಕಬಳ್ಳಾಪುರ ಡಿವಿಜನ್‌ಗೆ ಒಂದು ಕೊಡಬೇಕು ಎಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷಿಣಿಯವರಿಗೆ ನಮಸ್ಕಾರ ಹೇಳಿ, ಚರ್ಚೆ ಯನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಬೇಡಿಕೆ ಸಂಖ್ಯೆ ೯, ೧೦, ೧೪ ಮತ್ತು ೧೩ರ ಬಗ್ಗೆ ನಿನ್ನೆ ಇಲ್ಲಿ ಚರ್ಚೆ ಪ್ರಾರಂಭವಾಗಿದೆ. ಕಳೆದ ೩ ವರ್ಷಗಳಿಂದ ಈ ಜನತಾಪಕ್ಷದ ಅಧಿಕಾರದ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಒಂದು ಸಮಗ್ರವಾದಂಥ ಯೋಜನೆಯನ್ನು ತಂದು ಸುಧಾರಣೆ ಮಾಡಬಹುದು ಎನ್ನುವಂಥ ಅಪೇಕ್ಷೆ ಇಟ್ಟುಕೊಂಡಿರುವವರಲ್ಲಿ ನಾನೂ ಒಬ್ಬ. ಆದರೆ ಈಗ ಅನಿವಾರ್ಯವಾಗಿ ನಮ್ಮೆಲ್ಲರ ಕನಸು ನನಸಾಗಲಿಲ್ಲ ಎಂದು ಹೇಳಬೇಕಾಗಿದೆ. ಏಕೆಂದರೆ ಹಿಂದಿನ ಹಳೆಯ ಜಾಡಿನಲ್ಲೇ ಈ ಶಿಕ್ಷಣವನ್ನು ಮುಂದುವರಿಸುವಂಥಾದ್ದು ನಡೆಯುತ್ತಿದೆ. ರಾಜ ಕಾರಣಗಳು ಈ ಕಡೆ ಇರಬಹುದು ಅಥವಾ ಆ ಕಡೆ ಇರಬಹುದು, ಹಾಗೂ ಇಲ್ಲದೇ ಇರಬಹುದು. ಹಿಂದೆ ಯಾವ ರೀತಿ ಸ್ವಾರ್ಥಕ್ಕೋಸ್ಕರ ಶಿಕ್ಷಣ ಕೇಂದ್ರಗಳನ್ನು ವ್ಯಾಪಾರ ಕೇಂದ್ರಗಳನ್ನಾಗಿ ಮಾಡಿ ಕೊಂಡಿದ್ದರು ಅದನ್ನೇ ಇವರು ಮುಂದುವರಿಸುತ್ತಿದ್ದಾರೋ ಏನೋ ಎನ್ನುವ ಭಯ ನನಗೆ ಬಂದಿದೆ ಅದಕ್ಕಾಗಿ ನಾನು ಪ್ರಾರಂಭದಲ್ಲೇ ವಿನಂತಿ ಮಾಡುತ್ತೇನೆ. ಏನೆಂದರೆ, ರಾಜ್ಯದಲ್ಲಿ ಪ್ರೈವೇಟ್ ಹೈಸ್ಕೂಲ್ಸ್, ಪಾಲಿಟೆಕ್ನಿಕ್ಸ್ ಮುಂತಾದವು ಏನಿವೆ ಇವು ಯಾರ ಹಿಡಿತದಲ್ಲಿವೆ ಎನ್ನುವುದನ್ನು ತನಿಖೆ ಮಾಡುವುದಕ್ಕೆ ತಜ್ಞರ ಸಮಿತಿಯನ್ನು ಮಾಡಿ. ಅದರಲ್ಲಿ ನಮ್ಮನ್ನು ಯಾರನ್ನೂ ಇಡಬೇಡಿ. ನಾಳೆ ಎಂ.ಎಲ್.ಎ. ಗಿರಿ ಹೋದ ಮೇಲೆ ಜೀವನ ಮಾಡುವುದಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ಪ್ರವೇಶ ಮಾಡುತ್ತಿದ್ದಾರೇನೋ ಎನ್ನುವ ಭಯ ನನಗೆ ಉಂಟಾಗಿದೆ. ಹೋದವರ್ಷ ಬಹಳಷ್ಟು ಹೈಸ್ಕೂಲು ಗಳನ್ನು ಮಂಜೂರು ಮಾಡಿದರು. ನಾನು ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳು ತ್ತೇನೆ. ನಾನು ಒಬ್ಬ ಶಾಸಕನಾಗಿ, ನನ್ನ ಕ್ಷೇತ್ರದಲ್ಲಿ ಹೈಸ್ಕೂಲು, ಪಾಲಿಟೆಕ್ನಿಕ್ ಬೇಕು ಎಂದು ಬಂದಾಗ ಕೊನೇ ಪಕ್ಷ ನಿಮ್ಮ ಕಾಲವಲ್ಲಾದರೂ ನಾವು ಎಲ್ಲಿ ಕೇಳುತ್ತೇವೆ, ಅಲ್ಲಿ ಅವಶ್ಯಕತೆ ಇಲ್ಲ ಎಂದು ಹೇಳುವಂಥ ಶಕ್ತಿ ಬರುವಂಥ ಶಕ್ತಿ ಬರುತ್ತದೆಯೋ ? ಇವತ್ತು ರಾಜ್ಯದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಾ ? ಯಡಿಯೂರಪ್ಪ ಆಗಲಿ, ಮತ್ತೊಬ್ಬರಾಗಲಿ ಕೇಳಿದರೆ ಅಲ್ಲಿ ಅವಶ್ಯಕತೆ ಇದೆಯೇ ಇಲ್ಲವೇ ಎಂದು ನೋಡಿ ಅಲ್ಲಿ ಅವಶ್ಯಕತೆ ಇಲ್ಲ ಎಂದು ಹೇಳು ವಂಥ ಶಕ್ತಿ ನಿಮಗೆ ಬರಲಿಲ್ಲ. ಮೊನ್ನೆ ನನ್ನ ತಾಲ್ಲೂಕಿನಲ್ಲಿ ಕೆಲವು ಹೈಸ್ಕೂಲುಗಳನ್ನು ಕೊಟ್ಟಿದ್ದೀರಿ ಅದರ ಬಗ್ಗೆ ಟೆಲಿಗ್ರಾಂ ಕೊಟ್ಟಿದ್ದೀರಿ, ಅದಕ್ಕಾಗಿ ಧನ್ಯವಾದಗಳು ನೀವು ಕೊಟ್ಟ ಪ್ರೈವೇಟ್ ಹೈಸ್ಕೂಲ್ಸ್ ಪರಿಣಾಮವಾಗಿ ಇದ್ದಂಥ ಹೈಸ್ಕೂಲುಗಳನ್ನು ಮುಚ್ಚುವಂಥ ಸ್ಥಿತಿಗೆ ಬಂದಿದ್ದಾರೆ. ಇದರಲ್ಲಿ ಪ್ರಭಾವೀ ವ್ಯಕ್ತಿಗಳ ಕೈವಾಡವಿರುವುದು ನಿಮಗೆ ಗೊತ್ತಿದೆ. ಅಲ್ಲದೆ ಪ್ರೈವೇಟ್ ಪಾಲಿ ಟೆಕ್ನಿಕ್‌ಗಳನ್ನು ಮಂಜೂರು ಮಾಡಿದ್ದೀರಿ. ನನಗೆ ತಿಳಿದ ಮಟ್ಟಿಗೆ ಅರ್ಜಿಗಳೂ ಸಹ ಬಂದಿರಲಿಲ್ಲ. ಪ್ರಭಾವಕ್ಕೆ ಒಳಗಾಗಿ ಅನಿವಾರ್ಯವಾಗಿ ಮಂಜೂರಾತಿ ಕೊಟ್ಟಿದ್ದೀರಿ. ಹೀಗಾಗಿ ಹಿಂದಿನ ಪದ್ಧತಿ ಯನ್ನೇ ಮುಂದುವರಿಸುತ್ತಾ ಇದ್ದೀರಿ. ತಾವು ಅನೇಕ ಘೋಷಣೆಗಳನ್ನು ಮಾಡಿದ್ದೀರಿ, ಸ್ವಾಗತ ಆದರೆ ಘೋಷಣೆಗಳನ್ನು ಮಾಡುವುದಕ್ಕೆ ಮುಂಚೆ ಅದಕ್ಕೆ ಬೇಕಾದಂಥ ವ್ಯವಸ್ಥೆ ಮಾಡಿಕೊಂಡು ಎಷ್ಟರ ಮಟ್ಟಿಗೆ ಜಾರಿಗೆ ತರಬಹುದು, ಈ ವರ್ಷ ಮಾಡಬೇಕೇ ಅಥವಾ ಮುಂದಿನ ವರ್ಷ ಮಾಡ ಬೇಕೇ ಎನ್ನುವ ಚಿಂತನೆ ಏಕೆ ಮಾಡಲಿಲ್ಲವೋ ಎಂದು ಭಯವಾಗಿದೆ, ಈ ಗೊಂದಲವನ್ನು ನೋಡಿ ದಾಗ ತಾವು ಶಿಕ್ಷಣದ ರೂಪುರೇಷೆಗಳನ್ನು ಮಾಡುವುದಕ್ಕೆ ಒಂದು ಸಮಿತಿಯನ್ನು ಮಾಡಿದ್ದೀರಿ, ಇದು ಸ್ವಾಗತಾರ್ಹವಾದ ಸಂಗತಿ. ಈಗಲಾದರೂ ಅದರ ಬಗ್ಗೆ ಚಿಂತನೆ ಮಾಡಿ. ಅವರು ಕೊಡ ತಕ್ಕ ಅಭಿಪ್ರಾಯವನ್ನು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತರುತ್ತೀರೋ ಕಾದು ನೋಡಬೇಕಾ ಗಿದೆ. ಖಾಸಗಿ ಶಾಲೆಗಳು ತೆಗೆದುಕೊಳ್ಳುವ ಡೊನೇಷನ್ ಬಗ್ಗೆ ಹೊಸ ಹೆಜ್ಜೆ ಹಾಕಿದಿರಿ. ಅದಕ್ಕೆ ಅರ್ಜೆಂಟ್ ಏನಿತ್ತು ಪ್ರೈವೇಟ್ ಸ್ಕೂಲ್‌ಗಳವರು ಬೇರೆ ಬೇರೆ ಕಟ್ಟ ದಾರಿಗಳಲ್ಲಿ ಹೋಗಿ ರಸೀದಿ ಕೊಟ್ಟು ದುಡ್ಡನ್ನು ತೆಗೆದುಕೊಳ್ಳುತ್ತಿದ್ದರು. ಈಗ ಏನಾಗಿದೆಯೆಂದರೆ ರಶೀದಿ ಇಲ್ಲದೆ ದುಡ್ಡನ್ನು ತೆಗೆದು ಕೊಳ್ಳುತ್ತಿದ್ದಾರೆ. ಈಗ ೫೦೦ ರಿಂದ ಒಂದು ಸಾವಿರದವರೆಗೆ ಕೊಡುವಂಥ ಸ್ಥಿತಿಗೆ ಬಂದಿದ್ದೇವೆ. ಇದನ್ನು ಮಾಡಿದ ಮೇಲೆ ನಿಮ್ಮ ಮನಸ್ಸಿಗೆ ಸಮಾಧಾನವಾಗಿದೆಯೇ ? ಇದನ್ನು ಮಾಡುವುದಕ್ಕೆ ಅವಸರ ಏಕೆ ಎಂದು ತಮ್ಮ ಮೂಲಕ ಕೇಳುತ್ತೇನೆ. ಸ್ವಲ್ಪ ದಿವಸ ಕಾಯಬೇಕಾಗಿತ್ತು, ಇದರ ಬಗ್ಗೆ ನಿಮ್ಮ ಅಧಿಕಾರಿಗಳನ್ನು ಸಿದ್ಧತೆ ಮಾಡಿಕೊಂಡು ಯೋಚನೆ ಮಾಡಬಹುದಾಗಿತ್ತು. ಇದನ್ನೆಲ್ಲಾ ನೋಡಿದರೆ

ಇತ್ತೀಚೆಗೆ ಏನು ಭಯ ಉಂಟಾಗಿದೆಯೆಂದರೆ, ಈ ಶಿಕ್ಷಣವನ್ನೂ ಸಹ ಮತವನ್ನು ಗಳಿಸುವಂಥ ಅಗ್ಗದ ಪ್ರಚಾರಕ್ಕೆ ಎಲ್ಲಿ ಉಪಯೋಗಿಸಿಕೊಳ್ಳುತ್ತಾರೋ ಎನ್ನುವ ಶಂಕೆ ಇದೆ. ಪುಕ್ಕಟೆ ಪುಸ್ತಕ ಕೊಟ್ಟರಿ, ಸ್ವಾಗತ ಬಡವರಿಗೆ ಕೊಡಬಹುದಾಗಿತ್ತಲ್ಲ. ಎಲ್ಲರನ್ನೂ ಸರಿಸಮಾನವಾಗಿ ಕಾಣಬೇಕು ಎಂದು ಹೇಳುತ್ತೀರಿ. ಯಾರಿಗೆ ಶಕ್ತಿ ಇದೆ, ಅವರು ೧೦ ರೂಪಾಯಿ ಖರ್ಚುಮಾಡಿ ಪುಸ್ತಕಗಳನ್ನು ಕೊಡುವುದಕ್ಕೆ ಶಕ್ತಿ ಇಲ್ಲವೇ ? ಈ ರೀತಿ ಹೇಳಿದರೆ ಜನಗಳು ತಪ್ಪು ತಿಳಿದುಕೊಳ್ಳಬಹುದು ಎಂದು ನನ್ನ ಭಾವನೆ. ತಂದೆತಾಯಿಗಳು ತಮ್ಮ ಮಕ್ಕಳನ್ನು ಜವಾಬ್ದಾರಿಯಿಂದ ನೋಡಿಕೊಳ್ಳಬೇಕಾದರೆ ಮಾಡಬೇಕಾಗುತ್ತದೆ. ಕೂಲಿ ಮಾಡುವಂಥ ವ್ಯಕ್ತಿ ಇರಬಹುದು, ತನ್ನ ಮಗನನ್ನು ಓದಿಸಬೇಕು ಎನ್ನುವ ಇಚ್ಛೆ ಇದ್ದರೆ ಅವನು ಸಂಪಾದನೆ ಮಾಡಿದ ದುಡ್ಡಿನಲ್ಲಿ ಸ್ಲೇಟು ಪುಸ್ತಕ ತಂದುಕೊಡುತ್ತಾನೆ. ಆ ಮಗನೂ ಕೂಡ ನಮ್ಮ ತಂದೆ ಸಂಪಾದನೆ ಮಾಡಿದ್ದರಲ್ಲಿ ಕೊಡಿಸಿದನು ಎಂದು ತಿಳಿದುಕೊಳ್ಳುತ್ತಾನೆ. ಆದರೆ ಎಲ್ಲಿಯವರೆಗೆ ಪುಸ್ತಕ, ಯೂನಿಫಾರಂಗಳನ್ನು ಕೊಡುತ್ತೀರಿ ? ಈಗ ಇದಕ್ಕೆ ೪ ಕೋಟಿ ಖರ್ಚಾಯಿತು ಎಂದು ಹೇಳುತ್ತೀರಿ, ಇದು ೬-೭ ಕೋಟಿಗೆ ಏರುತ್ತಿದೆ. ನೀವು ಒಂದನೇ ಕ್ಲಾಸಿನ ಪುಸ್ತಕ ಕೊಟ್ಟಾಗ ಆ ಮಗು ಅದನ್ನು ಹರಿದು ಹಾಕುತ್ತದೆ ಅಥವಾ ಕಳೆದುಕೊಳ್ಳುತ್ತದೆ ಅಲ್ಲವೇ ಇದರ ಬಗ್ಗೆ ತಮಗೆ ಅನುಭವ ಇಲ್ಲ, ತಾವು ಪುಣ್ಯ ಮಾಡಿದ್ದೀರಿ, ಬ್ರಹ್ಮಚಾರಿಗಳು. ಮಕ್ಕಳಿಗೆ ಪುಸ್ತಕಗಳನ್ನು ಕೊಡುತ್ತೀರಿ, ಅದನ್ನು ಕಳೆದುಕೊಂಡ ಮೇಲೆ ಏನು ಮಾಡುವುದು. ಆ ಪುಸ್ತಕಗಳನ್ನು ವಾಪಸ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ? ನಿಮ್ಮ ಅಂದಾಜಿನಲ್ಲಿ ವ್ಯತ್ಯಾಸವಾಯಿತು ಎಂದು ಹೇಳಿದಿರಿ. ಇಷ್ಟೊಂದು ಬೇಡಿಕೆ ಬರಬಹುದು ಎನ್ನುವ ಅಂದಾಜು ಇರಲಿಲ್ಲವೇ. ಬೇಡಿಕೆ ಏಕೆ ಜಾಸ್ತಿಯಾಯಿತು. ಹಿಂದೆ ಪುಸ್ತಕಗಳನ್ನು ಕೊಂಡುಕೊಳ್ಳುವ ಪರಿಸ್ಥಿತಿ ಇದ್ದಾಗ ಪುಸ್ತಕಗಳಿಗೆ ರಟ್ಟು ಹಾಕಿ ಬೈಂಡಿಂಗ್ ಮಾಡಿಸಿ, ಏನೂ ಬರೆಯದೆ ಹಾಗೇ ಇಟ್ಟುಕೊಂಡು ನಂತರ ಮಾರಿದರೆ ಎರಡು ರೂಪಾಯಿ ಬರುತ್ತದೆ ಎಂದು ಭದ್ರವಾಗಿ ಇಟ್ಟುಕೊಳ್ಳುವುದಕ್ಕೆ ಯೋಚನೆ ಮಾಡುತ್ತಿದ್ದರು. ಈಗ ಎಲ್ಲರೂ ಬೇಡಿಕೆ ಇಟ್ಟರು, ಮೊದಲನೇ ಕ್ಲಾಸಿನಲ್ಲಿ ಕೊಡುವಂಥ ಪುಸ್ತಕಗಳನ್ನು ವರ್ಷದ ಕೊನೆಯಲ್ಲಿ ಮುಂದಿನ ವಿದ್ಯಾರ್ಥಿಗಳಿಗೆ ಕೊಡುವುದಕ್ಕೆ ವಾಪಸ್ ಕೊಡಬೇಕು ಎಂದು ಯೋಚನೆ ಮಾಡಿದ್ದೀರಾ ? ಈ ದೃಷ್ಟಿಯನ್ನಿಟ್ಟುಕೊಂಡು ಪುಸ್ತಕಗಳನ್ನು ಪ್ರಿಂಟ್ ಮಾಡಿದ್ದೀರಾ ? ಏಕೆಂದರೆ ಆ ಮಕ್ಕಳು ಜವಾಬ್ದಾರಿಯಿಂದ ನೋಡಿಕೊಳ್ಳುವುದಿಲ್ಲ. ಅವನು ಓದಿದರೆ ಮುಗಿಯಿತು ಆ ಪುಸ್ತಕ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮೆಟೀರಿಯಲ್ ಸ್ಟ್ಯಾಂಡರ್ಡ್ ಸಹ ಕಡಿಮೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅದರ ಬಗ್ಗೆ ಯೋಚನೆ ಮಾಡಿಲ್ಲ. ತೀರ್ಕಟ್ಟ್ಯೇಕ್‌ನವರು ಯೋಚನೆ ಮಾಡಿದ್ದಾರೋ ಇಲ್ಲವೋ ಇವರು ಯೋಚನೆ ಮಾಡುವುದಕ್ಕೆ ಹೋರಟಿಲ್ಲ. ಹೀಗೆ ಕೊಟ್ಟಂಥ ಪರಿಣಾಮವಾಗಿ ಗೊಂದಲ ಏನಾದರೂ ಶುರುವಾಗಿದೆಯೇ ? ಈಗಲಾದರೂ ಯೋಚನೆ ಮಾಡಿ. ದಯಮಾಡಿ ತಾವು ಯಾವುದೇ ಒಂದು ಕೆಲಸವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮುಂಚೆ ಅದನ್ನು ನೋಡಿ, ಒಂದೆರಡು ಜಿಲ್ಲೆಗಳಲ್ಲಿ ಅಧ್ಯಯನ ಮಾಡಿ, ಅದರ ಸಾಧಕಬಾಧಕಗಳನ್ನು ಯೋಚನೆ ಮಾಡಿ ನಂತರ ಉಳಿದ ಕಡೆಗಳಲ್ಲಿ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆಯ ದಿವಸ ಭೂಪತಿಯವರು ಮಾತನಾಡತಕ್ಕ ಕಾಲದಲ್ಲಿ ಪಿ.ಯು.ಸಿ. ಮತ್ತು ಡಿಗ್ರಿ ಕಾಲೇಜುಗಳ ರಿಸಲ್ಟ್‌ನಿಂದ ವಿದ್ಯಾರ್ಥಿಗಳು ಯಾವ ರೀತಿ ಪ್ರಾಣ ಕಳೆದುಕೊಳ್ಳುತ್ತಾರೆ ಎನ್ನುವ ವಿಷಯದ ಬಗ್ಗೆ ತಿಳಿಸಿದಾಗ ಅದರ ಬಗ್ಗೆ ನಿರ್ದಿಷ್ಟ ಮಾಹಿತಿ ಕೊಡಿ ಎಂದು ಕೇಳಿದಿರಿ. ವಿದ್ಯಾರ್ಥಿ ವಿದ್ಯಾರ್ಥಿನಿಯರ ಭವಿಷ್ಯ ಚಿಂತನೆ ಮಾಡತಕ್ಕ ಕಾಲದಲ್ಲಿ ಈ ಪರೀಕ್ಷಾ ಪದ್ಧತಿಯಿಂದ, ನಿಮ್ಮ ಕಂಪ್ಯೂಟರ್‌ನಿಂದ ಬರತಕ್ಕ ಅವ್ಯವಸ್ಥೆಯಿಂದ ಏನು ಒಂದು ವಿಚಿತ್ರವಾದ ಪರಿಸ್ಥಿತಿ ಬಂದಿದೆ ಇದರ ಬಗ್ಗೆ ಯೋಚನೆ ಮಾಡಿದ್ದೀರಾ ? ತಮಗೆ ಸ್ಯಾಂಪಲ್‌ಗೆ ನಾಲ್ಕೈದು ಉದಾಹರಣೆ ಕೊಡುತ್ತೇನೆ. ಸಾಧ್ಯವಾದರೆ ಅದಕ್ಕೆ ತಾವು ಉತ್ತರ ಕೊಡುವಾಗ ಉತ್ತರ ಹೇಳಬೇಕು. ರಾಮಕೃಷ್ಣಯ್ಯ ಎಂಬ ಹುಡುಗ ಶೇಷಾದ್ರಿಪುರಂ ಕಾಲೇಜಿನಲ್ಲಿ ಓದುತ್ತಿದ್ದಾನೆ, ಎಲೆಕ್ಟೀವ್ ಸಬ್ಜೆಕ್ಟ್‌ನಲ್ಲಿ ೬೨-೬೩ ಬಂದಿರುವುದು ಆದರೆ ೪೨-೪೩ ಹಾಕಿ ಪಾಸ್ ಎಂದು ಕೊಟ್ಟಿದ್ದಾರೆ. ಪಾಸ್ ಆದ ಮಾರ್ಕ್ಸ್‌ಕಾರ್ಡ್ ಬಂದಿಲ್ಲ. ಅದೇ ರೀತಿ ಭಾರತೀಯ ಸಂಸ್ಕೃತಿ ವಿದ್ಯಾಪೀಠದಲ್ಲಿ ಒಂದೆರಡು ವಿದ್ಯಾರ್ಥಿಗಳಿಗೆ ಇದೇ ರೀತಿ ಆಗಿದೆ. ಫೋನ್ ಮಾಡಿ ತಿಳಿದುಕೊಂಡರೆ ತಮಗೆ ಗೊತ್ತಾಗಬಹುದು. ಭಾರತೀಯ ಸಂಸ್ಕೃತಿ ವಿದ್ಯಾಪೀಠದಲ್ಲಿ ಒಬ್ಬ ವಿದ್ಯಾರ್ಥಿ ಹೋದವರ್ಷ ಫೈನಲ್ ಬಿ.ಕಾಂ. ನಲ್ಲಿ ಪ್ರಾಕ್ಟಿಕಲ್ ಎಕ್ಸಾಮಿನೇಷನ್‌ನಲ್ಲಿ ಪಾಸ್ ಆಗಿದ್ದಾನೆ. ಈ ವರ್ಷ ಅವನು ಪರೀಕ್ಷೆ ಕಟ್ಟಲಿಕ್ಕೆ ಬರುವುದಿಲ್ಲ, ಆದರೂ ಈ ವರ್ಷ ಅವನು ಪರೀಕ್ಷೆಗೆ ಕುಳಿತಿದ್ದ ಎಂದು ನಂಬರ್ ಕೊಟ್ಟು ಪಾಸ್ ಮಾಡಿಸಿದ್ದಾರೆ. ನಿಮ್ಮ ಕಂಪ್ಯೂಟರ್‌ನಲ್ಲಿ ಬಂದಿರುವ ರಿಸಲ್ಟ್ ಪ್ರಕಾರ ಆತನು ಎರಡು ಸಾರಿ

ಪಾಸ್ ಮಾಡಿದ್ದಾನೆ. ಇನ್ನು ಶೇಷಾದ್ರಿಪುರಂ ಕಾಲೇಜಿನಲ್ಲಿ ಬಿ.ಎಸ್.ಸಿ.ಯ ನಾಲ್ಕು ಜನ ವಿದ್ಯಾರ್ಥಿಗಳ ರಿಸಲ್ಟ್ ಇನ್ನೂ ಹೊರಗಡೆ ಬಂದಿಲ್ಲ. ಆ ನಾಲ್ಕು ಜನರ ಗತಿ ಏನು ? ಈ ಬಗ್ಗೆ ತಾವು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ವಿಜಯ ಕಾಲೇಜು ಬೆಂಗಳೂರಿನಲ್ಲಿ ಸೆಕೆಂಡ್ ಇಯರ್ ಬಿ.ಕಾಂ. ಓದತಕ್ಕ ನಲವತ್ತು ವಿದ್ಯಾರ್ಥಿಗಳಿಗೆ ಇವೊತ್ತಿಗೂ ಮಾರ್ಕ್ಸ್ ಕಾರ್ಡ್ ಬಂದಿಲ್ಲ. ೨೦ ಜನ ವಿದ್ಯಾರ್ಥಿಗಳ ಬಿಸಿನೆಸ್ ಇಂಗ್ಲೀಷ್ ಪೇಪರ್ ಅನ್‌ಟ್ರೇಸಬಲ್ ಎಂದು ಹೇಳುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ಡಿಗ್ರಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸದ ಮಟ್ಟ ಎಲ್ಲಿಗೆ ಹೋಗಿದೆ ಎನ್ನುವುದು ಗೊತ್ತಾಗುತ್ತದೆ. ನಾನು ಅಲ್ಲೊಂದು, ಇಲ್ಲೊಂದು ಚುಟುಕು ಉದಾಹರಣೆ ಕೊಡುತ್ತಿದ್ದೇನೆ. ಇನ್ನು ಕರ್ನಾಟಕ ಯೂನಿವರ್ಸಿಟಿಯ ರಿಸಲ್ಟ್ ಏನಾಯಿತು ? ಕಂಪ್ಯೂಟರ್‌ನಿಂದ ಏನು ತೊಂದರೆಯಾಯಿತು ? ಇವೆಲ್ಲದರ ಬಗ್ಗೆ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿದೆ. ಕೈಕೊಟ್ಟ ಕಂಪ್ಯೂಟರ್ ನಿಂದ ಸಾವಿರಾರು ವಿದ್ಯಾರ್ಥಿಗಳಿಗೆ ತ್ರಿಶಂಕು ಸ್ವರ್ಗ ಆಗಿದೆ ಅದರಲ್ಲಿ ಭಾರಿ ಪ್ರಮಾಣದಲ್ಲಿ ಲೋಪದೋಷ ಆಗಿದೆ. ಕಂಪ್ಯೂಟರ್ ವ್ಯತ್ಯಾಸ ಮಾತ್ರವಲ್ಲ ಅಲ್ಲಿ ಏನು ನಡೆದಿದೆ ಎನ್ನುವ ಬಗ್ಗೆ ಹೇಳಬೇಕೆಂದರೆ, ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ ಅವರು ಆನ್ಸರ್ ಪೇಪರ್‌ಗೆ ಮಾರ್ಕ್ಸ್ ಕೊಡುವ ಸಂದರ್ಭದಲ್ಲಿ ಒಂದು ದಿವಸಕ್ಕೆ ೪೦–೫೦ ಪೇಪರ್ ವ್ಯಾಲ್ಯೂ ಮಾಡುವುದರ ಬದಲು ನೂರು ಪೇಪರ್ ವ್ಯಾಲ್ಯೂ ಮಾಡಬೇಕು ಎಂದು ಹೇಳಿದ್ದಾರೆ ಮಾನ್ಯ ರಘುಪತಿಯವರು ಬೇಗ ರಿಸಲ್ಟ್ ಬರಬೇಕೆಂದು ಹೇಳಿ ಈ ರೀತಿ ಮಾಡಿಸಿದ್ದಾರೆ. ಈ ರೀತಿ ಮಾಡುವುದು ಸರಿಯೇ ? ಈ ರೀತಿ ಮಾಡುವುದರಿಂದ ಕಷ್ಟಪಟ್ಟು ಓದತಕ್ಕ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ರ್‍ಯಾಂಡಮ್ ಆಗಿ ಪತ್ರಿಕೆಗಳನ್ನು ನೋಡತಕ್ಕದ್ದು ಏನಿದೆ ಅದನ್ನು ಜಾಸ್ತಿ ಮಾಡಬೇಕು ಒಂದು ದಿವಸಕ್ಕೆ ೩೦ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬೇಕೆಂದು ಇದ್ದರೆ ಅದನ್ನು ೨೦ಕ್ಕೆ ಇಳಿಸಿ. ಇದು ವಿದ್ಯಾರ್ಥಿಗಳ ಭವಿಷ್ಯ ನಿರ್ಧಾರ ಮಾಡತಕ್ಕ ಕೆಲಸ. ಈ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇನು ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೊ ಗೊತ್ತಿಲ್ಲ. ನನಗೆ ಬಂದಿರುವ ಸಂಗತಿ ಹೇಳಬೇಕೆಂದರೆ, ತಾವು ಪಿ.ಯು.ಸಿ. ರಿಸಲ್ಟ್ ತುಂಬಾ ಅರ್ಜೆಂಟಾಗಿ ಅನೌನ್ಸ್ ಮಾಡಬೇಕೆಂದು ಒತ್ತಡ ತಂದು ಮಾಡಿಸಿದಿರಿ ಎನ್ನುವ ಸಂಗತಿ ಇದೆ. ಇದರ ಪರಿಣಾಮದಿಂದ ಏನಾಗಿದೆ. ತಮಗೆ ಉದಾಹರಣೆ ಹೇಳಬೇಕೆಂದರೆ ಕೆ.ಇ.ಬಿ. ಕಿರಿಯ ಮಹಾ ವಿದ್ಯಾಲಯ, ಜೋಗ್‌ನ, ಎರಡನೇ ಪಿ.ಯು.ಸಿ ವಿದ್ಯಾರ್ಥಿ ನಂಬರ್ ೩೯೦೭೮೦ ಇದರ ಫಲಿತಾಂಶ ತಡವಾಗಿ ಪ್ರಕಟವಾಗಿದೆ. ಹಾಗೆಯೇ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಶಾಲೆ ಗದಗ್‌ನಲ್ಲಿ ಎಸ್.ಎಸ್.ಎಲ್.ಸಿ. ೧೯೮೪ರಲ್ಲಿ ನಂಬರ್ ೧೨೮೧೪೧ ಗಣಿತ ಬಿಟ್ಟು ಎಲ್ಲಾ ಪಾಸಾಗಿದೆ. ಮತ್ತೊಮ್ಮೆ ಆತನದು ತೊಂದರೆಯಾಗಿದೆ. ಹಾಗೆ ಮತ್ತೊಂದು ನಂಬರ್ ೬೪೭೬೧೩ ಉಳಿದ ಮೂರು ಸಬ್ಜೆಕ್ಟ್ ಪಾಸಾಗಿದೆ. ಅವನು ಪಾಸಾಗಿದ್ದು ಇನ್ನು ಬಂದಿಲ್ಲ, ಅವನು ಇವೊತ್ತಿಗೂ ಒದ್ದಾಡುತ್ತಿದ್ದಾನೆ, ಬೆಂಗಳೂರೆಲ್ಲಾ ಸುತ್ತಿದ್ದು ಆಯಿತು. ಶಾಸಕರ ಭವನ ಎಲ್ಲಾ ತಿರುಗಿದರೂ ಅವನಿಗೆ ಪರಿಹಾರ ಸಿಕ್ಕಿಲ್ಲ. ಇನ್ನು ಈ ವರ್ಷದ ಪ್ರಾರಂಭದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ಹಗರಣ ನಡೆಯಿತು. ಗಣಿತದ ಪೇಪರ್ ನಾನು ಓದಿದವನು ಅಲ್ಲ. ಆ ಪತ್ರಿಕೆ ಹೇಗೋ ಪರೀಕ್ಷೆಗೆ ಮುಂಚೆ ಬಿಡುಗಡೆ ಆಯಿತು. ಅದು ಯಾರು ಯಾರಿಗೋ ಸಿಕ್ಕಿತು ಎಂದು ಹೇಳಿದಾಗ ತಾವು ಮೊದಲ ಬಾರಿಗೆ ನಂಬಲಿಲ್ಲ. ಅದನ್ನು ಇವೊತ್ತು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಪ್ರಶ್ನೆಪತ್ರಿಕೆಗಳು ಪರೀಕ್ಷೆಗೆ ಮುಂಚಿತವಾಗಿ ಬಹಿರಂಗವಾಗಿ ಸಿಕ್ಕುತ್ತಿದ್ದುದನ್ನು ಒಪ್ಪಿಕೊಂಡು ಮತ್ತೊಮ್ಮೆ ಪ್ರಶ್ನೆ ಪತ್ರಿಕೆ ತಯಾರು ಮಾಡಿಸಿ ಪರೀಕ್ಷೆ ಮಾಡಿಸಿದ್ದೀರಿ ನಾನು ಒಬ್ಬ ಶಾಸಕನಾಗಿ ಹೇಳಿದಾಗ ಅದು ನಿಜವೇ ಇಲ್ಲವೇ ಎಂಬ ಬಗ್ಗೆ ಅಧಿಕಾರಿಗಳಿಂದ ತಪಾಸಣೆ ಮೊದಲು ಆಗಲಿಲ್ಲ. ಆ ಪ್ರಶ್ನೆ ಪತ್ರಿಕೆಯಲ್ಲಿರತಕ್ಕ ಒಟ್ಟು ೨೬–೨೭ ಪ್ರಶ್ನೆಗಳಲ್ಲಿ ಸುಮಾರು ೨೨–೨೩ ಪ್ರಶ್ನೆಗಳು ಬಹಿರಂಗವಾದ ಪ್ರಶ್ನೆ ಪತ್ರಿಕೆಯಲ್ಲಿ ಇದ್ದುದು ಕಂಡುಬಂತು. ನಾನು ಒಬ್ಬ ಶಾಸಕನಾಗಿ, ಜವಾಬ್ದಾರಿ ಸ್ಥಾನದಿಂದ ಹೇಳಿದಾಗ ತಾವು ಅದರ ಬಗ್ಗೆ ನಂಬಲಿಕ್ಕೆ ಹೋಗಲಿಲ್ಲ. ನಂತರ ಅದು ತಮಗೆ ಅರ್ಥವಾಯಿತು. ಈ ರೀತಿ ಆದರೆ ಹಳ್ಳಿಯಲ್ಲಿರುವ ರೈತನ ಮಗ ಯಾವ ರೀತಿ ಪಾಸ್ ಮಾಡಬೇಕು ? ಪತ್ರಿಕೆಗಳು ಬೆಂಗಳೂರಿನಲ್ಲಿ ಬಹಿರಂಗವಾಗಿ ಸಿಕ್ಕಿದ ಸಂದರ್ಭದಲ್ಲಿ ಈ ಬಗ್ಗೆ ಬಿಗಿಯಾದ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೆ, ಆ ಮಾತನ್ನು ಇವೊತ್ತು ಒಪ್ಪುತ್ತೀರಿ. ನಿನ್ನೆ ಮೊನ್ನೆ ನಡೆದಂಥ ಎಸ್.ಎಸ್.ಎಲ್.ಸಿ, ಮತ್ತು ಪಿ.ಯು.ಸಿ ಪರೀಕ್ಷೆಗಳ ಪತ್ರಿಕೆಗಳು ಬಹಿರಂಗವಾಗಿ ಪರೀಕ್ಷೆಯ ಒಂದೆರಡು ದಿವಸ ಮುಂಚಿತವಾಗಿಯೇ ವ್ಯಾಪಾರ ಆಯಿತು. ಹಳ್ಳಿಯ ಶಾಲೆಯಲ್ಲಿ ೬ ತಿಂಗಳು ಪಾಠ ನಡೆದಿರುವುದಿಲ್ಲ, ಅಂತಹ ವಿದ್ಯಾರ್ಥಿಗಳು ನಮ್ಮ ಅಪ್ಪನಿಗೆ ಒಳ್ಳೆಯ ಹೆಸರು ತರಬೇಕೆಂದು ಕಷ್ಟಪಟ್ಟು ಓದಿದಂಥ ವಿದ್ಯಾರ್ಥಿಗಳ ಗತಿ ಏನಾಗಬೇಕು. ಇಲ್ಲಿ ಬಹಿರಂಗವಾಗಿ ಮಾರ್ಕೆಟ್‌ನಲ್ಲಿ ವ್ಯಾಪಾರ ನಡೆಯಿತಲ್ಲ ಏನು ಮಾಡಿದಿರಿ. ಈ ಸದನದಲ್ಲಿ ನಾವು ಚರ್ಚೆ ಮಾಡಿದಾಗ ಪೋಲೀಸ್ ಅಧಿಕಾರಿಗಳನ್ನು ಬಿಟ್ಟು ಇದು ಸುಳ್ಳೋ, ನಿಜವೋ ಎಂದು ಯೋಚನೆ ಮಾಡಿದರೇನು ?

ಈ ಸದನದಲ್ಲಿ ಚರ್ಚೆ ಆದ ಮೇಲೆ ಏನು ನಡೆಯಿತು ಬೆಂಗಳೂರು ನಗರದಲ್ಲಿ ಅದೇ ಸಂದರ್ಭ ಉಪಯೋಗಿಸಿಕೊಂಡು ಸುಳ್ಳು ಪೇಪರ್‌ಗಳನ್ನೆಲ್ಲಾ ಮಾರಾಟ ಮಾಡಲಿಕ್ಕೆ ಹೊರಟರು. ವಿದ್ಯಾರ್ಥಿಗಳಿಗೆ ಒಳ್ಳೆಯದೋ ಕೆಟ್ಟದ್ದೋ ಗೊತ್ತಾಗುವುದಿಲ್ಲ, ನಮ್ಮ ವಿದ್ಯಾರ್ಥಿಗಳು ಬಹಿರಂಗ ಪ್ರಶ್ನೆಪತ್ರಿಕೆಗಳನ್ನು ನೋಡಬಾರದು ಅವರು ಕಷ್ಟಪಟ್ಟು ಓದಿ ಉತ್ತರ ಬರೆಯಬೇಕು ಎಂದು ಹೇಳುವುದನ್ನು ಒಪ್ಪುತ್ತೇನೆ, ಆದರೆ ಮಕ್ಕಳಿಗೆ ಪ್ರಶ್ನೆಪತ್ರಿಕೆಗಳು ಮುಂಚೆ ಸಿಕ್ಕುತ್ತದೆ ಅಂದರೆ ಅದನ್ನು ಏನಾದರೂ ಮಾಡಿ ತೆಗೆದುಕೊಂಡು ಪಾಸ್ ಮಾಡಬೇಕೆಂಬ ಚಟ ಇರುತ್ತದೆ. ಇದರಿಂದ ಮೊನ್ನೆ ನಡೆದಂಥ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆ ಫಲಿತಾಂಶದಲ್ಲಿ ಏನಾಯಿತು ಅಂದರೆ ಯಾರು ಕಷ್ಟಪಟ್ಟು ಓದಿರಲಿಲ್ಲವೋ ಅವರಿಗೆ ಬಹಳಷ್ಟು ಮಾರ್ಕ್ಸ್ ಬಂದಿದೆ. ಯಾರು ಹಗಲು ರಾತ್ರಿ ಕಷ್ಟಪಟ್ಟು ಓದಿದರೋ ಅವರಿಗೆ ಹೆಚ್ಚು ಮಾರ್ಕ್ಸ್ ಬರದೇ ಬಹಳ ತೊಂದರೆಯಾಗಿದೆ. ಈ ವಿಷಯ ತಮಗೂ ತಿಳಿದುಬಂದಿದೆ. ಶಿಕಾರಿಪುರ ತಾಲ್ಲೂಕಿಗೆ ಮುಖ್ಯಮಂತ್ರಿಗಳ ಕೈಕಾಲು ಹಿಡಿದು ಒಂದು ಪಾಲಿಟೆಕ್ನಿಕ್ ಕಾಲೇಜು ಸ್ಯಾಂಕ್ಷನ್ ಮಾಡಿಸಿದ್ದು ಆಯಿತು. ಈಗ ಅಲ್ಲಿರತಕ್ಕ ಜನಗಳಿಗೆ ಅನುಕೂಲವಾಗುವಂಥ ಕೋರ್ಸ್ ಕೊಡಿ ಎಂದು ಕೇಳಿದರೆ, ಬದಲಾವಣೆ ಮಾಡಲಿಕ್ಕೆ ಆಗುವುದಿಲ್ಲ. ಇದು ಪಾಲಿಸಿ ಡಿಸಿಷನ್ ಎಂದು ಹೇಳುತ್ತಿದ್ದೀರಿ, ಇದರ ಬಗ್ಗೆ ಮುಖ್ಯಮಂತ್ರಿಗಳನ್ನು ಕಂಡಿದ್ದು ಆಯಿತು. ತಮ್ಮನ್ನು ಸಹ ಕಂಡಿದ್ದು ಆಯಿತು. ನನ್ನ ಕ್ಷೇತ್ರದಲ್ಲಿರತಕ್ಕ ಜನರು ಅಲ್ಲಿರತಕ್ಕ ಹೊಸ ಕೋರ್ಸ್ ಬದಲಾವಣೆ ಮಾಡಿಕೊಡಬೇಕೆಂದು ನನ್ನನ್ನು ಕೇಳುತ್ತಿದ್ದಾರೆ. ತಾವು ನನ್ನ ಮೇಲೆ ಯಾವ ಸಿಟ್ಟು ತೀರಿಸಿಕೊಳ್ಳಲಿಕ್ಕೆ ಹೊರಟ್ಟಿದ್ದೀರೋ ಗೊತ್ತಿಲ್ಲ ನಿಮ್ಮ ಬಗ್ಗೆ ನನಗೆ ವಿಶ್ವಾಸ ಇದೆ, ಅವರು ತಾವು ಹೇಳಿದಂತೆ ನಡೆಯುವ ಜನ, ಏನೇ ಬಂದರೂ ಎದುರಿಸುತ್ತೇನೆ ಎನ್ನುವ ಜನ, ಆದರೆ ಇತ್ತೀಚಿಗೆ ಈ ಒಂದು ಗೊಂದಲದಲ್ಲಿ ಸಿಕ್ಕಿಕೊಂಡು ಏತಕ್ಕೆ ಒದ್ದಾಡುತ್ತಿದ್ದಿರೋ ಅರ್ಥವಾಗುತ್ತಿಲ್ಲ. ಎಲ್ಲರಿಗೂ ನ್ಯಾಯವಾದ ತೀರ್ಮಾನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಗೋವಿಂದೇಗೌಡರು ಇಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದಾರೆ. ಅವರು ಬಹಳ ಒಳ್ಳೆಯ ಜನ. ಶಿಕ್ಷಣ ಇಲಾಖೆಯಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟಿದ್ದಾರೆ. ಅವರ ಖಾತೆಗೆ ಹಣಕಾಸಿನ ವ್ಯವಸ್ಥೆ ಸರಿಯಾಗಿ ಇದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಮತಕ್ಷೇತ್ರಕ್ಕೆ ಒಂದು ಶಿಶುವಿಹಾರ ಬೇಕೆಂದು ಮೂರು ವರ್ಷಗಳಿಂದ ಕೇಳುತ್ತಿದ್ದೇನೆ ಯಾರೂ ಕೊಡಲಿಲ್ಲ. ಶಿಕ್ಷಣ ಇಲಾಖೆಯಲ್ಲಿ ಸಮಗ್ರ ಬದಲಾವಣೆಯನ್ನು ತರಬೇಕೆಂದು ಹೇಳುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಚಿಕ್ಕ ಮಕ್ಕಳು ಶಿಶುವಿಹಾರಕ್ಕೆ ಹೋಗಿ ಅ–ಆ–ಇ–ಈ ಕಲಿತುಕೊಳ್ಳಲಿ, ಆ ಮಕ್ಕಳು ಒಂದನೆಯ ತರಗತಿಗೆ ಹೋಗುವ ಹಾಗೆ ಆಗಲಿಯೆಂದು ನಮಗೆ ಶಿಶುವಿಹಾರ ಕೊಡಿಯೆಂದು ಕೇಳಿದರೆ, ಮಾನ್ಯ ಗೋವಿಂದೇಗೌಡರು ನಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಇದು ಯಾರ ದೋಷ? ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಮಕ್ಕಳಿಗೆ ಅನುಕೂಲ ಮಾಡುವ ಪ್ರಯತ್ನವನ್ನು ಮೊದಲು ಮಾಡಬೇಕು. ಶಿಕಾರಿಪುರದಲ್ಲಿರತಕ್ಕ ಜೂನಿಯರ್ ಕಾಲೇಜು ಕಟ್ಟಡ ಹೇಗಿದೆ ಎಂಬುದಕ್ಕೆ ಮಾನ್ಯ ಶಿಕ್ಷಣ ಸಚಿವರನ್ನೇ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಕಟ್ಟಡ ಬಿದ್ದುಹೋಗಿದೆ, ಪುರಸಭೆಯವರು ಕೊಟ್ಟಂತಹ ಕಟ್ಟಡದಲ್ಲಿ ಜೂನಿಯರ್ ಕಾಲೇಜು ನಡೆಯುತ್ತಿದೆ. ಅದನ್ನು ಪರಿವರ್ತನೆ ಮಾಡತಕ್ಕ ಕೆಲಸವನ್ನು ಮಾಡಿಲ್ಲ, ಯಾವುದೇ ಒಂದು ರೂಮನ್ನು ಸಹ ಕಟ್ಟುವಂತಹ ಪ್ರಯತ್ನವನ್ನು ಮಾಡಿಲ್ಲ. ನಾವು ಒಬ್ಬೊಬ್ಬರ ಹತ್ತಿರ ನಾನೂರು–ಐನೂರ ಈ ತರಹ ಭಿಕ್ಷೆಯನ್ನು ಬೇಡಿ ಸುಮಾರು ಒಂದೂವರೆ ಲಕ್ಷ ರೂಪಾಯಿ ಹಣವನ್ನು ಕೂಡಿಸಿದ್ದೇವೆ. ಪ್ರಾಮಾಣಿಕವಾದ ಕೆಲಸವನ್ನುನಾವು ಮಾಡುತ್ತಿದ್ದೇವೆ. ಹಿಂದೆ ಮಾನ್ಯ ರಾಚಯ್ಯನವರು ಶಿಕ್ಷಣ ಸಚಿವರಾಗಿದ್ದಾಗ ನಮಗೆ ಕಟ್ಟಡ ಕೊಡಬೇಕೆಂದು ಕೇಳಿದ್ದಕ್ಕೆ, ಕೊಡುವುದಕ್ಕೆ ಆಗುವುದಿಲ್ಲವೆಂದು ಇದೇ ಸದನದಲ್ಲಿ ಉತ್ತರ ಕೊಟ್ಟರು. ಕಟ್ಟಡ ಕೊಡಬೇಕೆಂದು ನಿಮ್ಮ ಅಧಿಕಾರಿಗಳನ್ನು ಭೇಟಿ ಮಾಡಿದರೆ, ನಿಮ್ಮ ಅಧಿಕಾರಿಗಳನ್ನು ಭೇಟಿ ಮಾಡುವುದಕ್ಕೆ ಭಯವಾಗುತ್ತದೆ. ನಿಮ್ಮ ಅಧಿಕಾರಿಗಳನ್ನು ನಮ್ಮ ಮಗಳಿಗೆ ಅಳಿಯನನ್ನು ಹುಡುಕಿಕೊಡಿಯೆಂದು ಕೇಳುತ್ತೇವೆ ಏನೂ? ನಿಮ್ಮ ಅಧಿಕಾರಿಗಳು ನಡೆದುಕೊಳ್ಳುವ ರೀತಿನೀತಿಯನ್ನು ಹೇಳುವುದಕ್ಕೂ ಕೇಳುವುದಕ್ಕೂ ಸಾಧ್ಯವಿಲ್ಲ. ನೀವು ಏತಕ್ಕೆ ಸರ್ಕಾರವನ್ನು ನಡೆಸುತ್ತಿದ್ದೀರಿ? ನಿಮ್ಮ ಹತ್ತಿರ ಹಣ ಇಲ್ಲದಿದ್ದರೆ ಎಲ್ಲಿಂದಲಾದರೂ ತರಿಸಿಕೊಳ್ಳಿ. ನಮಗೆ ಶಾಲೆ ಆಗಬೇಕು. ವಿದ್ಯಾಭ್ಯಾಸಕ್ಕೆ ತೊಂದರೆಯಾದರೆ ಹೇಗೆ? ಶಾಸಕರು ಪ್ರಶ್ನೆ ಕೇಳಬೇಕು, ಮಂತ್ರಿಗಳು ಉತ್ತರ ಹೇಳಬೇಕು, ನೀವು ಹೇಳಿದ ಮೇಲೆ ಅಧಿಕಾರಿಗಳು ಆ ಕೆಲಸವನ್ನು ಮಾಡಬೇಕು. ನಾವು ಅದಕ್ಕೆ ಇಲ್ಲಿಗೆ ಶಾಸಕರಾಗಿ ಬಂದಿರುವುದು? ಅಧಿಕಾರವನ್ನು ಅಧಿಕಾರಿಗಳಿಗೆ ಕೊಡಿ, ಅವರು ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅಧಿಕಾರಿಗಳು ಫ್ರೀ ಆಗಿ ಕೆಲಸಮಾಡುವುದಕ್ಕೆ ಬಿಡಿ. ನೀವು ಹೇಳುತ್ತೀರಿ ಜಿಲ್ಲಾಪರಿಷತ್ತು ಬರುತ್ತದೆ ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು. ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟುಬಿಟ್ಟಿದ್ದೇವೆಂದು ಹೇಳುತ್ತೀರಿ ಎಲ್ಲಿ ಯಾವ ಅಧಿಕಾರ ಕೊಟ್ಟಿ

ದ್ದೀರಿ ? ನಿಮ್ಮ ಅಧಿಕಾರಿಗಳು ತಪ್ಪು ಮಾಡಿದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ನಾಲ್ಕು ವರ್ಷಗಳಾದ ಮೇಲೆ ಶಿಕ್ಷಕರನ್ನು ವರ್ಗಮಾಡಬೇಕೆಂದು ಕಾನೂನು ಇದೆ, ನಿಮ್ಮ ಅಸಿಸ್ಟೆಂಟ್ ಎಜುಕೇಶನಲ್ ಅಧಿಕಾರಿಗಳು ಅವರನ್ನು ವರ್ಗ ಮಾಡಬೇಕಾಗುತ್ತದೆ. ಒಬ್ಬ ಶಿಕ್ಷಕ ವರ್ಗ ಮಾಡಿಸಿಕೊಳ್ಳಬೇಕಾದರೆ ಎಲ್ಲೆಲ್ಲಿ ಅಲೆಯಬೇಕು ? ಅವನು ಅದರಲ್ಲೇ ಕಾಲ ಕಳೆಯುವುದಾದರೆ ಅವನು ಮಕ್ಕಳಿಗೆ ಪಾಠ ಪ್ರವಚನಗಳನ್ನು ಯಾವಾಗ ಹೇಳಿಕೊಡುತ್ತಾನೆ ? ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ, ಬದಲಾವಣೆಯನ್ನು ತರುತ್ತೇವೆಂದು ಹೇಳತಕ್ಕ ನೀವು ನಿಮ್ಮಲ್ಲಿರತಕ್ಕ ವ್ಯಕ್ತಿಗಳು ಇದರ ಕಡೆಗೆ ಯೋಚನೆ ಮಾಡಬೇಕು. ಇವತ್ತು ಅಸಿಸ್ಟೆಂಟ್ ಎಜುಕೇಷನಲ್ ಆಫೀಸರ್ ಕೆಲಸ ಮಾಡುವುದಕ್ಕೆ ಅವರಿಗೆ ಒಂದು ಜೀಪು ಕೊಡಿ. ಕೇಳಿದರೆ ನಮಗೆ ಹಣಕಾಸಿನ ತೊಂದರೆ ಇದೆಯೆಂದು ಹೇಳುತ್ತೀರಿ, ಜೊತೆಗೆ ಎ.ಇ.ಓ. ನೀವು ಹೇಳಿದ ಕೆಲಸಗಳನ್ನೆಲ್ಲಾ ಮಾಡಬೇಕಾಗಿದೆ, ಅವರು ಇವತ್ತು ಉಚಿತ ಪಠ್ಯಪುಸ್ತಕಗಳನ್ನು ಹಂಚುವ ಕೆಲಸದಲ್ಲಿ ಉಪಾಧ್ಯಾಯರುಗಳಿಗೆ ನಿಜವಾಗಿಯೂ ತೊಂದರೆಯಾಗಿದೆ. ಚಿಕ್ಕಮಾಗಡಿ ಎನ್ನತಕ್ಕ ಒಂದು ಊರಿನಲ್ಲಿ ಉಚಿತ ಪಠ್ಯಪುಸ್ತಕಗಳನ್ನು ವಿತರಣೆ ಮಾಡುವಾಗ ಅಲ್ಲಿಯ ಶಾಲಾ ಉಪಾಧ್ಯಾಯರು ಒಬ್ಬೊಬ್ಬರಿಂದ ನಾಲ್ಕಾಣೆ ಎಂಟಾಣೆ ಈ ರೀತಿ ತೆಗೆದುಕೊಳ್ಳುತ್ತಾರೆಂದು ನನಗೆ ಗೊತ್ತಾಯಿತು. ನನಗೆ ಸಿಟ್ಟುಬಂದು ಬಾಯಿಗೆ ಬಂದಹಾಗೆ ಬೈಯ್ದುಬಿಟ್ಟೆ. ಆತ ನನ್ನ ಹತ್ತಿರ ಬಂದು ಅತ್ತುಕೊಂಡು ನಾನು ಪ್ರಾಮಾಣಿಕವಾಗಿ ಕೆಲಸಮಾಡುತ್ತಿದ್ದೇನೆ, ಮಕ್ಕಳಿಗೆ ರಾತ್ರಿ ಹಗಲು ಪಾಠ ಹೇಳಿಕೊಡುತ್ತೇನೆ, ನನ್ನ ಸ್ವಂತ ಹಣದಲ್ಲಿ ಶಿಕಾರಿಪುರಕ್ಕೆ ಹೋಗಿ ಪುಸ್ತಕಗಳನ್ನು ತಂದು ಮಕ್ಕಳಿಗೆ ವಿತರಣೆ ಮಾಡುತ್ತಿದ್ದೇನೆಂದು ಹೇಳಿದ. ಅಲ್ಲಿನ ಗ್ರಾಮಸ್ಥರು ಕೂಡ ಈತ ತುಂಬಾ ಒಳ್ಳೆಯ ಉಪಾಧ್ಯಾಯ ಅವನು ನಮ್ಮನ್ನು ಹಣ ಕೊಡಿಯೆಂದು ಕೇಳಲಿಲ್ಲ, ನಾವೇ ಸಾಗಣಿಕೆ ವೆಚ್ಚಕ್ಕಾಗಿ ನಾಲ್ಕಾಣೆ, ಎಂಟಾಣೆ ಈ ರೀತಿ ಕೊಡುತ್ತಿದ್ದೇವೆಂದೂ. ಆತ ಮಕ್ಕಳಿಗೆ ಚೆನ್ನಾಗಿ ಪಾಠಪ್ರವಚನಗಳನ್ನು ಹೇಳಿಕೊಡುತ್ತಾನೆಂದು ಹೇಳಿದರು. ಆತ ನನ್ನ ಮುಂದೆ ನಿಂತು ಕಣ್ಣೀರು ಹಾಕಿದ ಆತ ಮಾಡುತ್ತಿದ್ದ ಕೆಲಸಕ್ಕಾಗಿ ನಾನು ಅವನನ್ನು ಕ್ಷಮಾಪಣೆ ಕೇಳಿದ್ದೇನೆ. ಎಲ್ಲರೂ ಕಳ್ಳರು ಆಗಿರುವುದಿಲ್ಲ, ಒಳ್ಳೆಯವರೂ ಇರುತ್ತಾರೆ. ಶಾಲಾ ಉಪಾಧ್ಯಾಯರು ಯಾವರೀತಿ ಪುಸ್ತಕಗಳನ್ನು ತಂದು ಹಂಚಬೇಕು ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಶಿಕ್ಷಕರನ್ನು ಹೊಸದಾಗಿ ಜಿಲ್ಲಾ ಮಟ್ಟದ ನೇಮಕಾ ಸಮಿತಿಯ ಮೂಲಕ ಮಾಡಿಕೊಂಡಿದ್ದೀರಿ. ಅವರಿಗೆ ಬಹಳ ವರ್ಷಗಳ ನಂತರ ಕೆಲಸ ಸಿಕ್ಕದೆ ಅವರು ಎಲ್ಲವನ್ನು ಮರೆತುಬಿಟ್ಟಿದ್ದಾರೆ. ಅವರಿಗೆ ಕೆಲಸವನ್ನು ಕೊಟ್ಟಿದ್ದೀರಿ ನಿಮಗೆ ಧನ್ಯವಾದಗಳು, ಆದರೆ ಅವರು ಎಲ್ಲವನ್ನು ಮರೆತುಬಿಟ್ಟಿದ್ದಾರೆ. ಅವರಿಗೆ ತರಬೇತಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಅಧಿಕಾರಿಗಳಿಗೆ ನೀವು ಅಧಿಕಾರವನ್ನು ಕೊಡಿ, ಅವರನ್ನು ಫ್ರೀ ಬಿಡಿ. ಒಂದು ಸಂತೋಷದ ವಿಷಯ ಇವತ್ತು ಉಪಾಧ್ಯಾಯರುಗಳು ರಾಜಕೀಯ ಮಾಡಿಕೊಂಡು ಕಾಲವನ್ನು ಕಳೆಯುತ್ತಿಲ್ಲ. ರಾಜಕೀಯದಿಂದ ದೂರವಿದ್ದಾರೆ. ಗ್ರಾಮ ಸೇವಕರನ್ನು ಮತ್ತು ಗ್ರಾಮಲೆಕ್ಕಿಗರನ್ನು ವರ್ಗಾವಣೆ ಮಾಡಿದ್ದೀರಿ, ಅವರ ವರ್ಗಾವಣೆ ಬಹಳ ಆಗುತ್ತಾ ಇದೆ. ನಮ್ಮ ಜೂನಿಯರ್ ಕಾಲೇಜಿನ ವಿಷಯವನ್ನು ಹೇಳಿದ್ದೇನೆ, ಜೂನಿಯರ್ ಕಾಲೇಜಿನ ಒಬ್ಬ ಯುವಕ ಪ್ರಿನ್ಸಿಪಾಲ್‌ರವರನ್ನು ನೀವು ನೋಡಿ ಸ್ಥಳದಲ್ಲಿಯೇ ಸಸ್ಪೆಂಡ್ ಮಾಡಿದ್ದೀರಿ, ಅವರನ್ನು ಸಸ್ಪೆಂಡ್ ಮಾಡಿದ ಎರಡು–ಮೂರು ತಿಂಗಳಾದರೂ ಅಲ್ಲಿಗೆ ಯಾವ ಪ್ರಿನ್ಸಿಪಾಲ್‌ರೂ ಬರಲಿಲ್ಲ. ಮುಹಮದ್ ಗಫೂರ್ ಎಂಬುವರು ಒಬ್ಬರು ಬಂದರು ಅವರು ಎರಡು ತಿಂಗಳು ಇದ್ದರು, ಅಂಥವರನ್ನು 2 ತಿಂಗಳು ಆದಮೇಲೆ ಅಲ್ಲಿಂದ ವರ್ಗಾವಣೆ ಮಾಡಿದ್ದಾರೆ, ಯಾರನ್ನು ಕೇಳಿ ವರ್ಗಾವಣೆ ಮಾಡಿದ್ದೀರಿ ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಸಸ್ಪೆಂಡ್ ಆದವರ ಜಾಗದಲ್ಲಿ ಮತ್ತೊಬ್ಬರನ್ನು ನೇಮಕ ಮಾಡಿ, ಅವರನ್ನು ವರ್ಗಾವಣೆ ಮಾಡುವಾಗ ಇನ್ನೊಬ್ಬರನ್ನು ಅಲ್ಲಿ ಭರ್ತಿಮಾಡಬೇಕಾಗಿತ್ತು. ಇನ್ನೊಬ್ಬರನ್ನು ನೇಮಕ ಮಾಡದೆ ಅವರನ್ನು ಅಲ್ಲಿಂದ ಏತಕ್ಕೆ ವರ್ಗಮಾಡಿದರು ? ನಮಗೆ ಅಧಿಕಾರವಿದೆ ನಾವು ಮಾಡುತ್ತೇವೆಂದು ಅಧಿಕಾರಿಗಳು ಹೇಳುತ್ತಾರೆ. ಅಲ್ಲಿಂದ ವರ್ಗಾವಣೆ ಮಾಡುವುದಕ್ಕೆ ಮೊದಲು ಇನ್ನೊಬ್ಬರನ್ನು ನೇಮಕ ಮಾಡಬೇಕಾಗಿತ್ತು. ಇದರ ಬಗ್ಗೆ ನಾನು ನಿಮ್ಮ ಹತ್ತಿರ ಬಂದಿಲ್ಲ. ನೀವು ಅದರ ಬಗ್ಗೆ ಏನು ಮಾಡುತ್ತೀರಿ ನೋಡೋಣವೆಂದು ಬಂದಿಲ್ಲ. ನಮ್ಮಲ್ಲಿ ಡಾಕ್ಟರುಗಳಿಲ್ಲ, ಬಹಳಷ್ಟು ಕಷ್ಟಗಳಿವೆ. ಯಾರೋ ಒಬ್ಬರು ಶಾಸಕರ ಸಹಿ ಇರತಕ್ಕ ಕಾಗದವನ್ನು ತಂದು ಕೊಟ್ಟರೆ ಅವರನ್ನು ನೀವು ವರ್ಗಾವಣೆ ಮಾಡಿದರೆ ಹೇಗೆ ? ಸಸ್ಪೆಂಡ್ ಆದವರ ಜಾಗದಲ್ಲಿ ಅವರನ್ನು ನೇಮಕ ಮಾಡಿದ್ದೀರಿ. ಅವರನ್ನು ವರ್ಗಾವಣೆ ಮಾಡಬೇಕಾದರೆ ಇನ್ನೊಬ್ಬರನ್ನು ಅಲ್ಲಿ ನೇಮಕ ಮಾಡಬೇಕಾಗಿತ್ತು. ನಮ್ಮ ಜೂನಿಯರ್ ಕಾಲೇಜಿನಲ್ಲಿ ವಿಜ್ಞಾನ ಮತ್ತು ಗಣಿತದ ಉಪನ್ಯಾಸಕರು ಇರಲಿಲ್ಲ. ಪರೀಕ್ಷೆಗಳು ನಡೆಯುವ ಕೊನೆಯಲ್ಲಿ ರಸಾಯನಶಾಸ್ತ್ರ ಮತ್ತು ಗಣಿತದ ಉಪನ್ಯಾಸಕರು ಬಂದರು. ಒಬ್ಬ ವಿದ್ಯಾರ್ಥಿಯು ಕೂಡ ಪಾಸ್ ಆಗಲಿಲ್ಲ. ಪ್ರಿನ್ಸಿಪಾಲರು ಕುಡುಕ, ಬೇರೆ ವಿಷಯಗಳಿಗೆ ಉಪನ್ಯಾಸಕ

ರುಗಳು ಇಲ್ಲ, ವಿದ್ಯಾರ್ಥಿಗಳು ಏನು ಮಾಡಬೇಕು? ವಿದ್ಯಾರ್ಥಿಗಳು ಬೇರೆ ಕಡೆ ಹೋಗುವುದಕ್ಕೆ ಗಂಟುಮೂಟೆಗಳನ್ನು ಕಟ್ಟಿಕೊಂಡು ಅಲೆಯುತ್ತಿದ್ದಾರೆ. ನಗರಪ್ರದೇಶಗಳಲ್ಲಿ ಆ ರೀತಿ ಮಾಡಿದರೆ ಹಿಡಿದುಕೊಂಡು ಹೊಡೆಯುತ್ತಾರೆ. ಒಂದೊಂದು ಸಬ್ಜೆಕ್ಟ್‌ಗಳಿಗೆ ನಾಲ್ಕೈದು ಜನ ಉಪನ್ಯಾಸಕರು ಇರುತ್ತಾರೆ. ಪಟ್ಟಣದ ವಿದ್ಯಾರ್ಥಿಗಳನ್ನು ಕಂಡರೆ ನಿಮಗೂ ಸಹ ಭಯ. ಹಳ್ಳಿಯಲ್ಲಿರತಕ್ಕ ಜನ ನಿಮ್ಮನ್ನು ಏನು ಮಾಡುತ್ತಾರೆ? ಏನೋ ಯಡಿಯೂರಪ್ಪನವರಿಗೆ ಓಟು ಕೊಟ್ಟಿದ್ದಾರೆಂದು ತಿಳಿದುಕೊಂಡು ಈ ರೀತಿ ಮಾಡುತ್ತಿದ್ದೀರಾ? ಲೋಕಸೇವಾ ಆಯೋಗದವರು ಅಭ್ಯರ್ಥಿಗಳನ್ನು ಆಯ್ಕೆಮಾಡುವಾಗ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳ ಅಂಕಗಳನ್ನು ಆಧಾರವಾಗಿಟ್ಟುಕೊಂಡು ಆಯ್ಕೆ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಮತ್ತು ಪಿ. ಯು.ಸಿ. ಪರೀಕ್ಷೆಗಳನ್ನು ಬಹಳ ಕಷ್ಟಪಟ್ಟು ಪಾಸ್ ಮಾಡಿರುತ್ತಾರೆ. ಅವರಿಗೆ ೩೦ ಮಾರ್ಕ್ಸ್ ಗ್ರೇಸ್ ಆಗಿ ಕೊಟ್ಟು ಅವರು ಗಳಿಸಿದಂತಹ ಅಂಕಗಳ ಜೊತೆಗೆ ಕೂಡಿಸಿದರೆ ಅನುಕೂಲವಾಗುತ್ತದೆ. ಅವರು ೬೦–೭೦ ಮಾರ್ಕ್ಸ್ ತೆಗೆದುಕೊಂಡಿದ್ದರೆ ಗ್ರೇಸ್ ಮಾರ್ಕ್ಸ್ ೩೦ ಕೊಟ್ಟರೆ ೯೦ ಮಾರ್ಕ್ಸ್ ಆಗುತ್ತದೆ. ಆ ರೀತಿ ಮಾಡುವುದರಿಂದ ಗ್ರಾಮಾಂತರ ಪ್ರದೇಶಗಳಿಂದ ಬಂದಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಅದರ ಬಗ್ಗೆ ಯೋಚನೆ ಮಾಡಲು ತಮಗೆ ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಕ್ಯಾಪಿಟೇಷನ್ ಶುಲ್ಕವನ್ನು ಹಂತ ಹಂತವಾಗಿ ರದ್ದು ಮಾಡುತ್ತೇವೆಂದು ಹೇಳಿದ್ದೀರಿ ನಿಮ್ಮ ಮೂರು ವರ್ಷಗಳ ಅಧಿಕಾರಾವಧಿಯಲ್ಲಿ ಎಲ್ಲಿಗೆ ಬಂದಿದ್ದೀರಿ? ಅದರ ಬಗ್ಗೆ ನಿಮ್ಮ ಹೆಜ್ಜೆಯನ್ನು ಮುಂದೆ ಇಟ್ಟಿದ್ದೀರಾ? ಅಥವಾ ಹಿಂದಕ್ಕೆ ಸರಿದಿದ್ದೀರಾ? ಖಾಸಗಿ ವಿದ್ಯಾಸಂಸ್ಥೆಗಳು ಕಪಿಮುಷ್ಟಿಯಲ್ಲಿ ಸಿಕ್ಕಿಕೊಂಡಿವೆ. ಖಾಸಗಿ ವಿದ್ಯಾಸಂಸ್ಥೆಗಳನ್ನು ಯಾರು ನಡೆಸುತ್ತಿದ್ದಾರೆ? ನಮ್ಮಂಥವರು ನಿಮ್ಮಂಥವರು ದೊಡ್ಡ ದೊಡ್ಡ ಜನರು ಖಾಸಗಿ ಶಾಲೆಗಳನ್ನು ನಡೆಸುತ್ತಿದ್ದಾರೆ. ನೀವು ಏನಾದರೂ ಕ್ಯಾಪಿಟೇಶನ್ ಶುಲ್ಕವನ್ನು ರದ್ದು ಮಾಡುತ್ತೇವೆ ಅಂದರೆ ನಿಮ್ಮ ಬಳಿಗೆ ಶಾಸಕರು ಬರುತ್ತಾರೆ. ಇದೊಂದು ವಿಚಿತ್ರ ಸ್ಥಿತಿಯಲ್ಲಿದೆ. ಅದರಿಂದ ನೀವು ದೂರ ಇರಬೇಕು. ಶಿವಮೊಗ್ಗ ಜಿಲ್ಲೆ ಕನ್ನಡನಾಡಿನ ಹೆಮ್ಮೆಯ ಜಿಲ್ಲೆ ರಾಜ್ಯಕ್ಕೆ ಅನ್ನವನ್ನು ಕೊಡತಕ್ಕ ಜಿಲ್ಲೆ, ಬತ್ತದ ಕಣಜ ಈ ತರಹ ಹೇಳುತ್ತೀರಿ. ರೈತರ ಹೆಸರು ಹೇಳಿಕೊಂಡು ಬಂದು ಇಲ್ಲಿ ಮಂತ್ರಿಗಳು ಆಗುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಇವತ್ತು ಮೆಡಿಕಲ್ ಕಾಲೇಜು ಇಲ್ಲ. ಸಹ್ಯಾದ್ರಿ ವಿಶ್ವವಿದ್ಯಾನಿಲಯ ಮಾಡುತ್ತೇವೆಂದು ನಮ್ಮ ಮುಖ್ಯಮಂತ್ರಿಗಳು ಬಹಿರಂಗ ಸಭೆಯಲ್ಲಿ ಹೇಳಿ ಬಂದಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಸಹ ಮಾಡುತ್ತೇವೆಂದು ಹೇಳಿದ್ದೀರಿ. ಈಗಲೂ ತಾವು ತಮ್ಮ ಪೀಠದಿಂದ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಮಾಡುತ್ತೇವೆಂದು ಹೇಳಿ, ಆ ಮೇಲೆ ಏನಾಗುತ್ತದೆ ನೋಡೋಣ, ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಏನೇನು ಆಗಿದೆ ಅದನ್ನು ನಾನು ಹೇಳುವ ಅವಶ್ಯಕತೆ ಇಲ್ಲ. ಅದು ಎಲ್ಲರಿಗೂ ಗೊತ್ತಿದೆ. ಒಂದು ಕಾಲದಲ್ಲಿ ಹೇಳಿದಂಥದ್ದು ಅದು ಇನ್ನೂ ಕಾರ್ಯರೂಪಕ್ಕೆ ಬರುತ್ತಿಲ್ಲ. ಅದಕ್ಕೆ ಕಾರಣ ಹಣ ಕಾಸಿನ ತೊಂದರೆ ಇರಬಹುದು. ಮತ್ತೊಂದಿರಬಹುದು. ಆದರೆ ಅಗ್ಗದ ಪ್ರಚಾರಕ್ಕೆ ಹೆಚ್ಚು ಹಣ ಖರ್ಚು ಮಾಡದೆ ಅವಶ್ಯಕತೆ ಇರುವ ಕಡೆ ಖರ್ಚು ಮಾಡುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಆ ರೀತಿಯಾಗಿ ಮಾಡುವಂಥ ಶಕ್ತಿ ತಮಗಿದೆ. ಹಿಂದೆ ಡಿ.ಎಲ್.ಆರ್.ಸಿ.ಗಳಲ್ಲಿ ಸಾಕಷ್ಟು ಭ್ರಷ್ಟಾಚಾರಗಳು ನಡೆದಿದೆ ಎಂದು ಸದನದಲ್ಲಿ ಚರ್ಚೆಯಾಯಿತು. ನಂತರ ಸಮಿತಿ ಸದಸ್ಯರನ್ನು ಕಿತ್ತುಹಾಕಿ ಮತ್ತೊಬ್ಬರನ್ನು ತಂದರು. ಅವರೂ ಅಂಥವರೆ. ಆ ಜನರನ್ನು ಎಲ್ಲಿಂದ ತರುತ್ತೀರಿ? ಎಲ್ಲಾ ಒಂದೇ ಜನ ತಾನೆ? ಈ ಸಾರಿ ಭ್ರಷ್ಟಾಚಾರ ಹೊಸ ತರಹ ಇದೆ. ೧೦–೧೫ ಸಾವಿರ ರೂಪಾಯಿ ಹೇಗಯ್ಯ ಕೊಟ್ಟೆ ಎಂದು ನಾನು ಕೇಳಿದೆ. ಈಗ ಕಮಿಟಿಯವರು ಮತ್ತು ಅಧಿಕಾರಿಗಳು ಬುದ್ಧಿವಂತಿಕೆ ಉಪಯೋಗಿಸಿ ಹಣ ಮಾಡುತ್ತಿದ್ದಾರೆ. ಮುಂಚೆಯೇ ಯಾರು ಯಾರಿಗೆ ಕೆಲಸ ಸಿಗುತ್ತದೆ ಎಂಬುದನ್ನು ಪಟ್ಟಿ ಮಾಡಿ ಅವರಿಗೇ ಕೆಲಸ ಸಿಗುತ್ತದೆ ಎಂಬುದು ಖಾಯಂ ಆದಮೇಲೆ ಹಣ ತೆಗೆದುಕೊಂಡರು. ಇಲ್ಲದಿದ್ದರೆ ಜನ ಒದೆಯುತ್ತಾರೆ ಎಂದು ಅವರಿಗೆ ಗೊತ್ತು. ಹಿಂದೆ ಎಲ್ಲಾ ಗಲಾಟೆಯಾಗಿತ್ತಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—'ಒದೆಯುತ್ತಾರೆ' ಮತ್ತು 'ಸುಳ್ಳು' ಎಂಬ ಪದವನ್ನು ಮಾನ್ಯ ಸದಸ್ಯರು ಎರಡು ಸಾರಿ ಬಳಸಿದರು. ಅದು ಸರಿಯಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು.—ಬಿ.ಎಸ್. ಯಡಿಯೂರಪ್ಪನವರೆ, ಆ ರೀತಿ ಮಾತನಾಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ.—ನನಗೆ ಗೊತ್ತಿಲ್ಲ ಸ್ವಾಮಿ. ನಾವು ಹಳ್ಳಿಯಿಂದ ಬಂದವರು ಹೊಸಬರು. ಒದೆಯುತ್ತಾರೆ ಎಂದರೆ ಜನ ಒದೆಯುತ್ತಾರೆ ಎಂಬ ಭಯಕ್ಕೆ ಯಾರಿಗೆ ಕೆಲಸ

ಸಿಗುತ್ತದೋ ಅಂಥವರಿಂದ ಹಣ ತೆಗೆದುಕೊಂಡರು ಎಂದು ಹೇಳಿದೆ. ಈಗಲೂ ಭ್ರಷ್ಟಾಚಾರ ಕಡಿಮೆಯಾಗಿಲ್ಲ. ದಯಮಾಡಿ ಈ ಕಡೆ ಮಾನ್ಯ ಮಂತ್ರಿಗಳು ಸರಿಯಾಗಿ ಗಮನಕೊಡಬೇಕೆಂದು ಹೇಳುತ್ತೇನೆ. ದೇವರ ದಯೆಯಿಂದ ತಾವು ಮತ್ತು ಮಾನ್ಯ ಗೋವಿಂದೇಗೌಡರು ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆ ಕೆಲಸ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಕಳೆದ ಎರಡು ಮೂರು ವರ್ಷದಲ್ಲಿ ಹಳೇ ಜಾಡು ಏನು ಇತ್ತು ಅದು ಮತ್ತೊಮ್ಮೆ ಬರದಂತೆ ಮಾಡಿ ಹೊಸ ರೀತಿಯಲ್ಲಿ ಈ ಕ್ಷೇತ್ರವನ್ನು ತೆಗೆದುಕೊಂಡು ಹೋಗುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾವೂ ಕೂಡ ಈ ವಿಷಯದಲ್ಲಿ ಸಹಕಾರ ಕೊಡುವುದಕ್ಕೆ ತಯಾರಾಗಿದ್ದೇವೆ. ಇವತ್ತು ಇರತಕ್ಕ ಅವ್ಯವಸ್ಥೆಯಿಂದ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತಿದೆ. ವಿದ್ಯಾರ್ಥಿಗಳ ರಿಸಲ್ಟ್ ಸರಿಯಾಗಿ ಪ್ರಕಟವಾಗುತ್ತಿಲ್ಲ. ಪರೀಕ್ಷೆ ಸರಿಯಾಗಿ ನಡೆಯುತ್ತಿಲ್ಲ. ಭ್ರಷ್ಟಾಚಾರಗಳು ಇಲಾಖೆಯಲ್ಲಿ ಜಾಸ್ತಿ ಇದೆ. ಇವೆಲ್ಲವನ್ನೂ ಕಂಟ್ರೋಲ್ ಮಾಡುವುದಕ್ಕೆ ಪ್ರಯೋಗ ಮಾಡದಿದ್ದರೆ ಹಿಂದಿನ ಆಡಳಿತಕ್ಕೂ ಈಗಿನ ಆಡಳಿತಕ್ಕೂ ವ್ಯತ್ಯಾಸವೇ ಇರುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಪ್ರಯೋಗ ಮಾಡಿ ಸುಧಾರಣೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI BLASIUS D'SOUZA (Mangalore).—Mr. Speaker Sir, when Sri Raghupathy and Sri Govinde Gowda became Ministers, we had very high hopes that the education system will be improved. As you know, if at all there has been an experiment in any of the fields, the maximum of experiments have been done in education. Every Minister who comes, tries to have his own policy, and as a result the children suffer. We should see that the future generation gets a proper education and makes an overall improvement in all the fields. In addition we should instil in the youth dignity of labour, love for the country and with this motive we must have a job oriented education. We are producing only white-collared youngsters who are fit only for clerical jobs instead of making them for any technical job. Many a time the Ministers have been saying that they are going to open vocational courses after S.S.L.C. But every year we see that there is a rush not only for Engineering Colleges where there are limited seats, and most of them take capitation fees. but also a rush for P.U.C. and degree courses. Today we find everywhere that a large number of girls who study up to S.S.L.C. don't discontinue education but try to get P.U.C. and college degrees. Every parent feels that his children should be educated. If you take an auto-rikshaw driver or an ordinary labourer, we find that his ambition is to see that his child studies and come up in life. But unfortunately our education is so faulty that the parents after spending on the child's education, and after sacrificing for childs; education find that their graduate children are jobless in this State. I would suggest that we have to revise our education. in such a way that the children get proper education It is not correct to take a decision overnight and say that from tomorrow the private and unaided private schools and colleges should charge such and such fees. I understand there are a few who are black sheep in education. They are business like. Those schools and colleges should be curbed and controlled but you

should not take them in general. We are prepared to welcome people from other States. We are prepared to accept people of other States as honest. But when it comes to our State, we look in a way that all the educational institutions in our State are dishonest and therefore they should be curbed. I would say that there are very many private institutions who give very good education at the sacrifice of the doners and the *benefactors* of that area. Look at the primary education. The boys and girls look like going to climb Mount Everest. The books are so many. The subject are' so complicated that they do not have a proper foundation. A proper foundation is a must for any education and if you want to have proper foundation, you must have dedicated teachers in the schools. We find that when it comes to private and private aided institutions, there are teachers who work who serve the Institution. But When it comes to Government institutions, we find that there are no teachers. In every school there is scarcity of teachers. There are less number of teachers than actually required. You can just imagine the plight of the children in villages where there are no teachers, where there is no proper education in the home and where the parents are illiterate. What can we expect of these poor children? Are we going to keep the villages still in the dark? If at all we feel that the villages should come forword, we should give proper education to the village children. The government's first and foremost duty is to spend the maximum on education and give proper education to the children. Are there teachers in full strength to give proper education to our children? We find that the transfer policy is not suitable. The DDPI transfers the teachers as he likes. In some places the teachers have to go from one taluka to another. In South Kanara, there are many lady teachers and they have their families. You cannot expect a lady to travel 50/60 miles every day. And if she cannot travel. How can she dedicate herself and serve the children ? as far as possible they should see that the teachers are appointed as close to the school. I don't say that they should be appointed near their houses but as far as possible, it should be near. Many complaints have come that they have been posted to places where they have to walk 10 miles and where there are no proper roads, no houses nearby and so on. I request the hon. Minister to take an overall picture of education instead of saying simply, we have this course and that course, we distribute books free". It is only political slogan. As you know, even this free distribution of books has been a fiasco. Many children in South Kanara have not got books even today. Fifth standard Kannada book has not yet come. Fourth standard social studies book has not yet come. If I go on mentioning, it will be a big list; I am sure, the hon. Minister

will see that at least by 15th August, the Independence Day, the children will get the books. Let the children be independent; I find that in a school where there are forty to fifty students, only twenty books were distributed. And further they say that those books have to be returned back so that they could give those books to other children. By this method you can imagine how much study the poor children can do. Regarding text books I don't want to speak because many have already spoken. I request the Education Department not to make our children beggers. Instead they should be helped to imbite the dignity of labour. I heard that Rs. 19 crores have been kept for building up school rooms and the Commissioner for Education has sent a circular to the Deputy Commissioners asking them not to spend that money on additional accommodation because that money is required for distribution of free books and free uniforms. There are schools without rooms. There are school buildings which are dangerous. If one school building collapses, imagine, how many children will die. There are no benches, no desks and blackboards in village schools. In cities and towns, at least people give money as a result of which facilities are there but in villages there are no facilities. I request the Hon. Minister to direct the Commissioner to withdraw the order and spend sufficient amount for construction of buildings and also to keep the buildings in good condition.

Let me come to last year's promise: One school per village. There were a lot of promises by the Janata Government. firstly when they were elected for the first time in 1983. and for the second time in 1985. They went on giving promises. Naturally people were attracted and they gave votes. Today educational facilities which are lacking in villages, should be improved, The promise of one school per village should be implemented. As far as our South Kanara district is concerned, though we have got a Government Training School for Women and a Junior College for Women we have got very few schools and colleges exclusively for women. This school is a very old training school for women as well Junior College. There are more than thousand students. The rooms are meant for about 30 students because it was built during the British Raj when the ratio was 30. But today they have to accommodate about sixty to seventy and some times even eighty students in a very small room. I have gone there and seen. There is no place for the teacher to sit. There are no desks. You can just imagine how the teachers can lecture. For a girls' school of 1000 students, there are only four toilets. They have to queue up during the recess time, Even such minimum facilities are not given by the Education Department. I am sure the Education Depart-

ment is not working. The other day when the hon. Minister Sri Raghupathy was asked about books, he could not give the statistics and could not tell us how many students are studying in primary schools, higher primary schools and secondary schools. There is a big hierarchy right from the Commissioner to the A.E.Os. and the teachers. When they have such a big hierarchy and they are not able to give this small statistics, I feel disgusted that the Department is not properly working. It has to be toned up.

Coming to the University Grants Commission, the Mangalore University and Gulbarga University have not got the grants yet. You might have gone through the papers of the last three-four days where there have appeared many letters regarding education. They say that the Government has not provided the required funds, the basic infrastructure and other materials. I would request the Hon. Minister to see that the grants are got from the Central Government. Many grants which have been sanctioned by the Central Government have not been utilised by the Universities.

Regarding new courses. We speak of computer courses, electronics and so on and so forth to go to the 21st Century. All this is very good. But when some college comes forward to start a Computer Course where lakhs of rupees are required for purchasing equipment, the Government says, "For seven years you will not have grants". If a student wants to go to an Engineering College, he will not get a seat unless he pays Rs. 50,000. I would request the Government to see that grants are given to colleges which start computer and electronic courses. On the one hand you say that they cannot collect fees and on the other hand you say you won't give grants. I would request the hon. Minister to see that the grants are given to them.

Regarding Physical Education. We have been neglecting physical education. In countries like China, Russia, South Korea and Japan, they have mass physical education and mass exercise. When we were in schools, we had a Junior Hockey Team, Intermediate Hockey Team, Intermediate Cricket Team. But today Mangalore cannot produce a good Junior Hockey team because there are no facilities in the schools to give this training. No funds are given to schools and colleges. The schools cannot collect any funds for the equpiment. The youngsters who should play are not getting proper training. Hence, I request the Education Department to give maximum facilities to the youth so that they are able to play and become good players. In the past Hockey was *synomymous* with the name of India. But today we have lost our name in Hockey because of the laxity of

the Education Department, because we have not been able to catch our youth when they are young. I would request the department to give more importance and encouragement to Physical Education.

Regarding capitation fees. Donations and Capitation fees must be stoped. While doing this, I would request the Hon. Minister to call the managements of the private institutions and private aided institutions and have discussion instead of saying simply, "From end of may or first of June no fee should be charged". After saying this, another Circular comes saying something else and a third circular comes which says that a Committee is formed and till the Committee gives its report, it extends time. I don't think so far the Committee has given its report. The time goes on extending. There is no proper management. I would request you to call the Managements for a discussion. They are not far away. They are all in Karnataka. They are interested in the welfare of Karnataka Along with the good there may be some bad ones too. Punish them. As regards PUC results, as Mr. Yediyurappa puts it, I have seen certain marks cards. One boy got more than 90% in all subjects except mathematics and in mathematics, he got double zero. Instead of 100, double zero was there. In the same way, another who scored more than 80% got his marks card with 10% marks. Last time there were so many results withheld. We had never seen results being withheld in large number. It was due to the fact that after feeding to the computer, the matter, I think, was lost.

MR. SPEAKER.—Please complete your speech.

SRI BLASIUS D'SOUZA.—Finally, Mr. Rachaiah, when he was Education Minister, had promised an University for Women, Kittor Rani Channamma University. There is already a residential school. I would only request the present ministry to implement and have the Rani Chennamma University for women and also to start a medical college and an engineering college there. Regarding South Kanara, many speakers have asked about Engineering and Medical College. When every district has these colleges, we do not have a Government engineering college in South Kanara. I am sure South Kanara also, when we think, of other districts, will be given an Engineering College. I thank the Hon. Speaker for giving me time to speak on this subject. I am sure my points may well be taken note of. We speak but nothing happens because they have got a bulldozing majority. I request them not to bulldoze us but take suggestions and do something in the field of education.

ಡಾ|| ಬಿ.ಎಂ. ತಿಪ್ಪೇಸ್ವಾಮಿ.—(ಭರಮಸಾಗರ) ಮಾನ್ಯ ಅಧ್ಯಕ್ಷರೆ, ವಿದ್ಯಾಭ್ಯಾಸ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಮೊದಲನೆಯ ಸಾರಿ ಮಾತನಾಡುವಾಗ ಯಾವ ರೀತಿ ಮಾತನಾಡಬೇಕೆಂದು ನನಗೆ ಅನುಮಾನ ಇತ್ತು. ಯಾವ ರೀತಿ ಬೇಕಾದರೂ ಮಾತನಾಡಿದರೆ ನಡೆಯುತ್ತದೆ ಎನ್ನುವ ಕಾನ್ಫಿಡೆನ್ಸ್ ಈಗ ನನಗೆ ಬಂದಿದೆ. ವಿದ್ಯಾಭ್ಯಾಸ ಇಲಾಖೆ ಎಷ್ಟು ದೊಡ್ಡದು, ಯಾವ ವಿಷಯದ ಮೇಲೆ ಮಾತನಾಡಬೇಕು ? ಎಕ್ಸಾಮಿನೇಷನ್, ಕರಪ್ಷನ್, ಟೆಕ್ನಿಕಲ್ ಎಜುಕೇಷನ್, ಪ್ರೈಮರಿ ಎಜುಕೇಶನ್ ಈ ರೀತಿ ಲೆಕ್ಕವಿಲ್ಲದಷ್ಟು ಸಬ್ಜೆಕ್ಟ್‌ಗಳು ಇವೆ. ಒಂದೊಂದು ವಿಷಯದ ಮೇಲೆ ಭಾಷಣ ಮಾಡಬೇಕಾದರೆ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಜೊತೆಗೆ ವಿದ್ಯಾಭ್ಯಾಸ ಯಾವರೀತಿ ಇರಬೇಕು, ಅದಕ್ಕಾಗಿ ಯಾವರೀತಿ ಹಣವನ್ನು ಖರ್ಚುಮಾಡಬೇಕು ? ಎಷ್ಟು ಹಣವನ್ನು ಇಡಬೇಕಾಗಿತ್ತು, ಎಷ್ಟು ಹಣ ಖರ್ಚುಮಾಡಲಾಗಿದೆ. ಅದರ ಬಗ್ಗೆ ಈಗ ನನಗೆ ಅನುಮಾನ ಬಂದಿದೆ. ಇನ್ನೊಂದು ವಿಷಯ, ವಿದ್ಯೆ ಎನ್ನತಕ್ಕದ್ದು ಕೆಲವೇ ಜನರ, ಬುದ್ಧಿವಂತ ಜನರ ಸ್ವತ್ತಾಗಿತ್ತು. ನಮ್ಮ ಇಂಡಿಯಾದೇಶದಲ್ಲಿ ಯಾರಿಗೂ ತಿಳಿಯದ ಸಂಸ್ಕೃತ ಭಾಷೆಯಲ್ಲಿ ಸುಮಾರು ಶತಮಾನಗಳಷ್ಟು ಕಾಲವಿದ್ಯೆ ಕೆಲವರ ಸ್ವತ್ತಾಗಿತ್ತು, ಅಂತಹ ಕಾಲವೊಂದಿತ್ತು. ೧೮೩೫ರಲ್ಲಿ ಲಾರ್ಡ್‌ಬೆಂಟಿಂಗ್ ಮತ್ತು ಮ್ಯಾಕಾಲ್ ಎಂಬುವರು ನಮ್ಮ ದೇಶದಲ್ಲಿ ಎಜುಕೇಶನ್ ಜಾರಿಗೆ ಬರುವಂತೆ ಮಾಡಿದ್ದಾರೆಂದು ನಾನು ಹಿಸ್ಟರಿ ವಿದ್ಯಾರ್ಥಿಯಲ್ಲ ಅದು ನನಗೆ ಸರಿಯಾಗಿ ಗೊತ್ತಿಲ್ಲ. ರೆಗ್ಯುಲರೈಸ್ ಮಾಡಿದ್ದು ೧೮೩೫ರಲ್ಲಿ ಎಂದು ನನಗೆ ಅನಿಸುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶ ಇಲ್ಲದೆ ಇರತಕ್ಕ ಕಾಲದಲ್ಲಿ, ಅಜ್ಞಾನಿಗಳು ಇದ್ದಂತಹ ಕಾಲದಲ್ಲಿ, ಅವರು ವಿದ್ಯಾಭ್ಯಾಸವನ್ನು ಜಾರಿಗೆ ತಂದಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ ಬಂದಮೇಲೆ ವಿದ್ಯಾಭ್ಯಾಸವನ್ನು ಜಾರಿಗೆ ತಂದಿದ್ದಾರೆ ಅದಕ್ಕೆ ಮೊದಲು ಕೆಲವೇ ಜನರಿಗೆ ಮಾತ್ರ ವಿದ್ಯಾಭ್ಯಾಸ ಮಾಡತಕ್ಕ ಅವಕಾಶವಿತ್ತು. ೧೯೧೭ರಲ್ಲಿ ರಷ್ಯಾಜಾರ್‌ರಿಂದ ಬಿಡಿಸಿಕೊಂಡಾಗ ರಷ್ಯಾದೇಶ ವಿದ್ಯಾವಂತರ ಸಂಖ್ಯೆ ಕೇವಲ ೬ ಪರ್ಸೆಂಟ್ ಇತ್ತು ಆಗ ಲೆನಿನ್ ಫಸ್ಟ್ ಆರ್ಡರ್ ಮಾಡಿದ್ದು ಏನೆಂದರೆ ೨ಲಕ್ಷ ಲ್ಯಾಂಟನ್‌ಗಳನ್ನು ಮೂರು ತಿಂಗಳುಗಳಲ್ಲಿ ತಯಾರುಮಾಡಬೇಕೆಂದು ಕಾರ್ಖಾನೆಗೆ ಕಾಲವನ್ನು ನಿಗದಿ ಮಾಡಿದರು. ಯಾರೂ ಕೂಡಾ ಏತಕ್ಕೆ ಎಂದು ಕೇಳುವುದಕ್ಕೆ ಹೋಗಲಿಲ್ಲ. ೨ಲಕ್ಷ ಲ್ಯಾಂಟನ್‌ಗಳನ್ನು ತಯಾರು ಮಾಡಿಕೊಟ್ಟರು. ಆಗ ರಷ್ಯಾದೇಶದಲ್ಲಿ ೨ಲಕ್ಷ ಜನ ಎಸ್.ಎಸ್.ಎಲ್.ಸಿ. ವರೆಗೆ ಓದಿದವರು ಇದ್ದರು. ಒಬ್ಬೊಬ್ಬರಿಗೆ ಒಂದೊಂದು ಲ್ಯಾಟೀನ್ ಕೊಟ್ಟು ಚಿಮಣಿ ಎಣ್ಣೆ ಸಹ ಕೊಟ್ಟರು ಆಗ ಅವರು ಹೇಳಿದರು ಕೇವಲ ನೀವು ಕಮ್ಯುನಿಸ್ಟ್ ಮೆಂಬರ್ ಆದರೆ ನೀವು ವಿದ್ಯೆ ಕಲಿತಿದ್ದಕ್ಕೂ ಸಾರ್ಥಕವಾಗುವುದು ಆದ್ದರಿಂದ ಇಷ್ಟಿಷ್ಟು ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಆಜ್ಞೆಮಾಡಿದಾಗ ೬ಪರ್ಸೆಂಟ್ ಇದ್ದಂತಹ ವಿದ್ಯಾವಂತ ಸಂಖ್ಯೆಯು ೬೦ ಫರ್ಸೆಂಟ್‌ಗೆ ಏರಿತು ಆತರಹ ಒಂದು ಅಚೀವ್‌ಮೆಂಟ್ ಮಾಡಿದರು, ಹಾಗೆ ನಿವೇನು ಮಾಡಿದ್ದೀರಿ ? ೧೯೫೧ರಲ್ಲಿ ಪ್ಲಾನ್ ಪ್ರಕಾರ ಶುರುಮಾಡಿದ್ದೀರಿ, ಈಗ ೭ನೇ ಪಂಚವಾರ್ಷಿಕ ಯೋಜನೆ ಶುರುವಾಗಿದೆ. ನಿಮ್ಮ ಪ್ಲಾನಿಂಗ್‌ನಲ್ಲಿ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಮಹತ್ವವನ್ನು ಕೊಟ್ಟಿಲ್ಲವೆಂದು ನನ್ನ ಭಾವನೆ. ಟೆಕ್ನಾಲಜಿ, ಸೈನ್ಸ್, ಕಂಪ್ಯೂಟರ್ ಬಗ್ಗೆ ಬಹಳಷ್ಟು ಆಸಕ್ತಿಯನ್ನು ವಹಿಸುತ್ತೇವೆ. ಅದೇ ರೀತಿ ಪ್ರೈಮರಿ ಎಜುಕೇಶನ್, ಬೇಸಿಕ್ ಎಜುಕೇಶನ್ ಏನಿದೆ ಅದರ ಕಡೆಗೆ ಅಷ್ಟು ನಿಗಾ ಕೊಡದೇ ನಾವು ಏನೋ ಮಾಡುತ್ತೇವೆಂದರೆ ಅದರಿಂದ ಏನೂ ಸಾಧನೆಯಾಗುವುದಿಲ್ಲ. ನಮ್ಮ ಆರು ಪಂಚವಾರ್ಷಿಕ ಯೋಜನೆಗಳಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು ವಿದ್ಯಾಭ್ಯಾಸಕ್ಕೆ ಕೊಟ್ಟಿಲ್ಲ ಈ ರೀತಿಯಾಗಿರತಕ್ಕ ವಿದ್ಯಾಭ್ಯಾಸ ಇಲಾಖೆಯ ಬೇಡಿಕೆಯಮೇಲೆ ತಿರುಪತಿಯಲ್ಲಿ ಕ್ಷೌರ ಮಾಡುವ ಹಾಗೆ ಸ್ವಲ್ಪ ಸ್ವಲ್ಪ ಮಾತನಾಡಿದರೆ ಪ್ರಯೋಜನ ಹೇಗೆ ಆಗುತ್ತದೆ ? ನಿಮ್ಮ ಬಡ್ಜೆಟ್‌ನಲ್ಲಿ ಶೇಕಡ ೪೦ರಷ್ಟು ಹಣವನ್ನು ಎಜುಕೇಶನ್‌ಗೋಸ್ಕರ ಇಟ್ಟರೂ ೬ರಿಂದ ೧೦ ವರ್ಷ ವಯಸ್ಸಿನ ಮಕ್ಕಳ ಸಂಖ್ಯೆ ಎಷ್ಟಿದೆ ಎಂಬುದನ್ನು ಇಲ್ಲಿ ಕೊಟ್ಟಿಲ್ಲ. ನಾನು ಟೆಕ್ನಿಕಲ್ ಎಜುಕೇಶನ್, ಮೆಡಿಕಲ್ ಎಜುಕೇಶನ್, ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಮೆಡಿಕಲ್ ಇಲಾಖೆಯಲ್ಲಿ ಹತ್ತಾರು ವರ್ಷ ಪ್ರೊಫೆಸರ್ ಆಗಿ ಇದ್ದವನು ಅದನ್ನು ಮಾತನಾಡಿದರೆ there will be ideological controversy, and confrotation. So, I would like to talk a few words about this adult Education. ನಾನು ವಯಸ್ಕರ ಶಿಕ್ಷಣ ಮತ್ತು ಅಕ್ಷರಸೇನೆ ಈ ಎರಡು ವಿಚಾರಗಳ ಬಗ್ಗೆ ಮಾತನಾಡುತ್ತೇನೆ. ಫ್ರೀಪ್ರೈಮರಿ ಎಜುಕೇಶನ್, ಪ್ರೈಮರಿ ಎಜುಕೇಶನ್ ಎಂದು ಇದೆ, ಎಜುಕೇಶನ್ ಬಗ್ಗೆ ಹೇಳುವುದಾದರೆ ಇಡೀ ದೇಶದ ಬಡ್ಜೆಟ್ ಏನಿದೆ ಅದೆಲ್ಲವನ್ನೂ ಖರ್ಚುಮಾಡಿದರೂ ವಿದ್ಯಾಭ್ಯಾಸ ಇಲಾಖೆಯಲ್ಲಿ ಸಂಪೂರ್ಣವಾದ ವಿದ್ಯೆಯನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ ಅಷ್ಟೊಂದು ಹಣವನ್ನು ಈ ಇಲಾಖೆಗೆ ಒದಗಿಸಬೇಕಾಗುತ್ತದೆ. ವಿದ್ಯಾಭ್ಯಾಸ ಇಲಾಖೆಗೆ ಹಣದ ಕೊರತೆ ಇದೆ. ಶಾಲಾಕಟ್ಟಡಗಳು ಇಲ್ಲ, ಉಪಾಧ್ಯಾಯರುಗಳು ಇಲ್ಲ, ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಪ್ರೈವೇಟ್‌ನವರಿಗೆ ಕಾಲೇಜು ಪ್ರಾರಂಭ ಮಾಡುವುದಕ್ಕೆ ಅವ

ಕಾಶ ಕೊಡಬೇಡಿ ಪ್ರತಿಯೊಂದು ತಾಲ್ಲೂಕಿನಲ್ಲೂ ಗೌರ್ನಮೆಂಟ್ ಜೂನಿಯರ್ ಕಾಲೇಜು ಕೊಡಬೇಕೆಂದು ಹೇಳಿದರು ವಿದ್ಯಾಭ್ಯಾಸ ಇಲಾಖೆಯಲ್ಲಿ ಈ ರೀತಿಯಾದರೆ ಅದು ಮಂತ್ರಿಗಳ ತಪ್ಪಲ್ಲ. ಆರು ಪಂಚ ವಾರ್ಷಿಕ ಯೋಜನೆಗಳಲ್ಲೂ ವಿದ್ಯಾಭ್ಯಾಸಕ್ಕೆ ಹಂತ ಹಂತವಾಗಿ ಪ್ರಾಧಾನ್ಯತೆಯನ್ನು ಕೊಟ್ಟು ಪ್ರತಿಯೊಬ್ಬ ಹುಡುಗನಿಗೂ It is a fundamental right to be an educated man. ಅಂತ ಮಾಡಿದ್ದರೆ ೩೫ ವರ್ಷಗಳಲ್ಲಿ ನಮ್ಮ ಇಂಡಿಯಾದೇಶದಲ್ಲಿ ಸುಮಾರು ೭೫ ಪರ್ಸೆಂಟ್ ವಿದ್ಯಾಭ್ಯಾಸ ಮಾಡಿಸಬಹುದಾಗಿತ್ತು. ಸರ್ಕಾರ ವಿದ್ಯಾಭ್ಯಾಸವನ್ನು ಎಲ್ಲರಿಗೂ ಕೊಡುವುದಕ್ಕೆ ಕಷ್ಟ. ಖಾಸಗಿಯವರು ಕೂಡ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಅವಕಾಶವನ್ನು ಒದಗಿಸಿಕೊಟ್ಟಿದ್ದಾರೆ. ೧೯೫೬ರಲ್ಲಿ ಕಮರ್ಶಿಯಲೈಸೇಷನ್ ಎಜುಕೇಶನ್ ಆಯಿತು, ಅದು ಕೊನೆಗೆ ಕಮ್ಯುನಲೈಸೇಷನ್ ಆಯಿತು ಅದು ನಮಗೆ ತಿಳಿಯದ ಹಾಗೆ ಆಗಿದೆ. ಇದರಲ್ಲಿ ಸ್ವಾರ್ಥ ಇರಬಹುದು, ಹಣದ ಆಸೆ ಇರಬಹುದು ವಿದ್ಯಾಭ್ಯಾಸ ಒಂದು ಬಿಸಿನೆಸ್ ಆಗಿದೆ, ಇದರಲ್ಲಿ ಯಾವ ಅನುಮಾನವಿಲ್ಲ. ಮುಂದೆ ಏನಾಗುತ್ತದೆ. ಎನ್ನುವ ಯೋಚನೆಯನ್ನು ಮಾಡಿದಹಾಗೆ ಇಲ್ಲ. ಮಾನ್ಯ ಗೋವಿಂದೇಗೌಡರ ಖಾತೆಗೆ ಸಂಬಂಧಪಟ್ಟ ವಯಸ್ಕರ ಶಿಕ್ಷಣ ಮತ್ತು ಅಕ್ಷರಸೇನೆ ಅದರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಅಕ್ಷರ ಸೇನೆ ಎಂದರೆ, ಸುಮಾರು ೬ ರಿಂದ ೧೪ ವರ್ಷದ ವಯಸ್ಸಿನವರು ಯಾರು ಶಾಲೆಗಳನ್ನು ಬಿಟ್ಟಿರುತ್ತಾರೋ ಅಂತಹವರಿಗೆ ವಿದ್ಯೆಯನ್ನು ಕಲಿಸುವುದು. ಮತ್ತು ವಯಸ್ಕರ ಶಿಕ್ಷಣ ಎಂದರೆ ೧೫ ರಿಂದ ೩೫ ವರ್ಷದವರೆಗೆ ಇರುವಂತಹವರಿಗೆ ಕಲಿಸುವುದು. ಇವರಿಬ್ಬರನ್ನೂ ಸೇರಿಸಿ ಸಾಯಂಕಾಲ ೬ ರಿಂದ ೯ ಗಂಟೆವರೆಗೆ ೧ ತಾಲ್ಲೂಕಿನಲ್ಲಿ ೧೦೦ ಕ್ಷೇತ್ರಗಳನ್ನು ವಿಂಗಡಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯದಿಂದ ವಿದ್ಯೆ ಕೊಡುವುದು. ಇದಕ್ಕೆ ಒಬ್ಬ ಮಾಸ್ಟರು. ಆತ ಆ ಊರಿನವನಾಗಿರಬಹುದು. ಅಥವಾ ಪಕ್ಕದ ಊರಿನವನಾಗಿರಬಹುದು ಒಟ್ಟಿನಲ್ಲಿ ವಿದ್ಯಾವಂತನಾದ ಒಬ್ಬ ಹುಡುಗನನ್ನು ಅಲ್ಲಿ ಇಟ್ಟು ಆತನಿಗೆ ೧೨೦ ಅಥವಾ ೧೩೦ ರೂಪಾಯಿ ಸಂಬಳ ಕೊಡುತ್ತಾರೆ. ಹೆಣ್ಣು ಮಕ್ಕಳಿಗೆ ೨೫ ಹಾಗೂ ಗಂಡು ಮಕ್ಕಳಿಗೆ ೭೫ ರಂತೆ ಒಂದು ತಾಲ್ಲೂಕಿನಲ್ಲಿ ೧೦೦ ಸೆಂಟರ್‌ಗಳಲ್ಲಿ ಅಕ್ಷರಸೇನೆ ಕೆಲಸ ಆಗುತ್ತಿದೆ. ಇದು ೧೦ ತಿಂಗಳ ಒಂದು ವಿದ್ಯಾಭ್ಯಾಸ. ಸಂಜೆ ಅಲ್ಲಿ ಮೇಷ್ಟರು ಬಂದಾಗ ಹುಡುಗರು ಎಲ್ಲೋ ಹೋಗಿರುತ್ತಾರೆ. ದೊಡ್ಡವರು ದಣಿದಿರುತ್ತಾರೆ. ಕೆಲವರು ಕುಡಿಯಲು ಹೋಗಿರುತ್ತಾರೆ. ಅಲ್ಲಿ ಎಲ್ಲಾ ಸೇರಿ ಕೂತು ಮಾತನಾಡಿ ನಂತರ ವಾಪಸ್ಸು ಹೋಗುತ್ತಾರೆ. ನನ್ನ ಲೆಕ್ಕದ ಪ್ರಕಾರ ಶೇಕಡಾ ೭೫ರಷ್ಟು ಇವರಿಂದ ಪ್ರಯೋಜನವಾಗಿಲ್ಲ. ಎಲ್ಲೋ ಶೇಕಡಾ ೨೫ ಭಾಗದಲ್ಲಿ ವಿದ್ಯಾಭ್ಯಾಸ ಆಗಿರಬಹುದು. ಆದ್ದರಿಂದ ಇದಕ್ಕೆ ಖರ್ಚು ಆಗಿರುವುದರಲ್ಲಿ ಶೇಕಡಾ ೭೫ ಭಾಗ ವೇಸ್ಟ್ ಆದಂತೆ. ಇಲ್ಲಿ ೧೦ ತಿಂಗಳ ವಿದ್ಯಾಭ್ಯಾಸ ಆದ ನಂತರ ಪರೀಕ್ಷೆ ಇಲ್ಲ, ನಾನು ಒಬ್ಬನನ್ನು ಪರೀಕ್ಷೆ ಮಾಡಲು ನಿನ್ನ ಹೆಸರು ಏನೆಂದೆ. ಆತ " ರುದ್ರಪ್ಪ " ಎಂದು ಹೇಳಿದ. ನಂತರ ಬರಿ ಎಂದಾಗ ಅವನ ಹೆಸರನ್ನು ' ರುದಪ ಎಂದು ಬರೆದ. ಒತ್ತಕ್ಷರಗಳನ್ನು ಬಿಟ್ಟಿದ್ದ. ಇದನ್ನು ಆತ ೧೦ ತಿಂಗಳಲ್ಲಿ ಕಲಿತಿದ್ದಾನೆ. ಇಪತ್ತು ಹೆಬ್ಬೆಟ್ಟೇ ಎಷ್ಟೋ ವಾಸಿ. ಕಾರಣವೇನೆಂದರೆ, ರುದ್ರಪ್ಪ ಹೋಗಿ ರುದಪ ಆಗುತ್ತಾನೆ. ಇವತ್ತು ಪುಸ್ತಕಗಳನ್ನು ಹಂಚುವ ಬಗ್ಗೆ ಮಾನ್ಯ ರಘುಪತಿಯವರಿಗೆ ಏನೂ ಹೇಳುವುದು ಇಲ್ಲ. ೧೦ನೇ ತರಗತಿಯವರೆಗೆ ಪುಸ್ತಕಗಳನ್ನು ಹಂಚಿದರೆ ನಮಗೆ ಅಭ್ಯಂತರ ಇಲ್ಲ. ಆದರೆ ಅವರು ಒಂದೇ ಒಂದು ಕೆಲಸವನ್ನು ಮಾಡಬೇಕು. ನೀವು ಯಾರಿಗೆ ಪುಸ್ತಕ ಕೊಡುತ್ತೀರೋ ಅಂತಹ ಮಕ್ಕಳ ತಂದೆಯಿಂದ " ನನ್ನ ಮಗನಿಗೆ ಪುಸ್ತಕ ಕೊಡಿಸುವುದಕ್ಕೆ ನನ್ನಲ್ಲಿ ಚೈತನ್ಯವಿಲ್ಲ " ಎಂದು ಒಂದು ಅಫಿಡವಿಟ್‌ನ್ನು ಬರಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಹೀಗೆ ಬರೆಸಿಕೊಂಡು ಅವರ ಚೈತನ್ಯ ನೋಡಿ ಎಲ್ಲಾ ಮಕ್ಕಳಿಗೂ ಹಂಚಿಕೆ ಮಾಡಿ ಈ ರೀತಿ ಮಾಡಿದರೆ ನೀವು ಏನು ಖರ್ಚು ಮಾಡುತ್ತಿದ್ದೀರಿ ಅದರಲ್ಲಿ ಶೇಕಡಾ ೫೦ರಷ್ಟು ಹಣವನ್ನು ಉಳಿತಾಯ ಮಾಡಬಹುದು.

ಅಧ್ಯಕ್ಷರು.—ಇನ್ನು ಮೂರು ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿ.

ಡಾ|| ಬಿ.ಎಂ. ತಿಪ್ಪೇಸ್ವಾಮಿ.—ಅಕ್ಷರ ಸೇನೆ ಮತ್ತು ವಯಸ್ಕರ ಶಿಕ್ಷಣವನ್ನು ತೆಗೆದುಹಾಕಬೇಕೆಂದು ನಾನು ಹೇಳುತ್ತಾ ಇಲ್ಲ. ಈ ಶಿಕ್ಷಣದ ಬಗ್ಗೆ ಮೂರು ಜನ ಸೂಪರ್ ವೈಸ್ ಮಾಡುತ್ತಾರೆ. ಒಬ್ಬ ಅಸಿಸ್ಟೆಂಟ್ ಪ್ರಾಜೆಕ್ಟ್ ಆಫೀಸರ್ ಮತ್ತು ಇಬ್ಬರು ಸೂಪರ್‌ವೈಸರ್ಸ್ ಕೆಲಸ ಮಾಡುತ್ತಾರೆ. ಇವರಿಗೆ ಪೂರ್ತಿ ಸಂಬಳ ಬರುತ್ತದೆ. ಇವರು ರಾತ್ರಿ ೮ ಗಂಟೆಗೆ ಆ ಕಡೆ ವಾಕಿಂಗ್ ಹೋಗಿ ಬರುತ್ತಾರೆ. ಇವರು ಸರಿಯಾಗಿ ಸೂಪರ್ ವೈಸ್ ಮಾಡುವುದಿಲ್ಲ. ಇವರು ಸರಿಯಾಗಿ ಸೂಪರ್‌ವೈಸ್ ಮಾಡುವ ವ್ಯವಸ್ಥೆಯಾಗುವುದರ ಜೊತೆ ೧೦ ತಿಂಗಳ ಅಭ್ಯಾಸ ಆದ ನಂತರ ಇವರಿಗೆ ಒಂದು ಎಕ್ಸಾಮಿನೇಷನ್ ಮಾಡುವ ವ್ಯವಸ್ಥೆಯಾಗ ಬೇಕು. ಇವರಿಗೆ ಈ ವಿದ್ಯಾಭ್ಯಾಸ ಆದಮೇಲೆ ಮುಂದೆ ಪುಸ್ತಕಗಳನ್ನು ಒದಗಿಸುತ್ತೀರಾ ? ಅಥವಾ ವಾರಪತ್ರಿಕೆಗಳನ್ನೇನಾದರೂ ಕೊಡುತ್ತೀರಾ ?

ಅಥವಾ ರೇಡಿಯೋ ಮೂಲಕ ಏನಾದರೂ ವಿದ್ಯಾಭ್ಯಾಸ ಕೊಡುತ್ತೀರಾ ? ಏಕೆಂದರೆ ೧೦ ತಿಂಗಳಲ್ಲಿ ನೀವು '' ರುದ್ರಪ್ಪ '' ಎಂದು ಬರೆಯಲು ಕಲಿಸಿದ್ದನ್ನು ಸಹ ಅತ ನಂತರ ೩ ತಿಂಗಳಲ್ಲಿ ಅದನ್ನು ಮರೆಯುತ್ತಾನೆ. ಇವತ್ತು ೧೦ ತಿಂಗಳ ವಿದ್ಯಾಭ್ಯಾಸ ಕೊಟ್ಟು ಇಷ್ಟು ಜನರನ್ನು ಅಕ್ಷರಸ್ತರನ್ನಾಗಿ ಮಾಡಿದ್ದೇವೆ ಎಂದು ಲೆಕ್ಕ ಕೊಡುತ್ತೀರಿ. ಇದು ಹೇಗೆ ಎಂದರೆ, ಯಾರಿಗೆ ೫ ಸಾವಿರ ರೂಗಳನ್ನು ಬ್ಯಾಂಕ್‌ನಿಂದ ಲೋನ್ ಕೊಡಿಸಿ ಅಂತಹವರನ್ನೆಲ್ಲಾ ಪಾವರ್ಟಿ ಲೈನ್‌ನಿಂದ ಮೇಲೆ ತಂದಿದ್ದೇವೆಂದು ಮಾನ್ಯ ಜನಾರ್ಧನ ಪೂಜಾರಿಯವರು ಹೇಳಿದ ಹಾಗೆ ಆಗುತ್ತದೆ. ಇವತ್ತು ೫ ಸಾವಿರ ರೂ. ಲೋನ್ ಕೊಡಿಸಿದ ಮೇಲೆ ಅದು ಅವನ ಮನೆ ತಲುಪಿದೆಯೇ ? ಅದರಿಂದ ಪ್ರಯೋಜನ ಆಗಿದೆಯೇ ಎಂದು ನೋಡಬೇಕು. ೫ ಸಾವಿರ ರೂ. ಪಡೆದದರೆಲ್ಲಾ ಶ್ರೀಮಂತರಾಗುವುದಿಲ್ಲ. ಹಾಗೆ ಈ ರೀತಿ ಅಕ್ಷರಾಭ್ಯಾಸ ಮಾಡಿದವರೆಲ್ಲಾ ವಿದ್ಯಾವಂತರಾಗುವುದಿಲ್ಲ. ಈ ವಿದ್ಯಾ ಸಮಸ್ಯೆ ಬಹಳ ದೊಡ್ಡದು ಇದೆ. ವಿದ್ಯಾಭ್ಯಾಸದ ಬಗ್ಗೆ ತಾವು ಎಷ್ಟು ಮಾಡಿದರೂ ಕಷ್ಟ ಇದೆ. ಇವತ್ತು ಬೇಸಿಕ್ಕಾಗಿ ಛೇಂಜ್ ಮಾಡಬೇಕಾದರೆ ಇದು ೧ ದಿವಸದಲ್ಲಿ ಆಗುವುದಿಲ್ಲ. ಇದಕ್ಕೆ ೨೫ ವರ್ಷಗಳು ಬೇಕಾಗುತ್ತದೆ. ಪ್ರೀ ಪ್ರೈಮರಿ ಹಂತದಿಂದ ನಾವು ಕೆಲಸ ಮಾಡಿದರೆ ಇನ್ನು ೨೫ ವರ್ಷಗಳಲ್ಲಾದರೂ ದೇಶದಲ್ಲಿ ಎಲ್ಲರೂ ವಿದ್ಯಾವಂತರು ಆಗುವುದಕ್ಕೆ ಅವಕಾಶ ಅಗುತ್ತದೆ. ಏಕೆಂದರೆ ಈ ಸಮಾಜವಾದಲ್ಲಿ, ಡೆಮಾಕ್ರಸಿಯಲ್ಲಿ ಎಲ್ಲವನ್ನೂ ಒಟ್ಟಿಗೇ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ನಾವು ಕೆಳಗಿನ ಹಂತದಿಂದ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಬೇಕೆಂದು ಈ ವಿದ್ಯಾ ಕ್ಷೇತ್ರದಲ್ಲಿ ಆಸ್ತೆ ಇರುವವರಿಗೆ ಹೇಳುತ್ತಿದ್ದೇನೆ. ಇದಕ್ಕೆ ಒಂದು ಪ್ಲಾನ್ ಆಗಬೇಕು. ಇವತ್ತು ಕೆಳಗಿನ ಮಟ್ಟದಲ್ಲಿ ಎನ್ಯುಮರೇಷನ್ ಆಗಬೇಕು. ಇವತ್ತು ವಯಸ್ಕರ ಶಿಕ್ಷಣದಲ್ಲಿ ಜನ ಹೋಗಿ ಹೆಬ್ಬೆಟ್ಟು ಒತ್ತುತ್ತಾರೆ. ಅಲ್ಲಿ ಯಾರು ಬಂದು ಎನ್‌ರೋಲ್ ಆಗುತ್ತಾರೋ ಅವರಿಗೆ ಅಟೆಂಡೆನ್ಸ್ ಬರೆಯುತ್ತಾರೆ. ಅವರು ಬರುತ್ತಾರೋ ಬಿಡುತ್ತಾರೋ ಅಟೆಂಡೆನ್ಸ್ ಕೊಡುತ್ತಾರೆ. ಇನ್ನು ಶಿಕ್ಷಣ ಪದ್ಧತಿಯಲ್ಲಿ ಡ್ರಾಫ್ ಓಟ್ಸ್ ಆಗುತ್ತದೆ. ನಾಲ್ಕು ಕಾರಣಗಳಿಂದ ಆಗುತ್ತವೆ. ಒಂದನೆಯದು ಸಾಮಾನ್ಯವಾಗಿ ಬಡವರಲ್ಲಿ ಡ್ರಾಫ್‌ಓಟ್ಸ್ ಆಗುತ್ತದೆ. ಅವರು ಹರಿಜನರು ಇರಬಹುದು, ಬ್ಯಾಕ್‌ವರ್ಡ್ ಕ್ಲಾಸ್‌ನವರು ಇರಬಹುದು. ಇವರಲ್ಲಿ ಏಕೆ ಆಗುತ್ತದೆ ಎಂದರೆ, ಮನೆಯಲ್ಲಿ ಇರುವ ಸಣ್ಣ ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ ಶಾಲೆಗೆ ಹೋಗುವುದನ್ನು ಬಿಡಿಸುತ್ತಾರೆ. ಈ ರೀತಿ ೨೫ ಪರ್ಸೆಂಟ್ ಡ್ರಾಪ್‌ಔಟ್ ಆಗುತ್ತದೆ. ಎರಡನೆಯದಾಗಿ, ದನಗಳನ್ನು ಕಾಯುವುದಕ್ಕಾಗಿ ಶಾಲೆಯನ್ನು ಬಿಡಿಸುತ್ತಾರೆ. ಮೂರನೆಯದಾಗಿ, ಆ ಊರಿನ ಶ್ರೀಮಂತರೇ ತಮ್ಮ ಕೆಲಸದ ಸಲುವಾಗಿ ಕೆಲವು ಮಕ್ಕಳನ್ನು ಶಾಲೆಯಿಂದ ಬಿಡಿಸಿ ತಂದೆ ತಾಯಿಗಳಿಗೆ ಸಾಲ ಕೊಟ್ಟು ಮಕ್ಕಳನ್ನು ಇಟ್ಟುಕೊಳ್ಳುತ್ತಾರೆ. ಇನ್ನು ನಾಲ್ಕನೆಯದಾಗಿ, ತಂದೆ ತಾಯಿಗಳಿಗೂ ಕೂಡಾ ವಿದ್ಯಾಭ್ಯಾಸ ಕೊಡಿಸುವುದರ ಬಗ್ಗೆ ಅಷ್ಟು ಆಸ್ತೆ ಇರುವುದಿಲ್ಲ. ನಮ್ಮಲ್ಲಿ ಬಡತನದಿಂದಾಗಿ ಹಾಗೂ ಈ ಎಲ್ಲಾ ಕಾರಣಗಳಿಂದಾಗಿ ಡ್ರಾಪ್‌ಔಟ್ಸ್ ಆಗುತ್ತದೆ. ನಮ್ಮ ಪರಿಶಿಷ್ಟ ಜಾತಿಯವರಲ್ಲಿ ಶೇಕಡಾ ೮೦ರಷ್ಟು ಡ್ರಾಪ್‌ಔಟ್ಸ್ ಆಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಏನು ಮಾಡಬೇಕು ?

ಅಧ್ಯಕ್ಷರು.—ತಾವು ೧೫ ನಿಮಿಷ ಮಾತನಾಡಿದ್ದೀರಿ. ಬೇಗ ಮುಗಿಸಿ.

ಡಾ|| ಬಿ.ಎಂ. ತಿಪ್ಪೇಸ್ವಾಮಿ.—ಈ ಡ್ರಾಪ್‌ಔಟ್ಸ್ ಕಡಿಮೆ ಮಾಡುವುದರ ಬಗ್ಗೆ ಮಾನ್ಯ ಮಿತ್ರರೇ ಹೇಳಬೇಕು. ಮಾನ್ಯ ಹನುಮೇಗೌಡರ ಪ್ರೋಗ್ರಾಮ್ ಪ್ರಕಾರ ಟ್ರಾನ್ಸಿಸ್ಟರ್ಸ್ ಕೊಟ್ಟರೆ, ಬೃಂದಾವನವನ್ನು ತೋರಿಸಿದರೆ, ಉಪ್ಪಿಟ್ಟುಕೊಟ್ಟರೆ ಏನೂ ಪ್ರಯೋಜನ ಅಗುವುದಿಲ್ಲ. ಇವತ್ತು ನೀವು ಆಂಧ್ರದಲ್ಲಿ, ಕೇರಳದಲ್ಲಿ, ವೆಸ್ಟ್‌ಬೆಂಗಾಲ್‌ನಲ್ಲಿ ಇದು ಆಗಿದೆ ಎಂದು ಹೇಳಬಹುದು. ಆದರೆ ಇವತ್ತು ಅವರು ತಿಂಡಿ ತಿಂದು ನಂತರ ಮನೆಗೆ ಹೋಗುತ್ತಾರೆ. ವಿದ್ಯಾಭ್ಯಾಸ ಮಾಡುವುದಿಲ್ಲ. Therefore, residential schools, at least ln every hobli headquarters should be started. The Children should be separated from their parents. Unless and until this is done, you cannot prevent drop out. The other point is, legally you should take action aganist the parents. ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರು ಹೇಳಿದಹಾಗೆ ತಂದೆತಾಯಿಗಳಿಗೆ ೧೦–೨೦ ರೂಪಾಯಿಕೊಟ್ಟರೆ ಪ್ರಯೋಜನವಾಗುವುದಿಲ್ಲ. ಇವತ್ತು ಇಂಗ್ಲೆಂಡಿನಲ್ಲಿ ಒಬ್ಬ ವಿದ್ಯಾರ್ಥಿ ೩ ದಿವಸ ಶಾಲೆಗೆ ಹೋಗದಿದ್ದರೆ ಪೋಲೀಸಿನವರು ಮನೆಗೆ ಹುಡುಕಿಕೊಂಡು ಬರುತ್ತಾರೆ. ಒಬ್ಬ ಅಂಬಾಸಿಡರ್ ೧೧ ವರ್ಷದ ಹುಡುಗನನ್ನು ಶಾಲೆಗೆ ಹೋಗುವುದನ್ನು ತಪ್ಪಿಸಿ ಕೆಲಸಕ್ಕೆ ತೆಗೆದುಕೊಂಡಿದ್ದಕ್ಕೆ ಆತನನ್ನು ಬಿಡಿಸಿ ನಂತರ ಶಾಲೆಗೆ ಹೋಗುವುದಕ್ಕೆ ಅನುವು ಮಾಡಿಕೊಟ್ಟರು. ಇವತ್ತು ಈ ಬಗ್ಗೆ ಒಂದು ಪದ್ಧತಿಯನ್ನು ತರದೇ ಬರೀ ಸಿನಿಮಾ, ರೇಡಿಯೋ ತೋರಿಸುವುದರಿಂದ

ಏನೂ ಪ್ರಯೋಜನವಾಗುವುದಿಲ್ಲ. ಬರೀ ಊಟ ಕೊಟ್ಟರೆ ಆಗುವುದಿಲ್ಲ. ಇವತ್ತು ಈ ಬಗ್ಗೆ ಸೀರಿಯಸ್ಸಾಗಿ ಯೋಚನೆ ಮಾಡಿ ಎಲ್ಲಾ ರಿಸೋರ್ಸ್‌ನಿಂದ ಹಣವನ್ನು ಕ್ರೋಢೀಕರಿಸಿ ಪ್ರೈಮರಿ ಹಾಗೂ ಪ್ರಿಪ್ರೈಮರಿ ಹಂತದಿಂದ ಒಳ್ಳೆಯ ವಿದ್ಯಾಭ್ಯಾಸಕೊಟ್ಟರೆ ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಯಾರು ಸಮಾಜದಲ್ಲಿ ಬಹಿಷ್ಕಾರಕ್ಕೆ ಒಳಪಟ್ಟಿದ್ದಾರೆ ಅಂತಹವರು ಮುಂದೆ ಬರುವುದಕ್ಕೆ ಅವಕಾಶ ವಾಗುತ್ತದೆಯೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಸಭಾಧ್ಯಕ್ಷರೆ, ತಾವು ನನಗೆ ನೀಡಿರತಕ್ಕ ಪ್ರಥಮ ಕಂತಾದ ೧೦ ನಿಮಿಷಗಳಲ್ಲೇ ನನ್ನ ಭಾಷಣವನ್ನು ಮುಗಿಸಲು ಪ್ರಯತ್ನಿಸುತ್ತೇನೆ. ರಾಜ್ಯದ ಬಜೆಟ್‌ನಲ್ಲಿ ಸಿಂಹ ಪಾಲನ್ನು ಪಡೆಯುವ ಭಾವೀ ಜನಾಂಗದ ಆಶಾದಾಯಕವಾದ ಪ್ರಗತಿಗೆ ಪೂರಕವಾಗಿರುವ, ಬಹು ವ್ಯಾಪಕವಾಗಿರತಕ್ಕ ಬಹುರೂಪೀ ಶಿಕ್ಷಣ ಕ್ಷೇತ್ರದ ಬೇಡಿಕೆಯ ಪ್ರಸ್ತಾಪ ವನ್ನು ನಾನು ವಿರೋಧಿಸುತ್ತಿದ್ದೇನೆ.

ಮೊದಲನೆಯದಾಗಿ ಹೇಳುವುದಾದರೆ, ಈಗಾಗಲೇ ನನ್ನ ಕೆಲವು ಮಿತ್ರ ಸದಸ್ಯರು ಹೇಳಿದಂತೆ ಗ್ರಾಮೀಣ ಪ್ರದೇಶದ ಮಕ್ಕಳು ಬಹಳಷ್ಟು ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾಭ್ಯಾಸಕ್ಕೂ ಮತ್ತು ನಗರ ಪ್ರದೇಶದ ವಿದ್ಯಾಭ್ಯಾಸಕ್ಕೂ ಸಾಕಷ್ಟು ರೀತಿಯಲ್ಲಿ ತಾರತಮ್ಯ ಇದೆ. ಈ ಒಂದು ತಾರತಮ್ಯವನ್ನು ಹೋಗಲಾಡಿಸುವುದು ಅತ್ಯಂತ ಅವಶ್ಯ ಇದೆ. ಇವತ್ತು ಬಹಳ ಮುಖ್ಯವಾದ ಒಂದು ತೊಂದರೆಯನ್ನು ನಾವು ಏನು ನೋಡುತ್ತಿದ್ದೇವೆ ಎಂದರೆ ನೇಮಕಾತಿ ವಿಷಯದಲ್ಲಿ. ವಿದ್ಯಾ ಇಲಾಖೆಯಲ್ಲಿ ಮುಂದಿನ ವರ್ಷದ ಯೋಜನೆಯನ್ನು ನಾವು ತೆಗೆದುಕೊಳ್ಳುವುದಾದರೆ ಹೊಸ ಪ್ರಾಥಮಿಕ ಶಾಲೆಗಳಿಗೆ ೫೦೦೦ ಜನ ಹೆಚ್ಚಿನ ಅಧ್ಯಾಪಕರನ್ನು ಹೊಸ ದಾಗಿ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಯಾವಾಗ ಅಧ್ಯಾಪಕರುಗಳ ಅವಶ್ಯಕತೆ ಬೀಳುತ್ತದೆಯೋ ಆಗ ತಕ್ಷಣವೇ ಅವರನ್ನು ನೇಮಕ ಮಾಡಬೇಕು. ಆದರೆ ಇವತ್ತಿನ ವ್ಯವಸ್ಥೆ ಹೇಗಿದೆ ಎಂದರೆ ಖಾಲಿ ಬಿದ್ದ ಹುದ್ದೆಗಳನ್ನು ಒಂದೆರಡು ವರ್ಷವಾದರೂ ಭರ್ತಿ ಮಾಡುವುದಿಲ್ಲ. ಗುತ್ತಿಗೆ ಆಧಾರದ ಮೇಲೆ, ಇಲ್ಲವೇ ಸ್ಥಳೀಯ ಅಭ್ಯರ್ಥಿಗಳನ್ನು ೧೦೦ ರೂಪಾಯಿಗಳ ಸಂಬಳದ ಮೇಲೆ, ಇಲ್ಲವೇ ನಿವೃತ್ತರಾದವರನ್ನು ಪುನರ್ ನೇಮಕ ಮಾಡಿಕೊಳ್ಳತಕ್ಕ ಭ್ರಷ್ಟ ವ್ಯವಸ್ಥೆ ನಡೆಯುತ್ತಿದೆ. ಹೀಗೆ ಮಾಡುವುದರಿಂದ ಶಾಲಾ ಮಕ್ಕಳಿಗೆ ವಿದ್ಯಾಭ್ಯಾಸ ಇಲ್ಲದೇ ಹಾಳಾಗುತ್ತಿವೆ. ಇಂಥ ಭ್ರಷ್ಟ ಪದ್ಧತಿ ಹೋಗಬೇಕಾದರೆ ಖಾಲೀ ಬೀಳತಕ್ಕ ಹುದ್ದೆಗಳಿಗೆ ತಕ್ಷಣವೇ ನೇಮಕಾತಿ ಮಾಡಬೇಕು. ನೇಮಕಾತಿ ಆಗುವಾಗಲೂ ಕೂಡ ೨೧ ವರ್ಷ ವಯಸ್ಸಿನ ಮೇಲಿರತಕ್ಕ ವರು ಪ್ರಾಥಮಿಕ ಶಿಕ್ಷಣದ ಉಪಾಧ್ಯಾಯರಾಗಿ ನೇಮಕವಾಗುತ್ತಾರೆ. ಆದರೆ ಈಗ ಇದರಲ್ಲೂ ವ್ಯತ್ಯಾಸವಾಗಿದೆ. ಹೇಗೆಂದರೆ, ಕೆಲವರು ೨೧ ವರ್ಷ ವಯಸ್ಸಿನ ಒಳಗಿರುವವರು ನೇಮಕವಾಗಿ ದ್ದಾರೆ. ಕೇಳಿದರೆ ಮೆರಿಟ್‌ಮೇಲೆ ನೇಮಕಾತಿ ಆಗಿದೆ ಎಂದು ಕೇಳಿಬರುತ್ತದೆ. ಇದನ್ನು ನೋಡಿದರೆ ಇಲ್ಲಿ ತಾರತಮ್ಯ ಇದೆಯೋ, ಇಲ್ಲವೇ ಎಂಬುದು ಗೊತ್ತಾಗುತ್ತದೆ. ಶಿಕ್ಷಕ ವೃತ್ತಿಯಲ್ಲಿ ಆಸಕ್ತಿ ಇಲ್ಲದಿರುವವರನ್ನು, ವಿದ್ಯೆ ಹೇಳಿಕೊಡುವುದರಲ್ಲಿ ಅಭಿರುಚಿ ಇಲ್ಲದಿರುವವರನ್ನು ನೇಮಕ ಮಾಡಿ ಕೊಳ್ಳುವುದು ಸರಿಯಲ್ಲ. ಅದಕ್ಕೆ ಬದಲು ಶಿಕ್ಷಕ ವೃತ್ತಿಯಲ್ಲಿ ಆಸಕ್ತಿ ಇರುವವರನ್ನು ನೇಮಕ ಮಾಡಿಕೊಳ್ಳುವುದು ಒಳ್ಳೆಯದು.

ಇನ್ನು ಶಾಲಾ ಕಟ್ಟಡಗಳ ಬಗ್ಗೆ ಹೇಳುವುದಾದರೆ, ಪ್ರಾಥಮಿಕ ಶಾಲೆಗಳಿಗೆ ಕಟ್ಟಡ ಕಟ್ಟಲು ಎನ್.ಆರ್.ಇ.ಪಿ. ಯಲ್ಲಿ ಹಣ ಸಿಕ್ಕುತ್ತದೆ. ಆದರೆ ಜೂನಿಯರ್ ಕಾಲೇಜುಗಳಿಗೆ ಮತ್ತು ಪದವಿ ಕಾಲೇಜುಗಳಿಗೆ ಈ ಸೌಲಭ್ಯ ಇಲ್ಲ. ಈಗ್ಗೆ ೨ ವರ್ಷಗಳ ಹಿಂದೆ ಬೈಂದೂರಿನಲ್ಲಿ ಸರ್ಕಾರದ ವತಿಯಿಂದ ಜೂನಿಯರ್ ಕಾಲೇಜೊಂದನ್ನು ಪ್ರಾರಂಭ ಮಾಡಿದಿರಿ. ಆದರೆ ಅದಕ್ಕೆ ಸ್ವಂತ ಕಟ್ಟಡ ಇಲ್ಲ. ಅದಕ್ಕೆ ಸ್ವಂತ ಕಟ್ಟಡವನ್ನು ಒದಗಿಸಲು ಏನು ಕ್ರಮ ತೆಗೆದುಕೊಂಡಿರಿ ಎಂದು ನಾನು ಕಳೆದಸಾರಿ ಕೇಳಿದಾಗ, ಅದಕ್ಕೆ ಜಾಗ ಸಿಕ್ಕಿಲ್ಲ. ಜಾಗ ಸಿಕ್ಕಿದ ಕೂಡಲೇ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದಿರಿ, ನಂತರ ಆ ಕಾಲೇಜಿಗೆ ಒದಗಿಸಿಕೊಟ್ಟ ಜಾಗ ಏನಿದೆ ಅದು ಇವತ್ತು ಆ ಕಾಲೇಜಿನ ಪ್ರಿನ್ಸಿಪಾಲರ ಹೆಸರಿನಲ್ಲಿದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಹೇಳಿದೆವು. ಆದರೂ ಒಂದೇ ಒಂದು ಚೂರೂ ಕೂಡ ಪ್ರಯೋಜನವಾಗಲಿಲ್ಲ. ಇಂಥಾದ್ದು ಆಗಬಾರದೆಂದು ನಾನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೆ, ವಿವರಿಸಬೇಕಾದ ವಿಷಯಗಳು ಇನ್ನೂ ಅನೇಕವಿವೆ. ಆದರೆ ಇಷ್ಟೊಂದು ಸಮಯ ಇಲ್ಲದಿರುವುದರಿಂದ ಸಾಧ್ಯವಾದಷ್ಟು ವಿಷಯಗಳನ್ನು ತೀವ್ರವಾಗಿ ಹೇಳಬಯಸುತ್ತೇನೆ.

ಇನ್ನೊಂದು ವಿಚಾರ ಎಂದರೆ ವಿದ್ಯಾರ್ಥಿಗಳಿಗೆ ಕೊಡತಕ್ಕ ವಿದ್ಯಾರ್ಥಿ ವೇತನ ಏನಿದೆ ಇದನ್ನು ಪಾವತಿ ಮಾಡುವುದರಲ್ಲಿ ವಿಳಂಬ ಆಗಬಾರದು. ಹರಿಜನ ಗಿರಿಜನರಿಗೆ, ಅಂಗವಿಕಲರಿಗೆ ಸರ್ಕಾರದಿಂದ ವಿದ್ಯಾರ್ಥಿ ವೇತನವನ್ನು ಕೊಡುತ್ತಿದ್ದೀರಿ. ಕೆಲವರು ಇದನ್ನು ವರ್ಷದ ಅಂತ್ಯದಲ್ಲಿ ಕೊಡುತ್ತಿದ್ದಾರೆ ಇನ್ನು ಕೆಲವು ಶಾಲೆಗಳಲ್ಲಿ ಕೊಡತಕ್ಕ ಹಣದಲ್ಲಿ ಸ್ವಲ್ಪ ಭಾಗವನ್ನು ಕಡಿತ ಮಾಡಿಕೊಂಡು ಕೊಡುತ್ತಿದ್ದಾರೆ. ಇದು ಆಗಬಾರದು. ನೀವು ವಿದ್ಯಾರ್ಥಿಗಳಿಗೆ ಕೊಡತಕ್ಕ ಹಣ ಅವರಿಗೆ ಮುಟ್ಟಬೇಕಾದರೆ ಇನ್ನು ಮುಂದೆ ಚೆಕ್ ಮೂಲಕ ವಿದಾರ್ಥಿ ವೇತನವನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕು. ಹಿಂದೆ ಶಾಲೆಗಳಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಎಂದು ಇತ್ತು. ಅದಕ್ಕೆ ಆಗ ಹೆಚ್ಚಿನ ಗಮನ ಕೊಡುತ್ತಿದ್ದರು. ಆದರೆ ಈಗ ಅದು ಕಡಿಮೆಯಾಗುತ್ತಾ ಬಂದಿದೆ. ಶಿಕ್ಷಕರಿಗೆ ಸಂಭಾವನೆ ಕೂಡ ಸರಿಯಾಗಿ ಕೊಡುತ್ತಿಲ್ಲ. ಚಿಕ್ಕ ಮಕ್ಕಳಲ್ಲಿ ಶಿಸ್ತು, ಸಹಜೀವನ, ಸುಪ್ತ ಪ್ರತಿಭೆ ಬೆಳೆಯುವಂತೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಪಿ.ಯು.ಸಿ. ಪರೀಕ್ಷೆ ಫಲಿತಾಂಶದ ಪ್ರಕಟಣೆಯ ಗೊಂದಲ ಎಲ್ಲರಿಗೂ ತಿಳಿದಿದೆ. ನನ್ನ ಮತ ಕ್ಷೇತ್ರದ ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀಮಾನ್ ಎ.ಜಿ. ಕೊಡಗಿಯವರ ಮಗನ ವಿಚಾರಕ್ಕೆ ಸಂಬಂಧಪಟ್ಟಂತೆ ಸುಮಾರು ೧೫–೨೦ ಸಾರಿ ಸುತ್ತಿದರೂ ಆ ಕೆಲಸ ಆಗಲಿಲ್ಲ. ಕೊನೆಗೆ ನಾನೇ ಹೋಗಿ ಆ ಕೆಲಸವನ್ನು ಮಾಡಿಸಿಕೊಂಡು ಬರಬೇಕಾಯಿತು. ಅಂದರೆ ಒಂದು ಸಣ್ಣ ಕೆಲಸಕ್ಕೂ ಕೂಡ ಒಬ್ಬ ಶಾಸಕ ಹೋಗಬೇಕಾಯಿತು ಎಂದರೆ ಇನ್ನು ಸಾಮಾನ್ಯ ವಿದ್ಯಾರ್ಥಿಯ ಗತಿ ಏನು ? ಇಂಥಾದ್ದು ಆಗಬಾರದು. ಮಾನ್ಯ ಅಧ್ಯಕ್ಷರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಮಾನ್ಯ ವಿದ್ಯಾ ಸಚಿವರು ಆದಷ್ಟು ಬೇಗ ಅಂದರೆ ೮ ದಿವಸದಲ್ಲೇ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಬೇಕೆಂಬ ಆತುರದಿಂದ ಮಾಡುವುದಕ್ಕೆ ಹೋಗಿ ಈ ರೀತಿಯ ಗೊಂದಲಗಳಿಗೆ ಅವಕಾಶ ಮಾಡಿ ಕೊಡುತ್ತಾರೆ. ಆದ್ದರಿಂದ ಇಂಥಾದ್ದು ಆಗಬಾರದೆಂದು ಹೇಳಬಯಸುತ್ತೇನೆ. ನಾವು ಯಾವುದಾದರೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದರೆ ಸಚಿವರು ಏನು ಹೇಳುತ್ತಾರೆಂದರೆ, ಎಲ್ಲಾದರೂ, ಏನಾದರೂ ನಿರ್ದಿಷ್ಟವಾದ ಅನ್ಯಾಯವಾಗಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುತ್ತಾರೆ ಹಿಂದೆ ತಮಗೆಲ್ಲಾ ಗೊತ್ತಿರುವಂತೆ ಪ್ರೌಢ ಶಿಕ್ಷಣ ಪರೀಕ್ಷೆಗೆ ಸಂಬಂಧಪಟ್ಟಂತೆ ಪ್ರಶ್ನೆಪತ್ರಿಕೆ ಬಯಲಾಯಿತು ಎಂದು ಆ ಮಂಡಲಿಯ ನಿರ್ದೇಶಕರನ್ನೇ ಅಮಾನತ್ತು ಮಾಡಿದರು. ಎಲ್ಲೋ ಆದ ತಪ್ಪಿಗೆ ಅವರಿಗೆ ಹೊಣೆಗಾರರನ್ನಾಗಿ ಮಾಡಿದರು, ಇದು ಸರಿಯೇ ? ಎಲ್ಲೋ ಒಂದು ಕಡೆ ಅವ್ಯವಹಾರ ನಡೆಯಿತೆಂದು ನಿರ್ದೇಶಕರ ಅಮಾನತ್ತುಗೊಳಿಸಿ ಇತರೆ ಅಧಿಕಾರಿಗಳನ್ನೂ ಭಯಭೀತರನ್ನಾಗಿ ಮಾಡಿ ಅವರಿಂದ ಕೆಲಸ ಮಾಡಿಸುವುದು ಖಂಡಿತ ಸಲ್ಲದ್ದು ಇದರಲ್ಲಿ ಆಗಿರತಕ್ಕ ಮತ್ತು ಆಗತಕ್ಕ ಅನ್ಯಾಯಗಳನ್ನು ಸರಿಪಡಿಸಬೇಕು. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕಾಪಿ ಹೊಡೆಯುವುದು ತಪ್ಪಬೇಕು. ಎಲ್ಲೆಲ್ಲಿ ತಪ್ಪುಗಳಾಗುತ್ತವೆ ಅದರ ಬಗ್ಗೆ ಸರ್ಕಾರ ಕೂಲಂಕಷವಾಗಿ ತನಿಖೆ ನಡೆಸಬೇಕು. ಅದು ಬಿಟ್ಟು ತಪ್ಪು ಮಾಡದಿರುವವರ ಮೇಲೆ ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮೊನ್ನೆ ಬ್ರಹ್ಮಾವರ ಕ್ಷೇತ್ರದಲ್ಲಿ ಒಂದು ಶಾಲೆಯಲ್ಲಿ ಏನೋ ಕಾರಣಕ್ಕಾಗಿ ೩ ಜನ ಉಪಾಧ್ಯಾಯರನ್ನು ಸಸ್ಪೆಂಡ್ ಮಾಡಲಾಯಿತು. ಈ ವಿಚಾರ ಪತ್ರಿಕೆಯಲ್ಲೂ ಪ್ರಕಟವಾಯಿತು. ಅನಂತರ ನಿನ್ನೆಯ ದಿವಸ ಇನ್ನೊಂದು ವರದಿ ಏನು ಬಂತು ಎಂದರೆ ಉಳಿದಿದ್ದ ೩ ಜನ ಉಪಾಧ್ಯಾಯರೂ ಶಾಲೆಗೆ ಹೋಗುತ್ತಿಲ್ಲ ಎಂದು. ಈ ರೀತಿ ಆದರೆ ಶಾಲೆಗಳಲ್ಲಿ ಪಾಠ ಯಾವರೀತಿ ಆಗಬಹುದು ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಉದಯವಾಣಿ ಪತ್ರಿಕೆಯಲ್ಲಿ ಒಂದು ವಿಷಯ ಪ್ರಕಟವಾಗಿದೆ. ಮಂಗಳೂರಿನ ಶಾಲೆಯೊಂದರಲ್ಲಿ ಓದತಕ್ಕ ಒಬ್ಬ ವಿದ್ಯಾರ್ಥಿಯ ಸ್ಪಷ್ಟ ಹೆಸರು ಪ್ರಸನ್ನ ಕುಮಾರ್ ಶೆಣೈ ಎಂದು. ಆ ಹುಡುಗನ ತಂದೆಯ ಹೆಸರು ವಿಶ್ವನಾಥ ಶೆಣೈ. ಆದರೆ ಇವರ ಹೆಸರನ್ನು ಬರೆಯುವಾಗ ಸರ್ಟಿಫಿಕೇಟ್‌ನಲ್ಲಿ ವಿಶ್ವನಾಥ ಷಣಾಯಿ ಎಂದು ಬರೆದಿದ್ದಾರೆ. ಈಗ ಆ ವಿದ್ಯಾರ್ಥಿ ತನ್ನ ಓದನ್ನು ಮುಗಿಸಿ ಮುಂದೆ ಉದ್ಯೋಗಕ್ಕೆ ಹೋಗುವಾಗ ಅವನಿಗೆ ಕೊಟ್ಟಿರತಕ್ಕ ಸರ್ಟಿಫಿಕೇಟಿಗೂ, ಅವನ ಹೆಸರಿಗೂ ಸರಿಹೊಂದದೆ, ತೊಂದರೆಯಾಗುತ್ತದೆ ಆ ಹುಡುಗನ ಭವಿಷ್ಯ ಏನಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಈ ಷಣಾಯಿ ಎಂಬುದು ಯಾವ ಜಾತಿ ? ಇದನ್ನು ಸರಿಪಡಿಸಿಕೊಳ್ಳಬೇಕಾದರೆ ಆ ವಿದ್ಯಾರ್ಥಿ ಬೆಂಗಳೂರಿಗೇ ಬರಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೆ, ಈ ಸರ್ಟಿಫಿಕೇಟ್‌ನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ವಿದ್ಯಾರ್ಥಿಗಳಿಗೆ ತೊಂದರೆಯಾಗತಕ್ಕ ವಿಚಾರಗಳು ಖಂಡಿತವಾಗಿಯೂ ಇನ್ನು ಮುಂದೆ ಆಗಬಾರದೆಂಬುದೇ ನನ್ನ ಹಂಬಲ.

ಇನ್ನು ಗ್ರಂಥಾಲಯ ಯೋಜನೆಯ ಬಗ್ಗೆ ಹೇಳುವುದಾದರೆ, ಇದು ನಮ್ಮಲ್ಲಿಯೂ ಇದೆ. ಮದ್ರಾಸ್ ಸ್ಟೇಟ್‌ನಲ್ಲಿ ಈ ಗ್ರಂಥಾಲಯ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಹಿಂದೆ ನಮ್ಮಲ್ಲಿ ಏನು ಯೋಜನೆ ಇತ್ತು ಎಂದರೆ, ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ಒಂದೊಂದು ಗ್ರಂಥಾಲಯವನ್ನು ಇಡುವ ಸಲುವಾಗಿ ಸರ್ಕಾರದವರು ಹಣವನ್ನು ಕೊಡುತ್ತಿದ್ದರು ಅಲ್ಲಿಗೆ ಬೇಕಾದ ಹೊಸ ಹೊಸ ಪುಸ್ತಕಗಳನ್ನು ಕೊಂಡುಕೊಳ್ಳತಕ್ಕ ವ್ಯವಸ್ಥೆ ಇತ್ತು. ಇವತ್ತು ಜಿಲ್ಲಾ ಮಟ್ಟದಿಂದ ತಾಲ್ಲೂಕು ಮಟ್ಟಕ್ಕೆ ನಂತರ ಹೋಬಳಿ ಮಟ್ಟಕ್ಕೆ ಬಂದು ಕೊನೆಗೆ ಗ್ರಾಮ ಮಟ್ಟಕ್ಕೆ ಬರುತ್ತಿದೆ. ಇಂಥ ಪುಸ್ತಕಗಳನ್ನು ಓದತಕ್ಕ ವ್ಯವಸ್ಥೆ ನಮ್ಮ ಮಕ್ಕಳಿಗೆ ಒದಗಿದೆ. ಇಂಥ ಒಂದು ಯೋಜನೆ ಸಮರ್ಪಕವಾದ ಯೋಜನೆಯಾಗಿರುತ್ತದೆ. ಈ ಯೋಜನೆಯಂತೆ ಮಂಡಲ್ ಪಂಚಾಯತ್‌ಗಳಿಗೆ ಅನುದಾನವನ್ನು ಕೊಡುವಾಗ ವ್ಯವಸ್ಥಿತವಾಗಿ ಅನುದಾನವನ್ನು ಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು ರಾಷ್ಟ್ರ ಪ್ರಶಸ್ತಿಯನ್ನು ಪಡೆದಂಥ ಶಿಕ್ಷಕರಿಗೆ ಗೌರವಧನವನ್ನು ಕೊಡಲಾಗುವುದೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ರಾಷ್ಟ್ರಪ್ರಶಸ್ತಿಯನ್ನು ಪಡೆದಂಥ ಶಿಕ್ಷಕರು ತಮಗೆ ಗೌರವಧನವನ್ನು ಕೊಡಿ ಎಂದು ಕೇಳಲಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರೇ ತಮ್ಮ ಭಾಷಣವನ್ನು ದಯವಿಟ್ಟು ಬೇಗನೆ ಮುಗಿಸಿ. ಈಗಾಗಲೇ ತಮಗೆ ಕೊಟ್ಟಿರತಕ್ಕಂಥ ಅವಧಿಯು ಮುಗಿದಿರುತ್ತದೆ.

ಶ್ರೀ ಬಿ.ಎಸ್. ಆಚಾರ್.—ಕೊನೆಯದಾಗಿ ಕ್ಯಾಪಿಟೇಷನ್ ವಿಷಯದ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮಲ್ಲಿ ಈ ಕ್ಯಾಪಿಟೇಷನ್ ಫೀ ವಿಷಯದ ಬಗ್ಗೆ ಬಹಳಷ್ಟು ಮಾತುಗಳು ಬಂದಿರುತ್ತದೆ. ಮೆಡಿಕಲ್ ಕಾಲೇಜು, ಇಂಜಿನೀಯರಿಂಗ್ ಕಾಲೇಜುಗಳು ಇವು ಇಂದು ಒಂದು ವ್ಯಾಪಾರಿ ಸಂಸ್ಥೆಗಳಾಗಿ ಮಾರ್ಪಾಡಾಗಿರುತ್ತವೆ. ಇದನ್ನು ನೋಡಿದರೆ ಬಹಳ ನಾಚಿಕೆಯಾಗುತ್ತದೆ. ಇದರಲ್ಲಿ ಸೀಟು ಸಿಗುವುದಾದರೂ ಯಾರಿಗೆ ಎಂದರೆ ಇರಾನ್ ಮಲೇಶಿಯಾದಿಂದ ಬಂದಿರತಕ್ಕಂಥ ಜನರಿಗೆ ಸೀಟು ಸಿಗುತ್ತದೆ. ಗಾಲ್ಫ್ ಕಂಟ್ರಿಗಳಿಂದ ಬರತಕ್ಕಂಥ ಮಕ್ಕಳಿಗೆ, ಕಾಳಸಂತೆಕೋರರ ಮಕ್ಕಳಿಗೆ, ಸೀಟು ದೊರೆಯುತ್ತಿದೆ. ಮತ್ತೆ ಯಾರು ಶ್ರೀಮಂತರು ಡಿಪಾಸಿಟ್ ಒಂದು ಲಕ್ಷ, ಎರಡು ಲಕ್ಷ ರೂಪಾಯಿಗಳನ್ನು ಇಡುತ್ತಾರೋ ಅಂಥವರ ಮಕ್ಕಳಿಗೆ ಇಂದು ಸೀಟು ದೊರೆಯುತ್ತಿದೆ. ಮೆಡಿಕಲ್ ಕಾಲೇಜ್ ಆಗಲಿ, ಇಂಜಿನಿಯರಿಂಗ್ ಕಾಲೇಜ್ ಆಗಲಿ, ಡಿ ಫಾರ್ಮ ಬಿ ಫಾರ್ಮ ಸಿ.ಪಿ.ಎಡ್, ಇಂಗ್ಲೀಷ್ ಮೀಡಿಯಮ್ ಶಾಲೆಗಳಿಗೆ ಅಡ್ಮಿಷನ್ ಬೇಕೆಂದರೆ ಕ್ಯಾಪಿಟೇಷನ್ ಫೀಸ್ ಕೊಡಬೇಕಾಗಿರುತ್ತದೆ. ಇನ್ನು ಮುಂದೆ ಪ್ರೈಮರಿ ಶಾಲೆಗಳಿಗೂ ಕ್ಯಾಪಿಟೇಸನ್ ಫೀಸ್ ಬರತಕ್ಕಂಥದ್ದು ಇದೆ. ಕ್ಯಾಪಿಟೇಷನ್ ಫೀಸ್‌ನ್ನು ರದ್ದು ಮಾಡುತ್ತೇವೆಂದು ಬರಿ ಬಾಯಲ್ಲಿ ಹೇಳುತ್ತಿಲ್ಲ. ನಿಮ್ಮ ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಅದಕೋಸ್ಕರವಾಗಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ, ಯಾರನ್ನು ಸಸ್‌ಪೆಂಡ್ ಮಾಡಿದರೂ ಆ ಪಾಪ ತಮ್ಮ ತಲೆ ಮೆಟ್ಟಿ ನಿಲ್ಲುತ್ತದೆ, ನಮ್ಮ ರಾಜ್ಯದ ಚಿಂತನೆಯನ್ನು ತಾವು ಸರಿಯಾಗಿ ಮಾಡದೇ ಇದ್ದ ಪಕ್ಷದಲ್ಲಿ ಹರೇ ರಾಮ ಎಂದು ಹೇಳುವ ಬದಲಾಗಿ ರಘುಪತಿ ರಾಘವ ರಾಜಾರಾಮ್ ಎಂದು ಹೇಳುವಂಥ ಕಾಲ ಬರಬಹುದು ಆದ್ದರಿಂದ ಆಳುವ ಪಕ್ಷಕ್ಕೆ. ಆಳುವ ಸರ್ಕಾರಕ್ಕೆ ಸನ್ಮತಿ ದೇ ಭಗವಾನ್ ಎಂದು ಭಗವಂತನಲ್ಲಿ ಪ್ರಾರ್ಥಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ).—ಸನ್ಮಾನ್ಯ ಅಧ್ಯಕ್ಷರೇ ನಾವು ಇಲ್ಲಿ ಸಾಕಷ್ಟು ಜನ ಸದಸ್ಯರು ಯಾರು ಇದ್ದೇವೆಂದರೆ ಸಾಮಾನ್ಯವಾಗಿ ಮಧ್ಯಮವರ್ಗದ ಕುಟುಂಬದಿಂದ ಬಂದಿರತಕ್ಕಂಥವರೇ ಇಲ್ಲಿರುತ್ತೇವೆ. ಕೋಟಿಗಟ್ಟಲೇ ದುಡ್ಡನ್ನು ಸಭೆಯ ಮುಂದಿಟ್ಟು ಮಂಜೂರು ಮಾಡಿಕೊಡಿ ಎಂದು ಬೇಡಿಕೆಯನ್ನು ಇಟ್ಟಾಗ ಸ್ವಲ್ಪ ಭಯವೇ ಆಗುತ್ತದೆ. ಏನಪ್ಪ ನಾವು ಇಷ್ಟೊಂದು ಹಣವನ್ನು ಕೇಳುತ್ತಿದ್ದೇವಲ್ಲ, ಇದನ್ನು ಮಂಜೂರಾತಿ ಕೊಡುವುದಕ್ಕೆ ನಮಗೆ ಶಕ್ತಿ ಇದೆಯೇ, ಇಷ್ಟೊಂದು ಹಣವನ್ನು ಕೊಡಲು ಎಲ್ಲಿ ಇದೆ ಎಂದು ಹೇಳಬಹುದು. ತಮಗೆ ಗೊತ್ತಿದೆ, ಜನ ತಮಗೆ ಆ ಒಂದು ಶಕ್ತಿಯನ್ನು ಕೊಟ್ಟಿದ್ದಾರೆ. ಅವರಿಗೆ ವಿವೇಚನೆಯಿಂದ ಖರ್ಚು ಮಾಡಲು ಮಂಜೂರಾತಿ

ಯನ್ನು ಕೊಡಬೇಕು. ಮಂತ್ರಿಮಂಡಲದಲ್ಲಿ ನಾನು ಹೇಳತಕ್ಕಂಥದ್ದು ಇಷ್ಟೇ, ಜನತೆ ತಮ್ಮ ವಿವೇಚನಾಶಕ್ತಿಯಿಂದ ನಮಗೆ ಹೊಸದಾಗಿ ಅಧಿಕಾರವನ್ನು ಕೊಟ್ಟಿರುತ್ತಾರೆ. ನಾವು ಅವರನ್ನು ವಿವೇಚನೆಯಿಂದ ನೋಡಿಕೊಳ್ಳತಕ್ಕಂಥದ್ದು ನಮ್ಮ ಕರ್ತವ್ಯವಾಗಿರುತ್ತದೆ. ಜನರ ಹೆಸರಿನಲ್ಲಿ ಹಣ ವನ್ನು ಮಂಜೂರಾತಿ ಮಾಡಿಕೊಳ್ಳುವಾಗ ಅವರಿಗೆ ಏನಾದರೂ ಪ್ರಯೋಜನವಾಗುತ್ತದೆಯೆ ? ಅವರಿಗಾಗಿ ಪ್ರಾಮಾಣಿಕವಾಗಿ ಸರಿಯಾದಂಥ ರೀತಿಯಲ್ಲಿ ಖರ್ಚು ಮಾಡುತ್ತಿದ್ದೇವೆಯೋ ಎನ್ನತಕ್ಕಂಥ ಪ್ರಶ್ನೆಯನ್ನು ಅವರವರಿಗೇನೇ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಪ್ರೈಮರಿ ಎಜುಕೇಶನ್ ಬಗ್ಗೆ ಸುಮಾರು ಜನ ಮಾತನಾಡಿದರು. ನಮ್ಮ ಪ್ರೈಮರಿ ಎಜುಕೇಷನ್ ಯಾವ ರೀತಿಯಲ್ಲಿದೆ ಎಂದರೆ ಶ್ರೀಯುತ ಭೂಪತಿಯವರು ಮಾತನಾಡಿದರು ಅವರು ಮಾತನಾಡಿದಂಥ ಸಮಯದಲ್ಲಿ ನಾನು ಇರಲಿಲ್ಲ. ಈವೊತ್ತಿನ ಅಕ್ಷರ ಅಭ್ಯಾಸದ ಬಗ್ಗೆ ಹೇಳಿರುತ್ತಾರೆ ರಾಮ ಕಾಡಿಗೆ ಹೋದ, ದೊಡ್ಡರಾದವರು ಕಾಡಿಗೆ ಹೋಗಲೇಬೇಕು, ಅವನಿಗಿಂತ ದೊಡ್ಡರಾದವರು ಚಪ್ಪಲಿಯನ್ನು ಹೊರಲೇಬೇಕೆಂದು ಇದೆ ಎಂದು ಹೇಳಿದರು. ಇದೆಲ್ಲ ಹಿಂದಿನ ಕಾಲದ್ದು ಅದೇ ಒಂದು ಸೀಮಿತವಾದ ವಾತಾವರಣದಲ್ಲಿ ತೆಗೆದುಕೊಂಡು ಹೋಗುತ್ತಿರುವುದರಿಂದ ವೈಜ್ಞಾನಿಕ ಮನೋ ಭಾವ ಬರುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುವುದೇನೆಂದರೆ ಪ್ರೈಮರಿ ಎಜ್ಯುಕೇಷನ್ ಸಿಲಿಬಸ್ ತಯಾರು ಮಾಡಲು ಏನು ಒಂದು ಸಮಿತಿ ಯನ್ನು ಮಾಡಿರುತ್ತೀರಿ, ಆ ಸಮಿತಿಯಲ್ಲಿ ನಾನ್ ಅಫಿಷಿಯಲ್ಸ್‌ಯಾಗಿರತಕ್ಕಂಥವರನ್ನು, ಪ್ರಗತಿ ಪರವಾದ ಧ್ಯೇಯ ಧೋರಣೆಗಳನ್ನು ಹೊಂದಿರತಕ್ಕಂಥವರನ್ನು, ಸಮಾಜ ಬದುಕಿ ಬೆಳೆಯಲಿಕ್ಕೆ ಕಾಳಜಿ ವಹಿಸತಕ್ಕಂಥವರನ್ನು ಇದಕ್ಕೆ ಅಳವಡಿಸಿಕೊಂಡು ಹೊಸ ಸಿಲಿಬಸ್‌ನ್ನು ರೂಪಿಸಿದರೆ ಸ್ವಲ್ಪ ಮಟ್ಟಿಗಾದರೂ ಪರಿಸ್ಥಿತಿ ಸುಧಾರಿಸುತ್ತದೆ ಎನ್ನುವ ಭಾವನೆಯಿಂದ ಈ ಒಂದು ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀ ಮಾನ್ ರಘುಪತಿಯವರು ಇತ್ತೀಚೆಗೆ ತೆಗೆದುಕೊಂಡಂಥ ತೀರ್ಮಾನ ಬಹಳ ಶ್ಲಾಘನೀಯ ವಾದುದಾಗಿರುತ್ತದೆ. ತಮಗೆಲ್ಲರಿಗೂ ತಿಳಿದಂಥ ವಿಷಯವಾಗಿರುತ್ತದೆ, ಒಳ್ಳೆಯ ಶಾಲೆಗಳು ಹತ್ತು ಕಿಲೋಮೀಟರು ದೂರವಿದ್ದರೂ ಅಲ್ಲಿಗೆ ಶ್ರೀಮಂತರು, ವಿದ್ಯಾವಂತರು ತಮ್ಮ ಮಕ್ಕಳನ್ನು ಆಟೋ ರಿಕ್ಷಾದಲ್ಲಿಯಾದರೂ ಕಳುಹಿಸುತ್ತಾರೆ. ದೊಡ್ಡ ದೊಡ್ಡ ಅಧಿಕಾರಿಗಳು, ಡೆಪ್ಯೂಟಿ ಕಮಿಷನರ್, ಐ.ಎ.ಎಸ್ ಅಧಿಕಾರಿಗಳು ತಮ್ಮ ಮನೆಯ ಪಕ್ಕದಲ್ಲಿ ಸರ್ಕಾರಿ ಶಾಲೆಗಳು ಇದ್ದರೂ ಕೂಡ ಅವರ ಮಕ್ಕಳನ್ನು ಅಲ್ಲಿಗೆ ಕಳುಹಿಸುವುದಿಲ್ಲ. ಇದಕ್ಕೆ ಅವರೇ ತೀರ್ಮಾನ ಮಾಡಬೇಕು. ಅವರ ಮಕ್ಕಳೂ ಕೂಡ ಸರ್ಕಾರಿ ಶಾಲೆಗಳಿಗೆ ಹೋಗುವಂತೆ ಒಂದು ಕಾನೂನನ್ನೇ ಮಾಡಬೇಕು. ಏತಕ್ಕೆಂದರೆ ಹಾಗೆ ಮಾಡಿದರೆ ಈ ಒಂದು ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆಂದು ನನ್ನ ಭಾವನೆ. ಹಳ್ಳಿಗಾಡಿನಲ್ಲಿ ವ್ಯಾಸಂಗ ಮಾಡತಕ್ಕಂಥ ಮಕ್ಕಳಿಗೂ ಪಟ್ಟಣಪ್ರದೇಶಗಳಲ್ಲಿ ವ್ಯಾಸಂಗ ಮಾಡತಕ್ಕಂಥ ಮಕ್ಕಳಿಗೂ ಇರತಕ್ಕಂಥ ವ್ಯತ್ಯಾಸ ತಮಗೆ ಗೊತ್ತಿರುತ್ತದೆ. ಪ್ರಾಥಮಿಕಶಾಲೆಗಳಲ್ಲಿ ಯಾಗಲಿ, ಹೈಸ್ಕೂಲಿನಲ್ಲಿಯಾಗಲಿ ಪಾಠವನ್ನು ಮಾಡುವಾಗ ಅದನ್ನು ಡೆಮಾನ್‌ಸ್ಟ್ರೇಟ್ ಮಾಡಿದರೆ ಮಕ್ಕಳಿಗೆ ಸುಲಭ ರೀತಿಯಲ್ಲಿ ಅರ್ಥವಾಗುತ್ತದೆ. ಅವರ ತಲೆಯಲ್ಲಿ ಹೋಗುವ ರೀತಿಯಲ್ಲಿ ಪಾಠ ಪ್ರವಚನಗಳನ್ನು ಮಾಡಿದರೆ ಸ್ವಲ್ಪಮಟ್ಟಿಗಾದರೂ ಹಳ್ಳಿಗಾಡಿನಲ್ಲಿ ವಾಸಮಾಡತಕ್ಕಂಥ ಮಕ್ಕಳು ಪಟ್ಟಣ ಪ್ರದೇಶದ ಮಕ್ಕಳ ಜೊತೆಯಲ್ಲಿ ಕಾಂಪಿಟ್ ಮಾಡಲಿಕ್ಕೆ ಅನುಕೂಲವಾಗುತ್ತದೆ. ಹಳ್ಳಿಗಾಡಿ ನಲ್ಲಿ ಓದತಕ್ಕಂಥ ಮಕ್ಕಳು ಸಾಮಾನ್ಯವಾಗಿ ಕನ್ನಡ ಮೀಡಿಯಮ್ ಓದತಕ್ಕಂಥದ್ದು ಇರುತ್ತದೆ. ಹಳ್ಳಿಗಾಡಿನಲ್ಲಿ ಕನ್ನಡ ಮೀಡಿಯಮ್ ಶಾಲೆಗಳೇ ಜಾಸ್ತಿ ಇರುತ್ತವೆ. ಪ್ರಿ ಯೂನಿವರ್ಸಿಟಿ ಹಂತಕ್ಕೆ ಬಂದಾಗ ಇಂಗ್ಲೀಷ್ ಮೀಡಿಯಮ್ ಓದಬೇಕಾಗುತ್ತದೆ. ಕಳೆದ ವರ್ಷ ಎಸ್.ಎಸ್.ಎಲ್.ಸಿ.ಯಲ್ಲಿ ೧,೮೭,೦೦೦ ತೇರ್ಗಡೆಯಾಗಿರತಕ್ಕಂಥ ವಿದ್ಯಾರ್ಥಿಗಳಲ್ಲಿ ೪೫ ಸಾವಿರ ಇಂಗ್ಲೀಷ್ ಮೀಡಿಯಮ್‌ನಿಂದ ಬಂದಿರತಕ್ಕಂಥ ವಿದ್ಯಾರ್ಥಿಗಳಾಗಿರುತ್ತಾರೆ. ಅವರೆಲ್ಲರೂ ಶ್ರೀಮಂತ ಕುಟುಂಬದವರ ಮಕ್ಕಳೇ ಆಗಿರುತ್ತಾರೆ. ಇವರ ಜೊತೆಯಲ್ಲಿ ಹಳ್ಳಿಗಾಡಿನ ಮಕ್ಕಳು ಕನ್ನಡ ಮೀಡಿಯಂನಲ್ಲಿ ಓದಿರತಕ್ಕಂಥ ಮಕ್ಕಳು ಕಾಂಪೀಟ್ ಮಾಡಬೇಕಾಗಿರುತ್ತದೆ. ಪ್ರಿಯೂನಿವರ್ಸಿಟಿ ಆದನಂತರ, ಪ್ರಿಯೂನಿವರ್ಸಿಟಿ ಮತ್ತು ಎಂಟರೆನ್ಸ್ ಎಕ್ಸಾಮ್ ಇದರ ಅಂಕಗಳ ಆಧಾರದ ಮೇಲೆ ಡಾಕ್ಟರ್ ಮತ್ತು ಇಂಜಿನೀಯ ರಿಂಗ್ ಕೋರ್ಸ್‌ಗಳಿಗೆ ಸೀಟನ್ನು ಕೊಡತಕ್ಕಂಥದ್ದು ವ್ಯವಸ್ಥೆ ಇದೆ. ಆದ್ದರಿಂದ ನಾನಾದರೂ ಹೇಳುವುದೇನೆಂದರೆ ಹಳ್ಳಿಗಾಡಿನಿಂದ ಬರತಕ್ಕಂಥ ಮಕ್ಕಳಿಗೆ, ಅದರಲ್ಲೂ ಕನ್ನಡ ಮೀಡಿಯಂ ತೆಗೆದುಕೊಂಡು ಬಂದಿರತಕ್ಕಂಥ ಮಕ್ಕಳಿಗೆ ಇಂತಿಷ್ಟು ಸೀಟ್ಸ್ ಕೊಡಬೇಕೆಂದು ನಿಗದಿಮಾಡಿ, ಇಲ್ಲದಿದ್ದರೆ ಇಂಗ್ಲೀಷ್ ಮೀಡಿಯಮ್ ಅಬಾಲಿಷ್ ಮಾಡುವುದಕ್ಕೆ ಅವಕಾಶ

ಇದ್ದರೆ ಅದನ್ನಾದರೂ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಆಮೇಲೆ ಈ ಯೂನಿವರ್ಸಿಟಿಗಳು ನಮ್ಮ ಜಿಮ್ನೇಶಿಯಮ್ಸ್‌ಗಿಂತ ಕೆಟ್ಟದ್ದಾಗಿರುತ್ತವೆ. ಯಾವಾಗ ನೋಡಿದರೂ ಹೊಡೆದಾಟ ಪರೀಕ್ಷೆ ವೇಳೆಗೆ ಮೇಷ್ಟ್ರು ಕರಾಟೆ, ಜ್ಯೂಡೋ ಕಲಿತುಕೊಂಡು ಹೋಗ ಬೇಕು. ಯಾವಾಗ ಎಂದರೆ ಆಗ ಎಸಿಡ್ ಬಾಟಲುಗಳ ಪ್ರಯೋಗ ನಡೆಯುತ್ತದೆ. ಏತಕ್ಕಾದರೂ ಈ ಪರೀಕ್ಷೆಗಳು, ಡಿಗ್ರಿಗಳು ಬೇಕೋ ಎಂದು ನನಗಂತೂ ಅರ್ಥವಾಗುತ್ತಿಲ್ಲ. ನನಗೂ ಒಂದು ಡಿಗ್ರಿ ಅಂತ ಕೊಟ್ಟಿದ್ದಾರೆ. ಅದು ಎಲ್ಲೂ ಕೆಲಸಕ್ಕೆ ಬಾರದ ಮೇಲೆಯೇ ನಾನು ಇಲ್ಲಿಗಾದರೂ ಬರಲಿಕ್ಕೆ ಪ್ರಯತ್ನ ಮಾಡಿದ್ದು, ಪೋಸ್ಟ್ ಗ್ರಾಜುಯೇಟ್ ಡಿಗ್ರಿ ಪರೀಕ್ಷೆಗೆ ಹೋಗತಕ್ಕವರೂ ಕೂಡ ಯಾರು ಪೇಪರ್ ಸೆಟ್ ಮಾಡುತ್ತಾರೆ ಎಂದು ತಿಳಿದುಕೊಂಡು ಅವರಿಗೆ ಹೆದರಿಸಿ, ಜೀವಕ್ಕೆ ಅಪಾಯ ಇದೆಯೆಂದು ಹೇಳಿ ಪ್ರಶ್ನೆ ಪತ್ರಿಕೆಗಳನ್ನು ಸಂಪಾದಿಸಿಕೊಳ್ಳುತ್ತಾರೆ. ಹೊರಗಡೆಯಿಂದ ಉತ್ತರಗಳನ್ನು ಬರೆದುಕೊಂಡು ಬಂದು ತಮ್ಮ ಉತ್ತರ ಪತ್ರಿಕೆಗೆ ಸೇರಿಸುತ್ತಾರೆ. ಯಾವ ಕ್ಲಾಸ್‌ನಲ್ಲಿ ಪಾಸಾಗ ಬೇಕಾದರೂ ಆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯಾಗಲೀ, ಮೈಸೂರು ಯೂನಿವರ್ಸಿಟಿಯಾಗಲೀ ಯಾವ ರೀತಿ ಸಾಮಾಜಿಕ ಬೆಳವಣಿಗೆಗೆ ಪ್ರಯೋಜನವಾಗುತ್ತದೆ ಎಂಬುದನ್ನು ನೋಡದೆ ಕೋಟ್ಯಾಂತರ ರೂಪಾಯಿಗಳನ್ನು ಇವುಗಳ ಮೇಲೆ ಖರ್ಚು ಮಾಡುತ್ತಿದ್ದೇವೆ. ಯೂನಿವರ್ಸಿಟಿ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಬರುವುದಿಲ್ಲ. ಆದರೆ ಪಾಲಿಸಿ ಮ್ಯಾಟರ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಅವರಿಗೇ ಬಿಡಲಾಗುತ್ತದೆ. ಎಂಭತ್ತು ಲಕ್ಷ ರೂಪಾಯಿಗಳನ್ನು ವರ್ಲ್ಡ್ ಬ್ಯಾಂಕಿನವರು ಅಗ್ರಿಕಲ್ಚರ್‌ನಲ್ಲಿ ಖರ್ಚು ಮಾಡುವುದಕ್ಕೆ, ರೀಸರ್ಚ್ ಮಾಡುವುದಕ್ಕೆ ಅನುಕೂಲ ವಾಗಲೆಂದು ಕೊಟ್ಟರು. ಕೃಷಿಕರು ಏನಿದ್ದಾರೆ, ಅವರಿಗೆ ಇದರ ಲಾಭ ಸಿಗಬೇಕು ಎಂದು ಯೂರು ಯೂನಿವರ್ಸಿಟಿಯವರು ಖರ್ಚು ಮಾಡಲಿಕ್ಕೆ ಎಂದು ಈ ಹಣವನ್ನು ಕೊಟ್ಟರು. ಆದರೆ ಇವರು ಮಾಡಿದ್ದೇನು ? ಆ ದುಡ್ಡಿನಲ್ಲಿ ಬಿಲ್ಡಿಂಗ್ಸ್ ಕಟ್ಟಿದರು, ಕಾರು ಕೊಂಡುಕೊಂಡರು, ಟೆಲಿಫೋನ್ ಹಾಕಿಸಿಕೊಂಡರು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇಂತಹ ವಿಷಯಗಳನ್ನು ಶ್ರೀಮಾನ್ ರಘುಪತಿಯವರು ತೀವ್ರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು.

ಇನ್ನು ಪ್ರೈವೇಟ್ ಸ್ಕೂಲ್‌ಗಳು ಮತ್ತು ಗವರ್ನಮೆಂಟ್ ಸ್ಕೂಲ್‌ಗಳು ವಿಚಾರದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಮತ್ತು ಶ್ರೀ ರತ್ನಾಕರ್ ಅವರೂ ಕೂಡ ಮಾತ ನಾಡುತ್ತಾ ಹೇಳಿದರು. ನಾವೆಲ್ಲರೂ ಕೂಡ, ಈ ಸಮಾಜ ಮುಂದೆ ಹೋಗಬೇಕು, ಸಮಾಜದ ಪ್ರಗತಿಯಾಗಬೇಕು ಎಂದು ಖಚಿತವಾದ ಅಭಿಪ್ರಾಯ ಇಟ್ಟುಕೊಂಡಿರುವವರು. ಒಂದೊಂದು ಪ್ರೈವೇಟ್ ಇನ್ಸ್ಟಿಟ್ಯೂಶನ್‌ಗೆ ಸಹಿ ಮಾಡಿದಾಗಲೂ ಕೂಡ ಸಮಾಜಕ್ಕೆ ಒಂದು ದೊಡ್ಡ ಅನ್ಯಾಯ ವಾಗುತ್ತದೆ ಎಂದು ತಿಳಿಯಬೇಕಾಗುತ್ತದೆ. ದೊಡ್ಡ ರಾಕ್ಷಸನನ್ನು ತಿನ್ನುವುದಕ್ಕೆ ತಯಾರು ಮಾಡು ತ್ತಿದ್ದೀರಿ ಎಂದು ಆಪಾದನೆ ಮಾಡಬೇಕಾಗುತ್ತದೆ. ಈ ಖಾಸಗಿ ಹೈಸ್ಕೂಲ್ ಆಗಲಿ, ಕಾಲೇಜಾಗಲೀ, ಏನು ಮಾಡುತ್ತಾರೆ ಎಂದರೆ, ಐದು ವರ್ಷಗಳು ಆದ ತಕ್ಷಣ ಸರ್ಕಾರವನ್ನು ಕೇಳುವುದಕ್ಕೆ ಶುರು ಮಾಡುತ್ತವೆ. ಆ ಸಂಸ್ಥೆಯ ಒಟ್ಟು ಖರ್ಚನ್ನು ಸರ್ಕಾರವೇ ನೋಡಿಕೊಳ್ಳುತ್ತದೆ. ದೇಶ ಉದ್ಧಾರ ಮಾಡುವುದಕ್ಕೆ ಸರ್ಕಾರದಿಂದ ಖಾಸಗಿ ಶಾಲೆಗಳನ್ನು ನಡೆಸುತ್ತಿದ್ದೀರಿ ಎಂದು ನಾನು ಹೇಳುತ್ತೇನೆ. ಈ ವೈನ್‌ಸ್ಟೋರ್ಸ್‌ಗಳು ಇರುತ್ತವೆ. ೧೫–೨೦ ಲಕ್ಷ ರೂಪಾಯಿ ಟ್ಯಾಕ್ಸ್ ಕೊಟ್ಟು ವರ್ಷದ ಕೊನೆಗೆ 'ಲಾಸ್' ಅಂತ ಲೆಕ್ಕ ಕೊಡುತ್ತಾರೆ. ಪಾಪ, ಎಷ್ಟು ತ್ಯಾಗ ಮಾಡುತ್ತಿದ್ದಾರೆ ಇವರು ಜನರಿಗೆ ಹೆಂಡ ಕುಡಿಸಿ ಜನತೆಯ ಉದ್ಧಾರ ಮಾಡುತ್ತಿದ್ದಾರೆ. ಇವರಿಗಿಂತ ಹೀನ ವರ್ಗಕ್ಕೆ ಸೇರಿದವರು ಈ ಖಾಸಗಿ ಸಂಸ್ಥೆಯವರು ಈ ಸಮಾಜದ ಬಡಜನತೆಯ ರಕ್ತವನ್ನು ಇವರು ಕುಡಿಯುತ್ತಿದ್ದಾರೆ......

ಅಧ್ಯಕ್ಷರು.—ರಮೇಶರವರೇ, ಹತ್ತು ನಿಮಿಷ ಆಯಿತು ಬೇಗ ಮುಗಿಸಿ. ಎಲ್ಲರಿಗೂ ಅವಕಾಶ ಕೊಡಬೇಕಾಗಿದೆ.

ಶ್ರೀ ರಮೇಶಕುಮಾರ್.—ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜುಗಳನ್ನು ಪ್ರೈವೇಟ್‌ನವರು ಏನು ನಡೆಸುತ್ತಿದ್ದಾರೆ, ಅದರ ಬಗ್ಗೆ ಸಾಕಷ್ಟು ವ್ಯಾಖ್ಯಾನಕ್ಕೆ ಶ್ರೀ ರಘುಪತಿ ಯವರು ಒಳಗಾಗಿದ್ದಾರೆ. ಅವರು ಈಗ ಧೈರ್ಯ ಮಾಡಬೇಕು. ಅವರ ಜೊತೆಯಲ್ಲಿ ಇಡೀ ಸದನವೇ ಇರುತ್ತದೆ. ಎಲ್ಲಾ ಖಾಸಗಿ ಸಂಸ್ಥೆಗಳನ್ನು ವಹಿಸಿಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಬೇಕು. ಯೂನಿವರ್ಸಿಟಿಯಲ್ಲಿ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳನ್ನು ಇಟ್ಟುಕೊಂಡು ಆಡಳಿತ ನಡೆಸಲು ಹೊಸ ವ್ಯವಸ್ಥೆಯನ್ನು ರೂಪಿಸಿದ್ದಾರೆ. ರಿಜಿಸ್ಟ್ರಾರ್, ಕಂಟ್ರೋಲರ್ ಹುದ್ದೆಗಳನ್ನು ಇವರಿಗೆ ಕೊಟ್ಟರೆ ಅವರು ಏನು ಬಂದೂಕು ಹಿಡಿದುಕೊಂಡು ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆಯೆ ?

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ರಮೇಶಕುಮಾರ್.—ಹೀಗೆ ಹೇಳಿದರೆ ಹೇಗೆ ಅಧ್ಯಕ್ಷರೆ ? ಇನ್ನು ಎರಡು ನಿಮಿಷ ಟೈಮ್ ಕೊಡಿ. ಈ ಅಡಲ್ಟ್ಸ್ ಎಜುಕೇಷನ್ ಬಗ್ಗೆ ಮಾನ್ಯ ಸದಸ್ಯರೊಬ್ಬರು ಹೇಳಿದರು ಏನೆಂದರೆ ವಯಸ್ಕರು ದಣಿದು ಬಂದಿರುತ್ತಾರೆ, ಪಾಠ ಕೇಳುವ ತಾಳ್ಮೆ ಅವರಿಗೆ ಇರುವುದಿಲ್ಲವೆಂದು.

ಅಧ್ಯಕ್ಷರು.—ರಮೇಶ್‌ಕುಮಾರ್, ಇನ್ನು ಟೈಮ್ ಕೊಡುವುದಕ್ಕೆ ಆಗುವುದಿಲ್ಲ. ನೀವು ಮಾತನಾಡುವುದಕ್ಕೆ ಶುರು ಮಾಡಿ ಹದಿನಾಲ್ಕು ನಿಮಿಷ ಆಯಿತು. ನಾನು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನಾನೇ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನು ರಾಮಯ್ಯನವರು ಮಾತನಾಡುತ್ತಾರೆ. ರಾಮಯ್ಯನವರೇ, ತಾವು ಹತ್ತು ನಿಮಿಷಗಳಲ್ಲಿ ನಿಮ್ಮ ಭಾಷಣವನ್ನು ಮುಗಿಸಬಿಡಬೇಕು.

ಶ್ರೀ ಆರ್. ರಾಮಯ್ಯ (ಓರಿಯೂರು).—ಮಾನ್ಯ ಸಭಾಧ್ಯಕ್ಷರೇ, ಶಿಕ್ಷಣ ಇಲಾಖೆಯ ವಿಸ್ತೀರ್ಣವನ್ನು ಈಗಾಗಲೇ ಬಹು ಭಾಷಣಕಾರರು ತಮ್ಮದೇ ಆದ ಮಾತಿನ ಧಾಟಿಯಲ್ಲಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಜೀವನ ರಂಗದಲ್ಲಿ ಶಿಕ್ಷಣ ಅತ್ಯಂತ ಅವಶ್ಯಕ. ವಿದ್ಯೆ ಇಲ್ಲದವನು ಪಶು ಸಮಾನ ಎಂದು ನಮ್ಮ ಹಿರಿಯರು ಹೇಳಿದ್ದಾರೆ. ವಿದ್ಯೆ ಎಲ್ಲರಿಗೂ ಸಿಕ್ಕುವ ಹಾಗಾದರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಿ ಉಳಿಯಲು ಸಾಧ್ಯವಾಗುತ್ತದೆ. ಎಲ್ಲಿಯವರೆಗೆ ನಮ್ಮ ದೇಶದ ಸಾಮಾನ್ಯ ಮನುಷ್ಯನಿಗೆ ತಿಳುವಳಿಕೆ ಬಂದು ತನ್ನ ಪರವಾಗಿ ಇರತಕ್ಕಂಥ ಕಾನೂನಿನ ಸವಲತ್ತನ್ನು ಪಡೆಯುವುದಕ್ಕೆ ಆತನ ಮನಸ್ಸು ತಯಾರಾಗುವುದಿಲ್ಲವೋ, ಅಲ್ಲಿಯವರೆಗೆ ಬರೀ ಪುಸ್ತಕಗಳ ಮೇಲೆ ಪ್ರಕಟಿಸುತ್ತಾ ಹೋಗಬೇಕೇ ವಿನಹ ಬೇರೆ ಏನೂ ಪ್ರಯೋಜನ ಇಲ್ಲ. ಅಲ್ಲಿಯವರೆಗೆ ಇದು ಕೇವಲ ಪುಸ್ತಕಗಳಲ್ಲಿ ಜಾಹೀರಾತು ರೀತಿಯಲ್ಲಿ ಉಳಿದುಕೊಳ್ಳುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶಿಕ್ಷಣ ಇಲಾಖೆಯಲ್ಲಿ ಸುಮಾರು ನಾಲ್ಕು-ಐದು ಶಿಕ್ಷಣ ಹಂತಗಳಲ್ಲಿ ಪ್ರಾಥಮಿಕ ಶಿಕ್ಷಣ ಪ್ರಮುಖವಾದುದು, ಕೇಂದ್ರ ಸರ್ಕಾರದವರು ೩ ರಿಂದ ೬ ವಯಸ್ಸಿನ ಮಕ್ಕಳಿಗೆ ಶಿಕ್ಷಣ ಮತ್ತು ಪೌಷ್ಟಿಕ ಆಹಾರ ಕೊರತೆಯನ್ನು ನೀಗಿಸಲು ಒಂದು ಕಾರ್ಯಕ್ರಮವಾಗಿ ೧೨,೯೯೨ ಅಂಗನವಾಡಿಗಳನ್ನು ಒದಗಿಸಿಕೊಟ್ಟಿದ್ದಾರೆ. ಇಲ್ಲಿ ಚಿಕ್ಕ ಮಕ್ಕಳಿಗೆ ಸರಿಯಾದ ಶಿಕ್ಷಣದ ವ್ಯವಸ್ಥೆಯಾದರೆ ಇತರೆ ಎಲ್ಲಾ ಭಾಗಗಳಲ್ಲೂ ವ್ಯವಸ್ಥಿತವಾದ ವಿದ್ಯಾಭ್ಯಾಸ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ಏನು ಕೊರತೆ ಇದೆ, ಇದನ್ನು ಅರಿತುಕೊಂಡು ಸರಿಪಡಿಸುವುದಕ್ಕೆ ಪ್ರಾಥಮಿಕ ಶಿಕ್ಷಣ ಮಂತ್ರಿಗಳು ಈ ಕಡೆಗೆ ಗಮನ ಕೊಡಬೇಕು. ಇವತ್ತು ನಮಗೆ ಇಟ್ಟಿರತಕ್ಕಂಥ ಪಠ್ಯಪುಸ್ತಕಗಳನ್ನು ಅವಲೋಕನ ಮಾಡಿದರೆ, ನಿಜವಾಗಿಯೂ ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ಏಕೆ ಸಂಶಯದ ದೃಷ್ಟಿ ಬಂದಿದೆಯೆಂದರೆ, ನಮ್ಮಲ್ಲಿ ರಾಷ್ಟ್ರಪ್ರೇಮ ಮಾಡಿಸತಕ್ಕಂಥ, ಜಾತ್ಯಾತೀತ ಭಾವನೆಯನ್ನು ಒಳಗೊಂಡಂಥ ನಾವೆಲ್ಲರೂ ಒಂದು ಎಂಬ, ಭಾವನೆಯನ್ನು ಪ್ರತಿಬಿಂಬಿಸುವಂಥ ವಿಷಯಗಳನ್ನು ಅಳವಡಿಸಿಲ್ಲ. ನಮ್ಮ ಹಿಂದಿನ ಜನರು, ಅನೇಕ ಚರಿತ್ರಾರ್ಹ ಪುರುಷರ ಜೀವನ ಕ್ರಮವನ್ನು ನೋಡಿದರೆ ಕೇವಲ ನಮ್ಮಲ್ಲಿ ರೂಢಿಯಲ್ಲಿದ್ದಂತಹ ರಾಮಾಯಣ, ಮಹಾಭಾರತ ಪುರಾಣ ಗ್ರಂಥಗಳನ್ನು ಓದಿ ದೇಶಪ್ರೇಮವನ್ನು ಬೆಳೆಸಿಕೊಂಡಿದ್ದರೆಂದು ಕಾಣುತ್ತದೆ. ಆದ್ದರಿಂದ ರಾಷ್ಟ್ರಪ್ರೇಮವನ್ನು ರೂಪಿಸತಕ್ಕಂಥ, ಜಾತ್ಯಾತೀತತೆಯನ್ನು ಎತ್ತಿಹಿಡಿಯತಕ್ಕಂಥ ಭಾವನೆಯನ್ನು ಜನರ ಮನಸ್ಸಿನಲ್ಲಿ ತುಂಬುವಂಥ ಪುಸ್ತಕಗಳು ಬರಬೇಕು. ಇನ್ನು ಏಕೋಪಾಧ್ಯಾಯ ಶಾಲೆಗಳ ಸ್ಥಿತಿಯನ್ನು ಹೇಳುವುದಕ್ಕಾಗುವುದಿಲ್ಲ. ಈ ಶಾಲೆಗಳು ಇರುವ ಕಡೆಗಳಲ್ಲಿ ಪೋಷಕರು ಯಾವರೀತಿ ಜಮೀನಿನ ಕೆಲಸಕ್ಕೆ ಇಲ್ಲವೇ ಮನೆ ಕೆಲಸಕ್ಕೆ ತಮ್ಮ ಮಕ್ಕಳನ್ನು ಉಪಯೋಗಿಸಿಕೊಂಡು ಬಿಡುವಿದ್ದಾಗ ಶಾಲೆಗೆ ಕಳುಹಿಸುತ್ತಾರೋ ಅದೇರೀತಿ ಈ ಉಪಾಧ್ಯಾಯರುಗಳೂ ತಮ್ಮ ಜಮೀನಿನಲ್ಲಿ ಬಿತ್ತನೆ ಕೆಲಸವಿದ್ದಾಗ ಅಥವಾ ಬೇರೆ ಕೆಲಸವಿದ್ದಾಗ ಶಾಲೆಗೆ ಬೀಗ ಹಾಕುತ್ತಾರೆ. ಈ ರೀತಿಯಲ್ಲಿ ಇಂತಹ ಶಾಲೆಗಳು ನಡೆಯುತ್ತಿವೆ. ಇಂತಹ ಶಾಲೆಗಳಲ್ಲಿ ಕೆಲಸ ಮಾಡಲು ಆಯಾ ಊರಿನವರನ್ನೇ ನೇಮಕ ಮಾಡಿರುವುದರಿಂದ ಇಂತಹ ಒಂದು ವ್ಯವಸ್ಥೆ ಇದೆ. ಈ ಉಪಾಧ್ಯಾಯರುಗಳು ತಮ್ಮ ವೈಯುಕ್ತಿಕ ವ್ಯವಹಾರಗಳಿಗೆ ಹೆಚ್ಚಿನ ಮಹತ್ವ ಕೊಡುತ್ತಿದ್ದಾರೆಯೇ ಹೊರತು ಶಾಲೆಗಳನ್ನು ಸರಿಯಾಗಿ ನಡೆಸುವ ಕಡೆಗೆ ಗಮನ ಕೊಡುತ್ತಿಲ್ಲ. ತಮಗೆ ಕೆಲಸವಿದ್ದಾಗ ಶಾಲೆಗಳಿಗೆ ಬೀಗ ಹಾಕುತ್ತಾರೆ. ಇದನ್ನು ತಪ್ಪಿಸುವುದರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡುವುದರ ಮೂಲಕ ಈ ಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಳ್ಳಿಗಾಡಿನಲ್ಲಿರುವಂತಹ ಬಹುತೇಕ ಶಾಲೆಗಳಲ್ಲಿ ಸರಿಯಾದ ಪೀಠೋಪಕರಣಗಳು ಇರುವುದಿಲ್ಲ. ಎಷ್ಟೋ ಶಾಲೆಗಳಿಗೆ ಸ್ವಂತ ಕಟ್ಟಡಗಳೇ ಇಲ್ಲ. ಕೆಲವು ಕಡೆಗಳಲ್ಲಿ ಹುಲ್ಲಿನ ಜೋಪಡಿಗಳಲ್ಲಿ ಶಾಲೆಗಳು ನಡೆಯುತ್ತಿವೆ. ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಇಂತಹ ಸಂದರ್ಭಗಳಲ್ಲಿ ನಾಮಫಲಕಗಳು ಬೇರೆಯಾಗುತ್ತವೆಯೇ ಹೊರತು ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಸುಧಾರಣೆಯಾಗಲಿಗೆ. ಒಂದು ಸುದೀರ್ಘವಾದಂಥ ಕಾರ್ಯಕ್ರಮವನ್ನು ಹಾಕಿಕೊಳ್ಳದಿರುವುದನ್ನು ನೋಡಿದರೆ ನಲ್ಲನ

ಶೋಚನೀಯವೆನಿಸುತ್ತದೆ. ಸರ್ಕಾರದವರು ಕಡ್ಡಾಯ ಶಿಕ್ಷಣವನ್ನು ಯಶಸ್ವಿಯಾಗಿ ಜಾರಿಗೆ ಕೊಡುವುದಕ್ಕಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದಾಗಿ ಹೇಳಿದ್ದಾರೆ. ಇದರ ಪ್ರಕಾರ ಒಂದರಿಂದ ಏಳನೇ ತರಗತಿಯವರೆಗೆ ಓದುವ ಮಕ್ಕಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಹಂಚುವುದು, ಒಂದರಿಂದ ಎರಡನೇ ತರಗತಿಯವರೆಗೆ ಓದುವ ಮಕ್ಕಳಿಗೆ ಸಮವಸ್ತ್ರವನ್ನು ಹಂಚುವುದು, ೩ ರಿಂದ ೭ನೇ ತರಗತಿಯಲ್ಲಿ ಓದುವ ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳಿಗೆ ಸಮವಸ್ತ್ರವನ್ನು ಹಂಚುವುದು, ಹೀಗೆ ಮಕ್ಕಳನ್ನು ಆಕರ್ಷಣೆ ಮಾಡುವಂತಹ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆದರೆ ಬಡತನದಲ್ಲಿರುವ ಮಕ್ಕಳಿಗೆ ಈ ಆಕರ್ಷಣೆ ಹಿಡಿಸುವುದಿಲ್ಲ. ಈ ಆಕರ್ಷಣೆಗೋಸ್ಕರ ಪ್ರಾರಂಭದಲ್ಲಿ ಶಾಲೆಗೆ ಸೇರಿ ಅನಂತರ ಶಾಲೆಗಳನ್ನು ಬಿಟ್ಟು ಹೋಗುವ ಪದ್ಧತಿ ಸಹ ನಮ್ಮಲ್ಲಿದೆ. ಇದಕ್ಕೆ ಬಡತನವೇ ಕಾರಣ. ಆದ್ದರಿಂದ ಶಾಲೆಗಳಲ್ಲಿರುವ ಕಡೆಗಳಲ್ಲಿ ವಸತಿ ಸೌಕರ್ಯಗಳನ್ನು ಸಹ ಕಲ್ಪಿಸಿಕೊಟ್ಟರೆ ಮಕ್ಕಳು ಅಲ್ಲಿಯೇ ವಾಸವಿರಲು ಅನುಕೂಲವಾಗುತ್ತದೆ ಮತ್ತು ಮಕ್ಕಳ ಪೋಷಕರ ಜವಾಬ್ದಾರಿಯೂ ಸಹ ಕಡಿಮೆಯಾಗುತ್ತದೆ. ಇಲ್ಲಿ ಆಹಾರವನ್ನು ಸಹ ಕೊಡುವುದರಿಂದ ಪೋಷಕರು ತಮ್ಮ ಮಕ್ಕಳನ್ನು ಕಳುಹಿಸಿಕೊಡುತ್ತಾರೆ. ಈ ಕಾರಣದಿಂದ ಪ್ರೈಮರಿ ಹಂತದಲ್ಲಿ ವಸತಿ ಸಹಿತ ಶಾಲೆಗಳನ್ನು ಪ್ರಾರಂಭ ಮಾಡುವುದು ಒಳ್ಳೆಯದೆಂದು ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಮನವರಿಕೆಮಾಡಿಕೊಡುತ್ತಿದ್ದೇನೆ.

ಇನ್ನು ಪ್ರೌಢ ಶಿಕ್ಷಣ ಕೊಡುವಂತಹ ಶಾಲೆಗಳ ಬಗ್ಗೆ ತೆಗೆದುಕೊಂಡರೆ, ಈ ಹಂತದ ಸರ್ಕಾರದ ಶಾಲೆಗಳು ಎಷ್ಟಿವೆಯೋ ಅವರ ಎರಡರಷ್ಟು ಖಾಸಗೀ ಶಾಲೆಗಳಿವೆ. ವಿದ್ಯಾ ಕ್ಷೇತ್ರದಲ್ಲಿ ಕ್ರಾಂತಿಕಾರಕವಾದಂಥ ಸಾಧನೆಗಳನ್ನು ಮಾಡುವುದಾಗಿ ಮಾನ್ಯ ರಘುಪತಿಯವರು ಹೇಳಿದ್ದಾರೆ. ಶುಲ್ಕ ಮತ್ತು ವಂತಿಕೆಗಳನ್ನು ರದ್ದು ಮಾಡುವುದಾಗಿ ಅವರು ಹೇಳಿಕೆ ಕೊಟ್ಟಿದ್ದನ್ನು ನೋಡಿ ನನಗೆ ಸಂತೋಷವಾಯಿತು. ಆದರೆ ತಕ್ಷಣವೇ ಸಂಬಂಧಪಟ್ಟವರು ಕೋರ್ಟಿಗೆ ಹೋಗಿ ಸ್ಟೇ ತಂದರು. ಇದರಿಂದ ಇವರ ಹೇಳಿಕೆ ಮೂಲೆಗುಂಪಾಯಿತು. ಇದನ್ನೆಲ್ಲಾ ನೋಡಿದರೆ, ವಂತಿಗೆ ಹಾಗೂ ಶುಲ್ಕವನ್ನು ರದ್ದು ಮಾಡುವುದಾಗಿ ಹೇಳಿದವರೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೋ ಏನೋ ಎಂಬ ಸಂಶಯ ಬರುತ್ತಿದೆ. ನಮ್ಮ ಸಮಾಜದಲ್ಲಿರುವಂತಹ ಈ ಅನಿಷ್ಟವನ್ನು ಹೋಗಲಾಡಿಸಬೇಕಾದರೆ ಒಂದು ಮಹತ್ತರವಾದಂಥ ಕಾನೂನನ್ನೇ ಜಾರಿಗೆ ತರಬೇಕಾಗುತ್ತದೆ. ಈ ಹಿಂದೆ ಕೇಂದ್ರ ಸರ್ಕಾರದವರು ರಾಜಧನವನ್ನು ರದ್ದು ಮಾಡುವಂತಹ ಒಂದು ಕಾನೂನನ್ನು ದೊಡ್ಡ ಮನಸ್ಸು ಮಾಡಿ ಜಾರಿಗೆ ತಂದರು. ಆದ್ದರಿಂದ ಈ ಕ್ಷೇತ್ರದಲ್ಲಿಯೂ ಅಂತಹ ಕಾನೂನನ್ನು ಜಾರಿಗೆ ತರಬೇಕು. ಇವೊತ್ತಿನ ದಿವಸ ಹಣ ಮಾಡುವ ವ್ಯಾಮೋಹ ಯಾರನ್ನೂ ಬಿಟ್ಟಿಲ್ಲ. ರಾಜಕಾರಣಿಗಳು, ಸಮಾಜದಲ್ಲಿರುವಂತಹ ಪ್ರತಿಷ್ಠಿತ ಜನರು ಹಾಗೂ ಮಠಾಧಿಪತಿಗಳೂ ಸಹ ವ್ಯವಸ್ಥಿತವಾಗಿ ವಿದ್ಯಾ ಕ್ಷೇತ್ರದ ಮೂಲಕ ಹಣ ಸಂಪಾದನೆ ಮಾಡಲು ಹೊರಟಿದ್ದಾರೆ. ಇಂತಹ ಜನರನ್ನು ಬಗ್ಗಿಸಬೇಕಾದರೆ ಉಗ್ರವಾದಂಥ ಕಾನೂನೇ ಬೇಕು. ಇದನ್ನು ಬಿಟ್ಟು ಬೇರೆ ಬೇರೆ ವಿಧಾನಗಳಿಂದ ಇಲ್ಲವೇ ಈಗಿರುವ ಕಾನೂನಿನ ಚೌಕಟ್ಟಿನೊಳಗೇ ಜಾರಿಗೆ ತರುತ್ತೇವೆಂದರೆ ಅದು ಸಾಧ್ಯವಾಗದ ಮಾತು. ನಮ್ಮ ಶಿಕ್ಷಣ ಕ್ಷೇತ್ರ ಯಶಸ್ವಿಯಾಗಿ ನಡೆಯಬೇಕಾದರೆ ಇಂತಹ ಉಗ್ರವಾದಂಥ ಕಾನೂನಿನ ಅಗತ್ಯವಿದೆ. ಇವೊತ್ತಿನ ದಿವಸ ಪೋಷಕರನ್ನು ಈ ಖಾಸಗಿ ಶಿಕ್ಷಣ ಸಂಸ್ಥೆಯವರು ವಂತಿಗೆ ರೂಪದಲ್ಲಿ ಹಾಗೂ ಬೇರೆ ಬೇರೆ ರೂಪದಲ್ಲಿ ಹಣವನ್ನು ಯಾವ ರೀತಿ ಸುಲಿಗೆ ಮಾಡುತ್ತಿದ್ದಾರೆಂಬುದು ಎಲ್ಲ ಬುದ್ಧಿಜೀವಿಗಳಿಗೂ ಸಹ ಗೊತ್ತಿದೆ. ಆದರೆ ಎಲ್ಲರೂ ಮೂಕಪ್ರೇಕ್ಷಕರಂತೆ ಇದ್ದಾರೆ. ಇಂತಹ ಜನರೂ ಸಹ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿರುವುದು ಕಳವಳಕಾರಿಯಾದಂಥ ಸಂಗತಿಯಾಗಿದೆ. ಈ ಖಾಸಗಿ ಪ್ರೌಢಶಾಲೆಗಳು ಯಾವರೀತಿ ನಡೆಯುತ್ತಿವೆ ಎಂಬುದನ್ನು ನೋಡಬೇಕಾಗಿದೆ. ಸರ್ಕಾರದಿಂದ ಶಾಲೆಗಳನ್ನು ನಡೆಸಲು ಅನುಮತಿ ಮತ್ತು ಅನುದಾನವನ್ನು ಪಡೆದ ನಂತರ ಮಕ್ಕಳಿಗೆ ಸರಿಯಾದ ಸಲವತ್ತುಗಳನ್ನು ಕಲ್ಪಿಸಿಕೊಡುತ್ತಿಲ್ಲ. ಎಷ್ಟು ಜನ ಉಪಾಧ್ಯಾಯರುಗಳನ್ನು ತುಂಬಬೇಕೋ ಅಷ್ಟು ಜನರನ್ನು ತುಂಬುತ್ತಾರೆ. ಆದರೆ ಉಪಾಧ್ಯಾಯರನ್ನು ಕಳಪೆಯಾಗಿ ನೋಡುತ್ತಾರೆ. ಇದರ ಜೊತೆಗೆ ಇವೊತ್ತಿನ ದಿವಸ ಮಕ್ಕಳ ಮತ್ತು ಉಪಾಧ್ಯಾಯರುಗಳ ನಡುವೆ ಇರಬೇಕಾದಂಥ ಸಾಮರಸ್ಯ ಇಲ್ಲವಾಗಿದೆ. ಪರೀಕ್ಷೆಗೆ ಮೊದಲೇ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗುತ್ತಿವೆ. ಪರೀಕ್ಷೆ ಸಮಯದಲ್ಲಿ ಕಾಪಿ ಮಾಡುವುದು ನಡೆಯುತ್ತಿದೆ. ಇಂತಹವರನ್ನು ಹಿಡಿದರೆ, ಹಿಡಿದವರ ಮೇಲೆ ಹಲ್ಲೆ ನಡೆಸುವುದು ನಡೆಯುತ್ತಿದೆ. ಇದರ ಜೊತೆಗೆ ಕೆಲವೊಂದು ಅನುಕೂಲ ಪಡೆಯಲು ಸುಳ್ಳು ಸರ್ಟಿಫಿಕೇಟ್‌ಗಳನ್ನು ಕೊಡುವುದು ಸಹ ನಡೆಯುತ್ತಿದೆ. ಇಂತಹದ್ದನ್ನೆಲ್ಲಾ ಹೋಗಲಾಡಿಸಲು ಶಿಕ್ಷಣ ಮಂತ್ರಿಗಳು ಮನಸ್ಸು ಮಾಡಬೇಕು. ಇದಕ್ಕಾಗಿ ಶಿಕ್ಷಣ ಮಂತ್ರಿಗಳು ತಮ್ಮನ್ನು ತಾವೇ ಅರ್ಪಣೆ ಮಾಡಿಕೊಳ್ಳಬೇಕು. ಏನು ಬಂದರೂ ಪರವಾಗಿಲ್ಲ, ಎಲ್ಲವನ್ನೂ ಸರಿಪಡಿಸುತ್ತೇನೆಂಬ ವಿಶ್ವಾಸ ಅವರಲ್ಲಿ ಮೂಡಿದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಎಲ್ಲವನ್ನೂ ಕೆಳಹಂತದ

ಅಧಿಕಾರಿಗಳೇ ಸರಿಪಡಿಸುತ್ತಾರೆಂದು ಹೇಳಿದರೆ ಕಷ್ಟವಾಗುತ್ತದೆ. ನಾವು ಇತಿಹಾಸವನ್ನು ನೋಡಿದ್ದೇವೆ. ಹಿಂದಿನ ಕಾಲದಲ್ಲಿ ಯಾವುದೇ ಒಂದು ಕೆಲಸ ಮಾಡುವಾಗಲೂ ತಮ್ಮನ್ನು ತಾವೇ ಅರ್ಪಣೆ ಮಾಡಿಕೊಳ್ಳುತ್ತಿದ್ದರು. ತಾವೇ ಕೊಚ್ಚಿ ಹೋದರೂ ಪರವಾಗಿಲ್ಲ, ಹಿಡಿದ ಕೆಲಸ ಮಾತ್ರ ಸಾಧನೆಯಾಗಬೇಕೆಂದುಕೊಂಡು ಕೆಲಸ ಮಾಡುತ್ತಿದ್ದರು. ಈ ರೀತಿ ಮಾಡಿದಾಗಲೇ ನಾವು ಪ್ರಗತಿಯನ್ನು ಕಾಣಬಹುದು. ವಯಸ್ಕರ ಶಿಕ್ಷಣದ ಬಗ್ಗೆ ಸಾಕಷ್ಟು ಜನ ಸದಸ್ಯರುಗಳು ಮಾತನಾಡಿದ್ದಾರೆ. ಇವೊತ್ತಿನ ದಿವಸ ಹಳ್ಳಿಹಳ್ಳಿಗಳಲ್ಲಿಯೂ ವಯಸ್ಕರ ಶಿಕ್ಷಣ ಕೇಂದ್ರಗಳು ಪ್ರಾರಂಭವಾಗಿವೆ. ಆದರೆ ಅವು ನಡೆಯುತ್ತಿರುವುದನ್ನು ನೋಡಿದಾಗ ನನಗೆ ವ್ಯಸನವಾಗುತ್ತದೆ. ಇಲ್ಲಿ ಪಾಠ ಹೇಳಿಕೊಡುವವರು ಗೌರವಧನ ಪಡೆದುಕೊಳ್ಳುತ್ತಾರೆ. ಆದರೆ ಸರಿಯಾಗಿ ಶಾಲೆಗಳೇ ನಡೆಯುವುದಿಲ್ಲ. ಈ ಒಂದು ಸ್ಥಿತಿಗೆ ಅವು ಬಂದಿವೆ. ಇವುಗಳ ಮೇಲ್ವಿಚಾರಣೆ ಮಾಡುವವರು ಏನು ಹೇಳುತ್ತಾರೆಂದರೆ, ನಾವು ಒಂದೆರಡು ಹಳ್ಳಿಗಳಿಗೆ ಹೋಗುತ್ತೇವೆ. ನಾವು ಹೋಗುವ ಹೊತ್ತಿಗೆ ೮-೯ ಗಂಟೆಯಾಗಿರುತ್ತದೆ, ಆದ್ದರಿಂದ ಶಾಲೆಗಳು ನಡೆಯುತ್ತವೋ ಅಥವಾ ಇಲ್ಲವೋ ಎಂಬುದನ್ನು ನೋಡುವುದಕ್ಕಾಗುವುದಿಲ್ಲ, ಇವು ಸ್ವಯಂ ಪ್ರೇರಿತವಾಗಿ ನಡೆಯಬೇಕೇ ಹೊರತು ಕಾನೂನು ಚಲಾಯಿಸುವುದರ ಮೂಲಕ ನಡೆಸುವುದಕ್ಕಾಗುವುದಿಲ್ಲವೆಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಇದಕ್ಕೆ ಬಹುತೇಕ ಕೇಂದ್ರದಿಂದ ಅನುದಾನ ಸಿಗುತ್ತದೆ. ಆದ್ದರಿಂದ ಈ ಹಣ ಪೋಲಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕಾಗುತ್ತದೆ. ಅಕ್ಷರ ಸೇನೆಯವರು, ವಯಸ್ಕರ ಶಿಕ್ಷಣ ಸಮಿತಿಯವರು ಇದು ಯಶಸ್ವಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಈ ಶಾಲೆಗೆ ಕಲಿಯಲು ೧೫ ವರ್ಷಗಳಿಂದ ೩೫ ವರ್ಷ ವಯಸ್ಸಿನವರು ಏನು ಬರುತ್ತಾರೆ. ಅವರಿಗೆ ಕೆಲವೊಂದು ಅಂಶಗಳನ್ನು ಮನವರಿಕೆ ಮಾಡಿಕೊಡಬೇಕಾಗುತ್ತದೆ.

ಅಧ್ಯಕ್ಷರು.—ತಾವು ಬೇಗನೆ ಮುಗಿಸಿ.

ಶ್ರೀ ಆರ್. ರಾಮಯ್ಯ.—ಕೇಂದ್ರದಿಂದ ಬರುವ ಈ ಹಣವನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿದೆ ಎಂದು ಅವರಿಗೆ ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಕಾಲಾವಕಾಶ ಇಲ್ಲದ ಕಾರಣ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರುವಂತಹ ಈ ಶಿಕ್ಷಣ ಇಲಾಖೆಯ ಮೇಲಿನ ಬೇಡಿಕೆಗಳನ್ನು ನಾನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಮ್ಮ ರಾಜ್ಯದಲ್ಲಿ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅಂದರೆ ಕಳೆದ ಎರಡು ವರ್ಷಗಳಲ್ಲಿ ಶಾಲಾಕಾಲೇಜುಗಳ ಸಂಖ್ಯೆ ಮತ್ತು ಪಾಲಿಟೆಕ್ನಿಕ್‌ಗಳ ಸಂಖ್ಯೆ ಜಾಸ್ತಿ ಆಗಿವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಪ್ರಗತಿಪರವಾದಂಥ ಕೆಲಸಗಳು ಆಗಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಆದರೆ ಈ ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಪ್ರಾರಂಭವಾದಂಥ ಶಾಲಾಕಾಲೇಜುಗಳ ಅಂಕಿಅಂಶಗಳನ್ನು ತೆಗೆದುಕೊಂಡರೆ ನಮ್ಮ ಕಾಲದಲ್ಲಿಯೇ ಹೆಚ್ಚು ಪ್ರಾರಂಭವಾಗಿವೆ ಎಂದು ಹೇಳಬಹುದು. ನೆನ್ನೆ ಮಾತನಾಡಿದ ಹಾಗೂ ಇವೊತ್ತು ಮಾತನಾಡಿದ ಅನೇಕ ಮಾನ್ಯ ಸದಸ್ಯರುಗಳು ಕೆಲವೊಂದು ಪ್ರಗತಿಪರವಾದಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಕ್ಕಳಿಗೆ ಕಲಿಸಲು ಎಂತಹ ಪಠ್ಯಪುಸ್ತಕಗಳನ್ನು ಒದಗಿಸಬೇಕು ಎಂಬ ಬಗ್ಗೆ ಮಾನ್ಯ ಭೂಪತಿಯವರು ಪ್ರಸ್ತಾಪ ಮಾಡಿದರು. ಪ್ರಾಥಮಿಕ ಶಾಲೆಗಳಲ್ಲಿ ಓದತಕ್ಕಂಥ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಗಬೇಕು ಎಂಬ ಬಗ್ಗೆ ಯಾರದೂ ಆಕ್ಷೇಪಣೆ ಇಲ್ಲ. ಈ ಕೆಲಸ ಆಗಲೇ ಬೇಕು. ಇವೊತ್ತಿನ ದಿವಸ ಪ್ರಾಥಮಿಕ ಶಿಕ್ಷಣ ಪದ್ಧತಿ ಬಹಳ ದುಃಖದ ಸ್ಥಿತಿಯಲ್ಲಿದೆ.

ತಾವೂ ಕೂಡ ಹಳ್ಳಿಯಿಂದ ಬಂದಿದ್ದೀರಿ. ಪಟ್ಟಣದ ವಿಷಯ ಬೇರೆ. ಹಳ್ಳಿಯಲ್ಲಿ ಮಕ್ಕಳಿಗೆ ಯಾವ ರೀತಿಯಾದ ಶಿಕ್ಷಣ ಸಿಗುತ್ತದೆಂದು ವಿಚಾರ ಮಾಡಿ ನೋಡಿದಾಗ, ಅಲ್ಲಿ ಬಹಳ ಕೆಟ್ಟ ಪರಿಸ್ಥಿತಿ ಇದೆ. ಇವತ್ತು ಅವರು ಪಟ್ಟಣದಲ್ಲಿ ಓದತಕ್ಕಂತಹ ಮಕ್ಕಳನ್ನು ಎದುರಿಸಬೇಕಾದರೆ, ಬಹಳ ಕಷ್ಟ ಇದೆ. ಇಂತಹ ಶಿಕ್ಷಣ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಮೊನ್ನೆ ಮಾನ್ಯ ಗೋವಿಂದೇಗೌಡರು, ಗುಲ್ಬರ್ಗಾ ಜಿಲ್ಲೆಗೆ ಬಂದಿದ್ದಾಗ, ಅವರ ಸುತ್ತಮುತ್ತ ಇದ್ದಂತಹವರು ಬರೀ ಶಿಕ್ಷಕರೇ ಆಗಿದ್ದರು, ಅವರು ಎತಕ್ಕೆ ಬಂದಿದ್ದರೆಂದರೆ, ತಮ್ಮನ್ನು ವರ್ಗಾವಣೆ ಮಾಡಿ ಎಂದು ಹೇಳುವುದೊಂದನ್ನು ಬಿಟ್ಟರೆ, ಬೇರೆ ಯಾವ ಕೆಲಸಕ್ಕೂ ಬಂದಿರಲಿಲ್ಲ. ನನ್ನ ಹೆಂಡತಿಗೆ ಆರೋಗ್ಯ ಸರಿಯಾಗಿಲ್ಲ, ನನಗೆ ಬಹಳ ಕಷ್ಟವಿದೆ. ನನ್ನನ್ನು ವರ್ಗಾವಣೆ ಮಾಡಿ ಎಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳೂ ಕೂಡ ಕೆಲವು ಸ್ಕೂಲುಗಳಿಗೆ ಭೇಟಿ ಮಾಡಿದರು. ನನ್ನ ಮತಕ್ಷೇತ್ರವಾದ ಗುಲ್ಬರ್ಗಾ ಕ್ಷೇತ್ರದಲ್ಲಿ ೨೨ ಸ್ಕೂಲ್ ಬಿಲ್ಡಿಂಗ್‌ನಲ್ಲಿ ೨೦ ಸ್ಕೂಲುಗಳು ಪ್ರೈವೇಟ್ ಕಟ್ಟಡಗಳಲ್ಲಿವೆ. ಅಲ್ಲಿನ

(ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸ್ಕೂಲುಗಳ ಕಟ್ಟಡಗಳ ಪರಿಸ್ಥಿತಿ ಹೇಗಿದೆಯೆಂದರೆ, ಈಗಲೋ ಆಗಲೋ ಬೀಳುತ್ತವೆಂಬ ಸ್ಥಿತಿಯಲ್ಲಿದೆ. ಮಳೆಗಾಲದಲ್ಲಿ ತಂದೆತಾಯಿಗಳು ತಮ್ಮ ಮಕ್ಕಳನ್ನು ಸ್ಕೂಲುಗಳಿಗೆ ಕಳಿಸಿದರೆ, ತಮ್ಮ ಮಕ್ಕಳು ಸಾಯುತ್ತಾರೆ, ಎನ್ನುವ ಭಯದಿಂದ ಮಕ್ಕಳನ್ನು ಸ್ಕೂಲುಗಳಿಗೆ ಕಳಿಸುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಗುಲ್ಬರ್ಗಾ ಸಿಟಿಯಲ್ಲಿದ್ದಾಗ, ಕಾರ್ಪೊರೇಷನ್ ಏರಿಯಾದಲ್ಲಿದ್ದಾಗ, ಹಳ್ಳಿಗಳಲ್ಲಿ ಇನ್ನು ಯಾವ ಪರಿಸ್ಥಿತಿಯಲ್ಲಿದೆ ಎಂಬುದನ್ನು ಯೋಚನೆ ಮಾಡಬೇಕು. ಕಳೆದ ಸಾರಿ ಮಾನ್ಯ ಶಿಕ್ಷಣ ಮಂತ್ರಿಗಳಾದ ಶ್ರೀ ರಘುಪತಿಯವರು, ಗುಲ್ಬರ್ಗಾ ಜಿಲ್ಲೆಗೆ ಒಂದು ಸಮಾರಂಭಕ್ಕೆಂದು ಬಂದಿದ್ದರು. ಆಗ ನಾನೂ ಮತ್ತು ಸಚಿವರು ಒಂದು ಜೂನಿಯರ್ ಕಾಲೇಜಿಗೆ ಭೇಟಿ ಕೊಟ್ಟೆವು. ಅಲ್ಲಿ ಸಪ್ಲಿಮೆಂಟರಿ ಪರೀಕ್ಷೆ ನಡೆದಿತ್ತು. ಜೂನಿಯರ್ ಕಾಲೇಜಿನ ಹುಡುಗರು ಕೆಳಗಡೆ ಕುಳಿತು ಕೊಂಡು ಬರೆಯುತ್ತಿದ್ದರು. ಅದನ್ನು ನೋಡಿ ಮಾನ್ಯ ಮಂತ್ರಿಗಳಿಗೆ ಬಹಳ ದುಃಖವಾಯಿತು. ಅವರು ಅಲ್ಲೇ ಆರ್ಡರ್ ಕೊಟ್ಟರು, ಇನ್ನು ೨-೩ ತಿಂಗಳಲ್ಲಿ ಇಲ್ಲಿ ಆಸನಗಳಾಗಬೇಕೆಂದು ಹೇಳಿದರು. ಇವತ್ತು ನಮ್ಮ ರಾಜ್ಯದಲ್ಲಿ. ರಾಷ್ಟ್ರದಲ್ಲಿ ಶಿಕ್ಷಣ ವ್ಯವಸ್ಥೆಯು ಬಹಳ ಹೊಲಸಾಗಿದೆ. ಇದು ಎಲ್ಲಾ ಕಡೆ ಹಬ್ಬಿದೆ. ನಮ್ಮಲ್ಲಿ ಅಂಧಶ್ರದ್ಧೆ, ಮೂಢ ನಂಬಿಕೆ ಹೋಗಬೇಕೆಂದು, ರಾಜಕಾರಣಿಗಳು ತಮ್ಮ ಭಾಷಣದಲ್ಲಿ ಹೇಳುತ್ತಾರೆ. ಇಲ್ಲಿ ಮತ್ತು ಹೊರಗಡೆ ಕೂಡ ಹೇಳುತ್ತಾರೆ. ಆದರೆ ಅದು ಕಾರ್ಯಗತ ವಾಗುತ್ತಿಲ್ಲ ನಮ್ಮ ಶಿಕ್ಷಣ ವ್ಯವಸ್ಥೆ ಚೆನ್ನಾಗಿ ಆಗಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈವೊತ್ತಿನ ದಿವಸ ನಮ್ಮಲ್ಲಿ ೪೦ ಸಾವಿರ ಪ್ರಾಥಮಿಕ ಶಾಲೆಗಳಿವೆ. ೧೯೮೫-೮೬ನೇ ಸಾಲಿನಲ್ಲಿ ಏನು ಮಕ್ಕಳ ಸಂಖ್ಯೆ ಇದೆ, ಅದು ಮುಂದಿನ ವರ್ಷಕ್ಕೆ ಕಡಿಮೆ ಆಗುತ್ತದೆ. ಪ್ರೈಮರಿ ಶಾಲೆಗಳಲ್ಲಿ ೫೦ ಲಕ್ಷ ಇರುತ್ತದೆ. ಹೈಸ್ಕೂಲಿನಲ್ಲಿ ೮ ಲಕ್ಷವಾಗುತ್ತದೆ. ಯೂನಿವರ್ಸಿಟಿಗೆ ಹೋದಾಗ, ೩-೪ ಲಕ್ಷ ಇಲ್ಲವೇ ೨೦-೩೦ ಸಾವಿರಕ್ಕೆ ಹೋಗ ಬಹುದು. ಶಿಕ್ಷಣ ಎಲ್ಲಿಯವರೆಗೆ ಮುಟ್ಟುತ್ತದೆ, ಮತ್ತು ಯಾವ ಜನರಿಗೆ ಅದು ಮುಟ್ಟುತ್ತದೆ ಎಂಬುದನ್ನು ವಿಚಾರ ಮಾಡಿದರೆ, ಅದು ಸುವ್ಯವಸ್ಥಿತವಾಗಿರತಕ್ಕಂತಹ ಮಕ್ಕಳಿಗೆ ಮಾತ್ರ ಅದು ಮುಟ್ಟುತ್ತದೆಯೇ ಹೊರತು ಬೇರೆ ಯಾರಿಗೂ ಶಿಕ್ಷಣ ಸಿಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ ೫೦೦-೬೦೦ ಎಕರೆ ಜಮೀನನ್ನು ತೆಗೆದುಕೊಂಡು, ಅಲ್ಲಿ ಒಂದು ಸುಂದರವಾದ ಕಟ್ಟಡವನ್ನು ಯೂನಿವರ್ಸಿಟಿಗೆಂದು ಕಟ್ಟುತ್ತೇವೆ. ಶಿಕ್ಷಣ ಸಂಸ್ಥೆ ಬೆಳೆಯಬೇಕು. ಯೂನಿವರ್ಸಿಟಿ ಬೆಳೆಯಬೇಕು ನಿಜ, ಆದರೆ ನಮ್ಮ ಪ್ರೈಮರಿ ಶಾಲೆಗಳು ಯಾವರೀತಿಯಲ್ಲಿದೆ ಎಂಬುದನ್ನು ವಿಚಾರ ಮಾಡಬೇಕಾಗು ತ್ತದೆ. ಈ ಶಿಕ್ಷಣದ ವ್ಯವಸ್ಥೆ ಬದಲಾವಣೆ ಆಗಬೇಕು. ಪ್ರಾಥಮಿಕ ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಬೇಕೆಂದು ಮಾನ್ಯ ಶಿಕ್ಷಣ ಮಂತ್ರಿಗಳಾದ ಶ್ರೀ ಗೋವಿಂದೇಗೌಡರಲ್ಲಿ ವಿನಂತಿ ಮಾಡಿಕೊಳ್ಳು ತ್ತೇನೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಸರ್ಕಾರೀ ಶಾಲೆಗಳು, ಕಾಲೇಜುಗಳು ಕಡಿಮೆ ಯೇನಿಲ್ಲ. ಅಲ್ಲಿ ಒಳ್ಳೆಯ ರೀತಿಯಿಂದ ಓದಿಸುತ್ತಾರೆ. ಖಾಸಗೀ ಶಾಲೆಗಳಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವಾಗಲೇ ಯಾರು ೫೦ ಪರ್ಸೆಂಟ್, ೬೦ ಪರ್ಸೆಂಟ್, ೭೦ ಪರ್ಸೆಂಟ್, ಪಡೆದಿರುತ್ತಾರೆ, ಅಂತಹವರನ್ನು ತೆಗೆದುಕೊಳ್ಳುತ್ತಾರೆ. ಆದರೆ, ಸರ್ಕಾರೀ ಶಾಲೆಗಳಲ್ಲಿ ೩೦-೩೫ ಪರ್ಸೆಂಟ್ ಬಂದರೂ ತೆಗೆದುಕೊಳ್ಳುತ್ತಾರೆ. ಸರ್ಕಾರೀ ಕ್ಷೇತ್ರದಲ್ಲಿರತಕ್ಕಂತಹ ಸ್ಕೂಲುಗಳಾಗಲೀ, ಕಾಲೇಜುಗಳಾಗಲೀ ಒಳ್ಳೆಯದಿರುವುದಿಲ್ಲವೆಂದು ಜನರ ಮನಸ್ಸಿನಲ್ಲಿ ಒಂದು ಭಾವನೆ ಇದೆ. ಒಬ್ಬ ರೋಗಿಯನ್ನು ಪ್ರೈವೇಟ್ ನರ್ಸಿಂಗ್ ಹೋಮಿಗೆ ಒಯ್ದಾಗ, ಆತನು ಉಳಿಯುವುದಿಲ್ಲ, ಅವನನ್ನು ಬಾಂಬೆಗೋ, ಅಮೇರಿಕಕ್ಕೋ ತೆಗೆದುಕೊಂಡು ಹೋಗಿ ಎಂದು ಹೇಳುತ್ತಾರೆ. ಆದರೆ, ಸರ್ಕಾರೀ ಆಸ್ಪತ್ರೆಯಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲ. ಅವರು ಯಾವುದಾದರೂ ಒಂದು ಟ್ರೀಟ್‌ಮೆಂಟನ್ನು ಮಾಡು ತ್ತಿರುವಾಗ, ಆತನು ಸತ್ತುಹೋದರೆ, ಸರ್ಕಾರೀ ಆಸ್ಪತ್ರೆಯಲ್ಲಿ ಅವ್ಯವಸ್ಥೆ ಇದೆ. ಅನ್ನತಕ್ಕಂತಹ ಭಾವನೆ ನಮ್ಮ ಜನರಲ್ಲಿ ಮೂಡಿ ಬರುತ್ತದೆ. ಇಬ್ಬರು ಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡ ತಕ್ಕದ್ದು ಬಹಳ ಅವಶ್ಯಕ. ಇನ್ನು ಕೆಲವು ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರು ಇದ್ದಾರೆ. ಅಂತಹ ಶಾಲೆ ಗಳಿಗೆ ಇಬ್ಬರು ಶಿಕ್ಷಕರನ್ನು ಒದಗಿಸತಕ್ಕಂಥಾದ್ದು ಬಹಳ ಮುಖ್ಯವಾದ ಕೆಲಸ. ಇನ್ನು ಕೆಲವು ಶಾಲೆ ಗಳಲ್ಲಿ ಜವಾನರಿಲ್ಲ. ಆಗಸ್ಟ್ ತಿಂಗಳಾದರೂ ಖಾಲಿ ಇರುವ ಹುದ್ದೆಗಳಿಗೆ ಶಿಕ್ಷಕರನ್ನು ಟ್ರಾನ್ಸ್‌ಫರ್ ಮಾಡಿಲ್ಲ. ಅಲ್ಲಿಗೆ ಶಿಕ್ಷಕರು ಹೋಗುವ ಹಾಗಿಲ್ಲ. ಮಕ್ಕಳು ಪಾಠ ಕಲಿಯುವ ಹಾಗಿಲ್ಲ. ಕೆಲವು ಶಾಲೆಗಳಲ್ಲಿ ಜವಾನರಿಲ್ಲದೆ, ಶಿಕ್ಷಕರೇ ಕಸಗುಡಿಸುವ, ಗಂಟೆ ಹೊಡೆಯುವ ಕೆಲಸವನ್ನು ಮಾಡಬೇಕಾ ಗುತ್ತದೆ. ಅವರು ಮಕ್ಕಳಿಗೆ ಪಾಠ ಹೇಳುವುದಕ್ಕೆ ಸಮಯ ಸಿಗುವುದಿಲ್ಲ. ಎಲ್ಲೆಲ್ಲಿ ಜವಾನರ ಅವಶ್ಯಕತೆ ಇರುತ್ತದೆಯೋ ಅಂತಹ ಕಡೆಗಳಲ್ಲಿ ಜವಾನರನ್ನು ಒದಗಿಸಿಕೊಡಬೇಕೆಂದು ಹೇಳಬಯಸು ತ್ತೇನೆ. ಇನ್ನು ಡಿ.ಎಲ್.ಆರ್.ಸಿ. ಯಲ್ಲಿ ಅವ್ಯವಹಾರ ನಡೆದಿದ್ದು ಎಲ್ಲರಿಗೂ ಗೊತ್ತಿರುವ ವಿಷಯ ವಾಗಿದೆ. ಕಲ್ಬುರ್ಗಿಯಲ್ಲಿ ಡಿ.ಎಲ್.ಆರ್.ಸಿ. ಯಲ್ಲಿ ಒಬ್ಬರು ಸೆಲೆಕ್ಷನ್ ಆಗಿದ್ದಾರೆ. ಅವರು ಟಿ.ಸಿ. ಹೆಚ್. ೨ನೇ ವರ್ಷದಲ್ಲಿ ಫೇಲಾಗಿದ್ದರೂ ಕೂಡ, ಅವರಿಗೆ ಆರ್ಡರ್ ಕೊಟ್ಟರು ಅವರು ಅಲ್ಲಿ

ಹೋದಾಗ ನನ್ನದು ಟಿ.ಸಿ.ಹೆಚ್. 2ನೇ ವರ್ಷ ಫೇಲಾಗಿದೆಯೆಂದು ಹೇಳಲಿಲ್ಲ. ನಂತರ ಅವರು ಆರ್ಡರ್ ತೆಗೆದುಕೊಂಡು ಹೋದಾಗ, ಅವರು ರಿಪೋರ್ಟ್ ಮಾಡಿಸಿಕೊಳ್ಳಲಿಲ್ಲ. ಅಧಿಕಾರಿಗಳಲ್ಲಿ ಎಲ್ಲರೂ ಕೆಟ್ಟವರಿಲ್ಲ. ಇವತ್ತಿನ ವ್ಯವಸ್ಥೆಯಲ್ಲಿ ಅವರೂ ಕೂಡ ಕೆಟ್ಟವರಿದ್ದಾರೆ. ಮಾನ್ಯ ಮಂತ್ರಿಗಳು ಇಂತಹ ಅಧಿಕಾರಿಗಳನ್ನು ಸಸ್ಪೇಡ್ ಮಾಡಿದರೆ, ಈಸಮಸ್ಯೆ ಬಗೆಹರಿಯುವುದಿಲ್ಲ. ಪ್ರಾಬ್ಲಮ್ ಸಾಲ್ವ್ ಆಗುವುದಿಲ್ಲ ಅವರು ಮತ್ತೆ ರೀಇನ್‌ಸ್ಟೇಟ್ ಆಗುತ್ತಾರೆ. ಇದನ್ನು ಕಲವು ಕಡೆ ನೋಡಿದ್ದೇವೆ. ಯಾವ ವ್ಯಕ್ತಿ ಸಸ್ಪೆಂಡ್ ಆಗಬೇಕೋ ಅವರು ಆಗುವುದಿಲ್ಲ. ಬೇರೆ ಯಾರೋ ಸಸ್ಪೆಂಡ್ ಆಗುತ್ತಾರೆ.

ವೈಸ್ ಚೇರ್‌ಮೆನ್.—ಕಾಂತರವರೆ ಬೇಗ ಮುಗಿಸಿ.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷಣೀಯುವರೆ, ಇವತ್ತಿನ ದಿವಸಗಳಲ್ಲಿ ಯಾರಾದರೂ ತಪ್ಪು ಮಾಡಿದ್ದಾರೆ ಎಂದರೆ ಅವರನ್ನು ಸಸ್ಪೇಡ್ ಮಾಡುತ್ತಾರೆ, ಆದರೆ ಅವರುಗಳನ್ನು ಮತ್ತೆ ರೀಇನ್‌ಸ್ಟೇಟ್ ಮಾಡುತ್ತಾರೆ. ಈ ರೀತಿ ಮಾಡುವುದನ್ನು ಮೊದಲು ನಿಲ್ಲಿಸಬೇಕು. ಅವ್ಯವಹಾರ ಮಾಡಿರುವವರಿಗೆ ಕೇವಲ ಬರೀ ಸಸ್ಪೆಂಡ್ ಮಾಡಿದರೆ ಸಾಲದು, ಅವ್ಯವಹಾರ ಆಗಿರುವ ನಷ್ಟವನ್ನು ಅವರಿಂದಲೇ ತುಂಬಿಸಿಕೊಳ್ಳುವ ರೀತಿಯಲ್ಲಿ ಕಾನೂನನ್ನು ಮಾಡಬೇಕು ಆಗ ಇಂತಹ ಅವ್ಯವಹಾರಗಳು ನಡೆಯುವುದು ತಪ್ಪುತ್ತದೆ.

ವೈಸ್ ಚೇರ್‌ಮೇನ್.—ದಯವಿಟ್ಟು ಬೇಗ ಮುಗಿಸಿ. ಇನ್ನು ಬಹಳ ಜನರು ಮಾತನಾಡುವುದು ಇದೆ.

ಶ್ರೀ ಎಸ್. ಕೆ. ಕಾಂತ.—ಪ್ರೀ ಯೂನಿವರ್ಸಿಟಿ ಬಗ್ಗೆ ಸ್ವಲ್ಪ ಮಾತನಾಡುತ್ತೇನೆ. ನನ್ನ ಕ್ಷೇತ್ರವು ಬಹಳ ಹಿಂದುಳಿದ ಭಾಗವಾಗಿರುತ್ತದೆ. ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ವೆಟ್ರಿನರಿ ಮತ್ತು ಅಗ್ರಿಕಲ್ಚರಲ್ ಕಾಲೇಜುಗಳು ಪ್ರಾರಂಭವಾದವು. ಇದರಿಂದ ಬಹಳ ಒಳ್ಳೆಯ ಕೆಲಸವಾಗಿದೆ. ಆದರೆ ಸ್ಥಳೀಯ ಜನರಿಗೆ ಇದರಿಂದ ಯಾವ ಲಾಭವೂ ಇಲ್ಲ. ಈ ಕಾಲೇಜುಗಳಲ್ಲಿ ಅಲ್ಲಿನ ಹುಡುಗರಿಗೆ ಅಡ್‌ಮಿಷನ್ ಸಿಗುತ್ತಿಲ್ಲ. ಆದುದರಿಂದ ಇನ್ನು ಮುಂದೆ ಸ್ಥಳೀಯ ವಿದ್ಯಾರ್ಥಿಗಳಿಗೆ ಆ ಕಾಲೇಜುಗಳಲ್ಲಿ ಸೀಟು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಮಾನ್ಯ ಶಿಕ್ಷಣ ಮಂತ್ರಿಗಳು ಬಹಳ ಪ್ರಗತಿ ಪರವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಆದುದರಿಂದ ಅವರನ್ನು ನಾನು ಕೇಳಿಕೊಳ್ಳುವುದು ಇಷ್ಟೇ ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಅಥವಾ ಗುಲ್ಬರ್ಗಾ ಡಿವಿಷನ್ನಿಗೆ ಸೇರಿವಂತೆ ಒಂದು ಪಿ.ಯು.ಸಿ. ಬೋರ್ಡ್‌ನ್ನು ಮಾಡಿ ಹುಡುಗರಿಗೆ ಅನುಕೂಲ ಮಾಡಿಕೊಡಬೇಕು.

ವೈಸ್ ಚೇರ್‌ಮೇನ್.—ಕಾಂತಾರವರೇ ಬೇಗನೆ ಮುಗಿಸಿ.

ಶ್ರೀ ಎಸ್. ಕೆ. ಕಾಂತ.—ನಮ್ಮ ಭಾಗಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟು ಹಿಂದುಳಿದ ಪ್ರದೇಶವಾದ ನಮ್ಮ ಭಾಗವನ್ನು ಮುಂದುವರಿಸಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪ್ರಭಾಕರ್ ಸದಾಶಿವ ರಾಣೆ (ಕಾರವಾರ).—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ಪರವಾಗಿ ಮಂಡಿಸಿದ ಬೇಡಿಕೆಗಳನ್ನು ವಿರೋಧಿಸುತ್ತಾ ಆ ಇಲಾಖೆಯ ಚಟುವಟಿಕೆಗಳ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗಾಗಲೇ ಅನೇಕ ಹಿರಿಯ ಸದಸ್ಯರು ಶಿಕ್ಷಣ ಇಲಾಖೆಯಲ್ಲಿ ನಡೆಯುತ್ತಿರುವಂತಹ ಅವ್ಯವಸ್ಥೆ, ಗೊಂದಲ ಇನ್ನೂ ಅನೇಕ ದೋಷಗಳ ಬಗ್ಗೆ ವಿವರವಾಗಿ ಹೇಳಿದ್ದಾರೆ. ಆದ್ದರಿಂದ ಅದೇ ವಿಷಯಗಳ ಬಗ್ಗೆ ಮತ್ತೆ ಹೇಳುವುದಿಲ್ಲ. ಈ ಶಿಕ್ಷಣ ಇಲಾಖೆಯ ಈ ಎಲ್ಲಾ ದೋಷಗಳಾಗಲೀ, ಅವ್ಯವಸ್ಥೆಯಾಗಲೀ ಇವುಗಳ ಬಗ್ಗೆ ಒಂದೇ ಒಂದು ಮಾತಿನಲ್ಲಿ ಹೇಳಬೇಕು ಎಂದರೆ ಈ ದೋಷಗಳು ಬೇರೆ ಇಲಾಖೆಗಳಲ್ಲೂ ಸಹ ಬಹಳಷ್ಟು ಇರುತ್ತವೆ. ಆದರೆ ಈ ಶಿಕ್ಷಣ ಇಲಾಖೆಯಲ್ಲಿ ಇರುವಂತಹ ದೋಷಗಳು ನಮ್ಮ ಸಮಾಜದ ಮೇಲೆ ಅತಿ ವಿಪರೀತವಾದಂತಹ ಪರಿಣಾಮವಾಗುತ್ತದೆ ಎನ್ನುವ ಒಂದು ವಿಚಾರದಿಂದ ನಾವು ಇವುಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ. ನಮ್ಮ ಸಮಾಜದಲ್ಲಿರುವಂತಹ ಎಲ್ಲಾ ಅನಿಷ್ಟಗಳಿಗೂ ಮೂಲ ಕಾರಣ ಏನೆಂದರೆ ನಮ್ಮಲ್ಲಿ ಜಾತಿಯತೆಯಿಂದ ತುಂಬಿರುವಂಥ ಶಿಕ್ಷಣ ಪದ್ಧತಿ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಈ ಶಿಕ್ಷಣ ಪದ್ಧತಿಯ ಸುಧಾರಣೆ ಬಗ್ಗೆ ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಅನೇಕ ಆಯೋಗಗಳನ್ನು ಸರ್ಕಾರ ರಚಿಸಿ ಈ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯಾಗಬೇಕು ಎನ್ನುವುದರ ಬಗ್ಗೆ ಪ್ರಯತ್ನಪಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿಯಂತೂ ಈ ಬದಲಾವಣೆ ಬಹಳಷ್ಟು ಸಲ ಆಗಿದೆ. ಅಂದರೆ ಈ ಶಿಕ್ಷಣದ ಪ್ರಾಥಮಿಕ ಹಂತದಲ್ಲಿಯಾಗಲೀ ಮಾಧ್ಯಮಿಕ ಹಂತದಲ್ಲಿಯಾಗಲೀ ಕಾಲೇಜು ಶಿಕ್ಷಣದ ಮಟ್ಟದಲ್ಲಿ

ಯಾಗಲೀ ಹೆಚ್ಚು ಬದಲಾವಣೆಯಾಗಿಲ್ಲ. ಪ್ರತಿ ಆಯೋಗವು ಈ ಬದಲಾವಣೆ ಬಗ್ಗೆ ಶಿಫಾರಸ್ ಮಾಡುವಾಗ ಒಂದು ಸಾಮಾನ್ಯವಾದಂತಹ ಉದ್ದೇಶ ಇಟ್ಟುಕೊಂಡಿದ್ದು, ಅದೇನೆಂದರೆ ಶಿಕ್ಷಣದಲ್ಲಿ ಪರಿಪೂರ್ಣವಾದಂತಹ ಕ್ರಾಂತಿಯಾಗಬೇಕು, ಶಿಕ್ಷಣದಿಂದ ನಮ್ಮ ಸಮಾಜದಲ್ಲಿ ಸುಧಾರಣೆಯಾಗ ಬೇಕು, ರಾಷ್ಟ್ರೀಯ ಭಾವನೆ ಬೆಳೆಯಬೇಕು ಮತ್ತು ಮಗುವಿನ ಮನಸ್ಸು ಪರಿಪೂರ್ಣವಾಗಿ ವಿಕಾಸ ವಾಗಬೇಕು ಎನ್ನುವುದೇ ಈ ಎಲ್ಲಾ ಆಯೋಗಗಳ ಉದ್ದೇಶವಾಗಿತ್ತು. ಆದರೆ ಆ ಆಯೋಗಗಳು ಮಾಡಿದಂತಹ ಶಿಫಾರಸ್ಸುಗಳು ಕೇವಲ ಕಾಗದದ ಮೇಲೆ ಇದೆಯೇ ಹೊರತಾಗಿ ಅದು ಅನುಷ್ಠಾನದಲ್ಲಿ ಬರಲಿಲ್ಲ. ಈಗ ಸದ್ಯಕ್ಕೆ ಪ್ರೌಢಶಾಲೆಗಳಲ್ಲಿ ಅಥವಾ ಹೈಸ್ಕೂಲುಗಳಲ್ಲಿ ಇರುವಂತಹ ಪಠ್ಯ ಕ್ರಮದಲ್ಲಿ ಮಾರಲ್ ಎಜುಕೇಷನ್, ನೀತಿ ಶಿಕ್ಷಣ ಮತ್ತು ವರ್ಕ್ ಎಕ್ಸ್‌ಪೀರಿಯನ್ಸ್, ಕಾರ್ಯಾನುಭವ ಎನ್ನುವ ಎರಡು ವಿಷಯಗಳನ್ನು ಸಹಾ ಸೇರಿಸಿದ್ದೇವೆ. ಆದರೆ ಅನೇಕ ಪ್ರೌಢಶಾಲೆಗಳಲ್ಲಿ ನೋಡಿದಾಗ ಈ ಎರಡು ವಿಷಯಗಳು ಕೇವಲ ಟೈಮ್‌ಟೇಬಲ್‌ನಲ್ಲಿ ಇರುತ್ತವೆಯೇ ಹೊರತಾಗಿ ಪ್ರತ್ಯಕ್ಷವಾಗಿ ಕಂಡು ಬರುವುದು ಬಹಳಷ್ಟು ಕಡಿಮೆ. ನಾನು ಅನೇಕ ಪ್ರೌಢಶಾಲೆಗಳನ್ನು ನೋಡಿದ್ದೇನೆ, ಅಲ್ಲಿ ಕಂಡು ಬರುವುದು ಏನು ಎಂದರೆ ಮಾರಲ್ ಎಜುಕೇಷನ್ ಮತ್ತು ವರ್ಕ್ ಎಕ್ಸ್‌ಪೀರಿಯನ್ಸ್‌ಗಳನ್ನು ಬೇರೆ ವಿಷಯಗಳ ಜೊತೆ ಅಡ್‌ಜೆಸ್ಟ್ ಮಾಡಿಕೊಂಡು ಹೋಗುತ್ತಿದ್ದಾರೆ. ನಾವು ಅಂದರೆ ಸರ್ಕಾರವು ಪ್ರಯಾಸಪಟ್ಟು ಅನೇಕ ಶಿಕ್ಷಣ ತಜ್ಞರನ್ನು, ಅನುಭವಿಗಳನ್ನು ಒಳಗೊಂಡ ಆಯೋಗಗಳನ್ನು ರಚಿಸಿ, ಆ ಆಯೋಗಗಳು ಕೊಡುವ ಶಿಫಾರಸ್ಸನ್ನು ಅತ್ಯಂತ ನಿಷ್ಠೆಯಿಂದ ಜಾರಿಗೆ ತರದಿದ್ದರೆ ಅದರಿಂದ ಸರ್ಕಾರದ ಉದ್ದೇಶ ಸಫಲವಾಗುವುದಿಲ್ಲವೆಂದು ಹೇಳಬಯಸುತ್ತೇನೆ. ಆದ್ದರಿಂದ, ಆಯೋಗಗಳು ನಮ್ಮ ಶಿಕ್ಷಣದ ಬಗ್ಗೆ ಮತ್ತು ಪಠ್ಯ ಕ್ರಮದ ಬಗ್ಗೆ ಅಥವಾ ಪಠ್ಯ ಅಭ್ಯಾಸದ ಬಗ್ಗೆ ಏನು ಶಿಫಾರಸ್ಸು ಮಾಡಿದೆ ಅದನ್ನು ಅತ್ಯಂತ ಅನುಚಾನವಾಗಿ ಜಾರಿಗೆ ತರುವಂತಹ ಪ್ರಯತ್ನವನ್ನು ಮಾಡಬೇಕಾಗಿದೆ. ಇದನ್ನು ಜಾರಿಗೆ ತರುವುದಕ್ಕೆ ಶಿಕ್ಷಣ ಇಲಾಖೆಯ ಅಧಿಕಾರಿಗಳ ಮೇಲೆ ಸರ್ಕಾರದವರು ಒಂದು ಜವಾಬ್ದಾರಿಯನ್ನು ಹೊರಿಸಬೇಕು. ಏಕೆಂದರೆ ಅನೇಕ ಕಡೆ ಪ್ರಾಥಮಿಕ ಹಾಗು ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಗೆ ಈ ಶಿಕ್ಷಣದ ಅಧಿಕಾರಿಗಳು ತಪಾಸಣೆಗೆ ಹೋದಾಗ ಅವರು ಇವುಗಳ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದರೆ ಆ ರೀತಿ ಕ್ರಮವನ್ನು ಕೈಗೊಳ್ಳುವುದಕ್ಕೆ ಅಧಿಕಾರಿಗಳು ಪ್ರಯತ್ನ ಮಾಡಿರುವುದು ನನಗೆ ಕಂಡುಬಂದಿರುವುದಿಲ್ಲ. ಕ್ರಮ ಕೈಗೊಳ್ಳುವುದು, ಅಷ್ಟೇ ಅಲ್ಲ, ಮಾರಲ್ ಎಜುಕೇಷನ್ ಮತ್ತು ವರ್ಕ್ ಎಕ್ಸ್‌ಪೀರಿಯನ್ಸ್ ಬಗ್ಗೆ ಪರೀಕ್ಷೆಗಳಲ್ಲಿ ನಿರ್ದಿಷ್ಟವಾದಂತಹ ಗುಣಗಳು ಅಂದರೆ ಅಂಕಗಳನ್ನು ಕೊಡಬೇಕು ಆಗ ಮಾತ್ರ ಸರ್ಕಾರದ ಒಂದು ಉದ್ದೇಶ ಸಫಲವಾಗುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ.

ಈ ಶಿಕ್ಷಣ ಪದ್ಧತಿಯ ಸುಧಾರಣೆ ವಿಷಯದಲ್ಲಿ ಹೇಳುವುದಾದರೆ, ಇದರ ಬಗ್ಗೆ ನಾನು ಈಗಾಗಲೇ ಹೇಳಿದಂತೆ, ಮಗುವಿನ ಪರಿಪೂರ್ಣ ವಿಕಾಸ, ಮತ್ತು ರಾಷ್ಟ್ರೀಯ ಭಾವೈಕ್ಯತೆ ಮತ್ತು ರಾಷ್ಟ್ರೀಯ ಭಾವನೆಯನ್ನು ಬಲಪಡಿಸುವುದಕ್ಕೆ ಶಿಕ್ಷಣವು ಸಹಾಯಕವಾಗಿರಬೇಕು. ಇದು ಆಗಬೇಕಾದರೆ ಈ ಶಿಕ್ಷಣದ ಪದ್ಧತಿಯಲ್ಲಿ ನಾವು ಹೆಚ್ಚು ಹೆಚ್ಚಾಗಿ ವೃತ್ತಿಪರ ಶಿಕ್ಷಣವನ್ನು ಅನುಷ್ಠಾನಕ್ಕೆ ತರಬೇಕಾಗುತ್ತದೆ. ಆದರೆ ನಾನು ಅತ್ಯಂತ ವಿಷಾದದಿಂದ ಹೇಳಬೇಕಾಗುತ್ತದೆ, ಮಾನ್ಯ ಸಚಿವರು ಮಂಡಿಸಿದಂತಹ ಈ ಒಂದು ಬೇಡಿಕೆಯಲ್ಲಿ, ವೃತ್ತಿಪರ ಶಿಕ್ಷಣದ ಬಗ್ಗೆ ಏನನ್ನೂ ಹೇಳಲಿಲ್ಲ. ಅಲ್ಲದೇ ಯೋಜನೆಯ ಹಂಚಿಕೆಯಲ್ಲಿ ೬೦ ಲಕ್ಷ ರೂಪಾಯಿಗಳಿಂದ ೨೪ ಸಾವಿರ ರೂಪಾಯಿಗಳಿಗೆ ಕಡಿತಗೊಳಿಸುವುದರಿಂದ ಈ ವರ್ಷ ವೃತ್ತಿ ಶಿಕ್ಷಣ ವನ್ನು ವಿಸ್ತರಿಸಲು ಸಾಧ್ಯವಿಲ್ಲದ ಹಾಗೆ ಆಗಿದೆ. ಯಾವ ಒಂದು ವಿಭಾಗ ಶಿಕ್ಷಣ ಇಲಾಖೆಯ ಮೇಲೆ ಅತ್ಯಂತ ಪರಿಣಾಮವನ್ನು ಬೀರುವಂತಾದ್ದು ಆಗಿದೆಯೋ ಅದರ ಬಗ್ಗೆ ನಿರ್ಲಕ್ಷ ವಹಿಸಿ ೬೦ ಲಕ್ಷ ರೂಪಾಯಿಗಳಿಂದ ಕೇವಲ ೨೪ ಸಾವಿರ ರೂಪಾಯಿಗಳಿಗೆ ಇಳಿಸಿದುದರ ಪರಿಣಾಮವಾಗಿ. ಆ ಕಾರಣ ದಿಂದ ನಮ್ಮ ಶಿಕ್ಷಣದ ಪದ್ಧತಿಯ ಕ್ರಮ ಯಾವ ದುಸ್ಥಿತಿಗೆ ಇಳಿಯುವುದಕ್ಕೆ ಸಾಧ್ಯವಾಗುತ್ತದೆ, ಕಾರಣ ವಾಗುತ್ತದೆ ಎಂದು ಹೇಳಬಯಸುತ್ತೇನೆ. ಸರಕಾರ ಈ ವಿಚಾರದಲ್ಲಿ ಪುನಃ ಆಲೋಚನೆ ಮಾಡಬೇಕು. ಅದಲ್ಲದೇ ನಮ್ಮ ಮಾನ್ಯ ಸದಸ್ಯರಾದ ಆಚಾರ್ಯರವರೂ ಈ ಶಾರೀರಕ ಶಿಕ್ಷಣದ ಮಹತ್ವದ ಬಗ್ಗೆ ಹೇಳಿದರು. ಇಲ್ಲಿಯೂ ಈ ಶಾರೀರಿಕ ಶಿಕ್ಷಣವನ್ನು, ಅದರ ಮಹತ್ವವನ್ನು ಅಳವಡಿಸುವಲ್ಲಿ ಕೂಡಾ ನಾವು ವಿಫಲರಾಗಿದ್ದೇವೆಂದು ಹೇಳಬೇಕಾಗುತ್ತದೆ. ಸರಕಾರದವರು ಹಿಂದೆ ಒಂದು ಸಾರಿ ಘೋಷಣೆ ಮಾಡಿದ್ದರು. ಪ್ರತಿಯೊಂದು ಶಾಲೆಗೂ ಶಾರೀರಿಕ ಶಿಕ್ಷಣದ ಅಧ್ಯಾಪಕರನ್ನು ನೇಮಿಸುತ್ತೇವೆಂದು ಹೇಳಿದ್ದರು. ಆದರೆ ಅದನ್ನು ಇನ್ನೂ ಜಾರಿಗೆ ತಂದಿಲ್ಲ. ಹೋಬಳಿಯಲ್ಲಿರುವಂತಹ ಒಂದು ಪ್ರಾಥ. ಎಕ ಶಾಲೆಗೂ ಸಹ ಶಾರೀರಿಕ ಶಿಕ್ಷಣ ಪದ್ಧತಿಯನ್ನು ಮಾಡಲಿಕ್ಕೆ ಶಿಕ್ಷಕರನ್ನು ನೇಮಿಸಲಿಕ್ಕೆ ಸಾಧ್ಯವಾಗಿಲ್ಲ. ಇದರಿಂದ ಶಿಕ್ಷಣದ ಒಂದು ಉದ್ದೇಶ ಏನಿದೆ ಅದನ್ನು ಸಾಧಿಸುವುದಕ್ಕೆ ಕಷ್ಟವಾಗುತ್ತದೆಂದು ಹೇಳ ಬಯಸುತ್ತೇನೆ.

ಇನ್ನು ಸಿಂಗಲ್ ಟೀಚರ್ಸ್ ಸ್ಕೂಲ್ಸ್ ಬಗ್ಗೆ ನಾನು ಏನನ್ನೂ ಹೇಳದಿದ್ದರೇ ಒಳ್ಳೆಯದು ಎಂದು ನನಗನ್ನಿಸುತ್ತದೆ. ಅವುಗಳ ದುಃಸ್ಥಿತಿ ಬಗ್ಗೆ, ದುರವಸ್ಥೆ ಬಗ್ಗೆ ಏನೂ ಹೇಳಬಾರದು ಎನ್ನುವಷ್ಟು ದುಃಸ್ಥಿತಿಯಲ್ಲಿವೆ. ಯಾಕೆಂದರೆ ಕೇವಲ ಒಬ್ಬರೇ ಶಿಕ್ಷಕರಿರುವಂತಹ ಈ ಶಾಲೆಗಳ ಅವ್ಯವಸ್ಥೆ ಅತ್ಯಂತ ಶೋಚನೀಯವಾಗಿದೆ. ಸರಕಾರದವರು ಒಂದು ಘೋಷಣೆಯನ್ನು ಮಾಡಿದರು, ಏನೆಂದರೆ, ಈ ಸಿಂಗಲ್ ಟೀಚರ್ಸ್ ಸ್ಕೂಲ್‌ಗಳಿಗೆ ನಾವು ಇನ್ನೊಬ್ಬ ಶಿಕ್ಷಕರನ್ನು ನೇಮಿಸುತ್ತೇವೆ ಎಂದು. ಆದರೆ ಆ ವ್ಯವಸ್ಥೆಯು ಇವೊತ್ತಿಗೂ ಕೂಡ ಸರಕಾರದವರಿಗೆ ಮಾಡಲಿಕ್ಕೆ ಆಗಲಿಲ್ಲ. ಆದುದರಿಂದ ಈ ಈ ವ್ಯವಸ್ಥೆಯನ್ನು ಆದಷ್ಟು ಜಾಗ್ರತೆ ಜಾರಿಗೆ ತಂದರೆ ಮಾತ್ರ ಈ ಶಾಲೆಗಳ ದುಃಸ್ಥಿತಿಯನ್ನು ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆ. ಸರಕಾರಿ ಶಾಲೆಗಳ ಕಟ್ಟಡದ ದುರಸ್ತಿಯ ಬಗ್ಗೆ ಹಣವನ್ನು ಮಂಜೂರು ಮಾಡುತ್ತಾರೆ. ಸಮನಾಗಿ ಹಂಚುತ್ತಾರೆ, ನಮ್ಮ ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆ ಬೀಳುತ್ತದೆ. ನಮಗೆ ಮಳೆಯ ರಕ್ಷಣೆಗಾಗಿ ಬೇರೆಯಾವ ಒಂದು ವ್ಯವಸ್ಥೆ ಬೇಕಾಗುತ್ತದೆ. ರಾಜ್ಯದಲ್ಲಿ ಬರಗಾಲ ಇದ್ದರೂ ಸಹ ನಮ್ಮ ಜಿಲ್ಲೆಯಲ್ಲಿ ಮಳೆ ಬರುತ್ತಾ ಇರುತ್ತದೆ. ನಮ್ಮ ಜಿಲ್ಲೆಗೆ ಶಾಲಾ ಕಟ್ಟಡಗಳ ದುರುಸ್ತಿಗಾಗಿ ಹೆಚ್ಚಿನ ಹಣವನ್ನು ಮಂಜೂರು ಮಾಡಬೇಕಾಗುತ್ತದೆ. ಆದರೆ ಸರಕಾರದವರು ಎಲ್ಲಾ ಜಿಲ್ಲೆಗಳಿಗೂ ಸಮನಾಗಿ ಹಂಚುತ್ತಾರೆ. ಆದುದರಿಂದ ನಮ್ಮ ಜಿಲ್ಲೆಯಲ್ಲಿ ಬೀಳುವ ಮಳೆಯಿಂದ ರಕ್ಷಣೆ ಹೊಂದುವುದಕ್ಕೆ ನಮಗೆ ಬೇರೆ ಒಂದು ವ್ಯವಸ್ಥೆಯನ್ನು ಸರಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮಗೆ ಕೊಟ್ಟ ಹಣವೆಲ್ಲಾ ಶಾಲೆಗಳ ಕಟ್ಟಡದ ದುರಸ್ತಿಯ ಬಗ್ಗೆ ಖರ್ಚಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಅಲ್ಲಿರುವ ಶಾಲೆಗಳ ದುರಸ್ತಿ ಬಗ್ಗೆ ಅದರಲ್ಲೂ ಮಳೆಗಾಲದಲ್ಲಿನ ದುರಸ್ತಿ ಬಗ್ಗೆ ಹೆಚ್ಚು ಹಣವನ್ನು ಸರಕಾರದವರು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬರಗಾಲದ ವಿಷಯದಲ್ಲಿ ಹೇಳುವುದಾದರೆ ಅನೇಕ ಕಡೆಗಳಲ್ಲಿ ಬರಗಾಲ ಬಂದಿರುವ ಬಗ್ಗೆ ಕೇಳಿದ್ದೇವೆ. ಹಾಗೆಯೇ ಪ್ರಪಂಚದಲ್ಲಿಯೇ ಅತ್ಯಂತ ಬರಗಾಲ ಪೀಡಿತ ಪ್ರದೇಶವಾದ ಇಥಿಯೋಪಿಯಾ ಬಗ್ಗೆಯೂ ಕೇಳಿದ್ದೇವೆ. ಮೇಲಿಂದ ಮೇಲೆ ಅತಿ ಬರಗಾಲಕ್ಕೆ ತುತ್ತಾಗಿ ಆ ಪ್ರದೇಶದ ಜನ ಯಾವ ರೀತಿಯಲ್ಲಿ ಕಷ್ಟಕ್ಕೆ ಈಡಾಗುತ್ತಿದ್ದಾರೆ ಅನ್ನುವುದನ್ನು ಕೇಳಿದ್ದೇವೆ. ಇನ್ನು ನಮ್ಮ ಸೂಪಾ ತಾಲ್ಲೂಕ್‌ನಲ್ಲಿ ಶಿಕ್ಷಣದ ವಿಚಾರದಲ್ಲಿ ಎಷ್ಟು ದುರ್ವ್ಯವಸ್ಥೆ ಇದೆ ಅನ್ನುವುದನ್ನು ವಿಷಾದದಿಂದ ಹೇಳುತಾ ಇದ್ದೇನೆ. ಬಹುಶಃ ಈ ವಿಚಾರದಲ್ಲಿ ನಮ್ಮ ಸೂಪಾ ತಾಲ್ಲೂಕು ಕರ್ನಾಟಕದ ಇಥಿಯೋಪಿಯಾ ಎಂದು ಅನಿಸುತ್ತದೆ. ಈ ತಾಲ್ಲೂಕಿಗೆ ಶಿಕ್ಷಣದ ಕ್ಷೇತ್ರದಲ್ಲಿ, ಪ್ರತಿಯೊಂದರಲ್ಲಿಯೂ ಕೊರತೆ ಇದೆ. ಅಲ್ಲಿಯ ಉಪಾಧ್ಯಾಯರುಗಳ ನೇಮಕಾತಿಯಲ್ಲಾಗಲೀ, ಶಾಲಾ ಕಟ್ಟಡಗಳ ವಿಷಯದಲ್ಲಾಗಲಿ, ಶಿಕ್ಷಣ ಇಲಾಖೆಯ ಕಚೇರಿಯ ವಿಷಯದಲ್ಲಾಗಲೀ ಪ್ರತಿಯೊಂದರಲ್ಲಿಯೂ ತೊಂದರೆಯನ್ನು ಅನುಭವಿಸುತ್ತಾ ಇದೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸೂಪಾ ತಾಲ್ಲೂಕಿನ ಎ. ಇ. ಓ. ಕಛೇರಿ ಏನಿದೆ ಅದಕ್ಕೆ ಇನ್ನು ಒಂದು ಸ್ವಂತವಾದ ಕಟ್ಟಡ ಇಲ್ಲ. ಹಲವಾರು ಕಡೆಗಳಲ್ಲಿ ಕಟ್ಟಡಗಳು ಇಲ್ಲ ಎಂದು ಹೇಳಬಹುದು. ಆದರೆ ಇಲ್ಲಿಯ ಪರಿಸ್ಥಿತಿಯೇ ಬೇರೆಯಾಗಿದೆ. ಈ ತಾಲ್ಲೂಕು ಪ್ರದೇಶ ಮೊದಲು ಕಾಳೀನದಿ ಜಲವಿದ್ಯುತ್ ಯೋಜನೆಯಲ್ಲಿ ಮುಳುಗಡೆ ಆಗಿದ್ದು, ಅನಂತರ ಜೊರ್ಡಕ್ಕೆ ಸ್ಥಳಾಂತರಿಸಲಾಯಿತು. ಅಲ್ಲಿ ಬೇರೆ ಯಾವುದೇ ಖಾಸಗಿ ಕಟ್ಟಡಗಳು ಕೂಡಾ ಕಚೇರಿಗಾಗಿ ಸಿಗುವುದಿಲ್ಲ. ಇದರಿಂದ ಏನಾಗಿದೆ ಎಂದರೆ ಒಂದು ಸರಕಾರಿ ಆಸ್ಪತ್ರೆಯ ಒಂದೆರಡು ಕೋಣೆಗಳಲ್ಲಿ ಸೂಪಾ ತಾಲ್ಲೂಕು ಎ. ಇ. ಓ. ಕಚೇರಿ ಈಗ ನಡೆಯುತ್ತಾ ಇದೆ. ಅಲ್ಲಿಯ ರೋಗಿಗಳ ಮಧ್ಯೆ ಈ ಸರಕಾರಿ ಅಧಿಕಾರಿಗಳು ವಾಸಮಾಡತಕ್ಕಂತಹ ಒಂದು ದುಃಸ್ಥಿತಿ ಇದೆ. ನಾನು ಈ ವಿಷಯವನ್ನು ಈಗಾಗಲೇ ಮಾನ್ಯ ಸಚಿವರ ಗಮನಕ್ಕೂ ತಂದಿದ್ದೇನೆ. ಆದುದರಿಂದ ಶಿಕ್ಷಣ ಇಲಾಖೆಯ ಬಜೆಟ್‌ನಲ್ಲಾಗಲೀ ಅಥವಾ ಯಾವುದೇ ಇತರ ಲಮ್‌ಸಮ್ ಅಮೌಂಟ್‌ನಿಂದಾಗಲೀ ಸೂಪಾ ತಾಲ್ಲೂಕು ಶಿಕ್ಷಣ ಇಲಾಖೆ ಕಚೇರಿಗೆ ಒಂದು ಸ್ವಂತ ಕಟ್ಟಡಕ್ಕೆ ಹಣವನ್ನು ಬೇಗ ಮಂಜೂರು ಮಾಡಿಕೊಡಬೇಕೆಂದು ಹೇಳುತ್ತಾ ಇದ್ದೇನೆ.

ಅನಂತರ ಈ ಶಿಕ್ಷಣ ಇಲಾಖೆಯ ಭ್ರಷ್ಟಾಚಾರದ ಬಗ್ಗೆ ಹೇಳಬೇಕೆಂದರೆ, ಭ್ರಷ್ಟಾಚಾರ ಇದು ಸರ್ವವ್ಯಾಪಿ, ಇದು ಸರ್ವಕಾಲದಲ್ಲಿಯೂ ಇದೆ ಎಂದು ಹೇಳುತ್ತಾರೆ. ಆದರೆ ಇದು ಸಾಮಾನ್ಯವಾಗಿ ರೆವಿನ್ಯೂ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ನೋಡುತ್ತಾ ಇರುತ್ತೇವೆ. ಆದರೆ ನನಗೆ ತಿಳಿದ ಮಟ್ಟಿಗೆ ನನ್ನ ಜಿಲ್ಲೆಯಲ್ಲಿನ ಪರಿಸ್ಥಿತಿಯನ್ನು ಅಭ್ಯಾಸ ಮಾಡಿದಾಗ ನಮ್ಮ ಜಿಲ್ಲೆಯಲ್ಲಿ ಬೇರೆ ಎಲ್ಲಾ ಇಲಾಖೆಗಳಿಗಿಂತಲೂ ಈ ಶಿಕ್ಷಣ ಇಲಾಖೆಯ ಕಛೇರಿಗಳಲ್ಲಿ ಹೆಚ್ಚಾಗಿ ಭ್ರಷ್ಟಾಚಾರ ಇದೆ ಎಂದು ಹೇಳಬೇಕಾಗುತ್ತದೆ. ಅದು ಅತಿ ವಿಪರೀತವಾಗಿ ನಡೆಯುತ್ತಿದೆ, ಬಹಿರಂಗವಾಗಿ ನಡೆಯುತ್ತಿದೆ, ನಮ್ಮ ಶಿಕ್ಷಣ ಸಚಿವರಾದ ಮಾನ್ಯ ಗೋವಿಂದೇಗೌಡರು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಅಲ್ಲಿನ ಅಧಿಕಾರಿಗಳ ಸಮ್ಮೇಳನವನ್ನು ಮಾಡಿದರು. ಸಭೆಯನ್ನು ಕರೆದಾಗ ಅಲ್ಲಿನ ಪ್ರತಿಯೊಬ್ಬ ಎ.ಇ.ಓ.ಗಳ ಕಡೆಯಿಂದ ರಿಪೋರ್ಟನ್ನು ತರಿಸಿಕೊಂಡು ನಿಮ್ಮ ಕ್ಷೇತ್ರದಲ್ಲಿ ಯಾವ

ರೀತಿ ಕ್ರಮ ಕೈಗೊಂಡಿದ್ದೀರಿ ಮತ್ತು ನೀವು ತಪ್ಪಿತಸ್ಥ ಅಧ್ಯಾಪಕರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದಾಗ ಮೇಲಿನ ಅಧಿಕಾರಿಗಳು ಡಿ. ಡಿ. ಪಿ. ಐ. ಕಚೇರಿಗೆ ಇವರ ಬಗ್ಗೆ ಬರೆದಿದ್ದರೂ ಕೂಡ ಇದುವರೆವಿಗೂ ಯಾವ ಕ್ರಮವನ್ನು ಅಂತಹವರ ಮೇಲೆ ತೆಗೆದು ಕೊಂಡಿಲ್ಲ ಎಂದು ಹೇಳಿದರು ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕಾರವಾರ ತಾಲ್ಲೂಕಿನಲ್ಲಿ ಅಮದಳ್ಳಿಯಲ್ಲಿನ ದೇವಕೋಣ ಎಂಬಲ್ಲಿ ಒಂದು ಶಾಲೆ ಇದೆ. ಆ ಶಾಲೆಯಲ್ಲಿ ಈ ಶಿಕ್ಷಣದ ವರ್ಷ ಪ್ರಾರಂಭ ಆದನಂತರ ಸುಮಾರು ೧೫ ದಿನಗಳಾದರು ಅಲ್ಲಿಯ ಶಿಕ್ಷಕರು ಶಾಲೆಯ ಬಾಗಿಲನ್ನು ತೆರೆಯದೇ ಶಿಕ್ಷಕರು ಹಾಜರಾಗದೇ ಮಕ್ಕಳಿಗೆ ತೊಂದರೆಯನ್ನು ಉಂಟುಮಾಡಿದ್ದಾರೆ. ಈ ಬಗ್ಗೆ ಆ ಗ್ರಾಮಸ್ಥರು ದೂರು ನೀಡಿದ್ದರೂ ಕೂಡಾ, ಶಿಕ್ಷಕರ ಮೇಲೆ ಕ್ರಮ ತೆಗೆದು ಕೊಳ್ಳಬೇಕೆಂದು ಎ. ಇ. ಓ. ರಿಪೋರ್ಟ್ ಮಾಡಿದ್ದರೂ ಕೂಡಾ ಇದುವರೆಗೆ ಆ ಶಿಕ್ಷಕನ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈಬಗ್ಗೆ ನಾನು ಡಿ. ಡಿ. ಪಿ. ಐ. ಯವರಿಗೆ ನೆನಪಿಗೆ ತರುತ್ತಾ ಇದ್ದೇನೆ. ಇದರಿಂದ ಒಂದುವಿಷಯ ಸ್ಪಷ್ಟವಾಗುತ್ತದೆ. ಎಲ್ಲಿ ಹಣದ ಪ್ರಭಾವ ಇದೆಯೋ, ಎಲ್ಲಿ ರಾಜಕೀಯ ಪ್ರಭಾವ ಇದೆಯೋ ಅಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದಂತೆ ಕೆಲಸ ಮಾಡಲಿಕ್ಕೆ ಸ್ವೇಚ್ಛೆಯಿಂದ ಇದ್ದಾರೆ, ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಶಿಕ್ಷಣ ಸಚಿವರ ಮುಂದೇನೇ ವಾಗ್ದಾನ ಕೊಟ್ಟ ಅಧಿಕಾರಿಗಳು ಇದುವರೆಗೂ ಆ ಕಾರ್ಯವನ್ನು ಮಾಡಲಿಲ್ಲ ಎಂದು ಹೇಳಿದರೆ ಈ ಅಧಿಕಾರಿಗಳಿಂದ ಯಾವ ರೀತಿಯಲ್ಲಿ ಹೆಚ್ಚಿನ ಒಂದು ಕೆಲಸವನ್ನು ಪಡೆಯಲಿಕ್ಕೆ ಆಗುತ್ತದೆ ಎಂದು ಕೇಳಬೇಕಾಗಿದೆ.

ಶ್ರೀ ಎಸ್. ಗೋವಿಂದೇಗೌಡ.—ನಾನು ಆ ದಿವಸ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಬಂದ ಮೇಲೆ ಏನಾಗಿದೆ ಎಂಬುದನ್ನು ಮಾನ್ಯ ಸದಸ್ಯರು ನನಗೆ ತಿಳಿಸಿದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಪಿ.ಎಸ್. ರಾಣೆ.—ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಕ್ಕಾಗಿ ಧನ್ಯವಾದಗಳು. ನಾನು ಮಾನ್ಯ ಮಂತ್ರಿಗಳಿಗೆ ಏತಕ್ಕೆ ಈ ವಿಷಯವನ್ನು ತಿಳಿಸಲಿಲ್ಲವೆಂದರೆ ಅವರಿಗೆ ಗೊತ್ತಿರಬಹುದು ಅಂದುಕೊಂಡಿದ್ದೆ. ಆದ್ದರಿಂದ ನಾನು ಅವರು ಏನು ಮಾಡುತ್ತಾರೋ ಎಂದು ದಾರಿ ಕಾಯುತ್ತಿದ್ದೆ. ಮಂತ್ರಿಗಳು ಕೊಟ್ಟ ಆದೇಶವನ್ನು ಅಧಿಕಾರಿಗಳು ಯಾವ ರೀತಿಯಲ್ಲಿ ಪಾಲನೆ ಮಾಡುತ್ತಾರೆಂದು ಕಾದು ನೋಡಿದೆ. ಮೇಲಿಂದ ಮೇಲೆ ನಾನು ಅಲ್ಲಿನ ಹಿರಿಯ ಅಧಿಕಾರಿಗಳಿಗೂ ಕೂಡಾ ಹೇಳುತ್ತಾ ಬಂದಿದ್ದೇನೆ. ಆದರೂ ಕೂಡ ಇದುವರೆವಿಗೂ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಆದ್ದರಿಂದ ಆ ಬಗ್ಗೆ ಮಾನ್ಯ ಮಂತ್ರಿಗಳು ಇನ್ನು ಮುಂದಾದರೂ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಛೇರ್ಮನ್.—ಮಾನ್ಯ ಸದಸ್ಯರು ಬೇಗ ಮುಗಿಸಿದರೆ ಒಳ್ಳೆಯದು.

ಶ್ರೀ ಪಿ.ಎಸ್. ರಾಣೆ.—ನನ್ನ ಕ್ಷೇತ್ರವಾದ ಸೂಪಾ ತಾಲ್ಲೂಕಿನಲ್ಲಿ ಕಳೆದ ಎರಡೂ ವರ್ಷಗಳಿಂದ ಸುಮಾರು ೧೯ ಪಾಠಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲ. ಆ ಶಾಲೆಗಳು ಇವತ್ತು ಮುಚ್ಚಿ ಹೋಗತಕ್ಕಂಥ ಮಟ್ಟಕ್ಕೆ ಬಂದಿವೆ. ಸುಮಾರು ಎರಡು ವರ್ಷಗಳಿಂದ ಅಲ್ಲಿಗೆ ಉಪಾಧ್ಯಾಯರನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಇದುವರೆವಿಗೂ ಸಾಧ್ಯವಾಗಲಿಲ್ಲ. ಇನ್ನೊಂದು ಗಂಭೀರವಾದಂಥ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಕಾರವಾರದಲ್ಲಿ ಅನೇಕ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಗಿಂತ ಶಿಕ್ಷಕರ ಸಂಖ್ಯೆ ಜಾಸ್ತಿಯಾಗಿದೆ. ಆ ಶಾಲೆಗಳಲ್ಲಿ ಕಲಿಯತಕ್ಕಂಥ ಮಕ್ಕಳು ಮರಾಠಿ ಮಕ್ಕಳು. ಮರಾಠಿ ಶಾಲೆಗಳಿಗೆ ಮಕ್ಕಳು ಹೋಗುವುದು ಕೂಡ ಕಡಿಮೆ. ಆದ್ದರಿಂದ ಅಲ್ಲಿ ಶಿಕ್ಷಕರ ಸಂಖ್ಯೆಯೇ ಜಾಸ್ತಿ ಇದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸೂಪಾ ತಾಲ್ಲೂಕಿನಲ್ಲಿ ಅನೇಕ ಪಾಠಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲ. ಉಪಾಧ್ಯಾಯರು ವರ್ಗಾವಣೆಯಾದಾಗ ಕೂಡ ನಾನು ಸಾಕಷ್ಟು ಪ್ರಯತ್ನ ಮಾಡಿದೆ. ಆದರೆ ಅಲ್ಲಿಗೆ ಇದುವರೆವಿಗೂ ಉಪಾಧ್ಯಾಯರು ಬರಲಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುವುದೇನೆಂದರೆ ಮರಾಠಿ ಶಾಲೆಯಲ್ಲಿರತಕ್ಕಂಥ ಉಪಾಧ್ಯಾಯರು ಈಗಾಗಲೇ ಕನ್ನಡದಲ್ಲಿ ಪರಿಣತೆಯನ್ನು ಪಡೆದಿದ್ದಾರೆ. ಮತ್ತು ಇಲಾಖೆಯ ಪರೀಕ್ಷೆಗಳಲ್ಲಿ ಕೂಡ ಪಾಸಾಗಿದ್ದಾರೆ. ಅಂತಹವರನ್ನು ತಾವು ಕನ್ನಡ ಶಾಲೆಗಳಿಗೆ ಪೋಸ್ಟ್ ಮಾಡಬಹುದಲ್ಲವೇ ? ಆ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಿದರೆ ಒಳ್ಳೆಯದು. ಇನ್ನು ಕೊನೆಯದಾಗಿ ಭ್ರಷ್ಟಾಚಾರದ ಬಗ್ಗೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಆದರೂ ಕೂಡ ಬಹಳ ಮುಖ್ಯವಾದ ಒಂದು

ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವ ಅವಶ್ಯಕತೆ ಇದೆ. ಅದೇನೆಂದರೆ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಗೋಕರ್ಣ ಎನ್ನತಕ್ಕಂಥ ಒಂದು ಪುಣ್ಯಕ್ಷೇತ್ರ ಇದೆ. ಈ ಪುಣ್ಯಕ್ಷೇತ್ರದ ದೇವಸ್ಥಾನದಲ್ಲಿ ದೇವರ ಪೂಜೆಯನ್ನು ಮಾಡಿಸುವುದಕ್ಕಾಗಿ ಒಂದು ರೇಟ್ ಲಿಸ್ಟನ್ನು ಹಾಕಿದ್ದಾರೆ. ಅಭಿಷೇಕ ಮಾಡಿಸಲು ೫ ರೂಪಾಯಿಗಳು. ಕುಂಭಾಭಿಷೇಕಕ್ಕೆ ಇಂತಿಷ್ಟು ಇತರೆ ಪೂಜೆಗಳಿಗೆ ಇಂತಿಷ್ಟು ಎಂದು ಒಂದು ರೇಟ್ ಲಿಸ್ಟನ್ನು ಹಾಕಿದ್ದಾರೆ. ಆದರೆ ನಮ್ಮ ತಾಲ್ಲೂಕಿನ ಡಿ.ಡಿ.ಪಿ.ಐ. ಇಲಾಖೆಯಲ್ಲಿ ಯಾವುದೇ ರೀತಿಯ ಅಂತಹ ರೇಟ್ ಲಿಸ್ಟ್ ಇಲ್ಲ. ಶಿಕ್ಷಕರಿಂದ ವರ್ಗಾವಣೆಗೆ, ವಾರ್ಷಿಕ ಬಡ್ತಿಯನ್ನು ಕೊಡಲು ಮತ್ತು ಮುಂಗಡ ಬಡ್ತಿಯನ್ನು ಪಡೆಯಲು ಹಾಗೆ ಪ್ರತಿಯೊಂದು ಕೆಲಸಕ್ಕೂ ಮಿತಿಮೀರಿ ಹಣವನ್ನು ವಸೂಲು ಮಾಡುತ್ತಿದ್ದಾರೆ. ಇದರಿಂದ ಶಿಕ್ಷಕರಿಗೆ ಬಹಳ ತೊಂದರೆಯಾಗಿದೆ ಆದ್ದರಿಂದ ನಾನು ಹೇಳುವುದೇನೆಂದರೆ ನಿಮ್ಮಿಂದ ಈ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಸಾಧ್ಯವಾಗದಿದ್ದರೆ ಒಂದು ರೇಟ್ ಲಿಸ್ಟನ್ನು ಹಾಕಿದರೆ ಅಷ್ಟು ಹಣವನ್ನು ಶಿಕ್ಷಕರು ಕೊಟ್ಟು ಕೆಲಸ ಮಾಡಿಸಿಕೊಂಡು ಹೋಗಬಹುದು. ನಾನು ಈ ಮಾತನ್ನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಅಲ್ಲಿರತಕ್ಕಂಥ ಡಿ.ಡಿ.ಪಿ.ಐ. ಯವರ ಬಗ್ಗೆ ನಾನು ಏನೂ ಹೇಳುವುದಕ್ಕೆ ಬಯಸುವುದಿಲ್ಲ. ಅವರು ಮೊನ್ನೆ ಮೊನ್ನೆ ಬಂದಿದ್ದಾರೆ. ಅವರು ಒಳ್ಳೆಯವರೆಂದು ಸಹ ಕೇಳಿದ್ದೇನೆ. ಆದರೆ ಅವರ ಕೈಕೆಳಗಿನ ಅಧಿಕಾರಿಗಳು ಅವರ ಹತೋಟಿಯಲ್ಲಿ ಕೆಲಸ ಮಾಡುತ್ತಿಲ್ಲ. ಸುಮಾರು ೭–೮ ವರ್ಷಗಳಿಂದ ನಮ್ಮ ಜಿಲ್ಲೆಯ ಒಬ್ಬ ಎರಡನೇ ದರ್ಜೆಯ ಅಧಿಕಾರಿ ಕೆಲಸ ಮಾಡುತ್ತಿದ್ದಾರೆ. ಅದೇ ಜಿಲ್ಲೆಯವರು ಎರಡನೇ ದರ್ಜೆಯ ಅಧಿಕಾರಿಯಾಗಿ ಇರಬಾರದೆಂದು ನಿಯಮ ಇದೆ. ಆದರೂ ಕೂಡ ಅವರು ಸತತವಾಗಿ ೭–೮ ವರ್ಷಗಳಿಂದ ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಇದರಿಂದ ಅಲ್ಲಿ ಭ್ರಷ್ಟಾಚಾರ ನಡೆಯುವುದಕ್ಕೆ ಅವಕಾಶವಾಗಿದೆ. ಅವರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ ಮತ್ತು ಅವರನ್ನು ಈ ಕೂಡಲೇ ವರ್ಗಾವಣೆ ಮಾಡಬೇಕೆಂದು ಸಹ ನಾನು ಹೇಳುತ್ತಿದ್ದೇನೆ. ಇನ್ನು ವಯಸ್ಕರ ಶಿಕ್ಷಣದ ಬಗ್ಗೆ ನಾನು ಒಂದು ಮಾತನ್ನು ಹೇಳುವುದಾದರೆ ಈ ಬಗ್ಗೆ ಇದುವರೆವಿಗೂ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಮ್ಮ ಸೂಪಾ ತಾಲ್ಲೂಕಿನ ವಯಸ್ಕರ ಶಿಕ್ಷಣ ಕೇಂದ್ರಗಳ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ನಮ್ಮ ಸೂಪಾ ತಾಲ್ಲೂಕಿನಲ್ಲಿರತಕ್ಕಂಥ ಈ ವಯಸ್ಕರ ಶಿಕ್ಷಣ ಕೇಂದ್ರಗಳು ಕೇಂದ್ರ ಸರ್ಕಾರದ ನೆರವಿನಿಂದ ನಡೆಸುತ್ತಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಆ ರೀತಿ ಸುಮಾರು ೩ ಕೇಂದ್ರಗಳು ನಡೆಯುತ್ತಿರಬಹುದು. ನಮ್ಮ ಸೂಪಾ ತಾಲ್ಲೂಕಿನಲ್ಲಿ ಒಟ್ಟು ೩೦ ವಯಸ್ಕರ ಶಿಕ್ಷಣದ ಕೇಂದ್ರಗಳು ಇವೆ. ಆ ಬಗ್ಗೆ ಹೇಳುವುದಾದರೆ ಅಲ್ಲಿ ಹಣ ಸುಮ್ಮನೆ ಪೋಲಾಗುತ್ತಿದೆ. ನಾನು ಪ್ರತಿ ತಿಂಗಳ ೨೦ ಅಂಶಗಳ ಕಾರ್ಯಕ್ರಮಕ್ಕೆ ಹೋದಾಗ ಅಲ್ಲಿನ ಸಾರ್ವಜನಿಕರಿಂದ ಕೂಡ ನನಗೆ ದೂರುಗಳು ಬಂದಿವೆ. ಆ ವಯಸ್ಕರ ಶಿಕ್ಷಣ ಅಧಿಕಾರಿ ಅಲ್ಲಿ ವಾಸ ಮಾಡುತ್ತಿಲ್ಲ. ಆತ ದಾಂಡೇಲಿಯಲ್ಲಿ ವಾಸ ಮಾಡುತ್ತಾನೆಂದು. ಆ ಬಗ್ಗೆ ನಾನು ಅಧಿಕಾರಿಗಳ ಹತ್ತಿರ ವಿವರಣೆ ಕೇಳಿದಾಗ ಸರಿಯಾಗಿ ನಡೆಯುತ್ತಿದೆ ಎಂದು ಹೇಳಿದರು. ಆಮೇಲೆ ನಾನು ೨೦ ಅಂಶಗಳ ಕಾರ್ಯಕ್ರಮಕ್ಕೆ ಹೋದಾಗ ಆ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದೆ ಅದೇನೆಂದರೆ ನಿಮ್ಮ ಕೇಂದ್ರಗಳಲ್ಲಿ ಎಷ್ಟು ಜನ ಅಭ್ಯಾಸ ಮಾಡುತ್ತಿದ್ದಾರೆ ? ಅವರು ಯಾವ ರೀತಿಯಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆ ? ಎನ್ನತಕ್ಕಂಥ ಒಂದು ವರದಿಯನ್ನು ಕೊಡಬೇಕೆಂದು ಸೂಚನೆ ಮಾಡಿದ್ದೆ. ಆದರೆ ಅವರು ಮುಂದಿನ ೨೦ ಅಂಶಗಳ ಕಾರ್ಯಕ್ರಮಕ್ಕೆ ಬಂದಾಗ ಯಾವುದೇ ರೀತಿಯ ಉತ್ತರ ಕೊಡಲಿಲ್ಲ. ಇದರಿಂದ ನನಗೆ ಸ್ಪಷ್ಟವಾಗಿ ಗೊತ್ತಾಯಿತು ಅಲ್ಲಿ ವಯಸ್ಕರ ಶಿಕ್ಷಣ ಸರಿಯಾಗಿ ನಡೆಯುತ್ತಿಲ್ಲವೆಂದು. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಇದುವರಿವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷಣಿಯವರೇ, ಮೂರನೇ ತರಗತಿಗೆ ಮಾನ್ಯ ಮಂತ್ರಿಗಳು ಒಂದು ಪುಸ್ತಕವನ್ನು ಪ್ರಿಂಟ್ ಮಾಡಿಸಿ ಕೊಟ್ಟಿದ್ದಾರೆ. ಆದರೆ ಆ ಪುಸ್ತಕದಲ್ಲಿ ಒಂದು ಮ್ಯಾಪ್ ಇದೆ. ಅದರಲ್ಲಿ ಮಲ್ಲಾಪುರ ತಾಲ್ಲೂಕು ಮತ್ತು ಹಿಪ್ಪರಗಿ ತಾಲ್ಲೂಕುಗಳೆಂದು ತೋರಿಸಿದ್ದಾರೆ. ಆದರೆ ಇವೆರಡೂ ತಾಲ್ಲೂಕುಗಳು ಅಲ್ಲ. ನಮ್ಮ ಮಕ್ಕಳು ನಮ್ಮನ್ನು ಕೇಳಿದರೆ ನಾವು ಏನು ಹೇಳಬೇಕು ? ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಉಪ್ಪಿನ್ (ಕುಂದಗೋಳ್).—ಸನ್ಮಾನ್ಯ ಅಧ್ಯಕ್ಷಣಿಯವರೇ, ಪ್ರಾರಂಭದಲ್ಲಿ ನಮ್ಮ ರಾಜ್ಯದ ದಕ್ಷತೆಯ ಹೆಸರನ್ನು ಗಳಿಸಿರುವ ಮಾನ್ಯ ಶಿಕ್ಷಣ ಸಚಿವರು ಈ ಸದನದಲ್ಲಿ ೧೯೮೫–೮೬ನೇ ಸಾಲಿನ ಬೇಡಿಕೆಗಳನ್ನು ಮಂಡಿಸಿದ್ದಾರೆ. ನಾನು ಮಾನ್ಯ ಮಂತ್ರಿಗಳು ಮಂಡಿಸಿರ

ತಕ್ಕಂಥ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಪ್ರಸಿದ್ಧ ಭಾಷಣಕಾರರು ತಮ್ಮ ಭಾಷಣದಲ್ಲಿ ಒಂದು ಸಣ್ಣ ಲೇಖನವನ್ನು ಬರೆದಿದ್ದಾರೆ. ಅದರ ನೆನಪು ಈಗ ನನಗೆ ಬರುತ್ತಿದೆ. ಅವರಲ್ಲಿ ಅವರು ಏನು ಹೇಳಿದ್ದಾರೆಂದರೆ ನನಗೆ ಎರಡು ಗಂಟೆಗಳ ಕಾಲ ಭಾಷಣ ಮಾಡಲು ಯಾವ ತಯಾರಿಯನ್ನು ಮಾಡಿಕೊಳ್ಳಬೇಕಾಗಿಲ್ಲ. ಆದರೆ ಒಂದು ಗಂಟೆಯ ಕಾಲ ಭಾಷಣ ಮಾಡಬೇಕಾದರೆ ಅರ್ಧ ಗಂಟೆ ತಯಾರಿ ಮಾಡಿಕೊಳ್ಳಬೇಕಾಗುತ್ತದೆ. ಅದೇ ೧೦-೧೫ ನಿಮಿಷ ಭಾಷಣ ಮಾಡಬೇಕಾದರೆ ಸುಮಾರು ೩ ಗಂಟೆಗಳ ಕಾಲವಾದರೂ ತಯಾರಿ ಮಾಡಿಕೊಳ್ಳಬೇಕು. ಎಂದು ಹೇಳಿರತಕ್ಕಂಥ ಮಾತು ನನಗೆ ನೆನಪಿಗೆ ಬಂದಾಗ ನನಗೆ ನಿರ್ಧಿಷ್ಟಪಡಿಸಿದ ಸಮಯದಲ್ಲಿಯೇ ಮುಗಿಸಲು ಪ್ರಯತ್ನ ಮಾಡಿ ನನ್ನ ಪ್ರಾಮಾಣಿಕ ಅನಿಸಿಕೆಗಳನ್ನು ಸಭೆಯ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಯಾವುದೇ ಒಂದು ರಾಷ್ಟ್ರದ ಅಥವಾ ರಾಜ್ಯದ ಪ್ರಗತಿಯ ಬಗ್ಗೆ ವಿಚಾರ ಮಾಡಬೇಕಾದರೆ ಆ ರಾಜ್ಯದಲ್ಲಿ, ರಾಷ್ಟ್ರದಲ್ಲಿ ನಡೆಯುತ್ತಿರತಕ್ಕಂಥ ಶಿಕ್ಷಣ ವ್ಯವಸ್ಥೆ, ಈ ಒಂದು ಅಂಶವ ಪ್ರಾಥಮಿಕ ಅಳತೆಗೋಲು ಎನ್ನತಕ್ಕ ಮಾತನ್ನು ಯಾರೂ ಅಲ್ಲಗಳೆಯಲಾರರು. ಅಂತಹ ಪ್ರಾಮುಖ್ಯತೆಯನ್ನು ಶಿಕ್ಷಣ ಇವತ್ತು ಹೊಂದಿದೆ. ಅಂತೆಯೇ ಒಬ್ಬ ಪ್ರಸಿದ್ಧ ಸಂಸ್ಕೃತ ಕವಿ ಒಂದು ಶ್ಲೋಕದಲ್ಲಿ ಹೇಳಿದ್ದಾನೆ. ಇದರ ತಾತ್ಪರ್ಯ ಇಷ್ಟೆ. ಒಬ್ಬ ಮೂರ್ಖ ತನ್ನ ಮನೆಯಲ್ಲಿ ಪೂಜಿಸಲ್ಪಡುತ್ತಾನೆ. ಒಬ್ಬ ಗೌಡ ತನ್ನ ಊರಿನಲ್ಲಿ ಪೂಜಿಸಲ್ಪಡುತ್ತಾನೆ. ಒಬ್ಬ ರಾಜ ಸ್ವದೇಶದಲ್ಲಿ ಪೂಜಿಸಲ್ಪಡುತ್ತಾನೆ. ಆದರೆ ವಿದ್ವಾಂಸ ಇಡೀ ರಾಷ್ಟ್ರದಲ್ಲೇ ತಾನು ಎಲ್ಲೇ ಹೋಗಲಿ ಪೂಜಿಸಲ್ಪಡುತ್ತಾನೆ ಎಂದರೆ ವಿದ್ವಾನ್ ಸರ್ವತ್ರ ಪೂಜ್ಯಯೇತ್ ಎಂಬ ಮಾತಿನಲ್ಲಿ ಹೇಳಿರುವುದನ್ನು ನೆನೆಸಿಕೊಂಡರೆ, ಇನ್ನೊಬ್ಬ ಸಂಸ್ಕೃತ ಕವಿ ಇನ್ನೂ ಮುಂದೆ ಹೋಗಿ, ಶಿಕ್ಷಣ ಇಲ್ಲದವನ ಬಾಳು ನಾಯಿ ಬಾಳಿನ ಹಾಗೆ, ಎಂದು ಹೇಳಿದ್ದಾನೆ. ಯಾವ ರೀತಿ ನಾಯಿ ತನ್ನ ಬಾಲದಿಂದ ತನ್ನ ಮರ್ಮಾಂಗವನ್ನು ಮುಚ್ಚಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೋ, ಯಾವ ರೀತಿ ಮೈಮೇಲೆ ಕುಳಿತುಕೊಂಡಂಥ ನೊಣಗಳನ್ನು ಹೊಡೆದುಕೊಳ್ಳುವುದಕ್ಕೆ ಅಸಮರ್ಥವಾಗುತ್ತದೋ, ಅದೇ ರೀತಿ ವಿದ್ಯೆ ಇಲ್ಲದವನ ಬಾಳು ಹಾಳು ಎಂಬುದನ್ನು ನೆನೆದರೆ, ಶಿಕ್ಷಣಕ್ಕೆ ಅತೀ ಹೆಚ್ಚು ಪ್ರಾಧಾನ್ಯತೆ ಕೊಡಬೇಕಾದುದು ಅತೀ ಅವಶ್ಯ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ದುರಾದೃಷ್ಟವಶಾತ್ ಕಳೆದ ೩೫ ವರ್ಷಗಳಿಂದ, ನಮ್ಮ ರಾಜ್ಯದ ಶಿಕ್ಷಣದ ಬಗ್ಗೆ ವಿಚಾರ ಮಾಡಿದಾಗ, ಒಂದು ಸಿಂಹಾವಲೋಕನವನ್ನು ಮಾಡಿದಾಗ, ಇವತ್ತು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ, ಈ ದಿಸೆಯಲ್ಲಿ ನಮ್ಮ ರಾಜ್ಯ ಸಾಧಿಸಿದ ಪ್ರಗತಿ ಶೂನ್ಯ ಎಂದು ಹೇಳಿದರೆ ಅದು ಅತಿಶಯೋಕ್ತಿ ಅಲ್ಲ. ಅದು ನಾನು ಸರಿಯಾದ ಮಾತುಗಳನ್ನು ಹೇಳಿದ ಹಾಗೆ ಆಗುತ್ತದೆ ಎಂದು ನನ್ನ ಒಂದು ಭಾವನೆ ಇದೆ. ಇದರ ಅರ್ಥ ಇಷ್ಟೆ. ಹಾಗಾದರೆ ಈ ಕಳೆದ ಮೂವತ್ತು ವರ್ಷಗಳಲ್ಲಿ ನಮ್ಮ ಸರ್ಕಾರ ಈ ಶಿಕ್ಷಣ ಸಂಸ್ಥೆಗಳಿಗೆ ಏನೂ ಖರ್ಚು ಮಾಡಿಲ್ಲವೇ ಎಂದು ಭಾವನೆ ಬರುವುದು ಸ್ವಲ್ಪ ಸ್ವಾಭಾವಿಕ. ಆದರೆ ಅಂಕಿ ಅಂಶಗಳನ್ನು ನೋಡಿದಾಗ, ಕಳೆದ ಅನೇಕ ವರ್ಷಗಳಿಂದ ಕೋಟಿಗಟ್ಟಲೆ ಹಣ ಶಿಕ್ಷಣಕ್ಕೆ ವ್ಯಯವಾಗಿದೆ. ಆದರೆ ಅದರಿಂದ ಸಾಧಿಸಬೇಕಾದ ಪ್ರಗತಿ ಮಾತ್ರ ಶೂನ್ಯವಾಗಿದೆ ಎಂದು ಹೇಳಬಹುದು. ಹಾಗಾದರೆ ನಮ್ಮ ರಾಜ್ಯವನ್ನು ಆಳತಕ್ಕ ಪ್ರಭುಗಳಿಗೆ ಈ ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸಲಿಕ್ಕೆ ಮನಸ್ಸಿಲ್ಲವೇ ಎಂದು ಕೇಳಬಹುದು. ಇವತ್ತು ಮನಸ್ಸಿದ್ದಲ್ಲಿ ಮಾರ್ಗವಿದೆ. ಎಂಬ ಮಾತನ್ನು ನೆನೆದರೆ ನಮ್ಮ ರಾಜ್ಯದಲ್ಲಿ ಶಿಕ್ಷಣ ಸುಧಾರಣೆಯನ್ನು ನಾವು ತರಲಿಕ್ಕೆ ಮನಸ್ಸು ಮಾಡಿದರೆ ಮಾತ್ರ ತರಬಹುದು. ಖಿಮಾಲ್ ಪಾಷಾ ಎಂಬ ದೊರೆ ೧೦ ವರ್ಷಗಳಲ್ಲಿ ತನ್ನ ಇಡೀ ರಾಷ್ಟ್ರದಲ್ಲಿ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಿದ ಘಟನೆಯನ್ನು ನಾವು ನೆನಪಿಗೆ ತಂದುಕೊಳ್ಳಬಹುದು. ಆದರೆ ನಮ್ಮಲ್ಲಿದ್ದಂಥ ಪ್ರಭುಗಳಿಗೆ ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡುವ ಮನಸ್ಸು ಇರಲಿಲ್ಲ. ಎಂದು ಧೈರ್ಯವಾಗಿ ಹೇಳಬಹುದು. ಏಕೆಂದರೆ ಅವರ ಅನಕ್ಷರತೆಯು ಒಂದು ಓಟಿನ ಮೇಲೆ ಆ ಒಂದು ಡಿಪಾಸಿಟ್ ಮೇಲೆ ಅವರು ಆಡಳಿತಕ್ಕೆ ಬರುವುದು ಸುರಕ್ಷಿತವಾದ ಮಾತು. ಆದುದರಿಂದ ಈ ಪ್ರಭುಗಳು ಈ ಒಂದು ಜನರನ್ನು ನಾವು ಅಕ್ಷರಸ್ಥರನ್ನಾಗಿ ಮಾಡಿದರೆ, ಇವರಿಂದ ಬರತಕ್ಕ ಓಟು ಬರದೇ ಹೋಗಬಹುದು ಎಂಬ ಒಂದೇ ಒಂದು ಶಂಕೆಯಿಂದ ಅವರು ಒಂದು ಪ್ರಾಮಾಣಿಕ ಪ್ರಯತ್ನ ಮಾಡಿಲ್ಲವೆಂದು ಹೇಳಬಹುದು. ಈ ದಿಸೆಯಲ್ಲಿ ಒಂದು ಉದಾಹರಣೆ ಕೊಡುತ್ತೇನೆ. ೧೯೩೦ರ ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಪೂಜ್ಯ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಜಿಯವರು, ನೂಲನ್ನು ತೆಗೆಯಿರಿ ಎಂಬ ಒಂದು ಆಂದೋಲನ ಮಾಡಿದಾಗ ಎಲ್ಲರೂ ಸ್ವಂತವಾಗಿ ತಮ್ಮ ಕೈಯಿಂದ ನೂಲನ್ನು ತೆಗೆಯಲು ಪ್ರಾರಂಭ ಮಾಡಿದರು. ಆಗ ಚೆನ್ನ ಚೆನ್ನಿ ಎಂಬ ಇಬ್ಬರು ಗಂಡ ಹೆಂಡಿರಿದ್ದರು. ಅವರೂ ಸಹ ನೂಲನ್ನು ತೆಗೆಯಬೇಕೆಂದು ಮನಸ್ಸು ಮಾಡಿದರು. ಆಗ ಚೆನ್ನ ಬಂದು ಹೇಳುತ್ತಾನೆ, ಚೆನ್ನಿ ಎಲ್ಲಾ ನೂಲನ್ನು ತೆಗೆಯಲಿಕ್ಕೆ ಹತ್ತಿದ್ದಾರೆ, ನೀನೂ ನೂಲನ್ನು ತೆಗೆ ಎಂದು ಹೇಳುತ್ತಾನೆ. ಅವಳು ಅದಕ್ಕೆ ಅನೇಕ ಕಾರಣಗಳನ್ನು ಒಡ್ಡುತ್ತಾಳೆ. ರಾಟೆ ಇಲ್ಲ ಎನ್ನು

ತ್ತಾಳೆ, ಚಿನ್ನ ರಾಟೆ ತಂದು ಕೊಡುತ್ತಾನೆ, ನೂಲುವುದಕ್ಕೆ ಏನೇನು ಸಾಮಾನು ಬೇಕು ಎಲ್ಲವನ್ನೂ ತಂದು ಕೊಟ್ಟು ನೂಲು ತೆಗೆ ಎಂದು ಹೇಳುತ್ತಾನೆ. ಈಗಲಾದರೂ ನೂಲು ತೆಗೆ ಎಂದಾಗ ಅವಳು ನನಗೆ ನೂಲುವುದಕ್ಕೆ ಬರುವುದಿಲ್ಲ ಎಂಬ ಮಾತನ್ನು ಹೇಳುತ್ತಾಳೆ. ಅದನ್ನು ಇಲ್ಲಿ ನೆನಪಿಗೆ ತಂದು ಕೊಂಡರೆ ಹಿಂದಿನ ಸರ್ಕಾರಕ್ಕೆ ನಮ್ಮ ರಾಷ್ಟ್ರದ ಜನತೆಯನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಆದರೆ ಕಳೆದ ಎರಡು ವರ್ಷ ಎರಡೂವರೆ ವರ್ಷಗಳಿಂದ ಅಧಿಕಾರದಲ್ಲಿ ಇರುವಂತಹ ಜನತಾ ಸರಕಾರದಿಂದ ಈ ಒಂದು ಕೊರತೆಯನ್ನು ನಿವಾರಣೆ ಮಾಡುವ ದಿಸೆಯಲ್ಲಿ, ಇವತ್ತು ಶಿಕ್ಷಣರಂಗದಲ್ಲಿ ರಾಜ್ಯ ಪ್ರತಿಯೊಬ್ಬ ಬಡ ಪ್ರಜೆಯೂ ಸಹ ಶಿಕ್ಷಣವನ್ನೂ ಹೊಂದಲಿಕ್ಕೆ ಅವಕಾಶ ಮಾಡಿಕೊಡಬೇಕೆನ್ನುವ ಉದ್ದೇಶದಿಂದ, ಶಿಕ್ಷಣರಂಗದಲ್ಲಿ ಸಮಗ್ರವಾದ ಬದಲಾವಣೆಯನ್ನು ತರುವ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅದರಲ್ಲಿ ನಾನು ಕೆಲವೊಂದನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಉಚಿತ ಪಠ್ಯಪುಸ್ತಕ ವಿತರಣೆ, ಶುಲ್ಕದಲ್ಲಿ ವಿನಾಯಿತಿ, ಸಮವಸ್ತ್ರಗಳ ವಿತರಣೆ ಅಥವಾ ಅಕ್ಷರಸೇನೆ ಮುಂತಾದ ಪ್ರಯೋಜಕವಾದ ಕಾರ್ಯಕ್ರಮಗಳಿಂದ ನಮ್ಮ ರಾಜ್ಯದ ಪ್ರತಿಯೊಬ್ಬ ಬಡ ಪ್ರಜೆಯೂ ಸಹ ಶಿಕ್ಷಣವನ್ನು ಹೊಂದತಕ್ಕಂಥ ಅವಕಾಶ ಕಲ್ಪಿಸಿ ಕೊಡುತ್ತಿರುವುದು ತಮಗೆಲ್ಲಾ ಗೊತ್ತಿದೆ. ಜನತಾ ಸರಕಾರ ಒಂದು ಉತ್ತಮವಾದಂಥ ಕಾರ್ಯಕ್ರಮಗಳಿಂದ ಶಿಕ್ಷಣರಂಗದಲ್ಲಿ ಹೊಸ ಮನ್ವಂತರವನ್ನು ಸ್ಥಾಪಿಸಿದೆ ಎಂದು ಒಂದು ಮಾತಿನಲ್ಲಿ ಹೇಳಿದರೆ ಅದರಲ್ಲಿ ಅತಿಶಯೋಕ್ತಿ ಇಲ್ಲ. ಆದರೆ ಇಂತಹ ಒಂದು ಉತ್ತಮವಾದ ಕಾರ್ಯಕ್ರಮಗಳನ್ನೂ ಸಹ ಟೀಕಿಸುತ್ತಿದ್ದಾರೆ ಎಂದರೆ ನಿಜಕ್ಕೂ ವ್ಯಸನಪಡಬೇಕಾದ ಸಂಗತಿ. ಇವತ್ತು ಟೀಕೆಗಳು ಅತೀ ಅವಶ್ಯ, ಟೀಕೆಗಳು ಇಲ್ಲದೇ ಹೋದರೆ, ವಿರೋಧಪಕ್ಷ ಇಲ್ಲದೇ ಹೋದರೆ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು. ಕಬೀರದಾಸರು ಒಂದು ಕಡೆ ಈ ರೀತಿ ಹೇಳಿದ್ದಾರೆ. ಇದರ ತಾತ್ಪರ್ಯ ಇಷ್ಟೆ. ಇವತ್ತು ವಿರೋಧಿಗಳನ್ನಾಗಲೀ, ಟೀಕಾಕಾರರನ್ನಾಗಲೀ ಮನುಷ್ಯ ತನ್ನ ಮನೆಯ ಅಂಗಳದಲ್ಲಿ ಗುಡಿಸಲು ಕಟ್ಟಿಕೊಟ್ಟು ಇಡಬೇಕು, ಇದರಿಂದ ಅವನ ಪ್ರಗತಿಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಬಟ್ಟೆಯನ್ನು ಒಗೆಯಲಿಕ್ಕೆ ಸೋಪಿನ ನೀರು ಹೇಗೆ ಆವಶ್ಯಕವೋ, ಮನುಷ್ಯ ಪ್ರಗತಿ ಪಥದಲ್ಲಿ ಹೋಗಬೇಕಾದರೆ ಟೀಕಾಕಾರರಿಂದಲೇ ಸಾಧ್ಯ ಎಂಬ ಮಾತನ್ನು ಜ್ಞಾಪಿಸಿಕೊಂಡರೆ, ನಾವು ಟೀಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಬೇಕು ಆದರೆ ಈ ಸದನದ ಕಾರ್ಯಕಲಾಪಗಳನ್ನು ನೋಡಿದಾಗ, ಟೀಕೆ ಒಂದು ಉನ್ನತಮಟ್ಟಕ್ಕೆ ಅಥವಾ ಹೆಚ್ಚಿನ ಮಟ್ಟಕ್ಕೆ ಹೋದಾಗ ನಮಗೆ ವ್ಯಸನ ಎನಿಸುತ್ತದೆ. ಯಾವುದೇ ಟೀಕೆಯನ್ನು ಈ ಭಾಗದವರೇ ಮಾಡಬಹುದು, ಆ ಭಾಗದ ಶಾಸಕರೇ ಮಾಡಬಹುದು, ನಾವು ಮಾತನಾಡುವಾಗ, ಟೀಕೆಗಳನ್ನೂ ಮಾಡುವಾಗ ಅದು ಸತ್ವಪೂರ್ಣವಾಗಿರಬೇಕು, ಅದರಲ್ಲಿ ಹುರುಳಿರಬೇಕು. ಟೀಕೆಗಾಗಿ ಟೀಕೆ ಎಂಬ ಮನೋಭಾವನೆಯನ್ನು ಯಾವ ಸದಸ್ಯರೂ ಬೆಳೆಸಿಕೊಳ್ಳಬಾರದು ಎಂಬುದು ನನ್ನ ಕಳಕಳಿಯ ವಿನಂತಿ. ನಾವು ಈ ಸದನದಲ್ಲಿ ೪ ಕೋಟಿ ಜನಗಳ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತಿರುವಾಗ, ಸಾವಿರಾರು ಪ್ರಜೆಗಳು ಗ್ಯಾಲರಿಯಲ್ಲಿ ಬಂದು ಕುಳಿತುಕೊಂಡು ನಮ್ಮ ಕಾರ್ಯಕಲಾಪಗಳನ್ನು ನೋಡುತ್ತಿರುವಾಗ, ಅವರ ಒಂದು ಅನಿಸಿಕೆಯ ಮಟ್ಟಕ್ಕೆ ನಮ್ಮ ಕರ್ತವ್ಯಗಳನ್ನು ನಾವು ನಿರ್ವಹಿಸಬೇಕಾಗುತ್ತದೆಂದು, ನಾನು ವ್ಯಸನದಿಂದ ಹೇಳಬೇಕಾಗಿದೆ, ಮೊನ್ನೆ ಈ ಸದನದ ಕಾರ್ಯಕಲಾಪಗಳನ್ನು ವೀಕ್ಷಿಸಿದ ನನ್ನ ಕ್ಷೇತ್ರದ ಹಿರಿಯರೊಬ್ಬರು, ನಾನೂ ಸಹ ಹಿಂದೆ ಟೌನ್ ಪಂಚಾಯತ್ ಅಧ್ಯಕ್ಷನಾಗಿದ್ದೆ, ಆ ಒಂದು ಸಭೆ ಸಹ ಇಷ್ಟೊಂದು ಕಳಪೆಯಾಗಿರಲಿಲ್ಲ ಎಂಬ ಭಾವನೆಯನ್ನು ವ್ಯಕ್ತ ಮಾಡಿದಾಗ ನನಗೆ ಬಹಳ ಖೇದವಾಯಿತು. ಇದರ ತಾತ್ಪರ್ಯ ಇಷ್ಟೆ. ನಾವು ಇವತ್ತು ಟೀಕೆಗಳನ್ನು ಮಾಡುವಾಗ ಒಳ್ಳೆಯ ರೀತಿಯಿಂದ ಟೀಕೆಯನ್ನು ಮಾಡಿದರೆ ಅದು ಒಂದು ಒಳ್ಳೆಯ ಪದ್ಧತಿ ಎಂಬ ಮಾತನ್ನು ಹೇಳಿ, ಕೊನೆಯದಾಗಿ ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ಶಿಕ್ಷಣ ಎಂದರೆ ನಾಲ್ಕು ಗಾಲಿಯ ಒಂದು ರಥ ಇದ್ದ ಹಾಗೆ, ಆ ನಾಲ್ಕು ಗಾಲಿಗಳು ಯಾವುವೆಂದರೆ ಬಾಲಕರು, ಪಾಲಕರು, ಚಾಲಕರು, ಶಿಕ್ಷಕರು. ಈ ನಾಲ್ಕು ಗಾಲಿಗಳೂ ಸರಿಯಾಗಿ ಇದ್ದಾಗ ಮಾತ್ರ ಶಿಕ್ಷಣ ಪ್ರಗತಿಪಥದಲ್ಲಿ ಹೋಗುವುದಕ್ಕೆ ಸಾಧ್ಯವಾಗುತ್ತದೆಯೇ ವಿನಃ ಇಲ್ಲದಿದ್ದರೆ ಇದು ಸಾಧ್ಯವಿಲ್ಲ. ಇದಕ್ಕೆ ಎಲ್ಲರೂ ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿದಲ್ಲಿ ಮಾತ್ರ ಶಿಕ್ಷಣದಲ್ಲಿ ಪ್ರಗತಿಯನ್ನು ಕಾಣುವುದಕ್ಕೆ ಸಾಧ್ಯ ಎಂದು ಹೇಳುತ್ತೇನೆ. ಸರಕಾರ ಒಂದೇ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಇವತ್ತು ಎಲ್ಲರೂ ಈ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದರ ಜೊತೆಗೆ, ಇದಕ್ಕೆ ಸಂಬಂಧಪಟ್ಟಂತೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಒಂದೇ ಒಂದು ಸಮಸ್ಯೆಯನ್ನು ಎರಡು ನಿಮಿಷದಲ್ಲಿ ಹೇಳಬಯಸುತ್ತೇನೆ.

ಇವತ್ತು ದಕ್ಷತೆ ಹೆಸರನ್ನು ಸಚಿವದ್ವಯರು ಉಳಿಸಿಕೊಳ್ಳಲು, ಇಲಾಖಾ ಅಧಿಕಾರಿಗಳಿಗೆ ವಿಚಾರವನ್ನು ತಿಳಿಸಿ, ಮಾಡಿಸದೇ ಹೋದರೆ, ಶಿಕ್ಷಣ ಅಧಃಪತನಕ್ಕೆ ಹೋಗುವುದು ಎನ್ನುವ

ಮಾತನ್ನು ಹೇಳಬಯಸುತ್ತೇನೆ, ಪ್ರತಿ ಆಫೀಸಿನಲ್ಲೂ, ಅದು ಕಮಿಷನರ್ ಆಫೀಸ್ ಆಗಲೀ, ಡಿ.ಡಿ.ಪಿ.ಐ. ಆಫೀಸ್ ಆಗಲಿ ಅಥವಾ ಜೆ. ಡಿ. ಪಿ. ಐ, ಆಫೀಸ್ ಆಗಲಿ ಅಲ್ಲಿ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ. ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ಗುಡಿಗೆರೆಯಲ್ಲಿ ಒಂದು ಜೂನಿಯರ್ ಕಾಲೇಜು ಇದೆ. ಅಲ್ಲಿ ಹಳೆಯ ವಿದ್ಯಾರ್ಥಿ ಸಂಘದಲ್ಲಿ ನಾನೂ ಕೂಡ ಇದ್ದೇನೆ, ಆ ಕಾಲೇಜಿನ ಪ್ರಿನ್ಸಿಪಾಲರನ್ನು ಬದಲು ಮಾಡಬೇಕೆಂದು ಶಿಕ್ಷಣ ಸಚಿವರನ್ನು ಕೇಳಿಕೊಂಡೆ. ಅವರೇನೋ ಆರ್ಡರ್ ಮಾಡಿದರು. ಆದರೆ ಇಲ್ಲಿಯವರೆಗೂ ಸಂಬಂಧಪಟ್ಟ ಆಫೀಸಿನಿಂದ ಯಾವುದೇ ಆದೇಶ ಅಲ್ಲಿಗೆ ಹೋಗಿಲ್ಲ. ಮಾನ್ಯ ರಘುಪತಿಯವರಿಗೆ ತಾರ ಮೂಲಕ(ಫೋನ್) ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದೆ. ಈ ರೀತಿಯ ಭ್ರಷ್ಟ ಅಧಿಕಾರಿಗಳಿಗೆ ಒಂದು ಬಿಸಿಯನ್ನು ತಾಕಿಸಿ ಇದಕ್ಕೆ ನಾಂದಿಹಾಡಬೇಕೆಂದು ಅನನ್ಯ ಕಳಕಳಿಯಿಂದ ಕೇಳಿಕೊಂಡು, ಅಧ್ಯಕ್ಷಣಿಯವರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದ್ದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಇಬ್ಬರು ವಿದ್ಯಾ ಸಚಿವರು ತಂದಂಥ ಈ ಬೇಡಿಕೆಯನ್ನು ಅನೇಕ ಕಾರಣಗಳಿಂದ ವಿರೋಧಿಸುತ್ತಾ, ಕೆಲವು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷಿಪಡುತ್ತೇನೆ. ವಿದ್ಯೆ ಎಂದು ಹೇಳಿದರೆ, ಅದು ಒಂದು ದೊಡ್ಡ ಸಾಧನ ನಮ್ಮ ದೇಶ, ಶಕ್ತಿಯನ್ನು ತೋರಿಸಿ ಕೀರ್ತಿಯನ್ನು ಬೆಳೆಸತಕ್ಕಂಥ ದೇಶ ಒಂದು ದೇಶ ಅಭಿವೃದ್ಧಿಯಾಗಬೇಕಾದರೆ, ಅದು ವಿದ್ಯೆಯಲ್ಲಿ ಮಾತ್ರ ಸಾಧ್ಯ. ಸ್ವಾತಂತ್ರ್ಯ ಸಿಕ್ಕಿದ ಕೂಡಲೇ ಜವಹರಲಾಲ್ ನೆಹ್ರುರವರು ತಮ್ಮ ಭಾಷಣದಲ್ಲಿ ಹೇಳುತ್ತಿದ್ದರು. ನಮ್ಮ ದೇಶ ಪ್ರಗತಿ ಪಥದಲ್ಲಿ ಮುಂದುವರಿಯ ಬೇಕಾದರೆಆದರ್ಶ ದೇಶವಾಗಿ ಬರಬೇಕಾದರೆ ವಿದ್ಯೆಯಿಂದ ಜನರನ್ನು ಮೇಲೆ ತರಬೇಕು ಏಕೆಂದರೆ ನಾವು ವಿದ್ಯಾರಂಗದಲ್ಲಿ ಬಹಳ ಹಿಂದೆ ಇದ್ದೇವೆಂದು ಹೇಳಿದರು. ಅದೇರೀತಿಯಲ್ಲಿ ಕೇಂದ್ರಗಳಲ್ಲಿ, ಮತ್ತು ರಾಜ್ಯಗಳಲ್ಲಿ ಬಜೆಟ್ಟಿನ ಬಹುಪಾಲು ಹಣವನ್ನು ವಿದ್ಯಾರಂಗಕ್ಕೆ ಕೊಡುತ್ತಿದ್ದಾರೆ. ಈ ದೇಶದಲ್ಲಿ ವಿದ್ಯೆ ಬೆಳೆಯಬೇಕು, ಅದರ ಸದುಪಯೋಗ ಆಗಬೇಕು, ಅಲ್ಲದೆ ವಿದ್ಯಾ ಪದ್ಧತಿ ಬದಲಾಗಬೇಕು. ಈಗಿರತಕ್ಕ ವಿದ್ಯಾಪದ್ಧತಿಯಿಂದ ನಿಜವಾಗಿಯೂ ಆದರ್ಶ ದೇಶ ಆಗುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಖಡಾಖಂಡಿತವಾಗಿ ಹೇಳಬಹುದು. ಪಠ್ಯಪುಸ್ತಕಗಳು ಬದಲಾಗಬೇಕು. ಈಗಿನ ಪಠ್ಯ ಪುಸ್ತಕಗಳಲ್ಲಿ ಬರತಕ್ಕ ವಿಚಾರ ಒಬ್ಬ ಮಗುವಿಗೆ, ತರುಣಗೆ, ಮನಸನ್ನು ವಿಶಾಲಗೊಳಿಸುವ ಭಾವನೆ ಇಲ್ಲ. ಇವತ್ತಿನ ಪಠ್ಯಪುಸ್ತಕಗಳು ಯಾವರೀತಿ ಬದಲಾಗಬೇಕೆಂದರೆ, ಮಕ್ಕಳಲ್ಲಿ ದೇಶ ಪ್ರೇಮವನ್ನು ತುಂಬಿಸತಕ್ಕ, ರಾಷ್ಟ್ರಪ್ರೇಮವನ್ನು ಬೆಳಸತಕ್ಕ, ಲೇಖನಗಳು ಬರಬೇಕು. ಇವತ್ತಿನ ಪಠ್ಯಪುಸ್ತಕಗಳಲ್ಲಿ ಮಹಾತ್ಮ ಗಾಂಧೀಯವರ ಶಕ್ತಿ, ಜವಹರಲಾಲ್ ನೆಹರುರವರ ಶಕ್ತಿ ನೇತಾಜಿ ಬೋಸ್‌ರವರ ಶಕ್ತಿಯನ್ನು ತೋರಿಸತಕ್ಕ ಒಂದು ಪಾಠವನ್ನೂ ಕಾಣುತ್ತಿಲ್ಲ. ಇಂತಹ ಪಾಠಗಳನ್ನು ಮಕ್ಕಳು ಕಲಿಯದೇ ಹೋದರೆ, ದೇಶ ಮುಂದೆ ಬರುವುದಾದರೂ ಹೇಗೆ ? ಈ ದೇಶವನ್ನು ಶಕ್ತಿಯುತವಾಗಿ ಮಾಡುವುದಕ್ಕೆ ದೊಡ್ಡ ದೊಡ್ಡ ಮಹನೀಯರ ವಿಚಾರಗಳು, ದೇಶಪ್ರೇಮ, ರಾಷ್ಟ್ರಪ್ರೇಮವನ್ನು ಬೆಳೆಸತಕ್ಕಂಥ ಪಠ್ಯಪುಸ್ತಕಗಳು ಜಾಸ್ತಿ ಬರಬೇಕು. ಇಂದು ಜಾತಿ ಜಾತಿಯನ್ನು ತೆಗಳತಕ್ಕ ಪಠ್ಯಪುಸ್ತಕಗಳನ್ನು ಕಾಣುತ್ತಿದ್ದೇವೆ. ಬಡವ, ಶ್ರೀಮಂತ, ದಲಿತ ಎಂದು ಹೇಳತಕ್ಕ ಪಠ್ಯಪುಸ್ತಕಗಳು ಧಾರಾಳವಾಗಿ ಸಿಗುತ್ತವೆ. ಮಕ್ಕಳ ಮನಸ್ಸು ಬಹಳ ಕೋಮಲವಾದುದು. ಕೋಮಲವಾದ ಮನಸ್ಸಿನಲ್ಲಿ ಸರಿಯಾದ ಭಾವನೆಗಳನ್ನು ತುಂಬಬೇಕು. ಚಿಕ್ಕ ವಯಸ್ಸಿನಲ್ಲಿಯೇ ಸಮಾಜವಾದಿ ಮನೋಭಾವನೆ ಬಂದರೆ ಮಾತ್ರ ಮಕ್ಕಳು ಮುಂದೆ ಉತ್ತಮ ಪ್ರಜೆಗಳಾಗಿ, ದೇಶವನ್ನು ಮುಂದೆ ತರಲಿಕ್ಕೆ ಸಾಧ್ಯ. ಎಲ್ಲಿ ನೋಡಿದರೂ ಅಲ್ಪಸಂಖ್ಯಾತರನ್ನು ತೆಗಳತಕ್ಕ ಅದರಲ್ಲೂ ಮುಸಲ್ಮಾನರನ್ನೂ, ಕ್ರಿಶ್ಚಿಯನ್‌ರನ್ನೂ, ದಲಿತರನ್ನೂ ಹಿಯ್ಯಾಳಿಸತಕ್ಕ ಪುಸ್ತಕಗಳನ್ನು ಕಾಣುತ್ತಿದ್ದೇವೆ. ಆದ್ದರಿಂದ ನಾನು ಹೇಳುವುದು. ಈ ಪಠ್ಯಪುಸ್ತಕಗಳನ್ನು ತಯಾರು ಮಾಡುವುದಕ್ಕೆ ಒಂದು ಒಳ್ಳೆಯ ಸಮಿತಿಯನ್ನು ನೇಮಕ ಮಾಡಬೇಕು. ಇಂದು ಸಾಹಿತ್ಯ ಪ್ರೇಮಿಗಳು, ವಿಶಾಲ ಮನೋಭಾವನೆ ಇರುವವರು ಜಾತ್ಯಾತೀತ ಮನೋಭಾವನೆ ಇರತಕ್ಕಂಥ ಮಹನೀಯರು ಇದ್ದಾರೆ, ಅಂಥವರನ್ನು ಹಾಕಬೇಕು ಅಲ್ಪಸಂಖ್ಯಾತರನ್ನು, ಸಾಹಿತಿಗಳನ್ನೂ ದಲಿತರನ್ನು ಹಾಕಬೇಕು. ಭೇದಭಾವನೆ ವರ್ಗಭಾವನೆ, ಜಾತೀಯ ಭಾವನೆಯನ್ನು ತಪ್ಪಿಸುವಂತಹ ಪಠ್ಯಪುಸ್ತಕಗಳನ್ನು ಇಡಬೇಕ. ಬೇರೆ ಬೇರೆ ದೇಶಗಳಲ್ಲಿ ಜಾತಿಗಳೇ ಇಲ್ಲ. ಅನೇಕ ಮತಗಳು, ಸಾವಿರಾರು ಉಪಜಾತಿಗಳು ಇಲ್ಲಿರುವಾಗ ವಿವಿಧತೆಯಲ್ಲಿ ಏಕತೆಯನ್ನು ತೋರಿಸತಕ್ಕ ಪಠ್ಯಪುಸ್ತಕಗಳು ಬಂದರೆ, ಈ ದೇಶ ಪ್ರಗತಿಪೂರ್ವಕವಾಗಿ ಸಾಗುವುದಕ್ಕೆ ಸಾಧ್ಯ. ದೇಶದ ಪ್ರಜೆಗಳು ನೆಮ್ಮದಿಯಿಂದ ಬಾಳುವುದಕ್ಕೆ ಸಾಧ್ಯ. ಅದೇ ರೀತಿಯಲ್ಲಿ ರ್‍ಯಾಗಿಂಗ್ ಪದ್ಧತಿಯನ್ನು ತಪ್ಪಿಸುವಂಥ ಮತ್ತು ನೈತಿಕ ಮಟ್ಟವನ್ನು ಮೇಲೆತ್ತುವ

ಪಠ್ಯಪುಸ್ತಕಗಳು ಬೇಕು. ಮಾನ್ಯ ಶಿವರುದ್ರಪ್ಪನವರ ಮೇಲೆ ಹಲ್ಲೆ ಮಾಡಿರುವುದನ್ನು ಕೇಳಿದ್ದೇವೆ. ಇಂತಹ ಪ್ರಸಂಗಗಳು ಬರಬಾರದು. ನೈತಿಕ ಮಟ್ಟವನ್ನು ಮೇಲೆತ್ತುವ ವಿಚಾರ ಇರತಕ್ಕಂಥ ಪಠ್ಯಪುಸ್ತಕ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇನ್ನು ಸರ್ಕಾರ ಜೂನಿಯರ್ ಕಾಲೇಜು. ಹೈಸ್ಕೂಲುಗಳನ್ನು ತೆರೆಯುತ್ತಿದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಹೋಗಿ ನೋಡಿದರೆ, ಶಾಲೆಗಳಿಗೆ ಕಟ್ಟಡಗಳೇ ಇಲ್ಲ. ಹೈಸ್ಕೂಲುಗಳನ್ನು ಕೇಳುವವರು, ಹೇಳುವವರು ಇಲ್ಲ. ಇನ್ನು ಮುಂದೆ ಪ್ರತಿ ವರ್ಷ ಹೈಸ್ಕೂಲುಗಳನ್ನು ಪ್ರಾರಂಭ ಮಾಡಬಾರದೆಂದು ಸೂಚನೆ ಮಾಡಿದ್ದಾರೆ ಇದು ಒಳ್ಳೆಯ ವಿಚಾರ. ಕೇಳಿದವರಿಗೆಲ್ಲಾ ಕೊಟ್ಟರೆ ಏನಾಗುತ್ತದೆ ಎಂಬುದನ್ನು ಸರಿಯಾಗಿ ನೋಡಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ತಾಂತ್ರಿಕ ಕಾಲೇಜು, ಕೃಷಿ ಕಾಲೇಜುಗಳನ್ನು ಕೊಡಬೇಕು. ಕೇವಲ ಜಾತಿಯತೆಯ ಮೇಲೆ ಕಾಲೇಜುಗಳನ್ನು ಕೊಡಬೇಡಿ. ಆ ರೀತಿ ಕೊಟ್ಟರೆ ದೇಶ ಯಾವರೀತಿ ಮುಂದೆ ಬರುವುದಕ್ಕೆ ಸಾಧ್ಯ. ಇವತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಹೋಗಬೇಕಾದರೆ ೫೦ ಸಾವಿರ ರೂಪಾಯಿಗಳನ್ನು ಕೊಡಬೇಕು. ಇಂತಹ ಕಾಲೇಜುಗಳಿಗೆ ಒಬ್ಬ ರೈತನ ಮಗ, ಒಬ್ಬ ದಲಿತನ ಮಗ ಹೋಗುವುದಕ್ಕೆ ಸಾಧ್ಯವಾಗುತ್ತದೆಯೇ ? ಇದನ್ನು ತಾವು ಆಲೋಚನೆ ಮಾಡಬೇಕು. ಅದೇ ರೀತಿ ಅಧ್ಯಾಪಕರ ಕೊರತೆ ಎಲ್ಲಾ ಕಡೆ ಇದೆ. ಹಳ್ಳಿಗಳ ಕಡೆ ಉಪಾಧ್ಯಾಯರುಗಳು ಇಲ್ಲ. ೩೦೦–೩೫೦ ವಿಧ್ಯಾರ್ಥಿಗಳು ಇರುವ ಕಡೆಯೂ ಕೇವಲ ಎರಡು ಜನ ಉಪಾಧ್ಯಯರು ಇರುವಂತಾದ್ದನ್ನು ತಪ್ಪಿಸಬೇಕು. ಶಾಲಾಕಟ್ಟಡಗಳನ್ನು ಕಟ್ಟಿ ಕೊಡಬೇಕು. ವಿದ್ಯಾಭ್ಯಾಸಕ್ಕಾಗಿ ೪ ಕೋಟಿ ರೂಪಾಯಿ ಇಟ್ಟಿದ್ದಾರೆ. ಇದನ್ನು ಸ್ವಲ್ಪ ತಡೆ ಮಾಡಿ ಬರುವ ವರ್ಷ ಮಾಡಬೇಕಾಗಿತ್ತು ಈ ರೀತಿಯಲ್ಲಿ ಪೂರ್ವ ಸಿದ್ಧತೆ ಇಲ್ಲದೆ, ಇದರಿಂದ ದೊಡ್ಡ ಅನಾಹುತವಾಗಿದೆ. ಆದ್ದರಿಂದ ಹೆಚ್ಚು ಹಣವನ್ನು ಶಾಲಾ ಕಟ್ಟಡಗಳಿಗೆ ವಿನಿಯೋಗಿಸಿದ್ದರೆ ನಿಜವಾಗಿಯೂ ಒಳ್ಳೆಯದಾಗುತ್ತಿತ್ತು. ಇನ್ನು ನಮ್ಮ ಬೈಂದೂರು ಶಾಲೆಯಲ್ಲಿ ಇನ್ನೂ ಪಠ್ಯ ಪುಸ್ತಕಗಳೇ ಬಂದಿಲ್ಲ. ಪುಸ್ತಕದಲ್ಲಿರುವ ಪಾಠಗಳನ್ನು ಟೈಪು ಮಾಡಿಸಿಕೊಂಡು ಓದುತ್ತಿದ್ದಾರೆ. ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಹೆಚ್ಚಾಗಿ ಕೊಡಲಿಲ್ಲ. ೨೫ ಪರ್ಸೆಂಟ್, ೫೦ ಪರ್ಸೆಂಟ್ ಕೂಡ ಬರುತ್ತಿಲ್ಲ. ಇದರಿಂದ ಅಧ್ಯಾಪಕರಿಗೂ ಕಷ್ಟ. ಅವರು ಈ ಪಠ್ಯಪುಸ್ತಕಗಳನ್ನು ತರುವುದಕ್ಕೆ ಹೋಗಬೇಕು. ಅದಕ್ಕಾಗಿ ಶಾಲೆಯಲ್ಲಿ ಪಾಠಗಳನ್ನು ಬಿಟ್ಟು, ಹೋಗಬೇಕು. ಇದರಿಂದ ಅಧ್ಯಾಪಕರಿಗೂ ಬಹಳ ದೊಡ್ಡ ಕಷ್ಟವಾಗಿದೆ ಎಂದು ಹೇಳುತ್ತೇನೆ. ಈಗಾಗಲೇ ಈ ಸದನದಲ್ಲಿ ನಾನಾ ಮಹನೀಯರು ಹೇಳಿದಹಾಗೆ, ಪಠ್ಯಪುಸ್ತಕಗಳನ್ನು ಶಾಲೆಗಳಿಗೆ ಕೊಡುವ ಏರ್ಪಾಡನ್ನು ಜೂನ್‌ನಲ್ಲಿ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ. ಅಧ್ಯಾಪಕರ ಕೈಯಿಂದ ಖರ್ಚು ಮಾಡಿಸುವುದು ಬೇಡ. ೭–೮ ದಿವಸ ಪಠ್ಯಪುಸ್ತಕಗಳನ್ನು ತರುವುದಕ್ಕಾಗಿ ಅಧ್ಯಾಪಕರು ಹೋಗಬೇಕಾಗುತ್ತದೆ. ಶಾಲೆಯಲ್ಲಿ ಅಧ್ಯಾಪಕರು ಇರುವುದಿಲ್ಲ. ಆದುದರಿಂದ ಇದನ್ನು ಸರ್ಕಾರ ಒಳ್ಳೆಯ ರೀತಿಯಲ್ಲಿ ನೋಡಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇರೀತಿಯಾಗಿ ಮಧ್ಯಾಹ್ನದ ಉಪಹಾರದಲ್ಲಿ ತುಂಬಾ ಭ್ರಷ್ಟಾಚಾರ ಇದೆ. ಕೇರ್ ಸಂಸ್ಥೆಯವರಿಂದ ಈ ಊಟಕ್ಕಾಗಿ ಏನೇನು ದಾನವಾಗಿ ಬರುತ್ತವೆ ಅವೆಲ್ಲಾ ಬೇರೆಯವರ ಮನೆಗೆ ಹೋಗುತ್ತದೆ. ಅವರು ಉದ್ಧಾರವಾಗುತ್ತಿದ್ದಾರೆ. ಇದರಲ್ಲೂ ಸಹ ಭ್ರಷ್ಟಾಚಾರ ಇದೆ. ಇದನ್ನು ಹೋಗಿ ನೋಡಿದರೆ ಗೊತ್ತಾಗುತ್ತದೆ. ಇದರಿಂದ ಆ ಬಡ ಮಕ್ಕಳಿಗೇನೂ ಅನುಕೂಲವಾಗುತ್ತಿಲ್ಲ. ಅಲ್ಲದೆ ಕೆಲವು ಮಕ್ಕಳಿಗೇ ಊಟವನ್ನು ಇವರು ಏನು ಮಾಡಿಕೊಡುತ್ತಿದ್ದಾರೆ ಇದರಿಂದ ಅನೇಕ ವಿದ್ಯಾರ್ಥಿಗಳಿಗೆ ರೋಗ ಬಂದು, ಆ ರೋಗದಿಂದ ಬಳಲುತ್ತಿದ್ದಾರೆ. ಇವರು ಒಳ್ಳೆಯ ರೀತಿಯಲ್ಲಿ ಅದನ್ನು ಮಾಡಿಕೊಟ್ಟರೆ ಮುಂದುವರಿಸಿಕೊಂಡು ಹೋಗಿ ಇಲ್ಲದೇ ಹೋದರೆ ಇದನ್ನು ತೆಗೆದುಬಿಡಿ ಎಂದು ಹೇಳುತ್ತೇನೆ.

ಇನ್ನು ಕಂಪ್ಯೂಟರ್ ಪದ್ಧತಿ ಬಗ್ಗೆ ಹೇಳುವುದಾದರೆ ತಮಗೆ ಗೊತ್ತಿದೆ. ೭೨ ಇದ್ದುದು ೨೭ ಆಗುತ್ತದೆ, ೨೭ ಇದ್ದುದು ೭೨ ಆಗುತ್ತದೆ. ತಮಗೆ ಹೇಳಬೇಕಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಈ ವಿದ್ಯಾರ್ಥಿಗಳು ಯಾವಾಗಲೂ ಹೈಯಸ್ಟ್‌ನಲ್ಲಿ ಅಂಕಗಳನ್ನು ಗಳಿಸುತ್ತಾ ಇದ್ದವರು ಈವೊತ್ತಿನ ದಿವಸ ೪ ನೇ ಸ್ಥಾನಕ್ಕೆ, ೮ ನೇ ಸ್ಥಾನಕ್ಕೆ, ಬಂದು ಮುಟ್ಟಿದ್ದಾರೆ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಬಳ್ಳಾರಿಯ ವೀರಶೈವ ಕಾಲೇಜಿನ ಎರಡನೇ ಪಿ .ಯು. ಸಿ. ಯಲ್ಲಿ ಓದುತ್ತಿದ್ದ ರವಿಪ್ರಕಾಶ್ ಎಂಬ ಹುಡುಗನಿಗೆ ಅತಿಹೆಚ್ಚಿನ ಅಂಕ ಬರಬೇಕಾಗಿದ್ದ ಕಡೆ ಕೇವಲ ೧೦ ಮಾರ್ಕ್ಸ್ ಬಂದಿದೆ. ಅವನು ಪಿಯುಸಿ ಬೋರ್ಡ್‌ಗೆ ಹೋಗಿ ಕೇಳಿದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ನಿನಗೆ ಬಂದಿರುವುದೇ ೧೦ ಮಾರ್ಕ್ಸ್ ಅಂತ ಹೇಳಿದರಂತೆ. ಈ ರೀತಿ ಅನ್ಯಾಯ ನಡೆಯುತ್ತಾ ಇದೆ. ಇದು ಪತ್ರಿಕೆಯಲ್ಲೂ ಬಂದಿದೆ. ಇದೇರೀತಿ ಎಷ್ಟೋ ಆಗಿದೆ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕಾದ ವಿಚಾರವಾಗಿದೆ. ಅದೇ ರೀತಿಯಲ್ಲಿ ವರ್ಗಾವಣೆ ವಿಚಾರ. ೩ ತಿಂಗಳಿಗೊಮ್ಮೆ ವರ್ಗಾವಣೆ ಆಗುತ್ತಿದೆ. ಇದರಲ್ಲೂ ಸಹ ಭ್ರಷ್ಟಾಚಾರ ನಡೆಯುತ್ತಾ ಇದೆ. ಅನ್ಯಾಯ ನಡೆಯುತ್ತಾ ಇದೆ ಈ ವಿದ್ಯಾ ಇಲಾಖೆಯು ಇಪೂರ್ಣವಾಗಿ ಒಳ್ಳೆಯ ರೀತಿಯಲ್ಲಿ ನಡೆಯಬೇಕಾದರೆ ಇಬ್ಬರು ಸಚಿವರಾದಂಥಾ ಮಾನ್ಯ ರಘುಪತಿ ಯವರು ಮತ್ತು ಗೋವಿಂದೇಗೌಡರು ಮನಸ್ಸು ಮಾಡಿದರೆ ಸರಿಹೋಗುತ್ತದೆ. ಇಲ್ಲದೇ ಹೋದರೆ ಸರಿಹೋಗುವುದಿಲ್ಲ. ಇದಕ್ಕೆ ಸಿ. ಐ. ಡಿ. ತರಹ ಸೆಲ್‌ನ್ನಾದರೂ ಇಟ್ಟು ಎಲ್ಲಿ ತಪ್ಪು ಇದೆ ಎಂಬುದನ್ನು ಕಂಡು ಹಿಡಿಯಿರಿ ಕಂಪ್ಯೂಟರ್‌ನಲ್ಲೂ ಸಹ ನೂರಾರು ತಪ್ಪು ಇದೆ, ಅವೆಲ್ಲದರ ಕಡೆಗೆ ಗಮನಹರಿಸಿ ಸರಿಯಾದ ವ್ಯವಸ್ಥೆ ಮಾಡದೇ ಹೋದರೆ ಇದರಿಂದ ಅಷ್ಟು ಉತ್ತಮವಾದ ಪ್ರತಿಫಲ ಬರುವಹಾಗೆ ಕಾಣುವುದಿಲ್ಲ. ಈ ಎಲ್ಲ ಬೇಡಿಕೆಗಳಿಗೆ ೩೨೭ ಲಕ್ಷ ರೂಪಾಯಿಗಳನ್ನು ಏನು ಕೇಳುತ್ತಿದ್ದಾರೆ ಇದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿ ನೋಡಿಕೊಳ್ಳುವ ಹಾಗೆ ಮಾಡಿದರೆ ಅವಾಗ ಎಲ್ಲರಿಗೂ ಅನುಕೂಲವಾಗುತ್ತದೆ.

ಇನ್ನು ಸಾಹಿತ್ಯ ಬಳಗದವರು ಹಂಪೆಯಲ್ಲಿ ಒಂದು ವಿಶ್ವವಿದ್ಯಾನಿಲಯ ಆಗಬೇಕು ಎಂದು ಹೇಳಿದ್ದಾರೆ. ಇದು ನ್ಯಾಯವಾದ ವಿಚಾರ, ಒಳ್ಳೆಯ ವಿಚಾರ, ಕನ್ನಡಕ್ಕೆ ಅಗ್ರಸ್ಥಾನ ಸಿಕ್ಕಬೇಕು. ಅಂಥಾ ಕೆಲಸವನ್ನು ಮಾಡಿದರೆ ಒಳ್ಳೆಯದು. ಜೊತೆಗೆ ಕೇಂದ್ರ ಸರ್ಕಾರ ಹಿಂದೀ ಶಾಲೆಗಳನ್ನು ತೆರೆಯಬೇಕು ಎಂದು ಏನು ಹೇಳಿದ್ದಾರೋ ಅಂಥಾ ಕಡೆಯಲ್ಲಿ ಕನ್ನಡ ಮಾಧ್ಯಮವನ್ನು ತೆರೆಯಬೇಕೆಂದು ನಾನು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಒಂದು ಕವನವನ್ನು ಬರೆದಿದ್ದಾರೆ. ಅದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಅದು ಈರೀತಿ ಇದೆ:

'' ಮೊಲೆವಾಲಿನೊಡಗೂಡಿ ಬಂದನುಡಿ, ತಾಯಿನುಡಿ
ಕೊಲೆಗೈದರಮ್ಮನನೆ ಕೂಲಿಸಿದಂತೆ,
ತಾಯ್ ಮುತ್ತು ಕೊಡುವಂದು ನಿಮ್ಮ ಕೆನ್ನೆಯ
ಮೇಲೆ ಪೋಣಿಸಿದ ಮುತ್ತಿನಂತೆ''
ಸಾಯುತ್ತಿದೆ ನಿಮ್ಮ ನುಡಿ ಓ...ಕನ್ನಡದ ಕಂದರಿರ''.

ಈ ಕವನ ೪೦ ವರ್ಷದ ಹಿಂದೆ ಬರೆದುದು. ಆದುದರಿಂದ ನಮ್ಮ ಈ ಕನ್ನಡಕ್ಕೆ ಅಗ್ರಸ್ಥಾನ ಇರಲೇಬೇಕು. ಇದರ ಜೊತೆಗೆ ಎಲ್ಲ ಕಡೆಯೂ ಕನ್ನಡ ಮಾಧ್ಯಮವನ್ನು ತೆರೆಯಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಜಿ. ಬೆಲ್ಲದ್ (ಧಾರವಾಡ).—ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ರಾಜ್ಯದ ಶಿಕ್ಷಣ ಸಚಿವರುಗಳಾದ ಶ್ರೀ ಎಂ. ರಘುಪತಿಯವರು ಮತ್ತು ಶ್ರೀ ಹೆಚ್.ಜಿ. ಗೋವಿಂದಗೌಡರು ಮಂಡಿಸಿರುವ ಈ ಆಯವ್ಯಯ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಈ ಶಿಕ್ಷಣದಲ್ಲಿ ಬದಲಾವಣೆ ಈವೊತ್ತಿನ ದಿವಸ ಅವಶ್ಯಕವಾಗಿ ಆಗಬೇಕಾಗಿದೆ. ನಾವು ಈವೊತ್ತಿನ ದಿವಸ ಈ ಶಿಕ್ಷಣಕ್ಕಾಗಿ ತೊಡಗಿಸುವ ಹಣ ಏನು ಇದೆ ಅದನ್ನು ಉತ್ಪಾದನೆಗೆ ತೊಡಗಿಸುವಂಥ ಹಣ ಎಂದು ತಿಳಿದುಕೊಳ್ಳಬೇಕಾಗಿದೆ. ಇಲ್ಲಿಯವರೆಗೂ ಯಾವ ಸರ್ಕಾರಗಳೂ ಸಹ ಈ ಶಿಕ್ಷಣಕ್ಕೆ ಯಾವ ಪ್ರಮಾಣದಲ್ಲಿ ಎಷ್ಟು ಆದ್ಯತೆ ಕೊಡಬೇಕಾಗಿತ್ತೋ, ಆ ಪ್ರಮಾಣದಲ್ಲಿ ಆದ್ಯತೆಯನ್ನು ಕೊಟ್ಟಿರುವುದಿಲ್ಲ. ಆದುದರಿಂದ ಈ ಶಿಕ್ಷಣದಲ್ಲಿ ಈವೊತ್ತಿನ ದಿವಸ ನಾವು ಲೋಪದೋಷಗಳನ್ನು ಕಾಣುತ್ತಾ ಇದ್ದೇವೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರತಕ್ಕಂಥಾ ದೋಷವಾದುದರಿಂದ ಈವೊತ್ತಿನ ದಿವಸ ಶಿಕ್ಷಣದ ಗುಣಮಟ್ಟ ಕೆಟ್ಟಿರುತ್ತದೆ. ಇದಕ್ಕೆ ಈಗಲಾದರೂ ಕೂಡ ಪ್ರಾಧಾನ್ಯತೆ ಕೊಟ್ಟು ಸುಧಾರಿಸುವ ಹಾಗೆ ಮಾಡಬೇಕು. ಈವೊತ್ತು ಶಿಕ್ಷಣಕ್ಕೆ ಕೊಟ್ಟಿರುವ ಹಣ ಸಾಕಾಗುವುದಿಲ್ಲ. ಇನ್ನೂ ಹೆಚ್ಚಿನ ಹಣ ಕೊಡುವುದು ಅವಶ್ಯಕ ಎಂದು ಹೇಳುತ್ತೇನೆ. ರಾಜ್ಯದ ಆದಾಯದಲ್ಲಿ ಇದಕ್ಕೆ ೧೫ ರಿಂದ ೧೮ ಪರ್ಸೆಂಟ್‌ನಷ್ಟು ಹಣ ಕೊಟ್ಟಿರುವುದು ಸಾಕಾಗುವುದಿಲ್ಲ. ಕನಿಷ್ಟಪಕ್ಷ ೨೫ ಪರ್ಸೆಂಟ್‌ನಷ್ಟನ್ನಾದರೂ ಕೊಡುವುದು ಅವಶ್ಯಕವಾಗಿದೆ. ಇದಕ್ಕೆ ಆದ್ಯತೆ ಕೊಟ್ಟು ಹೆಚ್ಚಿನ ಹಣವನ್ನು ಕೊಡಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಈವೊತ್ತಿನ ದಿವಸ ನಾವು ಹೆಚ್ಚಿಗೆ ಜನಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಏತಕ್ಕೆಂದರೆ ನಮ್ಮ ಮಕ್ಕಳನ್ನು ಮುಂದಿನ ಭವಿಷ್ಯಕ್ಕಾಗಿ ನಿರ್ಮಾಣ ಮಾಡಬೇಕಾಗಿರುವುದರಿಂದ ನಾವು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಈ ಪಠ್ಯಪುಸ್ತಕದ ಕ್ರಮದಲ್ಲಿ ಬದಲಾವಣೆ ಮಾಡಬೇಕಾಗಿದೆ. ನಮ್ಮ ಮಕ್ಕಳನ್ನು ಮುಂದಿನ ಭವಿಷ್ಯ ರೂಪಿಸುವ ಕಡೆಗೆ ಆದ್ಯತೆ ಕೊಟ್ಟು ಶಿಕ್ಷಣ ರಂಗದಲ್ಲಿ ತಜ್ಞರು ಏನು ಇದ್ದಾರೆ ಅವರ ಸಲಹೆಗಳನ್ನು ಪಡೆದುಕೊಳ್ಳುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಬೇಕು ಎಂದು ಹೇಳುತ್ತೇನೆ. ಇಡೀ ರಾಜ್ಯಕ್ಕೆ ಅಲ್ಲ ಇಡೀ ರಾಷ್ಟ್ರಕ್ಕೇ ಒಂದು ಆದರ್ಶಪ್ರಾಯವಾದಂಥಾ ಶಿಕ್ಷಣವನ್ನು ನಮ್ಮ ಮಕ್ಕಳಿಗೆ ಕೊಡುವುದಕ್ಕೆ ಕರ್ನಾಟಕ ಸರ್ಕಾರ ಮುಂದಾಗಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಒಳ್ಳೆಯ ಶಿಕ್ಷಣಕ್ಕೆ ಆದ್ಯತೆ ಕೊಡಲು ನಮ್ಮ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಬಡಮಕ್ಕಳಿಗೆ ಶಿಕ್ಷಣದಲ್ಲಿ ಹೆಚ್ಚು ಆಸಕ್ತಿ ವಹಿಸುವ ಹಾಗೆ ನಮ್ಮ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದರಲ್ಲಿ ಬಹುಮುಖ್ಯವಾದುದು ಕಡುಬಡತನದಲ್ಲಿ ಯಾರು ಇದ್ದಾರೋ ಆ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ಮಿಡ್ಡೇಮೀಲ್ಸ್‌ನ್ನು ೭ನೇ ತರಗತಿಯವರಿಗೆ ಖಡ್ಡಾಯ ಕೊಡಬೇಕೆನ್ನುವ ವಿಚಾರ ಏನು ಇದೆ ಇದು ಆ ಮಕ್ಕಳನ್ನು ಶಾಲೆಗೆ ಅಂದರೆ ಪ್ರಾಥಮಿಕ ಶಿಕ್ಷಣಕ್ಕೆ ಖಡ್ಡಾಯವಾಗಿ ಕಳುಹಿಸುವುದಕ್ಕೆ ಅನುಕೂಲವಾಗುತ್ತದೆ. ಇದೇ ರೀತಿಯಾಗಿ ನಮ್ಮ ಸರ್ಕಾರ ಎಲ್ಲ ಮಕ್ಕಳಿಗೂ ಕೂಡ ಈ ವರ್ಷದಿಂದ ಉಚಿತ ಪಠ್ಯಪುಸ್ತಕಗಳನ್ನು ಕೊಡತಕ್ಕಂಥಾದ್ದು ಒಳ್ಳೆಯ ಆಕರ್ಷಣೀಯವಾಗಿದೆ, ಇದು ನ್ಯಾಯವಾಗಿದೆ. ಈವೊತ್ತಿನ ದಿವಸ ಕಡುಬಡವರು ಏನು ಇದ್ದಾರೆ ಅವರು ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅಂತಹ ಮಕ್ಕಳು ಶಿಕ್ಷಣ ಕಲಿಯುವುದಕ್ಕೆ ಆಸಕ್ತರಾಗಲಿ ಅನ್ನುವ ಉದ್ದೇಶದಿಂದ ಹೀಗೆ ಮಾಡಿದ್ದಾರೆ. ಅಲ್ಲದೆ ಇದರ ಜೊತೆಗೆ ಸಮವಸ್ತ್ರವನ್ನೂ ಕೂಡ ಧರಿಸಿಕೊಂಡು ಬರುವ ಹಾಗೆ ಮಾಡಿದ್ದಾರೆ. ರಾಷ್ಟ್ರದಲ್ಲೇ ನಮ್ಮ ಸರ್ಕಾರ ಮೊಟ್ಟಮೊದಲನೆಯದಾಗಿ ಈ ಯೋಜನೆಗಳನ್ನು ಪ್ರಾರಂಭ ಮಾಡಿರುವುದು ಬಹಳ ಸಂತೋಷದ ಸಂಗತಿಯಾಗಿದೆ.

ಇನ್ನು ವಯಸ್ಕರ ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳುವುದಾದರೆ ಇದರಲ್ಲಿ ಬಹಳಷ್ಟು ದೋಷ ಇದೆ. ಈ ಒಂದು ಅಕ್ಷರಸೇನೆಗೆ ಎಷ್ಟು ಹಣ ಖರ್ಚು ಮಾಡುತ್ತೀರಿ ಅದನ್ನು ಸರಿಯಾದ ರೀತಿಯಲ್ಲಿ ಬಳಸುವ ಹಾಗೆ ಒಂದು ವ್ಯವಸ್ಥೆ ಮಾಡಬೇಕು. ಮೊದಲು ಇದರಲ್ಲಿಯ ದೋಷಗಳನ್ನು ಬಗೆ ಹರಿಸಬೇಕು. ಇದು ಬಹಳ ಕಠಿಣ ಪರಿಸ್ಥಿತಿಯಾಗಿದೆ. ಈ ಬಗ್ಗೆ ಅನೇಕ ಮಾನ್ಯ ಸದಸ್ಯರು ಸೂಚನೆ ಮಾಡಿದಂತೆ ಈ ವಯಸ್ಕರ ಶಿಕ್ಷಣವನ್ನು ಕೆಲವೇ ದಿವಸದಲ್ಲಿ ಚೆನ್ನಾಗಿ ಜಾರಿಗೆ ತರಲು ಒಂದು ಯೋಜನೆ ಹಾಕಿಕೊಳ್ಳಬೇಕು. ಅಲ್ಲದೆ ಎಲ್ಲಾ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಒಂದು ತರಬೇತಿ ಕೊಟ್ಟು ಗ್ರಾಮೀಣ ಭಾಗದಲ್ಲಿ ಶಿಕ್ಷಣ ಇಲ್ಲದವರಿಗೆ ಶಿಕ್ಷಣ ಕೊಡುವ ಹಾಗೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಇಲ್ಲದೇ ಹೋದರೆ ತಾವು ಇದಕ್ಕಾಗಿ ಏನು ಹಣವನ್ನು ತೊಡಗಿಸುತ್ತೀರೋ ಅದು ಅಪವ್ಯಯವಾಗುತ್ತದೆ ಎಂದು ಹೇಳುತ್ತೇನೆ. ಇದೆಲ್ಲಕ್ಕಿಂತ ಮುಖ್ಯವಾಗಿ ಈವೊತ್ತಿನ ದಿವಸ ಪ್ರೀ ಪ್ರೈಮರಿ ಶಾಲೆಗಳಿಗೆ ಬಹಳ ಪ್ರಾಧಾನ್ಯತೆಯನ್ನು ಕೊಡಬೇಕಾಗಿದೆ. ಬಾಲವಾಡಿ, ನರ್ಸರಿ ಮತ್ತು ಅಂಗನವಾಡಿ ಇವುಗಳಿಗೆ ಮುಖ್ಯವಾಗಿ ಪ್ರಾಧಾನ್ಯತೆಯನ್ನು ಕೊಟ್ಟು ಅಲ್ಲಲ್ಲಿ ಶಾಲೆಗಳನ್ನು ಪ್ರಾರಂಭಿಸುವುದು ಬಹಳ ಅವಶ್ಯಕವಾಗಿದೆ. ಬಡಮಕ್ಕಳಿಗೆ ಪ್ರೀ ಪ್ರೈಮರಿ ಶಿಕ್ಷಣ ಕೊಡುವುದು ಬಹಳ ಅವಶ್ಯಕ. ಈ ದಿಸೆಯಲ್ಲಿ ನಮ್ಮ ಸರ್ಕಾರ ಗಮನ ಹರಿಸಬೇಕಾಗಿದೆ. ಮೊದಲನೆಯ ಬುನಾದಿ ಎಂದರೆ ಪ್ರಾಥಮಿಕ ಶಿಕ್ಷಣ. ಇದನ್ನು ಮೂಲತಃ ಬದಲಾವಣೆ ಮಾಡಬೇಕು. ಹಾಗೆ ಮಾಡಿದರೆ ರಾಷ್ಟ್ರದಲ್ಲೇ ಮಕ್ಕಳಿಗೆ ಒಳ್ಳೆಯ ಭವಿಷ್ಯವನ್ನು, ಒಳ್ಳೆಯ ಬುನಾದಿಯನ್ನು ಹಾಕಿ ಕೊಟ್ಟಂತಾಗುತ್ತದೆ. ಇದರ ಬಗ್ಗೆ ತಾವು ಗಮನಹರಿಸಬೇಕೆಂದು ಹೇಳುತ್ತೇನೆ. ಇನ್ನೂ ಈ ಪ್ರಾಥಮಿಕ ಶಾಲೆಗಳ ಬಗ್ಗೆ ೬ ಅಂಶದ ಕಾರ್ಯಕ್ರಮ ಏನು ಇದೆ ಅದು ಅನೇಕ ಪ್ರಾಥಮಿಕ ಶಾಲೆಗಳಲ್ಲಿ ನಡೆಯುತ್ತಾ ಇಲ್ಲ. ಈ ೬ ಅಂಶದ ಕಾರ್ಯಕ್ರಮವನ್ನು ಪ್ರತಿಯೊಂದು ಶಾಲೆಯಲ್ಲೂ ಕೂಡ ಕಡ್ಡಾಯವಾಗಿ ನಡೆಯುವ ಹಾಗೆ ಮಾಡಬೇಕು. ಹಾಗೆಯೇ ಗ್ರಂಥಾಲಯಗಳೂ ಕೂಡ ಎಲ್ಲ ಕಡೆಯಲ್ಲಿ ಆಗುವುದು ಬಹಳ ಅವಶ್ಯಕವಾಗಿದೆ. ಈ ವರ್ಷ ಸರ್ಕಾರದವರು ೭ನೇ ತರಗತಿಯವರೆಗೂ ಪಠ್ಯಪುಸ್ತಕಗಳನ್ನು ಮತ್ತು ಬಟ್ಟೆಯನ್ನೂ ಸಹ ಕೊಟ್ಟಿದ್ದಾರೆ. ಬಡವರಿಗೆ ಅವಶ್ಯಕವಾದ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಅದೇ ಪ್ರಕಾರವಾಗಿ ಆಟಪಾಠಗಳಲ್ಲಿ ಹವ್ಯಾಸ, ವಿಜ್ಞಾನದಲ್ಲಿ ಹವ್ಯಾಸ ಬೆಳೆಸಿಕೊಳ್ಳುವುದು ಅತೀ ಅವಶ್ಯಕ. ಇವತ್ತಿನ ದಿವಸ ಶಿಕ್ಷಣ ಏನು ವ್ಯಾಪಾರ ವೃತ್ತಿಯಲ್ಲಿ ತೊಡಗಿದೆಯೋ ಅದು ಹೀನಾಯವಾದಂಥ ಕೆಲಸ. ಇದು ಒಂದು ಉದ್ಯಮವಾಗಿ ಬೆಳೆಯುವುದನ್ನು ತಡೆಗಟ್ಟಬೇಕಾದರೆ ಸರ್ಕಾರಿ ಶಿಕ್ಷಣ ಶಾಲೆಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸಬೇಕು. ಏಕೆಂದರೆ

ಇವತ್ತಿನ ದಿವಸ ಅನೇಕ ಜನರು ಡೊನೇಷನ್ ಕೊಟ್ಟು ತಮ್ಮ ಮಕ್ಕಳನ್ನು ದೂರದ ಶಾಲೆಗಳಿಗೆ ಕಳುಹಿಸುತ್ತಾ ಇದ್ದಾರೆ. ಇವತ್ತಿನ ದಿವಸ ಸರ್ಕಾರಿ ಪ್ರೈಮರಿ ಶಾಲೆಗಳಲ್ಲಿ ಮಕ್ಕಳಿಗೆ ಕೂರಲಿಕ್ಕೆ ಸ್ಥಳಗಳಿಲ್ಲ. ಸರಿಯಾದ ಕಟ್ಟಡಗಳಿಲ್ಲ, ಬೇಕಾದಂಥ ಸೌಲಭ್ಯಗಳು ಇಲ್ಲ–ಹೀಗಾಗಿ ತೊಂದರೆಯನ್ನು ಅನುಭವಿಸುತ್ತಾ ಇವೆ. ಆದುದರಿಂದ ಮುಖ್ಯವಾಗಿ ಪ್ರೈಮರಿ ಶಾಲೆಗಳಿಗೆ ಆದ್ಯತೆ ಕೊಟ್ಟು, ಶಿಕ್ಷಣ ಮಟ್ಟವನ್ನು ಸುಧಾರಿಸುವುದು ಬಹಳ ಅಗತ್ಯವಿದೆ. ಇಂಜನಿಯುರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ನಮ್ಮ ಬಡ ಜನರ ಹಣವನ್ನು ತೊಡಗಿಸಿ, ಅಲ್ಲಿ ಬೇರೆ ರಾಜ್ಯದ ಜನರಿಗೆ ನಾವು ಅವಕಾಶ ಮಾಡಿಕೊಟ್ಟು ನಂತರ ಅವರು ಬೇರೆ ರಾಜ್ಯಗಳಿಗೆ ಹೋಗಿ ಸೇವೆ ಮಾಡುವುದು, ವಿದೇಶಿಗಳಿಗೆ ಹೋಗಿ ಅಭ್ಯಾಸ ಮಾಡುವುದಕ್ಕೆ ಅನುಕೂಲವಾಗುತ್ತಿದೆ. ಇದೂ ಕೂಡ ನ್ಯಾಯವಾದುದಲ್ಲ. ಇವತ್ತಿನ ದಿವಸ ನಾವು ವಿಚಾರ ಮಾಡಬೇಕಾಗಿದೆ. ಏನೆಂದರೆ, ನಮ್ಮ ದೇಶದ ಬೆನ್ನೆಲುಬಾಗಿರತಕ್ಕಂಥ ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ರೈತರ, ಕೂಲಿಕಾರರ ಮಕ್ಕಳಿಗೆ ಮೆಡಿಕಲ್, ಇಂಜನೀಯುರಿಂಗ್, ಪಾಲಿಟೆಕ್ನಿಕ್‌ಗಳಲ್ಲಿ ಹೆಚ್ಚಿನ ಅವಕಾಶ ಸಿಗುವಂತ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬೇಕಾಗಿದೆ. ನನ್ನ ದೃಷ್ಟಿಯಲ್ಲಿ ೭ನೇ ಇಯತ್ತೆಗೆ ಕಡ್ಡಾಯವಾಗಿ ಪಬ್ಲಿಕ್ ಪರೀಕ್ಷೆ ನಡೆಸುವಂಥಾ ಅವಶ್ಯಕತೆ ಇದೆ, ಇದನ್ನು ನಡೆಸಬೇಕು ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಟೆಕ್ನಿಕಲ್ ಎಜುಕೇಷನ್ ಪ್ರಾರಂಭಿಸಬೇಕು ಎಂದು ಹೇಳುತ್ತೇನೆ. ಅಲ್ಲದೆ ಪಿ.ಯು.ಸಿ. ಯಿಂದ ನಮ್ಮ ದೇಶದ ಮುಖ್ಯ ಕಸುಬುಗಳಾದ ಕೃಷಿ, ತೋಟಗಾರಿಕೆ ರೇಷ್ಮೆ ಹೈನುಗಾರಿಕೆ ಮುಂತಾದ ಅನೇಕ ಉದ್ಯೋಗಾವಕಾಶಗಳು ಸಿಗುವಂತೆ ಪಾಲಿಟೆಕ್ನಿಕ್‌ಗಳಲ್ಲಿ, ಡಿಪ್ಲೊಮಾಗಳಲ್ಲಿ ಶಿಕ್ಷಣ ಕೊಡಲಿಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು ಎಂದು ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಒಬ್ಬ ಪಿ.ಯು.ಸಿ. ವಿದ್ಯಾರ್ಥಿಯ ರಿಸಲ್ಟ್ ಬಗ್ಗೆ ತಮ್ಮ ಗಮನ ಸೆಳೆಯಬಯಸುತ್ತೇನೆ. ಧಾರವಾಡದ ಬಿ.ವಿ. ಕುಲಕರ್ಣಿ ಎಂಬ ಒಬ್ಬ ವಿದ್ಯಾರ್ಥಿಯ ರೋಲ್ ನಂ. ೨೨೦೭೩೪. ಇವನು ಪಿ.ಯು.ಸಿ. ಎಕ್ಸಾಮಿನೇಷನ್‌ನಲ್ಲಿ ೨೨ ಮಾರ್ಕ್ಸ್ ತೆಗೆದುಕೊಂಡಿದ್ದಾನೆ ಎಂದು ಡಿಕ್ಲೇರ್ ಮಾಡಿದ್ದರು. ಇವನು ನ್ಯಾಷನಲ್ ಸ್ಕಾಲರ್‌ಶಿಪ್ ಪಡೆದಿರುವಂಥ ವಿದ್ಯಾರ್ಥಿ. ಇವನು ರೀವ್ಯಾಲ್ಯುಯೇಷನ್, ರೀ–ಟೋಟ್ಲಿಂಗ್ ಮಾಡಬೇಕು ಎಂದು ಕೇಳಿಕೊಂಡಾಗ ಇವನ ಮಾರ್ಕ್ಸ್ ೭೭ ಆಗಿದೆ. ಇಂತಹ ಅನೇಕ ಪ್ರಕರಣಗಳಿವೆ. ಪಿ.ಯು.ಸಿ. ಎಕ್ಸಾಮಿನೇಷನ್‌ನಲ್ಲಿ ದೋಷಗಳಿವೆ. ಕಂಪ್ಯೂಟರ್‌ನಲ್ಲಿ ಅನೇಕ ದೋಷಗಳಿವೆ. ಅನೇಕ ಪ್ರಜ್ಞಾವಂತ ವಿದ್ಯಾರ್ಥಿಗಳಿಗೆ, ಹೆಚ್ಚು ಮಾರ್ಕ್ಸ್ ಪಡೆಯುವಂಥ ವಿದ್ಯಾರ್ಥಿಗಳಿಗೆ ಇದರಿಂದ ಬಹಳ ದೊಡ್ಡ ಅನ್ಯಾಯವಾಗಿದೆ ಎನ್ನುವುದನ್ನು ಪತ್ರಿಕೆಗಳ ಮೂಲಕ, ಜನತೆಯ ಮೂಲಕ, ಸದಸ್ಯರ ಮೂಲಕ ತಿಳಿದಿದ್ದೀರಿ. ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ಪರೀಕ್ಷೆಯ ದೋಷ, ಕಂಪ್ಯೂಟರ್ ದೋಷ ಮುಂತಾದ ಕೆಲವು ದೋಷಗಳ ಬಗ್ಗೆ ತೀವ್ರವಾಗಿ ಪರಿಶೀಲಿಸಿ, ಅನೇಕ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜುಗಳಿಗೆ, ಇಂಜಿನಿಯರಿಂಗ್ ಕಾಲೇಜುಗಳಿಗೆ, ಪಾಲಿಟೆಕ್ನಿಕ್‌ಗಳಿಗೆ ಹೋಗಲಿಕ್ಕೆ ಅವಕಾಶ ಸಿಗುವಂತೆ ರಿಸಲ್ಟ್‌ನ್ನು ಸರಿಯಾಗಿ ಡಿಕ್ಲೇರ್ ಮಾಡಬೇಕು. ಈ ಬಗ್ಗೆ ತೀವ್ರವಾಗಿ ಗಮನ ಹರಿಸಬೇಕು ಎಂದು ಮಾನ್ಯ ವಿದ್ಯಾ ಸಚಿವರಲ್ಲಿ ವಿನಂತಿಮಾಡಿಕೊಂಡು. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷಿಣಿಯವರೆ, ಇಂದು ಮಂಡಿಸಿದಂಥ ಶಿಕ್ಷಣ ಇಲಾಖೆಯ ಬೇಡಿಕೆ ಮೇಲೆ ಭಾಗವಹಿಸುತ್ತಾ, ಇದನ್ನು ವಿರೋಧಿಸುತ್ತಾ ಸಂಕ್ಷಿಪ್ತವಾಗಿ ನಾನು ಎರಡೇ ವಿಚಾರದ ಬಗ್ಗೆ ಮಾತನಾಡಲಿದ್ದೇನೆ. ಸಾಮಾನ್ಯವಾಗಿ ಶಿಕ್ಷಣ ಇಲಾಖೆಯವರು ಕೊಟ್ಟಂತಹ ಈ ೭೪ ಪುಟಗಳ ವಾರ್ಷಿಕ ವರದಿಯ ಬಗ್ಗೆ ಟೀಕಿಸುವ ಅವಶ್ಯಕತೆಯನ್ನು ನಾನು ಕಾಣುಕೊಂಡಿಲ್ಲ. ಏಕೆಂದರೆ, ಸಾಮಾನ್ಯವಾಗಿ ಶಿಕ್ಷಣದ ಮೂಲಭೂತ ಅವಶ್ಯಕತೆಗಳ ಬಗ್ಗೆ ನಾವು ಪ್ರಪ್ರಥಮವಾಗಿ ಚಿಂತೆಯನ್ನು ಮಾಡಿ ಅವುಗಳನ್ನು ಪೂರೈಸಿ ನಂತರ ಮುಂದಿನ ಹೆಜ್ಜೆಯನ್ನು ಇಡಬೇಕಾದಂಥ ಸಂದರ್ಭದಲ್ಲಿ ನಾವು ಪ್ರತಿಯೊಂದು ಹಂತದಲ್ಲಿ, ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಯಶಸ್ವಿಯನ್ನು ಕಂಡಿಲ್ಲ, ಇದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೇವೆ ಎನ್ನುವಂಥ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ಒಂದು ವಿಚಾರದಲ್ಲಿ ಮಾನ್ಯ ಮಂತ್ರಿಗಳೀರ್ವರೂ ತಮ್ಮ ಆತ್ಮ ಪರಿಶೋಧನೆ ಮಾಡಿದಾಗ ಯಾವ ಹಂತದಲ್ಲಿ ತಾವು ಯಶಸ್ಸನ್ನು ಕಂಡಿದ್ದೀರಿ ಎನ್ನುವುದನ್ನು ತಿಳಿಸಬೇಕು ಎನ್ನುವಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶಿಕ್ಷಣ ಇಲಾಖೆ ಎನ್ನುವುದು ಒಂದು ಪ್ರಯೋಗಾಲಯದಂತೆ. ಅಂದರೆ ಪ್ರಯೋಗಾಲಯದಲ್ಲಿ ಯಾವುದು ಉದ್ಭವವಾಗುತ್ತದೆ ಎನ್ನುವಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ, ಒಂದು ವೇಳೆ ಅಣುಬಾಂಬ್ ಉದ್ಭವವಾದರೂ ಸಹ ಒಂದು ವಿಶೇಷವೇನಲ್ಲ ಎನ್ನುವ ಮಾತನ್ನು ಹೇಳಲಿಚ್ಛಿಸುತ್ತೇನೆ. ಪ್ರತಿಯೊಂದು ಹಂತದಲ್ಲಿ ತೆಗೆದುಕೊಳ್ಳುವುದಾದರೆ ಈ ಅಧ್ಯಾಪಕರ ಪ್ರಶ್ನೆ ಬರುತ್ತದೆ ಈ ಅಧ್ಯಾಪಕರ ವಿಚಾರದಲ್ಲಿ ಹೇಳುವುದಾದರೆ ಅಧ್ಯಾಪಕರ ಕೊರತೆಯನ್ನು ಈಗಾಗಲೇ ಕಂಡುಕೊಂಡಿದ್ದೇವೆ.

೨೫ ಸಾವಿರಕ್ಕೂ ಹೆಚ್ಚು ಇರುವಂಥ ಅಧ್ಯಾಪಕರ ಬಗ್ಗೆ ಗಮನಕೊಡಬೇಕಾಗಿದೆ. ಅಧ್ಯಾಪಕರ ನೇಮಕಾತಿಯಲ್ಲಿ ತಾವು ವಿಳಂಬವನ್ನು ಏಕೆ ಅನುಸರಿಸುತ್ತೀರೋ ಎನ್ನತಕ್ಕ ಪ್ರಶ್ನೆಯನ್ನು ತಮ್ಮ ಮುಖೇನ ನಾನು ಕೇಳಲಿಚ್ಛಿಸುತ್ತೇನೆ. ಮೇಲ್ಮಟ್ಟದಲ್ಲಿ ತಾವು ತಿಳಿಸಿದ್ದೀರಿ. ಈ ಒಂದು ಮಂಜೂರಾತಿಯಾದ ಹುದ್ದೆಗಳಿಗೆ ನೇಮಕ ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ತಾವು ಅಧ್ಯಾಪಕರನ್ನು ನೇಮಿಸಿದ್ದೀರಾ ಅಥವಾ ಹೊಸ ಶಾಲಾ ಕಾಲೇಜುಗಳನ್ನು ಏನು ತೆರೆದಿದ್ದೀರಿ ಅವುಗಳಿಗೆ ಅಧ್ಯಾಪಕರನ್ನು ನೇಮಕ ಮಾಡಿದ್ದೀರಾ ? ಈ ಮೂರು ವರ್ಷಗಳಲ್ಲಿ ಯಾವ ಸಾಧನೆ ಮಾಡಿದ್ದೀರಿ ಎಂದು ಕೇಳಬಯಸುತ್ತೇನೆ. ಇನ್ನೂ ಹಲವಾರು ಶಾಲೆಗಳನ್ನು ತೆರೆದಿದ್ದೀರಿ, ಹಲವಾರು ಕಾಲೇಜುಗಳನ್ನು ತೆಗೆದಿದ್ದೀರಿ, ಈ ಬಗ್ಗೆ ಭಿನ್ನಾಭಿಪ್ರಾಯವಿಲ್ಲ, ಭಿನ್ನಭೇದವಿಲ್ಲ. ಆದರೆ ಯಾವುದೇ ಒಂದು ಶಾಲೆಯನ್ನು, ಕಾಲೇಜನ್ನು, ಪ್ರೌಢಶಾಲೆಯನ್ನು ತೆರೆಯಬೇಕಾದರೆ ಅದಕ್ಕೆ ಬೇಕಾದಂಥ ಕಟ್ಟಡ, ಸ್ಥಳ ಹಾಗೂ ಅಧ್ಯಾಪಕರನ್ನು ಪೂರೈಸುವಂಥ ಮಹತ್ತರವಾದ ಜವಾಬ್ದಾರಿಯನ್ನು ಪೂರೈಸದೆ ಶಾಲೆಗಳನ್ನು ತೆರೆಯುವಂಥ ಔಚಿತ್ಯವೇನು ಎಂಬ ಪ್ರಶ್ನೆಯನ್ನು ತಮ್ಮ ಮುಖಾಂತರ ಕೇಳಲಿಚ್ಛಿಸುತ್ತೇನೆ. ನೀವು ಹಲವಾರು ಕಾಲೇಜುಗಳನ್ನಾಗಲಿ, ಹೈಸ್ಕೂಲುಗಳನ್ನಾಗಲಿ ಅಥವಾ ಪ್ರಾಥಮಿಕ ಶಾಲೆಗಳನ್ನಾಗಲಿ ತೆರೆದರೆ ಒಂದು ಶಾಲೆಯಿಂದ ಅಧ್ಯಾಪಕರನ್ನು ಮತ್ತೊಂದು ಶಾಲೆಗೆ ಡೆಪ್ಯುಟೇಷನ್ ಮಾಡಿ, ಈ ಶಾಲೆಯನ್ನು ತೆರೆದಿದ್ದೇವೆ ಎನ್ನತಕ್ಕ ಅಂಕಿಸಂಖ್ಯೆಯನ್ನು ಕೊಡುವಂಥ ಔಚಿತ್ಯವೇನು ಎನ್ನುವ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ತಮ್ಮ ಮುಖೇನ ಕೇಳುತ್ತಾ ಇದ್ದೇನೆ. ಇನ್ನು ಶಾಲೆಯ ಪಠ್ಯಪುಸ್ತಕಗಳ ವಿಚಾರವನ್ನು ಈಗಾಗಲೇ ಹಲವಾರು ಜನರು ತಮ್ಮದೇ ಆದ ದೃಷ್ಟಿಕೋನದಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ನಾನು ಹೆಚ್ಚಿಗೆ ಹೇಳಲಿಚ್ಛಿಸುವುದಿಲ್ಲ. ಇನ್ನು ಶಾಲೆಗೆ ಬೇಕಾದಂಥ ಪುಸ್ತಕ ಭಂಡಾರವನ್ನು ಒದಗಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ ಯಾವ ಪುಸ್ತಕವನ್ನು ಈ ಪುಸ್ತಕ ಭಂಡಾರಕ್ಕೆ ಕಳುಹಿಸುತ್ತೀರಿ, ಯಾವುದು ಯೋಗ್ಯ, ಯಾವುದು ಯೋಗ್ಯವಲ್ಲ ಎನ್ನತಕ್ಕಂಥಾದ್ದನ್ನು ವಿಮರ್ಶೆ ಮಾಡುವಂಥ ಕಮಿಟಿಯನ್ನಾಗಲಿ ತಾವು ಮಾಡಿ ಈ ಪುಸ್ತಕಗಳನ್ನು ಕಳುಹಿಸುತ್ತೀರಾ ಎನ್ನತಕ್ಕ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ನಾನು ಕೇಳಲಿಚ್ಛಿಸುತ್ತೇನೆ. ಈ ಒಂದು ವಿಚಾರದಲ್ಲಿ ಮಾತನಾಡುವಾಗ, ಪ್ರೌಢ ಶಾಲೆಗಳ ಅಥವಾ ಕಾಲೇಜುಗಳ ಅಥವಾ ಜೂನಿಯರ್ ಕಾಲೇಜುಗಳ ಮೇಲೆ ಹಿಡಿತವನ್ನು ಈ ಒಂದು ಇಲಾಖೆ ಸಂಪೂರ್ಣವಾಗಿ ಕಳೆದುಕೊಂಡಿದೆ ಎಂಬ ವ್ಯಥೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಏಕೆಂದರೆ, ಮಾನ್ಯ ಅಧ್ಯಕ್ಷರೆ, ನಮ್ಮ ಊರಿನಲ್ಲಿರತಕ್ಕ ಜೂನಿಯರ್ ಕಾಲೇಜಿನಲ್ಲಿ ಇದ್ದ ಪ್ರಾಂಶುಪಾಲರನ್ನು ಯಾವುದೋ ಒಂದು ಉದ್ದೇಶದಿಂದ ತಕ್ಷಣ ಅಮಾನತ್ತಿನಲ್ಲಿಟ್ಟರು. ಅವರ ಚಾರ್ಜನ್ನು ತೆಗೆದುಕೊಳ್ಳುವಂಥ ಅಧ್ಯಾಪಕರನ್ನು ಯಾರನ್ನೂ ಕಳಿಸಲಿಲ್ಲ. ಅಲ್ಲಿರತಕ ಪ್ರಾಂಶುಪಾಲರನ್ನು ಅಮಾನತ್ತಿನಲ್ಲಿಟ್ಟು ಬೇರೆಯವರು ಇಲ್ಲದೇ ಇರುವುದರಿಂದ ೩ ತಿಂಗಳಿಂದ ಅಧ್ಯಾಪಕರ ಸಾಲರಿ ಬಿಲ್ಸ್‌ಗೆ ರುಜು ವಾಗದೆ ಅವರಿಗೆ ಸಂಬಳವಿಲ್ಲದಂಥ ಪರಿಸ್ಥಿತಿ ಉಂಟಾಗಿದೆ. ಇದರಿಂದ ಸರ್ಕಾರ ಇದೆಯೋ ಅಥವಾ ಇಲ್ಲವೋ ಎನ್ನುವಂಥ ಪ್ರಶ್ನೆ ನಮ್ಮ ಮುಂದಿರುತ್ತದೆ, ಈ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನು ವಿದ್ಯಾರ್ಥಿಗಳ ಸಮಸ್ಯೆ ಏನು ಇದೆ ಅದನ್ನು ಸಹ ನಾವು ಕಂಡುಕೊಂಡಿದ್ದೇವೆ. ಈಗಾಗಲೇ ಸಾರ್ವತ್ರಿಕ ಯೋಜನೆಯನ್ವಯ ಹಲವಾರು ಶಾಲೆಗಳನ್ನು ತೆರೆದಿದ್ದಾರೆ. ಆದರೆ ಆ ರೀತಿಯ ಹಲವಾರು ಶಾಲೆಗಳಿಗೆ ಬೇಕಾದ ಎಲ್ಲ ಅಗತ್ಯತೆಗಳನ್ನು ಪೂರೈಸುವುದರಲ್ಲಿ ವಿಫಲವಾಗಿದ್ದಾರೆ. ಜನತಾಪಕ್ಷ ಕ್ಯಾಪಿಟೇಷನ್ ಫೀಯನ್ನು ಸಂಪೂರ್ಣವಾಗಿ ಒಂದೇ ಹಂತದಲ್ಲಿ ರದ್ದತಿ ಮಾಡುತ್ತೇವೆ ಎಂದು ಚುನಾವಣೆಯ ಸಮಯದಲ್ಲಿ ಆಶ್ವಾಸನೆ ನೀಡಿದ್ದರೂ ಕೂಡ ಅಧಿಕಾರಕ್ಕೆ ಬಂದ ಮೇಲೆ ಇನ್ನೂ ಅದು ನಿಂತಿಲ್ಲ. ಅದನ್ನು ಸಂಪೂರ್ಣವಾಗಿ ನಿಯಂತ್ರಿಸತಕ್ಕ ಶಕ್ತಿ ಇವರಿಗೆ ಇದೆಯೋ ಎನ್ನುವ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಕೇಳಲಿಚ್ಛಿಸುತ್ತೇನೆ. ಇನ್ನೊಂದು ವಿಚಾರವನ್ನು ಹೇಳುವುದೇನೆಂದರೆ, ಅವರು ಡಿ. ಎಲ್. ಆರ್. ಸಿ.ಗೆ ಆದ್ಯತೆಯನ್ನು ಕೊಟ್ಟಿದ್ದಾರೆ. ವಯೋಮಿತಿಗೆ ಆದ್ಯತೆಯನ್ನು ಕೊಡಬೇಕೆಂಬ ಉದ್ದೇಶದಿಂದ ಡಿ.ಎಲ್.ಆರ್.ಸಿ. ಯನ್ನು ರಚನೆ ಮಾಡಿದ್ದು. ಆದರೆ ವಯೋಮಿತಿಯನ್ನು ಕಡೆಗಣಿಸಿ ಡಿ.ಎಲ್.ಆರ್.ಸಿ. ನೇಮಕಾತಿ ನಡೆಯುತ್ತಿದೆ. ಸಾಧಾರಣ ೨೯ ವರ್ಷಕ್ಕಿಂತ ಮೇಲ್ಪಟ್ಟು ಇರತಕ್ಕಂತಹವರನ್ನು ಡಿ.ಎಲ್.ಆರ್.ಸಿ. ಯಲ್ಲಿ ಆದ್ಯತೆಯ ಮೇಲೆ ನೇಮಕ ಮಾಡಬೇಕೆಂದು ಆದೇಶವನ್ನು ಸರ್ಕಾರ ಕೊಟ್ಟಿದ್ದರೂ ಆ ಆದೇಶಕ್ಕೆ ವಿರುದ್ಧವಾಗಿ ಡಿ. ಎಲ್. ಆರ್. ಸಿ. ಯಲ್ಲಿ ನೇಮಕವಾಗಿದೆ. ಇನ್ನೊಂದು ಡಿ.ಎಲ್.ಆರ್.ಸಿ. ಯಲ್ಲಿ ವಯೋಮಿತಿಯನ್ನೇ ಆಧಾರವಾಗಿಟ್ಟುಕೊಂಡು ನೇಮಕ ಮಾಡುತ್ತಾರೆಂಬುದು ಯಾವ ಗ್ಯಾರಂಟಿ? ಯಾವ ಸದುದ್ದೇಶದಿಂದ ಈ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೋ ಅದರ ವಿರುದ್ಧವಾಗಿ ನೇಮಕಾತಿಯಾಗುತ್ತಿದೆಯಲ್ಲಾ, ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂದು ನಾನು ಈ ಸಂದರ್ಭದಲ್ಲಿ ಕೇಳಲಿಚ್ಛಿಸುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ಪರೀಕ್ಷಾ ಕಾಲದಲ್ಲಿ ಎಸ್. ಎಸ್. ಎಲ್. ಸಿ. ಬೋರ್ಡಿನಲ್ಲಿ ಆದಂತಹ ಒಂದು ಹಗರಣ. ಅದೇ ರೀತಿ ಪಿ. ಯು. ಸಿ. ಬೋರ್ಡಿನಲ್ಲಿ ಆದಂತಹ ಒಂದು ಹಗರಣ, ಇವುಗಳ ಬಗ್ಗೆ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟ ಮಾತ್ರಕ್ಕೆ ಈ ಒಂದು ಹಗರಣ ಮುಗಿಯಿತು ಎನ್ನುವ ಮಟ್ಟಕ್ಕೆ ಅವರು ಬರಬಾರದು. ಈ ಬಗ್ಗೆ ಯಾರು ತಪ್ಪು ಮಾಡಿದ್ದಾರೆ, ಯಾರು ಈ ಒಂದು ತಪ್ಪಿಗೆ ಕಾರಣರು ಎನ್ನುವುದನ್ನು ಸಮಗ್ರವಾಗಿ ಪರಿಶೀಲನೆ ಮಾಡಿ ಆ ಬಗ್ಗೆ ಸಿ. ಓ. ಡಿ. ಯಿಂದಲಾದರೂ ವಿಚಾರಣೆಯನ್ನು ಮಾಡಲಿ ಅಥವಾ ಬೇರೆ ಯಾವುದಾದರೊಂದು ರೀತಿಯ ವಿಚಾರಣೆಯನ್ನು ಮಾಡಿ, ಇದರಲ್ಲಿ ಸಂಬಂಧಪಟ್ಟ ಇನ್ನು ಎಷ್ಟೆಷ್ಟು ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿದ್ದೀರಿ, ಯಾರು ಇದಕ್ಕೆ ಕಾರಣಕರ್ತರು ಎನ್ನುವ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ನಾನು ಕೇಳಲಿಚ್ಛಿಸುತ್ತೇನೆ.

ಪಿ. ಯು. ಸಿ. ಬೋರ್ಡಿನ ಬಗ್ಗೆ ಮಾತನಾಡುವುದಾದರೆ, ಹುಡುಗರ ಸಂಖ್ಯೆ ಎಷ್ಟು ಇದೆ? ಅದಕ್ಕನುಗುಣವಾಗಿ ಪಿ. ಯು. ಸಿ. ಬೋರ್ಡಿನಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದೆಯೇ ಎಂದು ಇವತ್ತು ಕೇಳಬೇಕಾಗಿದೆ. ಎಲ್ಲವನ್ನೂ ಅಧಿಕಾರಿವರ್ಗದವರ ಮೇಲೆ ಬಿಡುವುದರಿಂದ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಅವರಿಗೆ ಇನ್ನೂ ಹೆಚ್ಚಿನ ಶ್ರಮವಹಿಸುವಂತಹ ಜವಾಬ್ದಾರಿಯನ್ನು ಕೊಡುತ್ತೇವೆಯೇ ಹೊರತು, ಅವರಿಗೆ ಯಾವುದೇ ರೀತಿಯ ಅಸಹಕಾರವನ್ನು ಕೊಡುವಂತಹ ಹಂತಕ್ಕೆ ನಾವಿನ್ನೂ ತಲುಪಿಲ್ಲ. ಅವರಿಗೆ ಬೇಕಾದಂತಹ ಸಹಕಾರವನ್ನು ಮೊದಲು ಕೊಟ್ಟು, ಆಮೇಲೆ ಅವರಿಗೆ ಹೆಚ್ಚಿನ ಒತ್ತಡವನ್ನು ಹೇರಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪ್ರವೇಶ ಪರೀಕ್ಷೆಯ ಫಲಿತಾಂಶದ ವಿಳಂಬದಿಂದ ಅನೇಕ ಕಡೆಗಳಲ್ಲಿ ತೊಂದರೆಯಾಗಿದೆ. ಇದನ್ನು ಬಗೆಹರಿಸುವ ಬಗೆ ಹೇಗೆ ಎಂಬುದನ್ನು ತಾವು ದಯಮಾಡಿ ಹೇಳಬೇಕು. ಈ ವಿದ್ಯಾ ಇಲಾಖೆಯಲ್ಲಿ ಒಂದು ಗೊಂದಲಮಯ ವಾತಾವರಣವಾಗಿದೆ. ಮೆಡಿಕಲ್ ಹಾಗೂ ಇಂಜಿನೀಯರಿಂಗ್ ಕಾಲೇಜುಗಳಿಗೆ ಹೋಗಬೇಕಾದರೆ, ಪ್ರವೇಶ ಪರೀಕ್ಷೆಯೇ ಆಧಾರವಾಗಿರುತ್ತದೆಯೊ? ಅಥವಾ ಅವರು ಪಿ. ಯು. ಸಿ. ಯಲ್ಲಿ ಗಳಿಸಿದಂತಹ ಅಂಕಗಳು ಆಧಾರವಾಗುತ್ತವೆಯೇ? ಅಥವಾ ೫೦ ಸಾವಿರ ಕ್ಯಾಪಿಟೇಷನ್ ಫೀಯನ್ನು ಕೊಟ್ಟಂತಹವರಿಗೆ ಆಧಾರವಾಗುತ್ತದೆಯೇ? ಇವರಿಗೆ ಯಾವ ಅಂಕಗಳನ್ನು ಆಧಾರವಾಗಿಡುತ್ತೀರೆಂಬುದು ಇನ್ನೂ ಯಾರಿಗೂ ತಿಳಿಯದ ವಿಷಯವಾಗಿದೆ. ಮತ್ತೆ ಅವರು ಇವರ ಸಂದರ್ಶನವನ್ನು ಮಾಡುತ್ತಿದ್ದಾರೆ. ಒಂದೇ ದಿವಸ ಇಡೀ ರಾಜ್ಯದ ಎಲ್ಲ ಮೆಡಿಕಲ್ ಕಾಲೇಜುಗಳಿಗೂ ಅಡ್ಮಿಷನ್ ಮಾಡುವಂತಹದ್ದು ನಡೆಯುತ್ತಿದೆ. ಇದರ ಅರ್ಥ ಅಧಿಕಾರಿ ವರ್ಗದವರು ಆ ಮಂಡಲಿಯಲ್ಲಿ ಏನು ಇರುತ್ತಾರೆ, ಅವರು ಬೇಕಾದ್ದನ್ನು ಮಾಡಬಹುದು. ಮತ್ತೆ ಇದರಿಂದ ದುರ್ವ್ಯವಹಾರಕ್ಕೆ ಎಡೆಮಾಡಿಕೊಡುವಂತಹ ಕ್ರಮ ಇದರಲ್ಲಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ ಕೊನೆಯದಾಗಿ ಇನ್ನೊಂದು ವಿಚಾರವನ್ನು ಹೇಳುವುದಾದರೆ, ರಾಜ್ಯ ಪ್ರಶಸ್ತಿಯನ್ನು ವಿತರಣೆ ಮಾಡುತ್ತೇವೆಂದು ಹೇಳಿದ್ದೀರಿ. ರಾಜ್ಯ ಪ್ರಶಸ್ತಿಯನ್ನು ವಿತರಣೆ ಮಾಡುವಂತಹ ಕಾರ್ಯಕ್ರಮ ಏನಿದೆ ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಇದರಲ್ಲಿ ರಾಜ್ಯ ಪ್ರಶಸ್ತಿಯನ್ನು ಕೊಡುವಂತಹ ಕಾರ್ಯಕ್ರಮ ಏನಿದೆ ಅದನ್ನು ಮೊದಲು ತಾಲ್ಲೂಕು ಮಟ್ಟದಿಂದ ನಂತರ ಜಿಲ್ಲಾಮಟ್ಟದಿಂದ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಾರಂಭ ಮಾಡಬೇಕು. ರಾಜ್ಯ ಪ್ರಶಸ್ತಿಯನ್ನು ಕೊಡುವಂತಹ ವಿಚಾರದಲ್ಲಿ ಸೂಕ್ತ ಮಾರ್ಗದರ್ಶನ ಅತಿ ಅವಶ್ಯಕ. ರಾಜ್ಯ ಪ್ರಶಸ್ತಿ ಇದು ಕೇವಲ ರಾಜಕೀಯ ವ್ಯಕ್ತಿಗಳ ಬೆಂಬಲವಿರುವವರಿಗೆ ಮಾತ್ರ ಸಿಕ್ಕುತ್ತಿದೆ. ಇನ್ನೊಂದು ದೃಷ್ಟಿಯಿಂದ ಹೇಳುವುದಾದರೆ, ಒಂದೇ ಶಾಲೆಯಲ್ಲಿರತಕ್ಕ ಶಾಲೆಯ ಮುಖ್ಯೋಪಾಧ್ಯಾಯರಿಗೆ ರಾಜ್ಯ ಪ್ರಶಸ್ತಿ ಸಿಕ್ಕುತ್ತದೆ. ಆದರೆ ಅದೇ ಶಾಲೆಯಲ್ಲಿರತಕ್ಕ ಇನ್ನೊಬ್ಬ ಉಪಾಧ್ಯಾಯನಿಗೆ ಈ ಒಂದು ರಾಜ್ಯ ಪ್ರಶಸ್ತಿ ಸಿಕ್ಕುವುದಿಲ್ಲ. ಆವಾಗ ಅವರಿಬ್ಬರ ನಡುವೆ ಮಧುರ ಭಾಂಧವ್ಯ ಚೆನ್ನಾಗಿರುವುದಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಗಮನ ಹರಿಸಬೇಕು. ಒಟ್ಟಿನಲ್ಲಿ ಹೇಳುವುದಾದರೆ ಈ ಒಂದು ಶಿಕ್ಷಣ ಇಲಾಖೆ ನ್ಯಾಯಯುತವಾದ ರೀತಿಯಲ್ಲಿ ನಡೆಯುವಂತಾಗಲಿ ಎಂಬುದಾಗಿ ಹೇಳುತ್ತಾ, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮಕೃಷ್ಣ (ಕಮಲಾಪುರ).—ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆವಿಗೆ ಈ ಸದನದಲ್ಲಿ ಶಿಕ್ಷಣ ಸಂಸ್ಥೆಗಳ ಮೇಲೆ ಬೇಕಾದಷ್ಟು ಚರ್ಚೆಯಾಗಿದೆ. ಮತ್ತು ಆಗುತ್ತಿದೆ. ಈ ಸಂದರ್ಭದಲ್ಲಿ ಕೆಲವಾರು ಸದಸ್ಯರು ಸರ್ಕಾರದ ವತಿಯಿಂದ ನಡೆಯುತ್ತಿರತಕ್ಕಂತಹ ಶಿಕ್ಷಣ ಸಂಸ್ಥೆಗಳು ಹಾಗೂ ಖಾಸಗಿ ವಲಯದಲ್ಲಿ ನಡೆಯುತ್ತಿರತಕ್ಕಂತಹ ಶಿಕ್ಷಣ ಸಂಸ್ಥೆಗಳ ಬಗ್ಗೆ ಬೇಕಾದಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಈ ನಮ್ಮ ರಾಜ್ಯದಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿರತಕ್ಕಂತಹ ಶಿಕ್ಷಣ

ಸಂಸ್ಥೆಗಳಿಗಿಂತಲೂ, ಖಾಸಗಿ ವತಿಯಿಂದ ನಡೆಯುತ್ತಿರತಕ್ಕಂತಹ ಶಿಕ್ಷಣ ಸಂಸ್ಥೆಗಳು ಬಹಳಷ್ಟು ಬೆಳೆಯುತ್ತಿವೆ. ಇದರ ಒಂದು ಹಿನ್ನೆಲೆಯಲ್ಲಿ ನಾವು ವಿಚಾರ ಮಾಡಿ ನೋಡಿದಾಗ, ಸರ್ಕಾರದ ಶಿಕ್ಷಣ ಸಂಸ್ಥೆಗಳಿಗಿಂತಲೂ ಖಾಸಗಿ ಶಿಕ್ಷಣ ಸಂಸ್ಥೆಗಳು ಹೆಚ್ಚಾಗಿ ಬೆಳೆಯುವುದಕ್ಕೆ ಕಾರಣ ಏನು ಎಂಬುದನ್ನು ಕಂಡುಹಿಡಿದರೆ ಮಾತ್ರ ನಿಜವಾಗಿಯೂ ಅದು ಗೊತ್ತಾಗುತ್ತದೆ. ಈಗಾಗಲೇ ಕೆಲವು ಸದಸ್ಯರು ಹೇಳಿದರು, ಅಧಿಕಾರಿಗಳು ಹಾಗೂ ದುಡ್ಡಿದ್ದಂತಹ ಜನ ಏನಿದ್ದಾರೆ, ಅವರು ಸರ್ಕಾರಿ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಓದಿಸುವುದಿಲ್ಲ. ಖಾಸಗಿ ಶಾಲೆಗಳಲ್ಲೇ ಓದಿಸುವುದಕ್ಕೆ ಇಷ್ಟಪಡುತ್ತಾರೆಂದು ಬೇಕಾದಷ್ಟು ಮಾನ್ಯ ಸದಸ್ಯರು ಹೇಳಿದ್ದಾರೆ. ಏಕೆ ಆ ರೀತಿ ವಿದ್ಯೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತಾರೆ? ಸರ್ಕಾರದ ಶಾಲೆಗಳಲ್ಲಿ ಮಕ್ಕಳನ್ನು ಏಕೆ ಓದಿಸುವುದಿಲ್ಲ? ಏಕೆ ಓದಿಸಬಾರದು ಎಂಬ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡಿ ನೋಡಿದಾಗ ನಮಗೆ ಒಂದು ವಿಚಾರ ಗೊತ್ತಾಗುತ್ತದೆ. ಅವರು ಏತಕ್ಕಾಗಿ ಖಾಸಗಿ ಶಾಲೆಗಳಲ್ಲಿ ಓದಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದರೆ, ತಮ್ಮ ಮಕ್ಕಳು ಒಳ್ಳೆಯವರಾಗಿರಬೇಕು. ಒಳ್ಳೆಯ ವಿದ್ಯಾವಂತರನ್ನಾಗಿ ಮಾಡಬೇಕು. ಒಳ್ಳೆಯ ರೀತಿಯಲ್ಲಿ ಅವರು ಈ ದೇಶದಲ್ಲಿ ಬೆಳೆಯಬೇಕು ಎಂಬ ಉದ್ದೇಶದಿಂದ ಖಾಸಗಿ ಶಾಲೆಗಳಲ್ಲೇ ತಮ್ಮ ಮಕ್ಕಳನ್ನು ಓದಿಸುವುದಕ್ಕೆ ಇಚ್ಛೆಪಡುತ್ತಾರೆ. ನಮ್ಮ ರಾಜ್ಯದಲ್ಲಿರುವಂತಹ ಸರ್ಕಾರದ ವತಿಯಿಂದ ನಡೆಯುವಂತಹ ಶಾಲೆಗಳಲ್ಲಿ ಯಾರೂ ತಮ್ಮ ಮಕ್ಕಳನ್ನು ಓದಿಸುವುದಕ್ಕೆ ತಯಾರಿಲ್ಲ. ಸರ್ಕಾರಿ ಶಾಲೆಗಳಲ್ಲಿ ಓದಿಸಬೇಕೆಂಬ ಭಾವನೆ ಯಾರಲ್ಲೂ ಬರುವುದಿಲ್ಲ. ಇದನ್ನು ಪ್ರತಿಯೊಬ್ಬರೂ ವಿಚಾರ ಮಾಡಿ ನೋಡಿದಾಗ, ಸರ್ಕಾರದ ಶಾಲೆಗಳಲ್ಲಿ ಓದಿಸಿದರೆ ನನ್ನ ಮಕ್ಕಳು ಒಳ್ಳೆಯವರಾಗುವುದಕ್ಕೆ ಸಾಧ್ಯವಿಲ್ಲ, ಒಳ್ಳೆಯ ವಿದ್ಯಾವಂತರನ್ನಾಗಿ ಮಾಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಅಲ್ಲಿಯ ವ್ಯವಸ್ಥೆ ಏನಿದೆ ಅದು ತೀರಾ ಕೆಟ್ಟು ಹೋಗಿದೆ. ಅದನ್ನು ಒಳಹೊಕ್ಕು ನೋಡುವುದಕ್ಕಾಗುವುದಿಲ್ಲ. ಸರ್ಕಾರದ ಶಾಲೆಗಳಿಗೆ ಕಟ್ಟಡವೇ ಇರುವುದಿಲ್ಲ. ಕಟ್ಟಡ ಇದ್ದರೂ ಮಾಸ್ಟರ್‌ಗಳೇ ಇರುವುದಿಲ್ಲ. ವಿದ್ಯಾಮಂತ್ರಿಗಳು ಇವುಗಳನ್ನೆಲ್ಲಾ ಕೇವಲ ಜಿಲ್ಲಾ ಕೇಂದ್ರಕ್ಕೆ ಹೋಗಿ ನೋಡಿಕೊಂಡು ಬರುವುದರಿಂದ ಏನೂ ತಿಳಿಯುವುದಿಲ್ಲ. ಅದರ ಬದಲು ಕೊನೆಯ ಹಂತದಲ್ಲಿರುವ ಹಳ್ಳಿಯ ಶಾಲೆಗಳಿಗೆ ಭೇಟಿ ಕೊಡಬೇಕು. ಯಾವ ರೀತಿಯಲ್ಲಿ ಶಾಲೆಗಳಿವೆ? ಮಕ್ಕಳಿಗೆ ಬೇಕಾದಂತಹ ವಿದ್ಯಾನುಕೂಲತೆ ಇದೆಯೇ ಎಂಬುದನ್ನು ನಿಮ್ಮ ಕಣ್ಣಿಂದ ನೋಡಿದಾಗ ಮಾತ್ರ ನಿಜಾಂಶ ತಿಳಿಯುತ್ತದೆ. ಪ್ರತಿಯೊಂದು ಹಳ್ಳಿಯಲ್ಲೂ ಸರ್ಕಾರದ ವತಿಯಿಂದ ನಡೆಯುತ್ತಿರತಕ್ಕಂತಹ ಶಾಲೆಗಳು ಒಳ್ಳೆಯ ರೀತಿಯಲ್ಲಿ ನಡೆಯುತ್ತಿಲ್ಲ. ಆ ಮಕ್ಕಳನ್ನು ಓದಿಸತಕ್ಕ ಉಪಾಧ್ಯಾಯರು ಏನಿದ್ದಾರೆ, ಅವರೂ ಕೂಡ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿಲ್ಲ. ಸರ್ಕಾರದ ವತಿಯಿಂದ ಹಾಕಿಕೊಂಡಿರತಕ್ಕ ಯೋಜನೆ ಬಹಳ ಚೆನ್ನಾಗಿ ಇದೆ. ಪುಸ್ತಕಗಳನ್ನು ಒದಗಿಸಿಕೊಡಬೇಕು ಬಟ್ಟೆಗಳನ್ನು ಕೊಡಬೇಕೆಂಬ ಉದ್ದೇಶ ಏನಿದೆ ಇದು ಬಹಳ ಒಳ್ಳೆಯದಿದೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ, ಹಳ್ಳಿಯಲ್ಲಿರತಕ್ಕ ಉಪಾಧ್ಯಾರು ಸರ್ಕಾರ ಕೊಡುವಂತಹ ಪುಸ್ತಕಗಳನ್ನು ಪಡೆಯಬೇಕಾದರೆ ಶಾಲೆಯನ್ನು ಬಿಟ್ಟು ಜಿಲ್ಲಾ ಕೇಂದ್ರಕ್ಕೆ ಬರಬೇಕು. ಇವೊತ್ತು ಏಕಶಾಲ ಉಪಾಧ್ಯಾಯರು ಪುಸ್ತಕ ಮತ್ತು ಬಟ್ಟೆಗಳನ್ನು ಹೊತ್ತುಕೊಂಡು ಬರಬೇಕೆಂದು ಅವರು ಶಾಲೆ ಬಿಟ್ಟು ಡಿಸ್ಟ್ರಿಕ್ ಹೆಡ್‌ಕ್ವಾರ್ಟರ್‌ಗೆ ಹೋಗಬೇಕು. ಈ ರೀತಿ ಆದರೆ ಏಕ ಉಪಾಧ್ಯಾಯರ ಶಾಲೆಗಳ ಗತಿ ಏನು ? ವಿದ್ಯೆ ಕಲಿಯತಕ್ಕ ಮಕ್ಕಳ ಪರಿಸ್ಥಿತಿ ಏನು ? ಈ ಒಂದು ಸ್ಕೀಮು ಬರೀ ರಾಜಕೀಯ ಸ್ಕೀಮು ಎಂದು ಕಾಣುತ್ತದೆ. ಇದರಿಂದ ಇವೊತ್ತು ಏನಾಗುತ್ತಿದೆ. ಪಾಪ ಇದುವರೆವಿಗೂ ತಂದೆತಾಯಿಗಳು ನಮ್ಮ ಮಕ್ಕಳಿಗೆ ಪುಸ್ತಕಕ್ಕೆ ಇಷ್ಟು ಹಣ ಕೊಡಬೇಕು, ಬಟ್ಟೆಗೆ ಇಷ್ಟು ಹಣ ಕೊಡಬೇಕು ಎಂದು ಶಾಲೆ ಪ್ರಾರಂಭವಾಗುವುದರೊಳಗೆ ಹಣ ಹೊಂಚಿ ತಮ್ಮ ಮಕ್ಕಳಿಗೆ ಕೊಡಿಸುತ್ತಿದ್ದರು ಈಗ ಸರ್ಕಾರ ಕೊಡುತ್ತಾರೆಂದು ಹೇಳಿದ ಕೂಡಲೇ ಸರ್ಕಾರ ಇವೊತ್ತು ಕೊಡುತ್ತದೆ ನಾಳೆ ಕೊಡುತ್ತದೆ ಎಂದು ಕಾದು ಕುಳಿತಿದ್ದಾರೆ. ಶಾಲೆಗಳು ಪ್ರಾರಂಭವಾಗಿ ತಿಂಗಳುಗಳು ಕಳೆದರೂ ವಿದ್ಯಾರ್ಥಿಗಳಿಗೆ ಪುಸ್ತಕಗಳು ಸಿಕ್ಕಿಲ್ಲ, ಬಜಾರ್‌ನಲ್ಲಿಯೂ ಸಿಕ್ಕುತ್ತಿಲ್ಲ. ಸರ್ಕಾರ ಒಳ್ಳೆಯ ರೀತಿಯ ಕಾರ್ಯಕ್ರಮವನ್ನು ಏನೋ ಹಾಕಿಕೊಂಡಿದೆ. ಆದರೆ ಕಾಲಕ್ಕೆ ಸರಿಯಾಗಿ ಪುಸ್ತಕಗಗಳನ್ನು ಪ್ರಿಂಟ್ ಮಾಡಿಸಿಲ್ಲ, ಸಕಾಲದಲ್ಲಿ ಪುಸ್ತಕಗಳು ಸಿಕ್ಕಲಿಲ್ಲ ಅಂದರೆ ಓದತಕ್ಕ ಮಕ್ಕಳು ಏನು ತಿಳಿದುಕೊಳ್ಳಬೇಕು ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳಿವೆ, ಅಷ್ಟು ತಾಲ್ಲೂಕುಗಳಲ್ಲಿ ಪುಸ್ತಗಳು ದೊರೆಯುತ್ತಿಲ್ಲ. ಎಂದರೆ ಇದು ಎಷ್ಟು ಅಸ್ತವ್ಯಸ್ತವಾಗಿದೆ ಎನ್ನುವುದು ಗೊತ್ತಾಗುತ್ತದೆ. ಬರೀ ಪ್ರಚಾರ ಸಿಕ್ಕಬೇಕು, ಜನರು ಬೆಂಬಲ ಸರ್ಕಾರಕ್ಕೆ ಸಿಕ್ಕಬೇಕೆಂದು ಈ ರೀತಿಯ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಇದರಿಂದ ಜನರಿಗೆ ಏನೂ ಅನುಕೂಲ ದೊರಕುತ್ತಿಲ್ಲ. ಇದರಿಂದ ಜನರಿಗೆ ಬಹಳ ಕಷ್ಟವಾಗುತ್ತಿದೆ. ಶಾಲೆಗೆ ಹೋಗತಕ್ಕ ಮಕ್ಕಳುಗಳಿಗೆ ಪಠ್ಯಪುಸ್ತಕಗಳು ಸಿಕ್ಕುತ್ತಿಲ್ಲ, ಇನ್ನೂ ಎಲ್ಲಿಯವರೆಗೆ ಕಾಯಬೇಕೋ ಗೊತ್ತಿಲ್ಲ. ಇದುವರೆವಿಗೂ ಪಠ್ಯಪುಸ್ತಗಳು ದೊರೆಯದೇ ಇರುವುದರಿಂದ

ಪಠ್ಯಪುಸ್ತಕದ ಪ್ರತಿಯೊಂದು ವಿವರವನ್ನು ಟೈಪುಮಾಡಿಸಿಕೊಂಡು ಓದತಕ್ಕ ಪರಿಸ್ಥಿತಿ ಬಂದಿದೆ. ಸರ್ಕಾರಿ ಶಾಲೆಗಳಿಗೆ ತಾವು ಲಕ್ಷ್ಯ ಕೊಡದೇ ಇರುವುದರಿಂದ, ತಮ್ಮ ಮಕ್ಕಳನ್ನು ಇಂಗ್ಲೀಷ್ ಮೀಡಿಯಂಗೆ ಹಾಕಿ ಒಳ್ಳೆಯವರನ್ನು ಮಾಡಬೇಕೆಂದು ಉದ್ದೇಶ ಜನರಲ್ಲಿ ಬರುತ್ತಿದೆ. ಸರ್ಕಾರ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಬೇಕೆಂದರೆ ಸ್ಕೂಲು ಬಿಲ್ಡಿಂಗ್ಸ್ ಯಾವ ರೀತಿ ಇರಬೇಕು. ಟೀಚರ್ಸ್ ಯಾವ ರೀತಿ ಇರಬೇಕು, ಮಕ್ಕಳಿಗೆ ಯಾವ ರೀತಿ ಪಾಠ ಹೇಳಿ ಕೊಡಬೇಕು ಅವರ ಬಗ್ಗೆ ಹೆಚ್ಚು ಗಮನ ಕೊಡಬೇಕು. ಅವನ್ನು ಬಿಟ್ಟು ಬರೀ ಪ್ರಚಾರಕ್ಕಾಗಿ ಮಕ್ಕಳಿಗೆ ಪುಸ್ತಕ ಕೊಡುತ್ತೇವೆ ಬಟ್ಟೆ ಹಂಚುತ್ತೇವೆ, ಅಂದರೆ ಜನರ ಮನಸ್ಸನ್ನು ಒಲಿಸಿಕೊಳ್ಳುವ ಭಾವನೆ ಇಟ್ಟುಕೊಂಡು ಕ್ರಮ ತೆಗೆದುಕೊಂಡರೆ ದೇಶದಲ್ಲಿರತಕ್ಕ ಮಕ್ಕಳಿಗೆ ಒಳ್ಳೆಯದಾಗುವುದಿಲ್ಲ. ಇವೊತ್ತು ಅನೇಕ ಕಡೆಗಳಲ್ಲಿ ಶಾಲಾ ಕಟ್ಟಡಗಳು ಸರಿಯಾಗಿಲ್ಲ, ಆ ಕಡೆ ಸರ್ಕಾರ ಹೆಚ್ಚು ಗಮನ ಕೊಡಬೇಕು. ಹಾಗೆಯೇ ಶಾಲೆಗೆ ಹೋಗತಕ್ಕ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಎನ್. ಭಾಸ್ಕರಪ್ಪ(ಬೆಳ್ಳಾವಿ).—ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಈ ರಾಜ್ಯದ ಶಿಕ್ಷಣದ ಬಗ್ಗೆ ನಮ್ಮ ವಿರೋಧಿ ಮಿತ್ರರು ಸಾಕಷ್ಟು ಮಾತನಾಡಿದ್ದಾರೆ. ನಮಗೆ ಸ್ವಾತಂತ್ರ ಬಂದು ೩೮ ವರ್ಷಗಳನ್ನು ಕಳೆದಿದ್ದೇವೆ. ಇಂದಿನ ಭಾರತದಲ್ಲಿ ಶಿಕ್ಷಣದ ಬಗ್ಗೆ ಐತಿಹಾಸಿಕವಾಗಿ ತಿಳಿದುಕೊಂಡು ನೋಡಿದರೆ ನಾವು ಈ ದೇಶದ ಜನತೆಗೆ ಶಿಕ್ಷಣದ ಬಗ್ಗೆ ಏನು ಮಾಡಿದ್ದೇವೆ ಎಂಬುದನ್ನು ಆತ್ಮಶೋಧನೆ ಮಾಡಿಕೊಳ್ಳತಕ್ಕದ್ದು ನಮ್ಮಲ್ಲೇ ಇದೆ. ೪೦ ಸಾವಿರ ಪ್ರಾಥಮಿಕ ಶಾಲೆಯಲ್ಲಿ ೫೨ ಲಕ್ಷದ ೬೮ ಸಾವಿರ ೧೯೫ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ೩,೮೧೩ ಪ್ರೌಢಶಾಲೆಗಳಲ್ಲಿ ೮ ಲಕ್ಷದ ೫೦ ಸಾವಿರ ಮಕ್ಕಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆ ಅದೇ ರೀತಿ ಪದವಿ ಪೂರ್ವ ಶಿಕ್ಷಣದಲ್ಲಿ ೮೨೧ ಶಾಲೆಗಳಲ್ಲಿ ೨ ಲಕ್ಷದ ೧೫ ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸ್ವಾತಂತ್ರ್ಯಗಳಿಸಿ ೩೮ ವರ್ಷಗಳು ಕಳೆದಿದ್ದೇವೆ. ಸ್ವಾತಂತ್ರ್ಯ ಬಂದು ೧೦ ವರ್ಷಗಳಲ್ಲಿಯೇ ನಿರಕ್ಷರತೆಯನ್ನು ಹೋಗಲಾಡಿಸಿ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡುತ್ತೇವೆಂದು ಹೇಳಿ ಆಡಳಿತ ನಡೆಸಿದ ಎಲ್ಲ ಜನರಿಗೂ ವಿದ್ಯಾಭ್ಯಾಸವನ್ನು ಕೊಟ್ಟಿದ್ದಾರೆಯೇ? ಇವೊತ್ತು ನಾವು ಹಳ್ಳಿಗಳಿಗೆ ಹೋದರೆ ತಲೆ ತಗ್ಗಿಸಬೇಕಾಗಿದೆ ಹಳ್ಳಿಗಳಲ್ಲಿ ಗುಡಿಸಲುಗಳಲ್ಲಿ ಮರದ ಕೆಳಗೆ ಶಾಲೆಗಳನ್ನು ನಡೆಸುತ್ತಿದ್ದಾರೆ ೭ ನೇ ತರಗತಿಯವರೆಗೆ ಒಬ್ಬರೇ ಉಪಾಧ್ಯಾಯರು ಇರುವಂಥ ಶಾಲೆಗಳು ಇವೆ. ಕಳೆದ ೩೭ ವರ್ಷಗಳಿಂದ ಈ ದೇಶದ ಜವಾಬ್ದಾರಿಯನ್ನು ಹೊತ್ತಂಥ ವಿರೋಧಿ ಮಿತ್ರರು ಇದರ ಬಗ್ಗೆ ಆಲೋಚನೆ ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳಿಗೆ ಸರಿಯಾದಂಥ ವಿದ್ಯಾಭ್ಯಾಸವನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ.—ವಿರೋಧ ಪಕ್ಷದವರನ್ನು ಏಕೆ ಟೀಕೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿ.ಎನ್. ಭಾಸ್ಕರಪ್ಪ.—ಹಿಂದೆ ಯಾವ ಸರ್ಕಾರ ಇತ್ತು ಅದು ಅಷ್ಟಾಗಿ ಗಮನಕೊಟ್ಟಿಲ್ಲ. ಮಕ್ಕಳ ಬವಿಷ್ಯದ ಬಗ್ಗೆ ಆಲೋಚನೆ ಮಾಡಿಲ್ಲ. ಗ್ರಾಮಾಂತರ ಪ್ರದೇಶದಿಂದ ೫೨ ಲಕ್ಷ ಮಕ್ಕಳು ಓದಿ ಬರತಕ್ಕವರಲ್ಲಿ ಪ್ರೌಢ ಶಿಕ್ಷಣದ ಹಂತಕ್ಕೆ ಬರುವುದರೊಳಗಾಗಿ ಲಕ್ಷಾಂತರ ಮಕ್ಕಳು ಶಾಲೆ ಬಿಟ್ಟುಬಿಡುತ್ತಾರೆ. ಕಳೆದ ಹಲವಾರು ವರ್ಷಗಳಿಂದ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಪರಿಸ್ಥಿತಿಯ ಬಗ್ಗೆ ಆರ್ಥಿಕ ಪರಿಸ್ಥಿತಿಯ ಬಗ್ಗೆ, ಸಾಮಾಜಿಕ ಬದಲಾವಣೆ ಬಗ್ಗೆ ಏನೂ ಮಾಡಲಿಕ್ಕೆ ಆಗಿಲ್ಲ. ೩೭ ವರ್ಷಗಳಿಂದ ಆಳಿದಂತವರನ್ನು ಜನರು ನೋಡಿ ೧೯೮೩ರ ಚುನಾವಣೆಯಲ್ಲಿ ಜನತೆ ತಿರಸ್ಕರಿಸಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಸಾವಿರಾರು ಪ್ರಾಥಮಿಕ, ಮತ್ತು ಪ್ರೌಢಶಾಲೆಗಳನ್ನು ನಮ್ಮ ಸರ್ಕಾರ ಬಂದಮೇಲೆ ಕೊಟ್ಟಿದೆ. ನಾವು ಬಡವರಿಗೆ ನೇರವಾದ ಕಾರ್ಯಕ್ರಮಗಳನ್ನು ಮಾಡಿ ಕೊಟ್ಟಿದ್ದರಿಂದ ೧೯೮೫ರ ಚುನಾವಣೆಯಲ್ಲೂ ಜನತಾ ಸರ್ಕಾರಕ್ಕೆ ಬಹುಮತ ಕೊಟ್ಟು ಆಯ್ಕೆ ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇರೆಯವರಿಗೆ ಅಟ್ಯಾಕ್ ಮಾಡುವ ರೀತಿಯಲ್ಲಿ ಮಾತನಾಡಲಿಕ್ಕೆ ಹೋಗಬಾರದು.

(ಗೊಂದಲ)

ಶ್ರೀ ಸಿ.ಎನ್. ಭಾಸ್ಕರಪ್ಪ.—ಅಧ್ಯಕ್ಷರೆ, ನಮ್ಮ ಸರ್ಕಾರ ಬಂದಮೇಲೆ ಹೊಸ ವ್ಯವಸ್ಥೆ ಮಾಡಬೇಕೆಂದು ಹೊರಟಿದ್ದೇವೆ. ಇಡೀ ರಾಷ್ಟ್ರದಲ್ಲೇ ಮಾಡದೇ ಇರತಕ್ಕ ಕಾರ್ಯಕ್ರಮ ಅಂದರೆ ಉಚಿತ ಪಠ್ಯ ಪುಸ್ತಕಗಳನ್ನು ಮಕ್ಕಳಿಗೆ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಸಮಾನತೆ ಉಂಟು ಮಾಡಬೇಕೆಂದು ಪುಕ್ಕಟೆ ಸಮವಸ್ತ್ರ ಕೊಡಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇನ್ನು ಖಾಸಗಿ ಸಂಸ್ಥೆಗಳಲ್ಲಿ ಇದುವರೆವಿಗೂ ಡೊನೇಷನ್ ಪದ್ಧತಿ ಏನಿತ್ತು ಅದನ್ನು ಕಿತ್ತುಹಾಕಲಿಕ್ಕೆ ಸುಗ್ರೀವಾಜ್ಞೆ ಮಾಡಿದ್ದೇವೆ. ಇನ್ನು ಐದು ವರ್ಷಗಳಲ್ಲಿ ಕ್ಯಾಪಿಟೇಷನ್ ಶುಲ್ಕ ಇಲ್ಲದಂತೆ ಇಂಜನಿಯರಿಂಗ್ ಶಿಕ್ಷಣ ಕೊಡಬೇಕೆಂದು ಮಾಡುತ್ತಿದ್ದೇವೆ. ಅದೇರೀತಿ ನಮ್ಮ ಸರ್ಕಾರದಲ್ಲಿ ಹರಿಜನ ಪ್ರತಿಭಾವಂತ ವಿದ್ಯಾವಂತರಿಗೆ ನೇರವಾಗಿ ಉದ್ಯೋಗ ಕೊಡತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇನ್ನು ರಾಷ್ಟ್ರಪ್ರಶಸ್ತಿ ಪಡೆದಂಥ ಶಿಕ್ಷಕರಿಗೆ ೨೫ ಸಾವಿರ ರೂಪಾಯಿ ಪ್ರಸಸ್ತಿ, ರಾಜ್ಯ ಪ್ರಶಸ್ತಿ ಪಡೆದಂಥವರಿಗೆ ೧೦ ಸಾವಿರ ರೂಪಾಯಿ ಪ್ರಶಸ್ತಿ ಕೊಡುತಿದ್ದೇವೆ. ಅದೇ ರೀತಿ ಪಾಸಾಶನ ಕೊಡಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇಷ್ಟೇ ಅಲ್ಲದೇ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇವೊತ್ತು ಸರ್ಕಾರಿ ವಿದ್ಯಾಸಂಸ್ಥೆಗಳ ಜೊತೆಗೆ ಖಾಸಗಿ ವಿದ್ಯಾಸಂಸ್ಥೆಗಳು ಉತ್ತಮವಾದ ಕೆಲಸಮಾಡುತ್ತಿವೆ. ಹರಿಜನ ಗಿರಿಜನ ನಡೆಸುವಂಥಾ ವಿದ್ಯಾ ಸಂಸ್ಥೆಗಳಿಗೆ ಒಂದು ವರ್ಷದ ನಂತರ, ಅದೇ ಹಿಂದುಳಿದ ವರ್ಗದವರಿಗೆ ೨ ವರ್ಷದನಂತರ ಮತ್ತು ಬೇರೆಯವರಿಗೆ ಮೂರು ವರ್ಷಗಳನಂತರ ಅನುದಾನವನ್ನು ಕೊಡುವಂತಹದ್ದು ಜಾರಿಯಲ್ಲಿದೆ. ಅದನ್ನು ಕೂಡಲೇ ಬದಲಾಯಿಸಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇಂದು ಪ್ರಾಥಮಿಕ ಶಿಕ್ಷಣ ಅಗತ್ಯವಾದುದಾಗಿದೆ. ಈ ದಿಸೆಯಲ್ಲಿ ವಿರೋಧ ಪಕ್ಷದವರು ಆ ಬಗ್ಗೆ ರಚನಾತ್ಮಕವಾದ ಸಲಹೆಗಳನ್ನು ಕೊಡಬೇಕು ಏಕೆಂದರೆ ಇದು ನಮ್ಮ ಮಕ್ಕಳ ಮುಂದಿನ ಭವಿಷ್ಯದ ಪ್ರಶ್ನೆ ಅದಕ್ಕಾಗಿ ಪ್ರಾಥಮಿಕ ಶಿಕ್ಷಣಕ್ಕೆ ಉಚಿತವಾದ ಪುಸ್ತಕ, ಉಚಿತವಾದ ಬಟ್ಟೆ, ಅವರಿಗೆ ಹೆಚ್ಚಿನ ವಸತಿ ಸೌಕರ್ಯವನ್ನು ಕೊಡುವ ಸಲುವಾಗಿ ಹೆಚ್ಚಿನ ಹಣವನ್ನು ಆಯವ್ಯಯದಲ್ಲಿ ತೆಗೆದಿಡಬೇಕು. ಆ ಹಣವನ್ನು ಪ್ರಾಥಮಿಕ ಶಿಕ್ಷಣಕ್ಕೆ ಕೊಟ್ಟು ಪ್ರಾಥಮಿಕ ಶಿಕ್ಷಣದಿಂದ ಹಂತ ಹಂತವಾಗಿ ಮಕ್ಕಳನ್ನು ಬೆಳೆಸಬೇಕೆಂಬ ಉದ್ದೇಶದಿಂದ ಈ ಒಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಇದಕ್ಕೆ ವಿರೋಧ ಪಕ್ಷದವರ ಪೂರ್ಣ ಸಹಕಾರ ಬೇಕು ಈ ೫ ವರ್ಷಗಳಲ್ಲಿ ಇದನ್ನು ನಮ್ಮ ಸರ್ಕಾರ ಪೂರ್ಣಮಾಡುತ್ತದೆ ಎಂಬ ಭರವಸೆಯನಿಟ್ಟುಕೊಂಡಿದ್ದೇವೆ. ಇಷ್ಟು ಸಮಯಮಾತನಾಡಲು ಅವಕಾಶ ಕೊಟ್ಟಂಥಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ (ರಾಣಿಬೆನ್ನೂರು).—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಸಚಿವ್ವಯರು ಶಿಕ್ಷಣ ಇಲಾಖೆಯ ಬಗ್ಗೆ ತಂದಿರುವಂತಹ ಬೇಡಿಕೆಯ ಬಗ್ಗೆ ಕೆಲವೊಂದು ಸಲಹೆಗಳನ್ನು ನಾನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಶಿಕ್ಷಣ ಇಲಾಖೆಗೆ ಒದಗಿಸಿಕೊಟ್ಟಿರತಕ್ಕಂಥಹ ಹಣದ ಮೊತ್ತವನ್ನು ನೋಡಿದರೆ ಬಹಳ ವಿಷಾದವೆನಿಸುತ್ತದೆ. ದೇಶದ ಭವಿತವ್ಯ ಹಾಗೂ ದೇಶದ ಬಡತನ ಇವುಗಳು ನಿರ್ಮೂಲನವಾಗಬೇಕಾದರೆ ಶಿಕ್ಷಣದ ಮತಿಯಿಂದ ಮಾತ್ರ ಸಾಧ್ಯ ಎನ್ನತಕ್ಕಂಥಹ ಮಾತನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. Education end proverty are correlated and inter related and they run quite opposite. ಏಕೆ ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆಂದರೆ, ಬಡತನವನ್ನು ತೊಲಗಿಸಬೇಕೆಂಬುದರ ಬಗ್ಗೆ ಎಲ್ಲರೂ ಮಾತನಾಡುತ್ತೇವೆ. ಆದರೆ ಆ ಬಡ ಜನತೆಯಲ್ಲಿರತಕ್ಕ ಕೇವಲ ಅಜ್ಞಾನವನ್ನು ಬದಲಾವಣೆ ಮಾಡುವುದಕ್ಕಾಗಿಲ್ಲ. ಸರ್ಕಾರದ ಸವಲತ್ತುಗಳು ಸದುಪಯೋಗವಾಗದೆ ದುರುಪಯೋಗವಾಗುತ್ತಾ ಬಂದಿವೆ, ಇಷ್ಟೆಲ್ಲಾ ವರ್ಷಗಳಲ್ಲಿ ಯೋಗ್ಯ ಜನರಿಗೆ ಸೌಕರ್ಯಗಳು ಮುಟ್ಟುತ್ತಿಲ್ಲ. ನಿಜವಾಗಿಯೂ ಅವರ ಬಡತನವನ್ನು ನಿರ್ಮೂಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂಬತಕ್ಕಂತಹದನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭಗಳಲ್ಲಿ ಮಾನ್ಯ ವಿದ್ಯಾ ಮಂತ್ರಿಗಳವರಿಗೆ ಕೆಲವೊಂದು ಸಲಹೆಗಳನ್ನು ಹೇಳುತ್ತಿದ್ದೇನೆ. ಅದು ಏನೆಂದರೆ ನಮ್ಮ ರಾಜ್ಯದ ಪ್ರತಿಯೊಬ್ಬ ರೈತನ ಕುಟುಂಬಕ್ಕೆ ಇರುವಂತಹ ಗರಿಷ್ಟ ಕಷ್ಟವನ್ನಾದರೂ ನಿವಾರಣೆ ಮಾಡುವಂತಹ ಕಡೆಗೆ ನಿಮ್ಮ ಗಮನ ಹರಿಯಬೇಕು. ಹಾಗೂ ಅದೇ ರೀತಿ ನಮ್ಮ ಕರ್ನಾಟಕ ರಾಜ್ಯದ ಪ್ರತಿಯೊಂದು ಬಡ ಕುಟುಂಬದಲ್ಲಿ ಕೊನೇ ಪಕ್ಷ ಒಬ್ಬನನ್ನಾದರೂ ವಿದ್ಯಾವಂತನನ್ನಾಗಿ ಮಾಡತಕ್ಕಂತಹ ಜವಾಬ್ದಾರಿಯನ್ನು ಈ ಸರ್ಕಾರ ತೆಗೆದುಕೊಳ್ಳಬೇಕು. ಸಾರ್ವಜನಿಕರಿಗೆ ಇವೊತ್ತೊಂದು ಉಪಕಾರವನ್ನು ಮಾಡದೆ ಹೋದರೆ ಜನ ತಮ್ಮನ್ನು ಸುಮ್ಮನೆ ಬಿಡುವುದಿಲ್ಲ ಕೊಟ್ಟಂತಹ ಅನುಕೂಲ ಸದುಪಯೋಗವಾಗುವುದಿಲ್ಲ ಎನ್ನತಕ್ಕಂತಹದನ್ನು ತಾವು ತಿಳಿದುಕೊಳ್ಳಬೇಕು. ಯಾವುದೇ ಪ್ರಚಾರಕ್ಕಾಗಿ ಹೆಚ್ಚು ಹಣವನ್ನು ವೆಚ್ಚಮಾಡದೆ ಬಡವರು ಅನಕ್ಷರಾಗಿರುವವರು ಅಕ್ಷರತೆಯನ್ನು ತಿಳಿದುಕೊಳ್ಳುವ ಹಾಗೆ ಮಾಡಿದರೆ ಅದರಿಂದ ಹೆಚ್ಚು ಹೆಚ್ಚು ಪ್ರಯೋಜನ ಪಡೆದಿದ್ದೇ ಆದರೆ ನಿಜವಾಗಿಯೂ ನಮ್ಮ ರಾಜ್ಯದಲ್ಲಿರತಕ್ಕ ಬಡತನ ಅತಿ ಶೀಘ್ರದಲ್ಲೇ ಕೊನೆಗೊಳಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಈಗ ತಾವು ತಂದಿರುವ ಯೋಜನೆಯ ಪ್ರಕಾರ ತಾಳಿ ಕೊಡುವ ಯೋಜನೆ ಇದೆ. ಬಟ್ಟೆ ಕೊಡುವ ಯೋಜನೆ ಇದೆ, ಪಂಚೆ ಕೊಡುವ ಯೋಜನೆ ಇದೆ. ಹಾಗೂ ಸೀರೆ ಕೊಡುವ ಯೋಜನೆಯೂ ಇದೆ ತಾವು ಈ ಕುಟುಂಬಗಳನ್ನು ಗುರುತಿಸುವ ಕೆಲಸ ಪ್ರಾರಂಭ ಮಾಡುತ್ತಿದ್ದೀರಿ. ಅದರ ಬದಲು ಒಂದೊಂದು ಕುಟುಂಬದಲ್ಲೂ ಇರತಕ್ಕ ಮಕ್ಕಳನ್ನು ಕೊನೇ ಪಕ್ಷ ೧೫ ವರ್ಷಗಳವರೆಗೆ ಕಡ್ಡಾಯವಾಗಿ ವಿದ್ಯಾಭ್ಯಾಸವನ್ನು ಕೊಡುವಂತಹ ಕಾನೂನು ಏನಿದೆ, ಅದರ ಪ್ರಕಾರ ಆ ಮಕ್ಕಳಿಗೆ ಖಡ್ಡಾಯವಾಗಿ ವಿದ್ಯಾಭ್ಯಾಸವನ್ನು ಕೊಡುವಂಥ ಜವಾಬ್ದಾರಿಯನ್ನು ಈ ಸರ್ಕಾರ ತೆಗೆದುಕೊಳ್ಳಬೇಕು, ನಮ್ಮ ರಾಜ್ಯದಲ್ಲಿ ಈಗ ಕೇವಲ ೩೮.೪೬ ಪರ್ಸೆಂಟ್ ಸಾಕ್ಷರತೆಯು ಇರತಕ್ಕಂತಹದ್ದು. ಆ ಸಾಕ್ಷರತೆಯನ್ನು ೭೦ರಿಂದ ೮೦ ಪರ್ಸೆಂಟ್‌ವರೆಗೆ ತರುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಈ ಬಗ್ಗೆ ಪ್ರಾಮಾಣಿ ಪ್ರಯತ್ನವನ್ನು ಮಾಡಬೇಕೆಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನೊಂದು ವಿಷಯವೇನೆಂದರೆ, ಶಿಕ್ಷಣ ಪದ್ಧತಿ ಏನಾಗಿದೆ ಎಂದರೆ, ಕೇವಲ ಬಜೆಟ್‌ನಲ್ಲಿ ಹೆಚ್ಚು ಸವಲತ್ತುಗಳನ್ನು ಕೊಡತಕ್ಕಂಥಹದ್ದು ಯಾರಿಗೆ ಎಂದರೆ ಪಟ್ಟಣದ ಪ್ರದೇಶದಲ್ಲಿ ವಾಸ ಮಾಡ ತಕ್ಕಂತವರಿಗೆ. ಅವರು ನೂರಕ್ಕೆ ೨೮.೮೯ ಪರ್ಸೆಂಟ್ ಪಟ್ಟಣ ಪ್ರದೇಶದಲ್ಲಿ ವಾಸವಾಗಿದ್ದಾರೆ ಅದೇ ಹಳ್ಳಿಗಾಡಿನ ಪ್ರದೇಶಗಳಲ್ಲಿ ೭೧.೧೧ ಪರ್ಸೆಂಟ್ ಜನ ವಾಸವಾಗಿದ್ದಾರೆ. ಆದರೆ ಹಳ್ಳಿಗಾಡಿನ ಪ್ರದೇಶ ಗಳಲ್ಲಿ ಶಿಕ್ಷಣದ ಮಟ್ಟವನ್ನು ಸರ್ಕಾರ ಅಲಕ್ಷ್ಯ ಮಾಡುತ್ತಲೇ ಬಂದಿದೆ. ಇವತ್ತು ನಮ್ಮ ರಾಜ್ಯದ ಸಾಕ್ಷರತೆ ಹೆಚ್ಚಾಗಿ ಬೆಳೆಯಬೇಕಾದರೆ ಹಳ್ಳಿಗಾಡಿನ ಜನತೆಗೆ ಅನೇಕ ಸವಲತ್ತುಗಳನ್ನು ಕೊಟ್ಟಿದ್ದೇ ಆದರೇ, ನಮ್ಮಲ್ಲಿರುವಂಥ ಸಾಕ್ಷರತೆಯ ಪ್ರಮಾಣ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಮಾತನ್ನು ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ಖಾಸಗಿ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳು ಯಾವ್ಯಾವ ರೀತಿ ಇವೆ ಎಂಬುದರ ಬಗ್ಗೆ ಹೇಳಿದ್ದಾರೆ. ಸರ್ಕಾರಿ ಸಂಸ್ಥೆಗಳು ೧೦೦ಕ್ಕೆ ೧೦೦ ರಷ್ಟು ಕೆಟ್ಟದ್ದಾಗಿ ನಡೆಯು ತ್ತಿಲ್ಲ. ಅದೇ ರೀತಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲೂ ೧೦೦ಕ್ಕೆ ೧೦೦ ರಷ್ಟೂ ಚೆನ್ನಾಗಿ ನಡೆಯುತ್ತಿಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. ಎಲ್ಲಾ ಕ್ಷೇತ್ರದಲ್ಲೂ ಹಾಗೂ ಎಲ್ಲಾ ವರ್ಗದಲ್ಲೂ ಕೆಲವು ಒಳ್ಳೆಯವೂ ಇವೆ. ಕೆಲವು ಕೆಟ್ಟವುಗಳೂ ಇವೆ. ಎಲ್ಲಿಯವರೆಗೆ ನಾವು ಒಳ್ಳೆಯದನ್ನು ಒಳ್ಳೆಯದೆಂದು ಹೇಳುವುದಿಲ್ಲವೋ ಅದೇ ರೀತಿ ಕೆಟ್ಟದನ್ನು ಕೆಟ್ಟದ್ದು ಎಂಬುದಾಗಿ ಹೇಳುವುದಿಲ್ಲವೋ ಅಲ್ಲಿಯವರೆ ವಿಗೂ ನಾವು ಒಳ್ಳೆಯದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತಾ ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಪ್ರಾಥಮಿಕ ಹಾಗೂ ಪೂರ್ವ ಪ್ರಾಥಮಿಕ ಮಟ್ಟದಲ್ಲಿ ಮಕ್ಕಳನ್ನು ವಸತಿ ಶಾಲೆಗಳಲ್ಲಿ ಇಡುತ್ತಾರೆ. ಆದರೂ ಅವರಿಗೆ ಅದು ಲಾಭಕರವಾಗುವುದಿಲ್ಲ. ಏಕೆಂದರೆ ಮಕ್ಕಳ ಮನಸ್ಸು ರಾಷ್ಟ್ರ ಪ್ರೇಮದ ಕಡೆಗೆ ದೇಶದ ಅಭಿಮಾನದ ಕಡೆಗೆ ತೆಗೆದುಕೊಂಡು ಹೋಗತಕ್ಕ ಪಠ್ಯ ಪುಸ್ತಕಗಳು ಇಲ್ಲ ಎನ್ನತಕ್ಕಂತಹದನ್ನು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಇದಕ್ಕೋಸ್ಕರ ಆ ಒಂದು ದಿಕ್ಕಿನಲ್ಲಿ ಸಾಧನೆಯನ್ನು ಮಾಡಬೇಕಾದರೆ ಶಿಕ್ಷಣ ಮಂತ್ರಿಗಳು ಒಂದು ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳಬೇಕು. ಪ್ರಾಥಮಿಕ ಶಾಲೆಗಳಲ್ಲಿರತಕ್ಕ ಶಿಕ್ಷಕರು ಯಾವ ರೀತಿ ಇದ್ದಾರೆಂಬುದು ನನಗೆ ಗೊತ್ತಿದೆ. ಅದನ್ನು ಹೇಳುವುದಕ್ಕೆ ಅನೇಕ ಮಾನ್ಯ ಸದಸ್ಯರು ಹೆದರಿರ ಬಹುದು. ಪ್ರಾಥಮಿಕ ಶಾಲೆಯಲ್ಲಿ ಇರತಕ್ಕ ಶಿಕ್ಷಕರು ಮಾಡತಕ್ಕ ರಾಜಕೀಯದ ಬಗ್ಗೆ ಮಾತನಾಡಿದರೆ, ಅದು ಅವರವರ ಕ್ಷೇತ್ರದಲ್ಲಿ ಸದಸ್ಯರಿಗೆ ಬಹಳ ವಿರೋಧಿಯಾಗ ಬಹುದು ಎಂಬ ಸಂಗತಿಯಿಂದ ಹೆಚ್ಚಿನ ರೀತಿಯಲ್ಲಿ ಮಾತನಾಡಿರುವುದಿಲ್ಲ. ಆದರೆ ನನಗೆ ಅಂತಹ ಭಯವೇನೂ ಇಲ್ಲ, ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಾಗಿ ರಾಜಕೀಯ ಮಾಡತಕ್ಕಂತಹವರು ಪ್ರಾಥಮಿಕ ಶಾಲೆಯ ಶಿಕ್ಷಕರು. ಅವರು ಆಯಾ ತಾಲ್ಲೂಕಿನವರು ಅಷ್ಟೇ ಅಲ್ಲ. ಆದೇ ಗ್ರಾಮದವರೂ ಆಗಿದ್ದಾರೆ. ಅಲ್ಲೇ ಹೆಚ್ಚಾಗಿ ಆ ಶಿಕ್ಷಕರನ್ನು ಇಡುವಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ. ಅಂತಹ ವರನ್ನು ಇನ್ನು ಮೇಲಾದರೂ ಅವರು ತಾಲ್ಲೂಕು ಒಂದೇ ಅಲ್ಲ, ಜಿಲ್ಲೆಯಿಂದಲೇ ವರ್ಗ ಮಾಡ ತಕ್ಕ ದಿಟ್ಟವಾದ ನಿಲುವನ್ನು ತೆಗೆದುಕೊಳ್ಳುತ್ತೀರಾ ? ಆ ಒಂದು ದಿಟ್ಟ ನಿಲುವನ್ನು ತಗೆದುಕೊಳ್ಳು ವಂತಹ ಧೈರ್ಯವನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪ್ರೌಢಶಾಲೆಯ ಬಗ್ಗೆ ಹೇಳುವುದಾದರೆ, ರಾಣಿಬೆನ್ನೂರು ಪುರಸಭೆಯ ವತಿಯಿಂದ ನಡೆಸಲಾಗುತ್ತಿರುವ ಹೈಸ್ಕೂಲುಗಳನ್ನು ಹತ್ತು ವರ್ಷಗಳ ಹಿಂದೆಯೇ ಸರ್ಕಾರಕ್ಕೆ ವಹಿಸಿಕೊಡಲಾಗಿದೆ ಎಂಬುದಾಗಿ ಅವರು ಹೇಳುತ್ತಿದ್ದಾರೆ. ಆದರೆ ಆ ಪ್ರೌಢ ಶಾಲೆಗಳು ಇನ್ನೂ ಪುರಸಭೆಯ ಅಧೀನದಲ್ಲೇ ಇವೆ. ಒಟ್ಟಿನಲ್ಲಿ ಹೇಳುವುದಾದರೆ ಆ ಹೈಸ್ಕೂಲುಗಳು ಯಾರ ಅಧೀನದಲ್ಲಿವೆ, ಎಂಬುದೇ ಗೊತ್ತಾ ಗುತ್ತಿಲ್ಲ. ಅಲ್ಲಿರತಕ್ಕಂತಹ ಶಿಕ್ಷಣ ಪರಿಸ್ಥಿತಿ ಗಂಭೀರವಾಗಿದೆ, ಅಲ್ಲಿಯ ಶಾಲಾ ಕಟ್ಟಡದ ಪರಿಸ್ಥಿತಿ

ಯಂತೂ ಹೇಳುವುದಕ್ಕೆ ಸಾಧ್ಯವಿಲ್ಲ, ಮಕ್ಕಳು ಅಲ್ಲಿಗೆ ಹೋಗುವುದಕ್ಕೇ ಹಿಂಜರಿಯುತ್ತಾರೆ. ಮಾನ್ಯ ಶಿಕ್ಷಣ ಸಚಿವರು ತಕ್ಷಣ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕು. ನನಗೆ ತಿಳಿದ ಮಟ್ಟಿಗೆ ತಮ್ಮ ಮಂತ್ರಿ ಪೈಕಿ ಒಬ್ಬರ ಒಂದು ಕೇವಲ ಒಂದು ಚೀಟಿಯನ್ನು ಕಳುಹಿಸಿ ಅದನ್ನು ಪೆಂಡಿಂಗ್ ಇಡುವಂತೆ ಹೇಳಿದ್ದಾರೆ. ಕಳೆದ ಅನೇಕ ವರ್ಷಗಳಿಂದ ಇದರ ಬಗ್ಗೆ ನಿರ್ಣಯವಾಗಿಲ್ಲ. ತಾವು ಇದಕ್ಕೆ ಎಡೆಕೊಡುವುದಿಲ್ಲ ಎನ್ನುವ ಭಾವನೆ ನನಗಿದೆ. ಮಾನ್ಯ ರಘುಪತಿಯವರು ನಿಷ್ಠೂರವಾದರೂ ಶಿಕ್ಷಣ ಸಂಸ್ಥೆ ಬೆಳೆಯುವುದಕ್ಕೆ ತಕ್ಷಣವೇ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಶಿಕ್ಷಣ ಇಲಾಖೆಯಲ್ಲಿ ಅನೇಕ ಉತ್ತಮವಾದ ಹುದ್ದೆಗಳಿಗೆ ಅಂದರೆ ಐ.ಎ.ಎಸ್. ಐ.ಪಿ.ಎಸ್. ಐ ಎಫ್. ಎಸ್. ತರಬೇತಿ ಕೊಡತಕ್ಕಂತಹದ್ದರ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ನಮ್ಮಲ್ಲಿ ಎಲ್ಲರೂ ಪಶ್ಚಿಮ ಬಂಗಾಳದಿಂದಲೇ ಐ.ಎ.ಎಸ್. ಅಧಿಕಾರಿಗಳಾಗಿ ಬಂದವರೇ ಇದ್ದಾರೆ. ಕರ್ನಾಟಕ ರಾಜ್ಯದಿಂದಲೂ ಇಂತಹ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ತಯಾರು ಮಾಡುವಂತಹ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ಈ ದಿವಸ ಶಿಕ್ಷಣ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುತ್ತಾ ಶಿಕ್ಷಣ ಸಂಸ್ಥೆಗಳಲ್ಲಿರುವ ಹಲವಾರು ಲೋಪದೋಷಗಳನ್ನು ತಮ್ಮ ಮೂಲಕ ಶಿಕ್ಷಣ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ದೇಶದ ಭವಿಷ್ಯ ಇಂದಿನ ವಿದ್ಯಾರ್ಥಿಗಳ ಹಾಗೂ ಯುವ ಜನರ ಕೈಯಲ್ಲಿದೆ. ಬೇರೆ ರಾಜ್ಯಗಳ ಅಭಿಪ್ರಾಯದ ಮಟ್ಟಿಗೆ ಕರ್ನಾಟಕ ರಾಜ್ಯ ಶಿಕ್ಷಣದಲ್ಲಿ ಮುಂದುವರಿದಿದೆ ಎಂಬ ಅಭಿಪ್ರಾಯ ಇದ್ದರೂ ಕೂಡ ಹಲವಾರು ಅವ್ಯವಸ್ಥೆಯಿಂದ ಹಲವಾರು ರೀತಿಯ ಕುಂದುಕೊರತೆಗಳಿಂದ ಹಲವಾರು ರೀತಿಯ ಲೋಪದೋಷಗಳಿಂದ ಇವತ್ತು ನಾವು ಆಶಿಸಿದಂತೆ ಶಿಕ್ಷಣ ಸಂಸ್ಥೆಯಲ್ಲಿ ಸುಧಾರಣೆ ಆಗಿಲ್ಲ. ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳುವುದಾದರೆ, ಕರ್ನಾಟಕದಲ್ಲಿ ಸುಮಾರು ಶೇಕಡ ೭೦-೮೦ರಷ್ಟು ಗ್ರಾಮೀಣ ಪ್ರದೇಶಗಳಲ್ಲಿರುವ ಕಡೆ ಈ ಶಿಕ್ಷಣ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಆಲೋಚನೆ ಮಾಡಬೇಕು. ಮಂತ್ರಿಗಳ ಅಭಿಪ್ರಾಯದ ಪ್ರಕಾರ ಪಠ್ಯಪುಸ್ತಕಗಳನ್ನು ವಿತರಣೆ ಮಾಡುವ ಮೂಲಕ ಈ ಪ್ರಾಥಮಿಕ ಶಿಕ್ಷಣವನ್ನು ಸರಿ ಮಾಡಿದ್ದೇವೆ, ಉನ್ನತ ಗುರಿ ಮುಟ್ಟಿದ್ದೇವೆಂದರೆ ಅದು ತಪ್ಪಾಗುತ್ತದೆ, ಈ ರೀತಿ ಪಠ್ಯಪುಸ್ತಕಗಳನ್ನು ವಿತರಣೆ ಮಾಡುವ ಕಾರ್ಯಕ್ರಮ ಇವತ್ತು ಹಳ್ಳಿ ಪ್ರದೇಶಗಳಲ್ಲಿ ಇನ್ನೂ ಕೈಗೊಂಡಿಲ್ಲ. ಮುಖ್ಯವಾಗಿ ನನ್ನ ಕ್ಷೇತ್ರದಲ್ಲಿ ಪಠ್ಯಪುಸ್ತಕ ವಿತರಣೆಯ ಬಗ್ಗೆ ಮಾಹಿತಿ ಗೊತ್ತಿಲ್ಲದೆ ಹಲವಾರು ಶಾಲೆಗಳಲ್ಲಿ ಹಣ ಸಂಗ್ರಹಣೆ ಮಾಡಲಾಗಿದ್ದು ಇದುವರೆಗೆ ಯಾವುದೇ ಪುಸ್ತಕವನ್ನು ವಿತರಣೆ ಮಾಡಿಲ್ಲ. ಇವತ್ತು ಕೆಲವು ಕಡೆ ಏನು ಪಠ್ಯಪುಸ್ತಕಗಳನ್ನು ಒದಗಿಸಿದ್ದೀರಿ ಅಲ್ಲಿ ಮಕ್ಕಳು ಶಾಲೆಯಿಂದ ಮನೆಗೆ ಹೋಗಬೇಕಾದರೆ ಶಾಲೆಗಳಲ್ಲೇ ಪುಸ್ತಕಗಳನ್ನು ಇಡಬೇಕೆಂಬ ರೂಢಿ ಇದೆ. ಇನೇ ತರಗತಿಯ ಹುಡುಗರು ಪಠ್ಯಪುಸ್ತಕವನ್ನು ಮನೆಗೆ ತೆಗೆದುಕೊಂಡು ಹೋಗುವ ಹಾಗಿಲ್ಲ ಅಂದಾಗ ಅವರು ಯಾವುದೇ ರೀತಿಯ ವಿದ್ಯಾಭ್ಯಾಸ ಮಾಡುವ ಹಾಗಿಲ್ಲ. ಆ ಹುಡುಗರು ತಾವು ತಪ್ಪುತಪ್ಪಾಗಿ ಬರೆದು ಕೊಂಡ ನೋಟ್ಸನ್ನು ಇಟ್ಟುಕೊಂಡು ವಿದ್ಯಾಭ್ಯಾಸ ಮಾಡತಕ್ಕ ಸಂದರ್ಭ ಬಂದಿದೆ. ಆದ್ದರಿಂದ, ಈ ಕಾರ್ಯಕ್ರಮದಲ್ಲಿ ಹಲವಾರು ಸುಧಾರಣೆಗಳು ಆಗಬೇಕಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಶಿಕ್ಷಕರ ಕುಂದುಕೊರತೆ ಬಗ್ಗೆ ಹೇಳುವುದಾದರೆ ಹಳ್ಳಿಗಾಡಿನ ಪ್ರದೇಶಗಳಲ್ಲಿರತಕ್ಕ ಶಾಲೆಗಳಲ್ಲಿ ಬಹಳವಾಗಿ ಇದೆ. ಎಲ್ಲ ಸದಸ್ಯರೂ ಇದರ ಬಗ್ಗೆ ಹೇಳಿದ್ದಾರೆ. ಅದೇ ರೀತಿಯಲ್ಲಿ ಕಾಲೇಜು ಮಟ್ಟದ ವಿದ್ಯಾಭ್ಯಾಸದಲ್ಲಿ ಕೂಡ ಬಹಳ ಮಟ್ಟಿಗೆ ಸುಧಾರಣೆ ತರಬೇಕಾಗಿದೆ. ಅಲ್ಲಿ ಕೂಡ ಹಲವಾರು ಕುಂದುಕೊರತೆಗಳು ಇವೆ ಎಂಬುದನ್ನು ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ನಮ್ಮಲ್ಲಿ ೪-೫ ವಿಶ್ವವಿದ್ಯಾನಿಲಯಗಳು ಇದ್ದರೂ ಕೂಡ ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಹೇಳುವುದಾದರೆ ಈಗಾಗಲೇ ಅನೇಕ ಸದಸ್ಯರು ಹಲವಾರು ಕುಂದುಕೊರತೆಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಇಂದಿನ ನಮ್ಮ ಶಿಕ್ಷಣ ಮಂತ್ರಿಗಳು ವಿದ್ಯಾರ್ಥಿಗಳ ಸಂಘಟನೆಯಿಂದ ಮುಂದೆ ಬಂದವರಾಗಿದ್ದಾರೆ. ಅದೂ ಕೂಡ ಬೆಂಗಳೂರಿನ ಸೈನ್ಸ್ ಕಾಲೇಜಿನ ಹಳೆಯ ವಿದ್ಯಾರ್ಥಿ. ತಮಗೆ ಬೆಂಗಳೂರಿನ ಶಿಕ್ಷಣದ ವ್ಯವಸ್ಥೆಯ ಬಗ್ಗೆ ಎಲ್ಲರಿಗಿಂತ ಹೆಚ್ಚಿನ ಮಾಹಿತಿ ಇದೆ. ಇವತ್ತಿನ ದಿವಸ ಹಲವಾರು ಕಾಲೇಜುಗಳಲ್ಲಿ ನಾನಾ ರೀತಿಯ ಅವ್ಯವಹಾರಗಳು, ನಾನಾ ರೀತಿಯ ಕುಂದುಕೊರತೆಗಳು ಇವೆ. ಖಾಸಗೀ ಕಾಲೇಜುಗಳು ಇತ್ತೀಚೆಗೆ ವಿದ್ಯಾರ್ಥಿ ಸಮುದಾಯಕ್ಕೆ

ಚುನಾವಣೆ ನಡೆಸುವುದಿಲ್ಲವೆಂಬ ನಿರ್ಧಾರ ಕೈಗೊಂಡಿವೆ. ಇವತ್ತು ನಿಮ್ಮ ಸರ್ಕಾರ ಜಿಲ್ಲಾ ಪರಿಷತ್ತಿನ ಚುನಾವಣೆ ನಡೆಸಬೇಕು, ಮಂಡಲ ಪಂಚಾಯಿತಿಯ ಚುನಾವಣೆ ನಡೆಸಬೇಕೆಂಬ ನಿರ್ಧಾರ ಕೈಗೊಂಡಿರುವಾಗ ಕಾಲೇಜುಗಳಲ್ಲಿ ಚುನಾವಣೆಗಳನ್ನು ನಡೆಸುವುದಿಲ್ಲವೆಂಬುದಕ್ಕೆ ಕಾರಣವೇನು ? ಒಂದೇ ರೀತಿಯ ಮಿಲಿಟರಿ ಕಾನೂನು ಕಾಲೇಜು ಮಟ್ಟದಲ್ಲಿ ನಡೆಯುತ್ತಿದೆ. ಆರು ತಿಂಗಳಿನಿಂದ ಎಸ್.ಜೆ. ಆರ್.ಸಿ. ಕಾಲೇಜಿನಲ್ಲಿ ಪೋಲೀಸರ ಹತೋಟಿಯಿಂದ ವಿದ್ಯಾರ್ಥಿಗಳಿಗೆ ಒತ್ತಡ ತರುತ್ತಿದ್ದಾರೆ. ಅದೇ ಅಗ್ರಿಕಲ್ಚರಲ್ ಕಾಲೇಜು, ಜಿ.ಕೆ.ವಿ.ಕೆ. ಕಾಲೇಜುಗಳಲ್ಲಿ ಹೊರಗಡೆಯಿಂದ ಗೂಂಡಾಗಳನ್ನು ಉಪಯೋಗಿಸಿಕೊಂಡು ಚುನಾವಣೆಗೆ ಒತ್ತಡ ತರುತ್ತಿದ್ದಾರೆ. ಅಲ್ಲಿ ಗಲಭೆ ಪ್ರಾರಂಭವಾಗಿದೆ. ಈ ರೀತಿಯ ಹಲವಾರು ರೀತಿಯ ಲೋಪದೋಷಗಳು ಕಂಡುಬರುತ್ತಿವೆ. ಮಂತ್ರಿಗಳು ವಿದ್ಯಾರ್ಥಿಗಳ ತೊಂದರೆಯನ್ನು ಅರ್ಥ ಮಾಡಿಕೊಂಡಿದ್ದಾರೆ. ಅವರ ಬೇಡಿಕೆಗಳು ಏನಿವೆ ಎಂಬುದನ್ನು ನೋಡಿ ಈಡೇರಿಸಬೇಕು. ನನಗೆ ತಿಳಿದ ಮಟ್ಟಿಗೆ ಕಳೆದ ೮ ವರ್ಷಗಳಿಂದ ಯೂನಿವರ್ಸಿಟಿ ಕೌನ್ಸಿಲ್ ಎಲೆಕ್ಷನ್ ಅನ್ನು ನಿಲ್ಲಿಸಿಬಿಟ್ಟಿದ್ದಾರೆ. ತಾವು ಕೂಡ ಇದರ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸುವ ರೀತಿಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕ್ಯಾಪಿಟೇಷನ್ ಫೀ ಬಗ್ಗೆ ತಾವು ಏನು ನಿರ್ಧಾರ ಕೈಗೊಂಡಿದ್ದೀರಿ ? ಕಳೆದ ವರ್ಷ ೪೦ ಪರ್ಸೆಂಟ್ ಸರ್ಕಾರೀ ಸೀಟುಗಳನ್ನು ಪಡೆದುಕೊಂಡಿದ್ದರೆ, ಈ ವರ್ಷ ನೀವು ೧೦೦ ಸೀಟುಗಳಿರುವ ಕಾಲೇಜುಗಳಲ್ಲಿ ೧೨೦ ಸೀಟುಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೀರಿ. ಇದರಿಂದ ಕ್ಯಾಪಿಟೇಷನ್ ಫೀ ಹತೋಟಿಗೆ ಬಂದ ಹಾಗೆ ಆಗಲಿಲ್ಲ.

ಅಧ್ಯಕ್ಷರು.—ಮುಗಿಸಿ ಮುಗಿಸಿ ಅಂತ ನಿಮಗೆ ಎಷ್ಟು ಸಾರಿ ಹೇಳಬೇಕು ? ನೀವು ಮುಗಿಸದಿದ್ದರೆ ನಿಮ್ಮದನ್ನು ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ.

ಶ್ರೀ ವಿನಯಕುಮಾರ್ ಸೊರಕೆ.—ಇವತ್ತು ನಿರುದ್ಯೋಗ ಸಮಸ್ಯೆ ಬಹಳ ದೊಡ್ಡದಾಗಿದೆ. ಸರ್ಕಾರ ನಿರ್ಧಾರ ಕೈಗೊಂಡ ಪ್ರಕಾರ ನಿವೃತ್ತಿ ವಯಸ್ಸನ್ನು ೫೫ರಿಂದ ೫೮ಕ್ಕೆ ಏರಿಸಿದೆ. ಇದು ವಿದ್ಯಾರ್ಥಿ ಸಮುದಾಯಕ್ಕೆ ಮಾಡಿದಂತಹ ಅನ್ಯಾಯ. ಇದನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ವಿದ್ಯಾ ಮಂತ್ರಿಗಳಲ್ಲಿ ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ).—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯಾಸಚಿವರು ಮಂಡಿಸಿದಂಥ ೧೯೮೫–೮೬ನೇ ಸಾಲಿನ ವಿದ್ಯಾ ಇಲಾಖೆ ಬೇಡಿಕೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರ ಮಕ್ಕಳಿಗೆ ಕೂಲಿಕಾರರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿ ಎಂದು ಕಳೆದ ಮೂರು ವರ್ಷಗಳಿಂದ ಹೈಸ್ಕೂಲುಗಳನ್ನು ಜೂನಿಯರ್ ಕಾಲೇಜುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಾರಂಭಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಪ್ರಾಥಮಿಕ ಶಾಲೆಗಳು ಪ್ರತಿ ಗ್ರಾಮದಲ್ಲಿದ್ದರೂ ಅಲ್ಲಿ ಶಿಕ್ಷಕರ ಕೊರತೆ ಇದೆ. ಒಂದು ಆಶ್ಚರ್ಯ ಎಂದರೆ ಪ್ರತಿ ತಾಲ್ಲೂಕಿನಲ್ಲಿ ಸಹಾಯಕ ಶಿಕ್ಷಣಾಧಿಕಾರಿಗಳು ಇದ್ದು, ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರುಗಳಿದ್ದು ಆಗಾಗ ಸಭೆಗಳನ್ನು ನಡೆಸುತ್ತಿದ್ದರೂ ಶಿಕ್ಷಕರ ಕೊರತೆ ನಿವಾರಿಸಲು ತೀರ್ಮಾನ ತೆಗೆದುಕೊಳ್ಳತಕ್ಕ ಪ್ರಯತ್ನವನ್ನು ಮಾಡುವುದಿಲ್ಲ. ರಾಜ್ಯ ಮಟ್ಟದಲ್ಲಿ ವಿದ್ಯಾ ಇಲಾಖೆ ಕಮಿಷನರಿದ್ದು ರಾಜ್ಯದಲ್ಲಿ ಎಲ್ಲ ಉಪನಿರ್ದೇಶಕರ ಸಭೆ ನಡೆಸುತ್ತಿದ್ದರೂ ಶಿಕ್ಷಕರ ಕೊರತೆ ಬಗ್ಗೆ ವಿಚಾರ ಮಾಡದೆ ಖಾಲಿ ಇರತಕ್ಕ ಹುದ್ದೆಗಳಿಗೆ ಶಿಕ್ಷಕರನ್ನು ಭರ್ತಿ ಮಾಡದೇ ಇರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿನ ಮಕ್ಕಳಿಗೆ ಅನ್ಯಾಯವಾಗಿದೆ ಎಂದು ಹೇಳುತ್ತಾ ಖಾಲಿ ಇರತಕ್ಕ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡತಕ್ಕ ಪ್ರಯತ್ನವನ್ನು ಕೂಡಲೇ ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಸಚಿವರು ಡೊನೇಷನ್ ರದ್ದು ಮಾಡಿದ್ದೇವೆಂದು ಆದೇಶ ಹೊರಡಿಸಿದ್ದರು. ಆದರೆ ಶಾಲಾ ಮ್ಯಾನೇಜ್‌ಮೆಂಟಿನವರು ಬುದ್ಧಿವಂತರು. ಡೊನೇಷನ್ ಬಿಟ್ಟು ಮಾಸಿಕ ಶುಲ್ಕವನ್ನು ಜಾಸ್ತಿ ಮಾಡಿದರು. ಕೇವಲ ೧೦ ರೂಪಾಯಿ ಮಾಸಿಕ ಶುಲ್ಕದ ಬದಲು ೪೦–೫೦ ರೂಪಾಯಿ ಮಾಸಿಕ ಶುಲ್ಕ ವಸೂಲು ಮಾಡುತ್ತಿದ್ದಾರೆ. ಇದರಿಂದ ಬಹಳ ಜನ ತಂದೆ ತಾಯಿಗಳಿಗೆ ತೊಂದರೆಯಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಖಾಸಗಿಯವರು ನಡೆಸತಕ್ಕ ಜೂನಿಯರ್ ಕಾಲೇಜುಗಳಿಗೆ ಮತ್ತು ಸರ್ಕಾರ ನಡೆಸತಕ್ಕ ಜೂನಿಯರ್ ಕಾಲೇಜುಗಳಿಗೆ ಕೇವಲ ಕಲೆ ಮತ್ತು ವಾಣಿಜ್ಯ ವಿಷಯಗಳನ್ನು ಕೊಡುತ್ತಿದ್ದಾರೆ. ಇದರಿಂದ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ದುರ್ಬಲ ವರ್ಗದ ಮಕ್ಕಳು ವಿಜ್ಞಾನದ ವಿಷಯ ಓದತಕ್ಕ ಸಂದರ್ಭ ಇಲ್ಲ.

ಅವರು ವಿಜ್ಞಾನದ ವಿಷಯ ಓದಲು ನಗರ ಪ್ರದೇಶಗಳಿಗೆ ಬರುವುದಕ್ಕಾಗುವುದಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿ ಜೂನಿಯರ್ ಕಾಲೇಜುಗಳನ್ನು ಮಾಡುವಾಗ ಅದು ಖಾಸಗಿಯವರದಿರಲಿ ಅಥವಾ ಸರ್ಕಾರದವರದಿರಲಿ ವಿಜ್ಞಾನದ ವಿಷಯವನ್ನು ಒಳಗೊಂಡಂತೆ ಅವಕಾಶ ಇರಬೇಕೆಂದು ಹೇಳುತ್ತೇನೆ. ಇಲ್ಲದೇಹೋದರೆ ಗ್ರಾಮಾಂತರ ಪ್ರದೇಶದಲ್ಲಿರುವ ಮಕ್ಕಳಿಗೆ ಬಿ. ಇ. ಅಥವಾ ಮೆಡಿಕಲ್ ಕೋರ್ಸ್ ಮಾಡುವಂಥ ಅವಕಾಶ ತಪ್ಪಿಹೋಗುತ್ತದೆ. ನಮ್ಮ ಗ್ರಾಮಾಂತರ ಮಕ್ಕಳಿಗೆ ಬಿ.ಇ. ಅಥವಾ ಮೆಡಿಕಲ್ ಓದಿಸಬೇಕೆಂದು ಆಸಕ್ತಿ ಇದ್ದರೂ ಕೂಡ ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ವಿಜ್ಞಾನದ ವಿಷಯ ಓದಿಸುವುದಕ್ಕೆ ನಗರಪ್ರದೇಶಗಳಿಗೆ ಕಳುಹಿಸುವುದಕ್ಕಾಗುವುದಿಲ್ಲ, ಹೀಗಾಗಿ ಕಲಾ ಮತ್ತು ವಾಣಿಜ್ಯ ವಿಷಯಗಳನ್ನು ಮಾತ್ರ ಓದುವಂಥ ಸಂದರ್ಭ ಬಂದು ಬಿ.ಇ. ಅಥವಾ ಮೆಡಿಕಲ್ ಕೋರ್ಸ್‌ಗೆ ಹೋಗುವುದಕ್ಕೆ ಆಗದ ಪ್ರಸಂಗ ಬರುತ್ತಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿರುವ ಜೂನಿಯರ್ ಕಾಲೇಜುಗಳಲ್ಲಿ ವಿಜ್ಞಾನದ ವಿಷಯವನ್ನೂ ವ್ಯಾಸಂಗ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಡೊನೇಷನ್ ಪ್ರತಿವರ್ಷ ಹಂತಹಂತವಾಗಿ ಕಡಿಮೆ ಮಾಡುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಹೇಳಬೇಕು. ತಾಂತ್ರಿಕ ಶಿಕ್ಷಣ ಶಾಲೆಯಲ್ಲಿ ಯಾವರೀತಿ ವ್ಯವಸ್ಥೆ ಮಾಡಲಾಗಿದೆ ಎಂಬ ಬಗ್ಗೆ ಸಚಿವರು ಸ್ಪಷ್ಟಪಡಿಸಬೇಕು. ಬಿ.ಇ. ಮತ್ತು ಎಂ.ಬಿ.ಬಿ.ಎಸ್. ಕೋರ್ಸಿಗೆ ಪ್ರವೇಶ ಪರೀಕ್ಷೆ ಮಾಡುವುದರಲ್ಲಿ ವಿಚಿತ್ರ ಸಂಗತಿ ನಡೆಯುತ್ತಿದೆ. ಪಿ.ಯು.ಸಿ. ಎರಡನೇ ವರ್ಷದ ಫಲಿತಾಂಶ ಹೊರಬೀಳುವ ಮೊದಲೇ ಪ್ರವೇಶ ಪರೀಕ್ಷೆಯನ್ನು ಮಾಡುವುದರಿಂದ ಅನೇಕ ತೊಂದರೆಗಳಾಗುತ್ತಿವೆ. ಪ್ರವೇಶ ಪರೀಕ್ಷೆಯಲ್ಲಿ ಕೆಲವರು ಫಾಸಾದರೆ ಎರಡನೇ ವರ್ಷದ ಪಿ.ಯು.ಸಿ.ಯಲ್ಲಿ ಫೇಲಾಗಿರುತ್ತಾರೆ. ಅಂಥವರು ನೂರಾರು ರೂಪಾಯಿ ಖರ್ಚು ಮಾಡಿಕೊಂಡು ಬಂದು ಪ್ರವೇಶ ಪರೀಕ್ಷೆಗೆ ಹಾಜರಾಗಿದ್ದರೂ ಅದು ದಂಡವಾಗುತ್ತಿದೆ. ಆದ್ದರಿಂದ ಎಲ್ಲ ತಂದೆತಾಯಿಗಳ ಪರವಾಗಿ ಮತ್ತು ವಿದ್ಯಾರ್ಥಿಗಳ ಪರವಾಗಿ ಕೇಳಿಕೊಳ್ಳುವುದೇನೆಂದರೆ ಎರಡನೇ ವರ್ಷದ ಪಿ.ಯು.ಸಿ. ಫಲಿತಾಂಶ ಅನೌನ್ಸ್ ಆದಮೇಲೆ ಪ್ರವೇಶ ಪರೀಕ್ಷೆಯನ್ನು ಮಾಡುವಂಥ ವ್ಯವಸ್ಥೆ ಮಾಡಬೇಕು. ಇದರಿಂದ ಇಲ್ಲಿ ಉತ್ತೀರ್ಣರಾದವರು ಮಾತ್ರ ಪ್ರವೇಶ ಪರೀಕ್ಷೆಗೆ ಕೂಡುವುದಕ್ಕೆ ಅವಕಾಶವಾಗುತ್ತದೆ. ಕಾಪಿ ಹೊಡೆಯುತಕ್ಕ ವಿದ್ಯಾರ್ಥಿಗಳನ್ನು ಕಂಡರೆ ಶಿಕ್ಷಕರು ನಡುಗುವ ಪರಿಸ್ಥಿತಿ ಇದೆ. ಜೀವಭಯದಿಂದ ಶಿಕ್ಷಕರು ಕಾಪಿ ಹೊಡೆದರೂ ಸುಮ್ಮನಿರಬೇಕಾದ ಪ್ರಸಂಗ ಇದೆ. ಒಬ್ಬನೇ ಏಕಾಂಗಿಯಾಗಿ ಹೋಗುವಾಗ ಜೀವಕ್ಕೆ ಅಪಾಯವಾಗುತ್ತದೆ ಎಂಬ ಭಯದಿಂದ ಪೋಲೀಸ್ ಸ್ಟೇಷನ್‌ನಲ್ಲಿ ಕಳ್ಳರು ಪೋಲೀಸರನ್ನು ಕಂಡು ಯಾವರೀತಿ ನಡುಗುತ್ತಾರೋ ಅದೇರೀತಿ ಶಿಕ್ಷಕರು ವಿದ್ಯಾರ್ಥಿಗಳನ್ನು ಕಂಡರೆ ನಡುಗುತ್ತಾರೆ. ಶಿಕ್ಷಣದ ಗುಣಮಟ್ಟ ಕಡಿಮೆಯಾಗುತ್ತಿದೆ ಎಂದು ತಂದೆತಾಯಿಗಳು, ಹಿರಿಯರು ಹೇಳುತ್ತಿದ್ದಾರೆ. ಕಾಪಿ ಹೊಡೆಯುವಂಥ ವಿದ್ಯಾರ್ಥಿಗಳಿಂದ ಇದು ಇನ್ನೂ ಕೆಳಮಟ್ಟಕ್ಕೆ ಹೋಗುತ್ತಿದೆ. ಆದ್ದರಿಂದ ಕಾಪಿ ಹೊಡೆಯುವ ವಿದ್ಯಾರ್ಥಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇಹೋದರೆ ಶಿಕ್ಷಣದ ಗುಣಮಟ್ಟ ಇನ್ನೂ ಹಾಳಾಗತಕ್ಕ ಪರಿಸ್ಥಿತಿ ಬರುತ್ತದೆ.

ಅಧ್ಯಕ್ಷರು.—ಕೊನೆಯದಾಗಿ ಎಂದು ಹೇಳಿ ಬೇಗನೆ ಮುಗಿಸಿ.

ಶ್ರೀ ಕೆ. ಮಲ್ಲಪ್ಪ.—ಕೊನೆಯದಾಗಿ ಹೇಳುವುದಾದರೆ ಮಾಯಕೊಂಡದಲ್ಲಿ ಜೂನಿಯರ್ ಕಾಲೇಜು ಪ್ರಾರಂಭವಾಗಿ ಮೂರು ನಾಲ್ಕು ವರ್ಷವಾಯಿತು. ಆದರೆ ಅಲ್ಲಿ ವಿಜ್ಞಾನದ ವಿಷಯ ಇಲ್ಲ. ಅಲ್ಲಿ ವಿಜ್ಞಾನದ ವಿಷಯ ಪ್ರಾರಂಭ ಮಾಡಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಬೇಡಿಕೊಂಡಿದ್ದೆ. ಎಲ್ಲ ವಿಷಯಗಳನ್ನು ಒಳಗೊಂಡ ಪದವೀಧರ ಕಾಲೇಜನ್ನು ಪ್ರಾರಂಭಿಸಬೇಕೆಂದೂ ಕೋರಿಕೊಂಡಿದ್ದೆ. ಈ ಕೆಲಸಗಳನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ದಾವಣಗೆರೆಯಲ್ಲಿ 2 ವರ್ಷದಿಂದ ಪಿ.ಜಿ. ಕೇಂದ್ರ ಇದೆ. ಅಲ್ಲಿಂದ ಇಂಗ್ಲೀಷ್ ಮತ್ತು ಸ್ಟ್ಯಾಟಿಸ್ಟಿಕ್ಸ್ ವಿಷಯವನ್ನು ಮೈಸೂರಿಗೆ ವರ್ಗಾಯಿಸುತ್ತೇವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಹೇಳಿದ್ದಾರೆ. ಇದು ಸರಿಯಲ್ಲ. ಮಾನ್ಯ ಸಚಿವರು ಅದನ್ನು ಅಲ್ಲೇ ಮುಂದುವರೆಸಿಕೊಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ; ಇಂಗ್ಲೀಷ್ ಮತ್ತು ಸ್ಟ್ಯಾಟಿಸ್ಟಿಕ್ಸ್ ವಿಷಯಗಳನ್ನು ದಾವಣಗೆರೆಯಲ್ಲೇ ಮುಂದುವರೆಸಬೇಕು. ಜೊತೆಗೆ ಸೈನ್ಸ್ ಮತ್ತು ಗಣಿತಶಾಸ್ತ್ರ ವಿಭಾಗಗಳನ್ನು ದಾವಣಗೆರೆ ಪಿ.ಜಿ. ಕೇಂದ್ರದಲ್ಲಿ ಪ್ರಾರಂಭಿಸುವ ಮೂಲಕ ಆ ಭಾಗದ ಜನತೆಗೆ ಅನುಕೂಲ ಮಾಡಿಕೊಡಬೇಕು. ಆ ರೀತಿ ಮಾಡಿ ದಾವಣಗೆರೆಯಲ್ಲಿ ವಿಶ್ವವಿದ್ಯಾನಿಲಯವನ್ನು ಮಾಡತಕ್ಕ ಸದಾವಕಾಶ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ. ಪಠ್ಯಪುಸ್ತಕ ವಿತರಣೆ ಮಾಡುವುದರಿಂದ ಸಾಮಾನ್ಯ ಜನರಿಗೆ ಅನುಕೂಲವಾಗಿದೆ. ಆದರೆ ಒಂದು ಮತ್ತು 2ನೇ ತರಗತಿ

ಮಕ್ಕಳು ಪಠ್ಯಪುಸ್ತಕ ಕಳೆದುಕೊಂಡರೆ ಮತ್ತೆ ಪುಸ್ತಕ ಸಿಗದೆ ತೊಂದರೆಯಾಗುತ್ತಿದೆ. ಆದ್ದರಿಂದ ಯಾವಾಗಲೂ ಸಹ ಪಠ್ಯಪುಸ್ತಕ ಮಾರಾಟ ಮಾಡತಕ್ಕ ವ್ಯವಸ್ಥೆ ಮಾಡಿ ಸಾಮಾನ್ಯ ಮಕ್ಕಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮದನಗೋಪಾಲ ನಾಯಕ್ (ಸುರಪುರ).—ಸನ್ಮಾನ್ಯ ಅಧ್ಯಕ್ಷರೆ, ೧೯೮೫-೮೬ನೇ ಸಾಲಿಗೆ ಸಂಬಂಧಿಸಿದ ೯, ೧೦, ೧೩, ಮತ್ತು ೧೪ನೇ ಸಂಖ್ಯೆಯ ಬೇಡಿಕೆಗಳನ್ನು ವಿರೋಧಿಸುತ್ತಾ ನನ್ನ ಕೆಲವು ಸಲಹೆಗಳನ್ನು ತಮ್ಮ ಮೂಲಕ ಮಾನ್ಯ ಶಿಕ್ಷಣ ಮಂತ್ರಿಗಳಿಗೆ ಕೊಡಬಯಸುತ್ತೇನೆ. ಇವತ್ತಿನ ದಿವಸ ಪಕ್ಷದ ಪ್ರಚಾರದ ದೃಷ್ಟಿಯಿಂದ ಪಠ್ಯಪುಸ್ತಕಗಳನ್ನು ಪುಕ್ಕಟೆಯಾಗಿ ಕೊಡತಕ್ಕ ಸ್ಕೀಂ ಏನು ಹಾಕಿಕೊಂಡಿದ್ದಾರೆ ಅದರಿಂದ ವಿದ್ಯಾರ್ಥಿಗಳಿಗೆ, ಚಿಕ್ಕಮಕ್ಕಳಿಗೆ ಬಹಳ ತೊಂದರೆಯಾಗಿದೆ ಎಂದು ನನ್ನ ಅನಿಸಿಕೆ. ಏಕೆಂದರೆ ಒಂದನೇ ಕ್ಲಾಸಿನಲ್ಲಿರತಕ್ಕ ವಿದ್ಯಾರ್ಥಿಗಳು ಆ ಕ್ಲಾಸ್ ದಾಟಿ ಹೋಗಬೇಕಾದರೆ ಅವರಿಗೆ ಎರಡು ಮೂರು ಪುಸ್ತಕಗಳು ಬೇಕಾಗುತ್ತದೆ. ಅವರು ಪುಸ್ತಕಗಳನ್ನು ಕಳೆದುಕೊಂಡರೆ ಹೊರಗಡೆ ಸಿಕ್ಕದೇ ಇದ್ದಾಗ ತೊಂದರೆಗೆ ಒಳಗಾಗಬೇಕಾಗಿದೆ. ಈ ಪರಿಸ್ಥಿತಿಯನ್ನು ನಿವಾರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಗುಲ್ಬರ್ಗ ಭಾಗದಲ್ಲಿ ಯಾವುದೇ ತಾಲ್ಲೂಕಿಗೆ ಅಥವಾ ಹಳ್ಳಿಗೆ ಹೋಗಲಿ ಶಾಲಾ ಕಟ್ಟಡದ ತೊಂದರೆ ಹೆಚ್ಚಾಗಿದೆ. ಪುಸ್ತಕಗಳನ್ನು ಉಚಿತವಾಗಿ ಕೊಡತಕ್ಕ ಸ್ಕೀಂ ಬದಲು ಹಳ್ಳಿಯಲ್ಲಿ ಬಿದ್ದಿರತಕ್ಕ ಶಾಲಾ ಕಟ್ಟಡಗಳನ್ನು ಕಟ್ಟಿಸಿದರೆ ಮಕ್ಕಳಿಗೆ ಅನುಕೂಲವಾಗುತ್ತದೆ. ಈ ಶಾಲಾ ಕಟ್ಟಡಗಳನ್ನು ಕಟ್ಟಿಸಿ ಆ ಮೇಲೆ ಮಕ್ಕಳಿಗೆ ಪುಸ್ತಕವನ್ನು ಹಂಚಿದ್ದರೆ ಉತ್ತಮವಾಗುತ್ತಿತ್ತು. ಹಳ್ಳಿಯಲ್ಲಿ ಕೆಲವು ಶಾಲೆಗಳು ಹರಕುಮುರಕು ಕಟ್ಟಡಗಳಲ್ಲಿ ನಡೆಯುತ್ತಿದ್ದು ಅಲ್ಲಿಗೆ ಉಪಾಧ್ಯಾಯರು ಹೋಗದೆ ಇರುವ ಪರಿಸ್ಥಿತಿ ಇದೆ ಮತ್ತು ಅಲ್ಲಿರತಕ್ಕ ಗಣ್ಯ ವ್ಯಕ್ತಿಗಳು ಕೆಲವೊಂದು ಸ್ಕೂಲುಗಳನ್ನು ಗೋದಾಮುಗಳಾಗಿ ಉಪಯೋಗಿಸಿಕೊಂಡಿದ್ದಾರೆ. ಆ ಜಾಗದಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದೆ. ಹಾಗೂ ಅಲ್ಲಿನ ಟೀಚರ್ಸ್‌ಗಳು ಅಲ್ಲಿಗೆ ವಾರಕ್ಕೆ ಒಮ್ಮೆ, ತಿಂಗಳಿಗೆ ಒಮ್ಮೆ ಹೋಗುತ್ತಾರೆ. ಕೆಲವರು ಎ.ಇ.ಒ. ಆಫೀಸಿಗೆ ಬಂದು ಸಂಬಳವನ್ನು ತೆಗೆದುಕೊಂಡು ಹೊರಟುಹೋಗುತ್ತಾರೆ. ಪರಿಸ್ಥಿತಿ ಈ ರೀತಿ ಇದ್ದರೂ ಸಹ ಸರ್ಕಾರ ಯಾವರೀತಿಯ ಕಾರ್ಯಕ್ರಮ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಈ ದಿನ ನಾವು ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಷ್ಟೇ ಅಲ್ಲ, ಹಮ್ಮಿಕೊಂಡಿರತಕ್ಕ ಕೆಲಸಗಳು ಸರಿಯಾಗಿ ಆಗುತ್ತಿವೆಯೋ ಇಲ್ಲವೋ ಎನ್ನುವುದನ್ನು ನೋಡಿಕೊಳ್ಳುವುದು ಸರ್ಕಾರದ ಒಂದು ಕರ್ತವ್ಯವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಕ್ಷೇತ್ರವಾದ ಪ್ರಾಪರ್ ಸುರಪುರದಲ್ಲಿ ಪ್ರೈಮರಿ ಶಾಲೆಗೆ ಕಟ್ಟಡವಿಲ್ಲ. ಕೆಲವೊಂದು ಶಾಲೆಗಳಲ್ಲಿ ಮೇಲ್ಛಾವಣಿ ಇಲ್ಲ. ಈಗಾಗಲೇ ಮಳೆಗಾಲವಾಗಿದ್ದು ಒಂದೊಂದು ಕೊಠಡಿಗಳಲ್ಲಿ ಮೂರು ಮೂರು ತರಗತಿಗಳು ನಡೆಯುತ್ತಾ ಇವೆ. ಕೆಲವೊಂದು ಹಳ್ಳಿಗಳಲ್ಲಿ ೭ನೇ ತರಗತಿಯ ವರೆಗೆ ಶಾಲೆ ಇದ್ದರೂ ಇಬ್ಬರೇ ಟೀಚರ್ಸ್ ಇದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದರೂ ಇದುವರೆವಿಗೂ ಯಾವ ರೀತಿಯ ಕ್ರಮವನ್ನು ಕೈಗೊಂಡಿಲ್ಲ. ನಾವು ಡಿ.ಡಿ.ಯವರನ್ನು ಕೇಳಿದರೆ ಟೀಚರ್ಸ್ ಸಂಖ್ಯೆ ಎಷ್ಟು ಇದೆ ಅದನ್ನು ಭರ್ತಿ ಮಾಡಿದ್ದೇವೆ ಎಂದು ಹೇಳಿದರು. ಆದರೆ ಅಲ್ಲಿಗೆ ಹೋಗಿ ನೋಡಿದರೆ ಯಾವ ರೀತಿ ಭರ್ತಿ ಮಾಡಿದ್ದಾರೋ, ಅವರೆಲ್ಲಾ ಎಲ್ಲಿ ಹೋಗಿದ್ದಾರೋ ಕಾಣಿಸುತ್ತಾ ಇಲ್ಲ. ಇನ್ನು ಮಿಡಲ್ ಸ್ಕೂಲ್‌ನಲ್ಲಿ ಪೀವನ್‌ಗಳನ್ನು ತೆಗೆದುಹಾಕಿದ್ದಾರೆ. ಇವತ್ತು ಒಂದೊಂದು ಹೈಸ್ಕೂಲುಗಳಲ್ಲಿ ಹೆಚ್ಚಿನ ಪೀವನ್‌ಗಳು ಇದ್ದಾರೆ. ಇಂತಹ ತೊಂದರೆಗಳನ್ನೆಲ್ಲಾ ಹೋಗಲಾಡಿಸಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಇನ್ನು ಕೋ-ಎಜುಕೇಷನ್ ಇರತಕ್ಕ ಹೈಸ್ಕೂಲುಗಳಲ್ಲಿ ಹೆಣ್ಣು ಮಕ್ಕಳು ಅನುಭವಿಸುತ್ತಾ ಇರುವ ತೊಂದರೆ ಬಗ್ಗೆ ಹೇಳಬೇಕಾಗಿದೆ. ಅಲ್ಲಿ ಹೈಸ್ಕೂಲುಗಳಲ್ಲಿ ಹೆಣ್ಣುಮಕ್ಕಳು ಹೋಗುವಂತಹ ಶೌಚಗೃಹಗಳ ತೊಂದರೆ ಇದೆ. ಇಂತಹದ್ದನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ತೊಂದರೆ ನಿವಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಯಸ್ಕರ ಶಿಕ್ಷಣ ಮತ್ತು ಅಕ್ಷರ ಸೇನೆಯಲ್ಲಿರತಕ್ಕ ಲೋಪದೋಷಗಳ ಬಗ್ಗೆ ಹೇಳಬೇಕು. ಇವತ್ತು ಈ ಎರಡು ಬಾಬುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಆದರೆ ಖರ್ಚು ಮಾಡತಕ್ಕ ಹಣ ಮತ್ತು ಅವರಿಗೆ ಒದಗಿಸತಕ್ಕ ಸಾಮಗ್ರಿಗಳು ಆ ಹಳ್ಳಿಯ ಜನರಿಗೆ, ಅಲ್ಲಿ ಕಲಿಯತಕ್ಕಂತಹ ಜನರಿಗೆ ಏನಾದರೂ ಉಪಯೋಗ ಆಗುತ್ತಿದೆಯೋ ಇಲ್ಲವೋ ಎಂದು ಯಾರೂ ನೋಡುತ್ತಾ ಇಲ್ಲ. ನಂತರ, ಕೆಲವೊಂದು ಟೀಚರ್ಸ್‌ಗಳನ್ನು ಈ ಬಗ್ಗೆ ನೇಮಕ ಮಾಡತಕ್ಕ ಅಧಿಕಾರಿಗಳು ತಾಲ್ಲೂಕು ಲೆವೆಲ್‌ನಲ್ಲಿ ಏನು ಇದ್ದಾರೆ ಇವರು ನೇಮಕ ಮಾಡತಕ್ಕ ಒಬ್ಬೊಬ್ಬ ಟೀಚರ್ಸ್‌ನಿಂದ ೨೦೦ ರೂಪಾಯಿಗಳನ್ನು ತೆಗೆದುಕೊಂಡು ನೇಮಕ ಮಾಡುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇರಬೇಕಾದರೆ ಯಾವ ಹಳ್ಳಿಯಲ್ಲಿ ಎಷ್ಟು ಜನರಿಗೆ ಇವರು ವಿದ್ಯೆಯನ್ನು ಕಲಿಸಿದ್ದಾರೆ, ಎಷ್ಟು ಜನರಿಗೆ ಅಕ್ಷರ ಜ್ಞಾನವನ್ನು ಒದಗಿಸಿದ್ದಾರೆ ಎಂಬುದನ್ನು ಪರೀಕ್ಷೆ ಮಾಡುವುದಾದರೆ, ಇದು ಸೊನ್ನೆ ಎಂದು ನನಗನ್ನಿಸುತ್ತದೆ.

ಆದುದರಿಂದ ದಯವಿಟ್ಟು ತಾವು ಈ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ, ಈ ಅಧಿಕಾರಿಗಳು ಮಾಡುತ್ತಿರುವ ಅನ್ಯಾಯವನ್ನು, ಭ್ರಷ್ಟತನವನ್ನು ಬಯಲು ಮಾಡಿ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ. ಕೊನೆಯದಾಗಿ ಹೇಳಬೇಕಾದರೆ ಈ ದೇಶದಲ್ಲಿ ಕ್ರೀಡಾಪಟುಗಳ ತೊಂದರೆ ಇದೆ. ಯಾರು ಕ್ರೀಡಾಪಟುಗಳನ್ನು ಹುಡುಕಿಕೊಡುತ್ತಾರೋ ಅಂತಹವರಿಗೆ ೨೫ ಸಾವಿರ ರೂ.ಗಳ ಬಹುಮಾನ ಕೊಡಲಾಗುವುದು ಎಂಬ ವಿಷಯವನ್ನು ನಾನು ಹೋದ ತಿಂಗಳು ಪತ್ರಿಕೆಯಲ್ಲಿ ಓದಿದೆ. ಇದಕ್ಕೆ ಕಾರಣ ಏನು ? ಇವತ್ತು ಪ್ರಾಥಮಿಕ ಶಾಲೆಗಳ ಹಂತದಲ್ಲಿ ಆಟಕ್ಕೆ ಪ್ರೋತ್ಸಾಹ ಇಲ್ಲ. ಇವತ್ತು ಈ ಬಗ್ಗೆ ಗಮನ ಹರಿಸಬೇಕಾದರೆ ಪ್ರತಿಯೊಂದು ಶಾಲೆಗೆ ಆಟದ ಮೈದಾನ ಇರುವುದು ಅಗತ್ಯ. ಇವತ್ತು ಆ ಆಟದ ಮೈದಾನಗಳು ಕಾಣುತ್ತಾ ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳುವುದು ಏನೆಂದರೆ, ಪ್ರತಿಯೊಂದು ಶಾಲೆಗಳಿಗೆ ಆಟದ ಶಾಲೆಗಳನ್ನು ಒದಗಿಸಿಕೊಡಬೇಕು. ಶಾಲೆಗಳಲ್ಲಿ ಫಿಸಿಕಲ್ ಎಜ್ಯುಕೇಷನ್‌ನ್ನು ಕಂಪಲ್ಸರಿ ಮಾಡಬೇಕೆಂದು ಅಭಿಪ್ರಾಯ ಇದೆ. ಇದನ್ನು ತಾವು ಪರಿಗಣಿಸಬೇಕೆಂದು ಹೇಳುತ್ತೇನೆ. ಇನ್ನು ಕೊನೆಯದಾಗಿ ಮಾನ್ಯ ಶಿಕ್ಷಣ ಮಂತ್ರಿಗಳು ತಮ್ಮ ಒಂದು ಮದುವೆಯ ಊಟವನ್ನು ಹಾಕಿಸಿ ಇನ್ನು ನಾಲ್ಕಾರು ವರ್ಷಗಳಲ್ಲಿ ಮಕ್ಕಳಾದ ಪಕ್ಷದಲ್ಲಿ ಮಕ್ಕಳು ಪಡುತ್ತಿರುವ ಕಷ್ಟ ಏನು ಎಂಬುದು ಅವರಿಗೆ ಗೊತ್ತಾಗುತ್ತದೆ, ಆದ್ದರಿಂದ ಅವರು ಬೇಗ ಮದುವೆ ಊಟ ಹಾಕಿಸಲಿ ಎಂದು ಮತ್ತೊಮ್ಮೆ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನಂಜಯ್ಯನಮಠ್ ಶಂಕರಯ್ಯ ಗಡಿಗೆಯ್ಯ (ಗುಳೇದ್‌ಗುಡ್).—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಪ್ರಥಮವಾಗಿ ವಂದಿಸುತ್ತೇನೆ. ಶಿಕ್ಷಣ ಮಸೂದೆ ಮೇಲೆ ಮಾಡಿರತಕ್ಕ ಆಯವ್ಯಯ ಅಗತ್ಯದ ಬಗ್ಗೆ ನನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ, ಸಮಗ್ರವಾಗಿ ದೇಶದ ಅಭಿವೃದ್ಧಿ ಸಲುವಾಗಿ, ನಾಡಿನ ಅಭಿವೃದ್ಧಿಯ ಸಲುವಾಗಿ ಪ್ರತಿಯೊಂದು ಸಮಾಜದ ಏಳಿಗೆಗಾಗಿ, ಅಭಿವೃದ್ಧಿಗಾಗಿ ಶಿಕ್ಷಣ ಅವಶ್ಯಕ. ಶಿಕ್ಷಣ ವ್ಯಾಪಕವಾಗಿ ಬೆಳೆಯಬೇಕು ಎನ್ನುವ ಘೋಷಣೆಯನ್ನು ನಾವು ಮೊದಲಿನಿಂದಲೂ ಕೇಳುತ್ತಿದ್ದೇವೆ. ಆದರೆ ಯಾವುದೇ ಒಂದು ಇಲಾಖೆಯಾಗಲೀ, ಯಾವುದೇ ಒಂದು ರಾಜ್ಯವಾಗಲೀ ಅಭಿವೃದ್ಧಿ ಹೊಂದಬೇಕಾದರೆ ಅದು ಅಭಿವೃದ್ಧಿ ಹೊಂದಬೇಕು ಎನ್ನುವುದನ್ನು ಹೇಳುವುದಕ್ಕಿಂತಲೂ, ಅದು ಅಭಿವೃದ್ಧಿ ಹೊಂದಬೇಕಾದರೆ ಯಾವ ವ್ಯವಸ್ಥೆ ಇದೆ, ಯಾವ ವ್ಯವಸ್ಥೆ ಅಗತ್ಯ ಇದೆ ಎಂಬುದನ್ನು ನಾವು ಮುಂಚೆ ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ನಾನು ಸರ್ಕಾರದ ಗಮನ ಸೆಳೆಯುವ ಇಚ್ಛೆ ಇದೆಯೇ ಹೊರತು ಟೀಕೆ ಮಾಡಬೇಕೆಂದಾಗಲೀ ಅಥವಾ ಏನಾದರೂ ಮಾತನಾಡಬೇಕೆಂದಾಗಲೀ ಇಚ್ಛೆ ನನಗೆ ಇಲ್ಲ. ದೇಶ ಅಭಿವೃದ್ಧಿ ಹೊಂದಬೇಕು, ಶಿಕ್ಷಣದ ಮುಖಾಂತರ ಏಳಿಗೆ ಆಗಬೇಕು ಎನ್ನುವುದಕ್ಕಿಂತಾ ಮುಂಚೆ ಆ ವ್ಯವಸ್ಥೆ ಯಾವ ರೀತಿ ಇದೆ ಎಂಬುದನ್ನು ನೋಡಿಕೊಂಡು, ಅದು ಇದು ಎಂದು ಹೇಳುವುದಕ್ಕಿಂತಲೂ ಆ ವ್ಯವಸ್ಥೆಯನ್ನು ಯಾವ ರೀತಿ ಸುಧಾರಿಸಿದರೆ ಅದು ಅಭಿವೃದ್ಧಿಯಾಗುತ್ತದೆ ಎಂಬುದನ್ನು ಗಮನಕ್ಕೆ ತರಬೇಕಾಗುತ್ತದೆ. ಈಪೊತ್ತು ನಮ್ಮಲ್ಲಿ ೩೭ ಸಾವಿರ ಪ್ರಾಥಮಿಕ ಶಾಲೆಗಳು ಇವೆ. ಹಾಗೂ ಅಲ್ಲಿ ಕೋಣೆಗಳ ಕೊರತೆ ಎಷ್ಟು ಇದೆ, ಶಿಕ್ಷಕರ ಕೊರತೆ ಎಷ್ಟು ಇದೆ ಎಂಬುದನ್ನೆಲ್ಲಾ ನೋಡಿ ಸರಿಪಡಿಸಿದ್ದ ಶಿಕ್ಷಣ ಸಮರ್ಪಕವಾಗಿ ನಡೆಯುತ್ತದೆಂದು ನನಗನ್ನಿಸುತ್ತದೆ. ಇವತ್ತು ೩-೪ ಸಾವಿರ ಪ್ರಾಥಮಿಕ ಶಾಲೆಗಳಹುದ್ದೆಗಳು ಖಾಲಿ ಇವೆ. ಇವನ್ನು ಇವತ್ತು ತುಂಬದೇ ತಾವು ಈಪೊತ್ತು ಯಾವ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡುವುದಕ್ಕೆ ಸಾಧ್ಯ ಇದೆ ಎಂಬುದನ್ನು ಗಮನಿಸಬೇಕು. ಸುಮಾರು ೨೩ ಸಾವಿರ ಶಾಲೆಗಳಿಗೆ ಕಟ್ಟಡ ಇಲ್ಲ. ಅವು ಮಸೀದಿಯಲ್ಲೋ, ಗುಡಿಯಲ್ಲೋ ನಡೆಯುತ್ತಿವೆ. ಶಾಲಾ ಕಟ್ಟಡಗಳನ್ನು ತಾವು ಒದಗಿಸಿಕೊಡದಿದ್ದರೆ ಅಲ್ಲಿ ತರಗತಿಗಳು ಯಾವ ರೀತಿ ನಡೆಯಬೇಕು? ಇಡೀ ರಾಜ್ಯದಲ್ಲಿ ೧೨೦೦ ಪ್ರೌಢ ಶಾಲೆಗಳಿಗೆ ಇವತ್ತು ಸ್ವಂತ ಕಟ್ಟಡಗಳಿಲ್ಲವೆಂದು ಕೇಳಿದ್ದೇನೆ. ೧೪ ಸಾವಿರ ಪ್ರೌಢಶಾಲಾ ಶಿಕ್ಷಕರನ್ನು ತುಂಬಬೇಕಾಗಿದೆ. ೧೧೮೦ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರುಗಳ ನೇಮಕ ಆಗಬೇಕಾಗಿದೆ. ಅಂದರೆ ಮುಖ್ಯೋಪಾಧ್ಯಾಯರುಗಳೇ ಇಲ್ಲದಿರತಕ್ಕ ಪರಿಸ್ಥಿತಿ ನಮ್ಮ ಶಾಲೆಗಳಿಗೆ ಬಂದಿದೆ. ಇಂಥ ಶಾಲೆಗಳಿಂದ ನಾವು ಯಾವ ಮಟ್ಟದ ವಿದ್ಯಾಭ್ಯಾಸವನ್ನು ನಿರೀಕ್ಷೆ ಮಾಡಬಹುದು? ಸ್ವಾಮಿ, ಇವತ್ತು ಮಾನ್ಯ ಶಿಕ್ಷಣ ಸಚಿವರುಗಳಾದ ಶ್ರೀಮಾನ್ ರಘುಪತಿ ಹಾಗೂ ಮಾನ್ಯ ಗೋವಿಂದೇಗೌಡರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ನಮ್ಮಲ್ಲಿ ಶಿಕ್ಷಣ ಉತ್ತಮರೀತಿಯಲ್ಲಿ ಬೆಳೆಯಬೇಕಾದರೆ ಕಲಿಸುವವರೂ ಇರಬೇಕು, ಮತ್ತು ಮಕ್ಕಳು ಕಲಿತುಕೊಳ್ಳುವುದಕ್ಕೆ ಜಾಗವೂ ಇರಬೇಕು. ನಮ್ಮ ಕ್ಷೇತ್ರದಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಕೆಲವು ತಂದೆತಾಯಿಗಳು ಬಂದು

ಇಲ್ಲಿ ನಮ್ಮ ಮಕ್ಕಳಿಗೆ ಶಿಕ್ಷಕರಿಲ್ಲದಿರುವುದರಿಂದ ಮಕ್ಕಳ ಭವಿಷ್ಯ ಹಾಳಾಗುತ್ತಿದೆ, ಪಠ್ಯಪುಸ್ತಕಗಳೂ ಕೂಡ ಸರಿಯಾಗಿ ಸಿಕ್ಕುತ್ತಿಲ್ಲವೆಂದು ಹೇಳುತ್ತಿದ್ದಾರೆ. ಸ್ವಾಮಿ, ತಮ್ಮ ಪಠ್ಯಪುಸ್ತಕಗಳ ಹಂಚಿಕೆ ಕಾರ್ಯಕ್ರಮ ಬಹಳ ಅಸಮರ್ಪಕವಾಗಿದೆ. ಪಠ್ಯಪುಸ್ತಕಗಳ ಹಂಚಿಕೆ ಕಾರ್ಯಕ್ರಮವನ್ನು ನಾನು ಸ್ವಾಗತಿಸುತ್ತೇನೆ. ಇದು ಬಹಳ ಒಳ್ಳೆಯ ಯೋಜನೆ. ಆದರೆ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಮೊದಲು ನಾವು ಈ ಕೆಲಸವನ್ನು ಸಮರ್ಥ ರೀತಿಯಿಂದ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕಾಗಿತ್ತು. ಆಧರೆ ಅದನ್ನು ಮಾಡಲಿಲ್ಲ. ಒಟ್ಟು ಎಷ್ಟು ವಿದ್ಯಾರ್ಥಿಗಳಿದ್ದಾರೆ, ಅವರಿಗೆ ಎಷ್ಟು ಪುಸ್ತಕಗಳು ಬೇಕಾಗುತ್ತದೆ ಎಂಬುದನ್ನು ಯೋಚಿಸಿ ಅಷ್ಟನ್ನು ಮೊದಲು ಮುದ್ರಣ ಮಾಡಿಸಿ ಅನಂತರ ಅವುಗಳನ್ನು ಹಂಚುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೆ ಅದು ಸಮರ್ಪಕವಾಗಿ ಕಾರ್ಯಗತವಾಗುತ್ತಿತ್ತು. ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರೂ ಕೂಡ ಬರುತ್ತಿತ್ತು. ಕೇವಲ ಜನಪ್ರಿಯತೆ ಗಳಿಸುವ ಆತುರದಲ್ಲಿ ನೀವು ಇದನ್ನು ಮಾಡಿದ್ದರಿಂದ ಈ ರೀತಿ ಅವ್ಯವಸ್ಥೆಯಾಗಿದೆ. ಸುಮಾರು ೧೦೦ ಮಕ್ಕಳು ಇರತಕ್ಕ ಶಾಲೆಗೆ ನೀವು ೨೫ ಸೆಟ್ಟು ಪುಸ್ತಕಗಳನ್ನು ಕೊಟ್ಟರೆ ಅವರು ಯಾವ ರೀತಿ ಹಂಚಬೇಕು? ಮತ್ತು ಯಾರಿಗೆ ಹಂಚಬೇಕು? ಅವರು ಏನು ಮಾಡಿದರು ಎಂದರೆ ಮೊದಲನೇ ಬೆಂಚಿನಲ್ಲಿ ಕುಳಿತವರಲ್ಲಿ ಒಬ್ಬಿಬ್ಬರಿಗೆ, ಮಧ್ಯದ ಬೆಂಚಿನಲ್ಲಿ ಕುಳಿತವರಲ್ಲಿ ಒಬ್ಬಿಬ್ಬರಿಗೆ ಮತ್ತು ಕೊನೆಯ ಬೆಂಚಿನಲ್ಲಿ ಕುಳಿತಿದ್ದವರ ಪೈಕಿ ಒಬ್ಬಿಬ್ಬರಿಗೆ ಕೊಟ್ಟರು. ಇನ್ನುಳಿದವರಿಗೆ ಪುಸ್ತಕ ಸಿಕ್ಕಲಿಲ್ಲ. ಆಗ ಯಾರೋ ಒಬ್ಬರು ಬಂದು ನಮ್ಮ ಹುಡುಗನಿಗೆ ಏತಕ್ಕೆ ಪುಸ್ತಕ ಕೊಡಲಿಲ್ಲವೆಂದು ಉಪಾಧ್ಯಾಯರನ್ನು ಹೊಡೆದಿದ್ದಾರೆ. ಇವತ್ತು ಗಣಿತದ ಪುಸ್ತಕವಾಗಲಿ, ಇಂಗ್ಲಿಷ್ ಪುಸ್ತಕವಾಗಲಿ, ಸಮಾಜ ಪರಿಚಯ ಪುಸ್ತಕವಾಗಲಿ. ಸಿಕ್ಕದೆ ಗಲಾಟೆ ನಡೆಯುತ್ತಿದೆ. ಹೋಗಲಿ ಇವುಗಳನ್ನು ಪೇಟೆಯಲ್ಲಾದರೂ ತರಲಿ ಎಂದರೆ ಒಂದು ಪುಸ್ತಕದ ಮೂರರಷ್ಟು ಬೆಲೆಯನ್ನು ಜಾಸ್ತಿ ಕೇಳುತ್ತಿದ್ದಾರೆ. ಯಾವುದೇ ಯೋಜನೆಯನ್ನಾಗಲಿ ಜನಪ್ರಿಯತೆ ದೃಷ್ಟಿಯಿಂದ ನಡೆಸುವುದಕ್ಕೆ ಬದಲಾಗಿ ಜನಹಿತದೃಷ್ಟಿಯಿಂದ ನಡೆಸಬೇಕು. ಇದನ್ನು ಮಾಡಲು ನೀವು ಇನ್ನೂ ಸ್ವಲ್ಪ ಕಾಲಾವಕಾಶವನ್ನು ತೆಗೆದುಕೊಂಡಿದ್ದರೆ ಬಹಳ ಸಮರ್ಪಕವಾದ ರೀತಿಯಲ್ಲಿ ಈ ಯೋಜನೆಯನ್ನು ಮಾಡಬಹುದಿತ್ತು. ನಿಮ್ಮ ಯೋಜನೆ ಯಾವರೀತಿ ಇದೆ ಎಂದರೆ ಗರ್ಭ ಧರಿಸಿದ ಕೂಡಲೇ ಮಗುವನ್ನು ಹಡೆಯಬೇಕು ಎನ್ನುವಂತೆ. ಇದು ಸಾಧ್ಯವಾಗುವುದಿಲ್ಲ. ಅದು ಹೊಟ್ಟೆಯಲ್ಲಿ ೯ ತಿಂಗಳು ಬೆಳೆಯಬೇಕು, ಅನಂತರ ಹೆರಿಗೆಯಾದರೆ ಮಗು ಚೆನ್ನಾಗಿ ಬೆಳೆದಿರುತ್ತದೆ. ಆದರೆ ಗರ್ಭ ಧರಿಸಿದ ಕೂಡಲೇ ಹೆರಿಗೆ ಮಾಡಿಸುವುದಕ್ಕೆ ಹೋದರೆ ಅದು ಹೆರಿಗೆ ಆಗುವುದಿಲ್ಲ. ಗರ್ಭಪಾತ ಆಗುತ್ತದೆ. ಆಪರೇಷನ್ ಮಾಡಿ ಮಗುವನ್ನು ತೆಗೆಯಬೇಕಾಗುತ್ತದೆ. ಅಲ್ಲಿ ಪೂರ್ಣವಾಗಿ ಮಗು ಬೆಳೆಯದಿರುವುದರಿಂದ ಅದು ಸತ್ತು ಹೋಗುತ್ತದೆ. ಈ ರೀತಿ ಆಗಬಾರದು. ಇವತ್ತು ಖಾಸಗೀ ವಲಯದಲ್ಲಿರತಕ್ಕ ಶಾಲೆಗಳ ಮೇಲೆ ಗದಾಪ್ರಹಾರ ಮಾಡಿದ್ದೀರಿ.

ಶ್ರೀ ಎಂ. ರಘುಪತಿ.—ತಾವು ಹೊಸದಾಗಿ ಸದಸ್ಯರಾಗಿ ಬಂದಿದ್ದೀರಿ. ಎಲ್ಲರೂ ಹೇಳಿದ ವಿಷಯಗಳನ್ನೇ ಹೇಳುತ್ತಿದ್ದೀರಿ. ಅದು ಬಿಟ್ಟು ಹೊಸದಾಗಿ ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಎಸ್.ಜಿ. ನಂಜಯ್ಯನಮಠ ಶಂಕರಯ್ಯ ಗಡಿಗೆಯ್ಯ.—ಮಾನ್ಯ ಅಧ್ಯಕ್ಷರೆ, ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಕೆಲಸಗಳಾಗಬೇಕಾದರೆ, ಉನ್ನತ ಹುದ್ದೆಗಳಿಗೆ ಮತ್ತು ಬಹಳ ಪ್ರಮುಖ ಹುದ್ದೆಗಳಿಗೆ ಐ.ಎ.ಎಸ್. ಅಥವಾ ಐ.ಪಿ.ಎಸ್. ಅಧಿಕಾರಿಗಳನ್ನು ತಂದು ಕೂಡಿಸುವುದಕ್ಕೆ ಬದಲಾಗಿ ಶಿಕ್ಷಣ ಕ್ಷೇತ್ರದಲ್ಲಿ ಚೆನ್ನಾಗಿ ಅನುಭವ ಇರತಕ್ಕ, ಮತ್ತು ಆಸಕ್ತಿ ಇರತಕ್ಕ ಅಧಿಕಾರಿಗಳನ್ನು ಕೂಡಿಸಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಶಾಲಾ ಕಾಲೇಜುಗಳಲ್ಲಿ ಲೈಂಗಿಕ ಶಿಕ್ಷಣವನ್ನು ಅಗತ್ಯವಾಗಿ ಜಾರಿಗೆ ತರಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಹರೆಯಕ್ಕೆ ಕಾಲಿಡತಕ್ಕ ಮತ್ತು ಕಾಲಿಟ್ಟಿರತಕ್ಕ ಯುವಕ ಯುವತಿಯರಿಗೆ ಇದು ಅರ್ಥವಾಗಿ ಅವರ ಮಾನಸ್ಸಿನ ದೌರ್ಬಲ್ಯ ಹೋಗುತ್ತದೆ. ಆ ರೀತಿ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಇವತ್ತು ತಾವು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ಮೊದಲು ಅಭಿನಂದಿಸಿ ನನ್ನ ಪ್ರಥಮ ಭಾಷಣವನ್ನು ಆರಂಭಿಸುತ್ತಿದ್ದೇನೆ.

ವಿದ್ಯಾ ಖಾತೆಗೋಸ್ಕರ ಬೇಡಿಕೆಗಳನ್ನು ೧೯೮೫–೮೬ನೇ ಸಾಲಿಗೆ ಸಂಬಂಧಪಟ್ಟಂತೆ ಮಾನ್ಯ ಶಿಕ್ಷಣ ಸಚಿವರು ಸಭೆಯ ಮುಂದೆ ಮಂಡಿಸಿರುವುದರಿಂದ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಧಾರವಾಡ ವಿಭಾಗದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಪ್ರೈವೇಟ್ ಕಾಲೇಜಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ೧೯೭೦ನೇ ಇಸವಿಯಿಂದ ಇಲ್ಲಿಯವರೆಗೂ ಅಲ್ಲಿ ಲೆಕ್ಕಪತ್ರಗಳ ಆಡಿಟ್ ಆಗಿಲ್ಲ. ಈ ಕಾರಣಕ್ಕಾಗಿ ಕೂಡಲೇ ಹೆಚ್ಚು ಜನ ಆಡಿಟರ್‌ನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಗ್ರ್ಯಾಂಟ್ ಇನ್ ಏಡ್‌ನಲ್ಲಿ ೧೦ ಪರ್ಸೆಂಟ್ ಬಿಲ್ಡಿಂಗ್‌ಗೋಸ್ಕರ ಖರ್ಚು ಮಾಡಬೇಕೆಂದು ನಿರ್ಣಯ ಇದೆ. ಆದರೆ ಅವರು ೧೦ ಪರ್ಸೆಂಟ್ ಹಣದಲ್ಲಿ ಉಳಿಸಿಕೊಂಡು ಸ್ವಂತ ಕಟ್ಟಡ ಕಟ್ಟಿಸುವರೆ ಈ ರೀತಿ ಹಣವನ್ನು ಖರ್ಚು ಮಾಡಬಾರದು, ಇದನ್ನು ಜಾಯಿಂಟ್ ಅಕೌಂಟ್‌ನಲ್ಲಿ ಇಡಬೇಕು. ಈಗ ಖರ್ಚು ಮಾಡಿರತಕ್ಕ ಹಣವನ್ನು ನೀವು ತುಂಬಬೇಕೆಂದು ಧಾರವಾಡ ವಿಭಾಗದಲ್ಲಿ ಆರ್ಡರ್ ಮಾಡಲಿಕ್ಕೆ ಹತ್ತಿದ್ದಾರೆ. ಆದರೆ ಬೆಂಗಳೂರು ವಿಭಾಗದಲ್ಲಿ ಇನ್ನೂ ಈ ರೀತಿ ಆರ್ಡರ್ ಮಾಡಲಿಕ್ಕೆ ಹತ್ತಿಲ್ಲ. ಖರ್ಚು ಮಾಡಿರತಕ್ಕ ಹಣವನ್ನು ತುಂಬುವಂತೆ ಧಾರವಾಡ ವಿಭಾಗದಲ್ಲಿ ಆಡಿಟರ್‌ಗಳು ಹೇಳುತ್ತಿರುವುದರಿಂದ ಖಾಸಗೀ ಕಾಲೇಜುಗಳವರಿಗೆ ಬಹಳ ತ್ರಾಸ ಆಗಲಿಕ್ಕೆ ಹತ್ತಿದೆ.

ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ಷಿಯಲ್ ಸ್ಕೂಲ್ ಎಂದು ಇದೆ. ಇಲ್ಲಿ ಬಿಜಾಪುರ ಸೈನಿಕ ಸ್ಕೂಲ್ ರೀತಿಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕೆಂದೂ ಮತ್ತು ಅದೇ ರೀತಿಯ ಸೌಲಭ್ಯಗಳನ್ನೂ ಒದಗಿಸಬೇಕೆಂದೂ ಇದೆ. ಸೈನಿಕ ಶಾಲೆಯಲ್ಲಿರತಕ್ಕ ಪ್ರತಿಯೊಬ್ಬ ಬಾಲಕನಿಗೂ ಪ್ರತಿವರ್ಷ ೬–೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗೆ ಏತಕ್ಕೆ ನೀವು ಅನ್ಯಾಯ ಮಾಡುತ್ತಿದ್ದೀರಿ. ಸೈನಿಕ ಶಾಲೆಯಲ್ಲಿ ಒಬ್ಬೊಬ್ಬ ಬಾಲಕನಿಗೆ ೪–೫ ಸಾವಿರ ಖರ್ಚು ಮಾಡಿದರೆ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯಲ್ಲಿ ಒಬ್ಬೊಬ್ಬ ಬಾಲಕಿಗೆ ಕೇವಲ ೪–೫ ನೂರು ರೂ. ಗಳನ್ನು ಕೊಡುತ್ತಿದ್ದೀರಿ. ಈ ಶಾಲೆಯಲ್ಲಿ ಹೆಣ್ಣು ಮಕ್ಕಳು ನೂರಕ್ಕೆ ನೂರು ತೇರ್ಗಡೆ ಆಗಿವೆ. ಪಿ.ಯು.ಸಿ. ೨ನೇ ವರ್ಷದಲ್ಲಿ ನೂರಕ್ಕೆ ೯೦ರಷ್ಟು ತೇರ್ಗಡೆಯಾಗಿದ್ದಾರೆ. ಇಂಥ ಉತ್ತಮ ಮಾದರಿಯ ಶಾಲೆಗೂ ಸರಿಯಾದ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ಬಿಜಾಪುರ ಸೈನಿಕ ಶಾಲೆಯ ಮಕ್ಕಳಿಗೆ ಕೊಡತಕ್ಕ ಶಿಕ್ಷಣ ಮತ್ತಿತರ ಸೌಲಭ್ಯಗಳನ್ನೆಲ್ಲ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಮಕ್ಕಳಿಗೂ ಕೊಡಬೇಕೆಂದು ಸರ್ಕಾರಿ ಆದೇಶ ಇದ್ದರೂ ಕೂಡ ಇಂಥ ಘೋರ ಅನ್ಯಾಯವನ್ನು ನಮ್ಮ ಶಿಕ್ಷಣ ಇಲಾಖೆಯವರು ಮಾಡುತ್ತಿದ್ದಾರೆ. ಇದು ಸರಿಯಲ್ಲ. ಈ ಶಾಲೆಯ ಹೆಣ್ಣು ಮಕ್ಕಳಿಗೂ ಕೂಡ ಬಿಜಾಪುರ ಸೈನಿಕ ಶಾಲೆಯ ಮಕ್ಕಳಿಗೆ ಕೊಡುವಂತೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಒದಗಿಸಿಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಸನ್ಮಾನ್ಯ ಸಭಾಧ್ಯಕ್ಷರೇ ನಿನ್ನೆ ಮತ್ತು ಈವತ್ತು ಈ ಬಗ್ಗೆ ಎರಡು ದಿವಸಗಳ ಕಾಲ ಸುದೀರ್ಘವಾದ ಚರ್ಚೆ ನಡೆದಿದೆ. ಈ ಚರ್ಚೆಯಲ್ಲಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಪ್ರಾರಂಭ ಮಾಡಿ ಶ್ರೀಮಾನ್ ಕೌಜಲಗಿಯವರು ಕೊನೆಯ ಭಾಷಣ ಮಾಡುವವರೆಗೂ ನಾನು ಕೂಲಂಕೂಷವಾಗಿ ಕೇಳಿದ್ದೇನೆ. ಮಾನ್ಯ ಸದಸ್ಯರುಗಳು ಮಾತನಾಡುವಾಗ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಎಲ್ಲ ವಿಷಯಗಳಿಗೆ ನಾನು ಉತ್ತರವನ್ನು ಹೇಳುವುದಕ್ಕೆ ಅವಶ್ಯ ಪ್ರಯತ್ನ ಮಾಡುತ್ತೇನೆ. ಮುಖ್ಯವಾಗಿ ಈ ದೇಶದ ಭದ್ರತೆ ಮತ್ತು ಪ್ರಗತಿಗೆ ಶಿಕ್ಷಣ ಬಹಳ ಪ್ರಾಮುಖ್ಯವಾದುದಾಗಿರುತ್ತದೆ ಶಾಲೆಗಳಲ್ಲಿಯಾಗಲಿ, ಕಾಲೇಜುಗಳಲ್ಲಿಯಾಗಲಿ ಶಿಕ್ಷಣದ ಗುಣಮಟ್ಟ ಯಾವ ಮಟ್ಟದಲ್ಲಿದೆ ಎಂದರೆ ಸಮಾಜ ಇವತ್ತು ಇದರಿಂದ ಏನು ನಿರೀಕ್ಷಣೆ ಮಾಡುತ್ತಿದೆಯೋ ಆ ಒಂದು ನಿರೀಕ್ಷಣೆಯ ಗುಣಮಟ್ಟವನ್ನು ಕಾಪಾಡಿಕೊಂಡು ಬಂದಿಲ್ಲ ಎಂದು ಹೇಳಿದ್ದಾರೆ. ನಮ್ಮ ದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗೆ ಹೊಂದಿಕೆಯಾಗುವ ಗುಣಮಟ್ಟವನ್ನು ಇಂದಿನ ಶಿಕ್ಷಣ ಕಾಪಾಡಿಕೊಂಡು ಬಂದಿರುತ್ತದೆಯೋ ಎಂದು ನೋಡಿದಾಗ ಭಾರತಕ್ಕೆ ಸ್ವಾತಂತ್ರ್ಯ ಬಂದು ೩೭ ವರ್ಷವಾದರೂ ಕೂಡ ಈ ದಿಸೆಯಲ್ಲಿ ಹೆಚ್ಚಿನ ಪ್ರಗತಿಯನ್ನು ನಾವು ಸಾಧನೆ ಮಾಡಿಲ್ಲ ಎಂದು ಹೇಳಬೇಕಾಗಿದೆ. ಸಮಾಜವಾದ ಸಮಾಜದಲ್ಲಿ ನಂಬಿಕೆ ಇರುವ ಪ್ರತಿಯೊಬ್ಬರೂ ಈ ದೇಶದಲ್ಲಿ ಸಮಾಜವಾದವನ್ನು ಜಾರಿಗೆ ತರಲಿಕ್ಕೆ ಈ ವಿದ್ಯೆಯನ್ನೇ ಮುಂದುವರಿಸಿಕೊಂಡು ಹೋದರೆ ನಮ್ಮ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ನಾವು

ಯೋಚನೆ ಮಾಡಬೇಕಾಗುತ್ತದೆ. ಇಂದಿನ ವಿದ್ಯಾಭ್ಯಾಸವನ್ನು ಕುರಿತು ಈ ಸಂದರ್ಭದಲ್ಲಿ ಹೇಳಬೇಕಾದರೆ We cannot consider education is isolation and Vaccum. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ We have to consider the aspects of *socio economic* and political changes in the country ಈ ದಿಸೆಯಲ್ಲಿ ನಾನು ವಿದ್ಯಾಕ್ಷೇತ್ರದಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡಿದ್ದೇವೆ ಎಂದು ನೋಡಿದಾಗ ನನಗೆ ಅಷ್ಟೊಂದು ಆಶಾದಾಯಕವಾಗಿಲ್ಲವೆಂದು ಹೇಳಬೇಕಾಗುತ್ತದೆ. ಈವತ್ತು ನಮ್ಮ ವಿದ್ಯಾ ವಿಧಾನ ಏನು ಇದೆ ಇದು ಬಹಳ ಮಟ್ಟಿಗೆ ಆದರ ಗುಣಮಟ್ಟ ಕಡಿಮೆಯಾಗಿದೆಯೇ ಹೊರತು ನಿಜ ಜೀವನಕ್ಕೆ ಹೊಂದಿಕೆಯಾಗಿರುವಂತೆ ಕಾಣುವುದಿಲ್ಲ.

ಮಾನ್ಯ ಸದಸ್ಯರು ಇನ್ನೂ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಅದರಲ್ಲಿ ಪ್ರೌಢಶಾಲೆಗಳ ಬಗ್ಗೆ ಹೇಳುವುದಾದರೆ ಶ್ರೀ ಮಾನ್ ಖರ್ಗೆಯವರು ಕ್ವಾಲಿಟಿ ಆಫ್ ಎಜ್ಯುಕೇಷನ್ ಗಿಂತ ಕ್ವಾಂಟಿಟಿ ಆಫ್ ಎಜ್ಯುಕೇಷನ್ ಜಾಸ್ತಿಯಾಗುತ್ತಿದೆ ಎಂದು ಹೇಳಿದರು. ನಿಜವಾಗಿಯೂ ಈ ಮಾತನ್ನು ಅಲ್ಲಗಳೆಯುವುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿದಾಗ ನಾವು ಕ್ವಾಲಿಟಿ ಆಫ್ ಎಜ್ಯುಕೇಷನ್ ಕೊಡುವುದಕ್ಕೆ ಎಷ್ಟೇ ಪ್ರಾಮಾಣಿಕವಾದ ಪ್ರಯತ್ನ ಮಾಡಿದರೂ ಸಂಪೂರ್ಣವಾಗಿ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ಸರ್ಕಾರಿ ಪ್ರೌಢಶಾಲೆಗಳು ಕರ್ನಾಟಕ ರಾಜ್ಯದಲ್ಲಿ ೧೪೨೬ ಶಾಲೆಗಳಿವೆ. ಅನುದಾನ ಪಡೆಯುತ್ತಿರತಕ್ಕಂಥ ಶಾಲೆಗಳು ೧,೮೩೪ ಇವೆ. ಅನುದಾನ ಪಡೆಯದೆ ಇರುವ ಶಾಲೆಗಳು ೬೭೦ ಇದೆ. ಒಟ್ಟು ೩,೯೩೦ ಶಾಲೆಗಳಿರುತ್ತವೆ. ಈ ಶಾಲೆಗಳ ಪೈಕಿ ೧೯೭೦–೭೧ರಲ್ಲಿ ಸರ್ಕಾರದವರು ೩೪ ಶಾಲೆಗಳನ್ನು ಮಂಜೂರು ಮಾಡಿರುತ್ತಾರೆ. ೧೯೭೧–೭೨ರಲ್ಲಿ ೮೯ ಶಾಲೆಗಳನ್ನು ಮಂಜೂರು ಮಾಡಿದ್ದಾರೆ. ೧೯೭೨–೭೩ರಲ್ಲಿ ೧೨೬ ಶಾಲೆಗಳನ್ನು ಮಂಜೂರು ಮಾಡಿದ್ದಾರೆ. ಅಲ್ಲದೆ ೧೯೭೩–೭೪ರಲ್ಲಿ ೧೫೭ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ೧೯೭೪–೭೫ರಲ್ಲಿ ೨೬೨ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಈ ವರ್ಷದಲ್ಲಿ ಸರ್ಕಾರದವರು ಶಾಲೆಗಳನ್ನು ಪ್ರಾರಂಭ ಮಾಡದೆ ಇರುವುದಕ್ಕೆ ಕಾರಣವೇನೆಂದು ತಾವು ಕೇಳಿರುತ್ತೀರಿ. ಕಟ್ಟಡಗಳು ಇಲ್ಲದೆ ಇರುವ ಶಾಲೆಗಳು, ಉಪಾಧ್ಯಾಯರು ಇಲ್ಲದೆ ಇರುವ ಶಾಲೆಗಳು, ಮತ್ತೆ ಪೀಠೋಪಕರಣಗಳು ಇಲ್ಲದೆ ಇರತಕ್ಕಂಥ ಶಾಲೆಗಳು. ಗ್ರಂಥಾಲಯಗಳು ಇಲ್ಲದೆ ಇರತಕ್ಕಂಥ ಶಾಲೆಗಳು ಈ ಎಲ್ಲ ವಿಷಯಗಳನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಕಟ್ಟಡಗಳನ್ನು ಈಗ ಕಟ್ಟಬೇಕಾದರೆ ಅದರ ಅಂದಾಜು ಪಟ್ಟಿ ಮಾಡಿದಾಗ ಸುಮಾರು ಆರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೆ ಬೇಕಾದ ಒಂದು ನಕ್ಷೆಯನ್ನೂ ಕೂಡ ತಯಾರು ಮಾಡಿದ್ದಾರೆ. ನಮ್ಮ ಇಲಾಖೆಯಲ್ಲಿ ಶಾಲೆಗಳನ್ನು ಕಟ್ಟುವುದಕ್ಕೆ, ಶಾಲೆಗಳಿಗೆ ಪೀಠೋಪಕರಣಗಳನ್ನು ಇನ್ನಿತರ ಸಾಮಗ್ರಿಗಳನ್ನು ಒದಗಿಸುವುದಕ್ಕೆ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಹಾಕಿಕೊಂಡು, ಅದನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿಕೊಟ್ಟಿದ್ದಾರೆ. ಅದಕ್ಕೆ ಅನುಮೋದನೆ ಸಿಗುತ್ತದೆಂಬ ನಂಬಿಕೆ ನನಗೆ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಕೂಡ ಚರ್ಚೆ ಮಾಡಿದ್ದೇನೆ. ಚರ್ಚೆ ಮಾಡಿದಾಗ ಈ ವರ್ಷ ಅರ್ಧದಷ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆಯೂ ಕೂಡ ಸಿಕ್ಕಿದೆ. ಮತ್ತೆ ಶ್ರೀಮಾನ್ ಖರ್ಗೆಯವರು ಪಟ್ಟಣದಲ್ಲಿ ವಿದ್ಯಾರ್ಥಿಗಳಿಗೆ ಯಾವರೀತಿ ಶಿಕ್ಷಣವನ್ನು ಕೊಡುತ್ತಿರುತ್ತಾರೆಯೋ ಆ ರೀತಿಯಲ್ಲಿ ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುತ್ತಿಲ್ಲವೆಂದು ಹೇಳಿದರು. ಇದು ಎಷ್ಟರಮಟ್ಟಿಗೆ ನಿಜ ಎನ್ನುವುದನ್ನು ನೋಡೋಣ. ಈಗ ೧೯೭೩–೭೪ರಲ್ಲಿ ೧೫೭ ಶಾಲೆಗಳನ್ನು ಪ್ರಾರಂಭ ಮಾಡಿದರೆ ಇದರಲ್ಲಿ ೧೩೬ ಶಾಲೆಗಳನ್ನು ಹಳ್ಳಿಗಾಡಿನಲ್ಲಿ ಪ್ರಾರಂಭ ಮಾಡಿದ್ದೇವೆ. ೧೯೭೪–೭೫ರಲ್ಲಿ ೨೬೨ ಶಾಲೆಗಳನ್ನು ಪ್ರಾರಂಭ ಮಾಡಿರುವ ಪೈಕಿ ೨೫೨ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದ್ದೇವೆ. ಏತಕ್ಕೆಂದರೆ ಗ್ರಾಮಾಂತರ ಪ್ರದೇಶದ ಮಕ್ಕಳು ಹೆಚ್ಚಾಗಿ ಓದಬೇಕು ಎನ್ನುವುದೇ ನಮ್ಮ ಅಭಿಲಾಷೆಯಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ೧೦೦ಕ್ಕೆ ೮೦ರಷ್ಟು ಬಡ ರೈತರ ಮಕ್ಕಳೇ ಇರುತ್ತಾರೆ. ರೈತರ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಕ್ಕಬೇಕು. ದೀನ ದಲಿತರಾಗಿರತಕ್ಕಂಥವರು, ಹರಿಜನ ಪಂಗಡಕ್ಕೆ ಸೇರಿದಂಥವರು ಮತ್ತು ಹಿಂದುಳಿದ ವರ್ಗಕ್ಕೆ ಸೇರಿದವರು ಇವರೆಲ್ಲರಿಗೂ ವಿದ್ಯಾಭ್ಯಾಸ ಸಿಕ್ಕಬೇಕು. ಏತಕ್ಕೆಂದರೆ ಹಳ್ಳಿಗಾಡಿನ ಮಕ್ಕಳು ಪಟ್ಟಣಪ್ರದೇಶಗಳಿಗೆ ಬಂದು ಓದಲಿಕ್ಕೆ ಹಣಕಾಸಿನ ಪರಿಸ್ಥಿತಿ ಅಷ್ಟು ಚೆನ್ನಾಗಿರುವುದಿಲ್ಲ. ಹಳ್ಳಿಗಾಡಿನಲ್ಲಿಯೇ ಶಾಲೆಗಳನ್ನು ಪ್ರಾರಂಭ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆಂದು ತಿಳಿದು ಈ ಒಂದು ಉದ್ದೇಶದಿಂದ ನಾವು ಹೆಚ್ಚು ಹೆಚ್ಚು ಶಾಲೆಗಳನ್ನು ಹಳ್ಳಿಗಾಡಿನಲ್ಲಿ ಪ್ರಾರಂಭ ಮಾಡಿದ್ದೇವೆ

ಅಮೇಲೆ, ಅನೇಕ ಶಾಲೆಗಳಲ್ಲಿ ಪಿ ಠೋಪಕರಣಗಳು, ಮತ್ತು ಇತರೇ ಸಾಮಾಗ್ರಿಗಳು, ಪುಸ್ತಕ ಭಂಡಾರ ಪ್ರಯೋಗಾಲಯಗಳು, ಇಂತಹ ಅಭಾವ ಇದೆ. ಇದಕ್ಕೆ ಆದ್ಯತೆ ಕೊಡಬೇಕು. ಈ ವರ್ಷ ಹೆಚ್ಚು ಹೆಚ್ಚಾಗಿ ಈ ದಿಸೆಯಲ್ಲಿ ಆದ್ಯತೆ ಕೊಟ್ಟು ಕಲಸ ಮಾಡಬೇಕು ಎನ್ನುವುದೇ ನಮ್ಮ ಪ್ರಮುಖ ವಾದ ಅಂಶವಾಗಿದೆ. ಮತ್ತು ಶಾಲೆಗಳಲ್ಲಿ ಓದುವ ಗಂಡುಮಕ್ಕಳ ಸಂಖ್ಯೆಯನ್ನು ನೋಡಿದರೆ: ಐದೂ ಕಾಲು ಲಕ್ಷ ಇದೆ. ಹೆಣ್ಣು ಮಕ್ಕಳು ಕೇವಲ ಎರಡದವರೆ ಲಕ್ಷದಷ್ಟು ಸಂಖ್ಯೆಯಲ್ಲಿ ಮಾತ್ರ ಓದುತ್ತಿದ್ದಾರೆ ಅಂದರೆ, ಹೆಣ್ಣುಮಕ್ಕಳು ಹೆಚ್ಚು ಹೆಚ್ಚಾಗಿ ಶಾಲೆಗೆ ಬರುತ್ತಿಲ್ಲವೆಂದು ತಿಳಿಯುತ್ತದೆ. ನೂರಕ್ಕೆ ಐವತ್ತರಷ್ಟು ಹೆಣ್ಣುಮಕ್ಕಳನ್ನು ಇಟ್ಟುಕೊಂಡು ಇವತ್ತು ಈ ಹೆಣ್ಣು ಮಕ್ಕಳು ಶಾಲೆಗೆ ಬರುತ್ತಿಲ್ಲ ಎಂದರೆ, ಇದು ಶೋಚನೀಯವಾದ ಸಂಗತಿ. ಅದೂ ಅಲ್ಲದೆ, ಹೆಣ್ಣು ಮಕ್ಕಳಿಗೆ ಹೆಚ್ಚಿನ ಅವಕಾಶ ಕೊಡುತ್ತಿಲ್ಲ ಎನ್ನುವ ಭಾವನೆ ನಮ್ಮಲ್ಲಿ ಬರುತ್ತದೆ. ಇನ್ನು ಈ ಶಾಲೆಗಳ ಆಡಳಿತ ಮತ್ತು ಉಪಾಧ್ಯಾಯರ ಕುರಿತೆ ಬಗ್ಗೆ ಮುಂದೆ ಹೇಳುತ್ತೇನೆ. ಈ ಒಂದು ಆಡಳಿತದಲ್ಲಿ ಮತ್ತು ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ತರಬೇಕು. ವಿದ್ಯಾಭ್ಯಾಸ ವಿಷಯದಲ್ಲಿ ಕರ್ನಾಟಕ ರಾಜ್ಯಕ್ಕೆ ಒಂದು ಇತಿಹಾಸ ಇದೆ. ವಿದ್ಯಾಕ್ಷೇತ್ರದಲ್ಲಿ ಒಂದು ಪವಿತ್ರವಾದ ಸ್ಥಾನ ಇದೆ. ಈ ಸ್ಥಾನವನ್ನು ಕಾಪಾಡಿಕೊಂಡು ದೇಶದಲ್ಲಿ ಕರ್ನಾಟಕ ರಾಜ್ಯವನ್ನು ಒಂದು ಮಾದರಿ ರಾಜ್ಯವಾಗಿ ಮಾರ್ಪಾಡು ಆಗಬೇಕು ಎನ್ನುವುದೇ ನಮ್ಮ ಅನಿಸಿಕೆ. ಇದಕ್ಕೆ ಅನುಗುಣವಾಗಿ ೧೯೮೬-೮೭ನೇ ಶೈಕ್ಷಣಿಕ ವರ್ಷ ದಿಂದ ಒಂದು ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರಬೇಕೆಂದಿದ್ದೇವೆ. ಈ ಶಿಕ್ಷಣ ನೀತಿಯನ್ನು ಜಾರಿಗೆ ತರಬೇಕಾಗಿದ್ದರೆ ಇದು ಬರೀ ಮಂತ್ರಿಗಳಿಂದಾಗಲೀ, ಅಥವಾ ಅಧಿಕಾರಿಗಳಿಂದಾಗಲೀ ರೂಪಿಸುವುದಕ್ಕೆ ಸಾಧ್ಯವಿಲ್ಲವೆಂದು ನನಗೆ ಮನವರಿಕೆಯಾಗಿ ಶಿಕ್ಷಣ ತಜ್ಞರಾದ ಡಾ|| ಎಚ್. ನರಸಿಂಹಯ್ಯ ನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ವಿದ್ಯಾಕ್ಷೇತ್ರದಲ್ಲಿ ಸಿಲ್ಲಬಸ್, ಕರಿಕ್ಯುಲರ್ಸ್, ಪರೀಕ್ಷಾಪದ್ಧತಿಯಲ್ಲಿ ಬದಲಾವಣೆ ಮತ್ತು ಶಿಕ್ಷಣದ ಗುಣಮಟ್ಟ ಹೆಚ್ಚಿಸುವುದು ಈ ಪ್ರಕಾರವಾಗಿ ಒಂದು ಸಮಗ್ರವಾದ ಶಿಕ್ಷಣ ನೀತಿಯನ್ನು ಅವರ ನೇತೃತ್ವದಲ್ಲಿ ರಚಿಸಲಾಗಿರುವ ಸಮಿತಿಯು ಅಧ್ಯಯನ ಮಾಡಿ ಅದರ ವರದಿಯನ್ನು ಕರ್ನಾಟಕ ರಾಜ್ಯಕ್ಕೆ ಕೊಡತಕ್ಕಂಥ ಜವಾಬ್ದಾರಿಯನ್ನು ಅವರಿಗೆ ವಹಿಸಿದ್ದೇವೆ. ಕೆಲವು ದಿವಸಗಳ ಹಿಂದೆ ಡಾ|| ನರಸಿಂಹಯ್ಯನವರು ಭೇಟಿ ಯಾಗಿ, ಇನ್ನು ಮೂರು ತಿಂಗಳಲ್ಲಿ ಇದರ ಬಗ್ಗೆ ಒಂದು ವರದಿಯನ್ನು ಕೊಡುವುದಾಗಿ ಹೇಳಿದ್ದಾರೆ. ಈ ವರದಿ ಬಂದ ಕೂಡಲೇ ಶಿಕ್ಷಣ ತಜ್ಞರಿಂದ ಮತ್ತೊಂದು ಸಾರಿ ಅಭಿಪ್ರಾಯವನ್ನು ತೆಗೆದುಕೊಂಡು, ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಅವರು ಇದಕ್ಕೆ ಸಂಬಂಧ ಪಡದಿದ್ದರೂ, ಅವರ ಅಭಿಪ್ರಾಯ ವನ್ನು ಕೂಡ ತೆಗೆದು ಕೊಳ್ಳಲಾಗುವುದು ಏಕೆಂದರೆ ಅವರು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರು ಇದ್ದಾರೆ ಮತ್ತು ಈ ಕಡೆ ಹಾಗೂ ಆ ಕಡೆ ವಿದ್ಯಾಕ್ಷೇತ್ರದಲ್ಲಿ ಅನುಭವ ಇರತಕ್ಕಂಥ ಅವರಸ್ಸರ ಅಭಿಪ್ರಾಯ ಪಡೆದು ಈ ಒಂದು ಶಿಕ್ಷಣ ನೀತಿಯನ್ನು ಜಾರಿಗೆ ತರಬೇಕು ಹಾಗೂ ಪರೀಕ್ಷಾ ವಿಧಾನದಲ್ಲಿ ಮಾರ್ಪಾಡು ತರಬೇಕು. ಅದರ ಮೂಲಕ ಕಾಪಿ ಹೊಡೆಯುವ ಪದ್ಧತಿಯನ್ನು ಕೊನೆಗಾಣಿಸಬೇಕು ಎಂಬುದು ನಮ್ಮ ಉದ್ದೇಶ. ಈ ಕಾಪಿ ಹೊಡೆಯುವುದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಅದಕ್ಕಾಗಿ ಪರೀಕ್ಷಾ ವಿಧಾನದಲ್ಲಿ ಬದಲಾವಣೆ ತರಬೇಕು, ಇದನ್ನು ತಂದರೆ ಮಾತ್ರ ಇದರ ಹತೋಟಿ ಸಾಧ್ಯ. ಈಗ ಸ್ಕ್ವಾಡ್‌ಗಳನ್ನು ಮಾಡಿದ್ದೇವೆ. ಪರೀಕ್ಷಾ ವಿಧಾನದ ಬಗ್ಗೆ ಲೋಪ ದೋಷಗಳ ಬಗ್ಗೆ ಶ್ರೀ ವೆಂಕಟರಾಮಯ್ಯನವರು ಹೇಳಿದ್ದಾರೆ. ಈಗ ಪ್ರಶ್ನೆಪತ್ರಿಕೆಗಳನ್ನು ವಲಯ ಮಾಡಿ ಕೊಡುತ್ತಿದ್ದೇವೆ. ಇಷ್ಟು ದಿನ ಈ ಪದ್ಧತಿ ಇರಲಿಲ್ಲ. ಇತ್ತೀಚೆಗೆ ಎಸ್.ಎಸ್.ಎಲ್.ಸಿ. ಮರು ಪರೀಕ್ಷೆ ನಡೆದಾಗ, ಪ್ರಶ್ನೆಪತ್ರಿಕೆಗಳು ಬಂದ ಮೇಲೆ ಅವುಗಳನ್ನು ಟ್ರೆಜರಿಯಲ್ಲಿ ಬ್ಯಾಂಕ್‌ಗಳಲ್ಲಿ ಮತ್ತು ಪೊಲೀಸ್ ಸ್ಟೇಷನ್‌ಗಳಲ್ಲಿ ಇಟ್ಟು, ಪರೀಕ್ಷೆ ನಡೆಯುವ ದಿನ ಬೆಳಿಗ್ಗೆ ಆಯಾ ಕೇಂದ್ರಗಳಿಗೆ ತಲುಪಿಸುವ ಏರ್ಪಾಡು ಮಾಡಲಾಯಿತು. ಹೀಗಾಗಿ ಎರಡನೇ ಬಾರಿಗೆ ನಡೆದ ಪರೀಕ್ಷೆಯಲ್ಲಿ ಯಾವುದೇ ಬಗೆಯ ಅಕ್ರಮಗಳು ನಡೆಯಲಿಲ್ಲ. ಈ ಸಾರಿ ಕಾಪಿ ಹೊಡೆಯತಕ್ಕಂಥ ಆರು ಸಾವಿರ ವಿದ್ಯಾರ್ಥಿಗಳನ್ನು ಡಿಬಾರ್ ಮಾಡಿದ್ದೇವೆ ಮತ್ತು ಶಿಕ್ಷೆಯನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಕಾಪಿ ಹೊಡೆಯುವವರ ಸಂಖ್ಯೆ ಕೂಡ ಅಭಿವೃದ್ಧಿಯಾಗಿದೆ.

ಶ್ರೀ ಎಂ. ರಘುಪತಿ.—ಅದಕ್ಕಾಗಿ ಈ ಪರೀಕ್ಷೆಗಳಲ್ಲಿ ಉಪಾಧ್ಯಾಯರು ಅದೇ ಶಾಲೆಗಳಲ್ಲಿ ವೀಕ್ಷಕ ರಾಗಿ ಇರಕೂಡದು. ಅವರನ್ನು ಆ ಶಾಲೆಯಿಂದ ಬೇರೆ ಕಡೆಗೆ ಬದಲಾವಣೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮುಂದಿನ ವರ್ಷದಿಂದ ಇದನ್ನು ಜಾರಿಗೆ ತರಬೇಕೆಂದು ಇದ್ದೇವೆ ಪರೀಕ್ಷೆ ನಡೆಯುವಾಗ ಅದೇ ಉಪಾಧ್ಯಾಯರು ಅಲ್ಲಿ ಇದ್ದರೆ ಹಲವಾರು ಅಕ್ರಮಗಳಿಗೆ ದಾರಿಯಾಗು ತ್ತದೆ ಎಂದು ಹೇಳಿ ಈ ವಿಧಾನವನ್ನು ಜಾರಿಗೆ ತರುತ್ತಿದ್ದೇವೆ. ಹೀಗೆ ಹಲವಾರು ವಿಧಾನಗಳನ್ನು

ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಮಾಡಿದ್ದೇವೆ. ಇದರ ಮೂಲಕವಾಗಿ ಸಂಪೂರ್ಣವಾದ ಬದಲಾವಣೆ ಆಗುತ್ತದೆ. ಇದೆಲ್ಲಾ ಮಾಯವಾಗುತ್ತದೆ ಎಂದು ನಾನು ಹೇಳುತ್ತಿಲ್ಲ. ಆದರೆ ಇದನ್ನು ಸುಧಾರಣೆ ಮಾಡುವುದಕ್ಕೆ ಈಗಿರುವಂಥ ದುರ್ವ್ಯವಸ್ಥೆಯನ್ನು ತಪ್ಪಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಹಾಕಿಕೊಂಡು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಅಲ್ಪಸಂಖ್ಯಾಂತರ ಶಾಲೆಗಳು ಇವೆ. ಅವರ ಬಹುದಿನದ ಬೇಡಿಕೆ ಇದು. ಏನೆಂದರೆ ಈ ಅಲ್ಪಸಂಖ್ಯಾತರಿಗೆ ಪ್ರತ್ಯೇಕವಾದ ಒಂದು ನಿರ್ದೇಶನಾಲಯ ಬೇಕು ಎಂಬುದು ಅಲ್ಪಸಂಖ್ಯಾತರಿಗೋಸ್ಕರ ಒಂದು ಪ್ರತ್ಯೇಕ ನಿರ್ದೇಶನಾಲಯವನ್ನು ಪ್ರಾರಂಭಿಸುವ ದಿಸೆಯಲ್ಲಿ ಈ ಉಪನಿರ್ದೇಶಕರೊಬ್ಬರನ್ನು ನೇಮಕ ಮಾಡಿದ್ದೇವೆ. ಇದರ ಮೂಲಕ ಭಾಷಾ ಮತ್ತು ಅಲ್ಪಸಂಖ್ಯಾಂತರ ಈ ಶಾಲೆಗಳನ್ನು ವೀಕ್ಷಣೆ ಮಾಡುವುದಕ್ಕೆ ಮತ್ತು ಅವರ ಕುಂದುಕೊರತೆಗಳನ್ನು ವಿಚಾರಣೆ ಮಾಡುವ ಸಲುವಾಗಿ ಪ್ರಯತ್ನ ಮಾಡುತ್ತಿದ್ದೇವೆ. ನಂತರ ಈಗ ಏಳನೇ ತರಗತಿವರೆಗೆ ಪಬ್ಲಿಕ್ ಪರೀಕ್ಷೆ ಇಲ್ಲ. ಏಳನೇ ತರಗತಿವರೆಗೆ ಒಬ್ಬ ವಿದ್ಯಾರ್ಥಿ ಕಲಿಯುತ್ತಿದ್ದಾನೆ ಅಥವಾ ಇಲ್ಲ ಎಂದು ಪರೀಕ್ಷೆ ಮಾಡುವುದಕ್ಕೆ ಒಂದು ವಿಧಾನ ಇಲ್ಲ. ಇದರ ಬಗ್ಗೆ ನನ್ನ ಸಹೋದ್ಯೋಗಿಯಾದ ಶ್ರೀ ಗೋವಿಂದೆ ಗೌಡರು ವಿಶದವಾಗಿ ಹೇಳುತ್ತಾರೆ. ನಾವು ಇನ್ನು ಮುಂದಕ್ಕೆ ಒಬ್ಬ ವಿದ್ಯಾರ್ಥಿ ಎಂಟನೇ ತರಗತಿಗೆ ಸೇರಿದರೆ ಆತನಿಗೆ ಎಬ್ರಿಡ್ಜ್ ಕೋರ್ಸ್ ಅಂತ ಕಲಿಸಬೇಕೆಂದು ನಿರ್ಣಯ ಮಾಡಿದ್ದೇವೆ. ಈ ಕೋರ್ಸಿನ ಮೂಲಕ ವಿದ್ಯಾರ್ಥಿಗಳಿಗೆ ಮೂರು ತಿಂಗಳಕಾಲ ತರಬೇತಿಯನ್ನು ಕೊಡುತ್ತೇವೆ. ಆತನಿಗೆ ಎಂಟನೇ ತರಗತಿಯ ಪಠ್ಯ ವಿಷಯಗಳನ್ನು ಗ್ರಹಣ ಮಾಡುವಷ್ಟು ಶಕ್ತಿ ಬಂದಿದೆಯೋ ಎಂದು ತಿಳಿಯಲು ಪ್ರತಿಯೊಂದು ಸರ್ಕಾರಿ ಶಾಲೆಗಳಲ್ಲೂ ಈ ಎಬ್ರಿಡ್ಜ್ ಕೋರ್ಸ್ ಅನ್ನು ಪ್ರಾರಂಭ ಮಾಡುತ್ತಿದ್ದೇವೆ ಎಬ್ರಿಡ್ಜ್ ಕೋರ್ಸ್ ಪ್ರಾರಂಭ ಮಾಡಿ, ಅದರ ಮೂಲಕ ವಿದ್ಯಾರ್ಥಿಗಳಿಗೆ ತರಬೇತಿ ಕೊಡುವುದು ಇದರ ಉದ್ದೇಶ ಆಗಿದೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟವನ್ನು ಮೇಲೆ ಎತ್ತಬೇಕು ಎನ್ನುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಈ ವರ್ಷದಿಂದ ಜಾರಿಗೆ ತರುತ್ತಿದ್ದೇವೆ. ಪಠ್ಯಪುಸ್ತಕಗಳಲ್ಲಿ ಹಲವಾರು ಲೋಪದೋಷಗಳಿವೆ ಎಂದು ಹೇಳಿದ್ದಾರೆ. ಈ ಪಠ್ಯ ಪುಸ್ತಕಗಳನ್ನು ೫-೧೦ ವರ್ಷಗಳ ಹಿಂದೆ ಬರೆದಿರತಕ್ಕಂಥದ್ದು ಅಲ್ಲಿಂದ ಇಲ್ಲಿಯವರೆಗೆ ಇವುಗಳನ್ನು ಮಾರ್ಪಾಡು ಮಾಡಲಿಲ್ಲ. ಈಗ ಎಸ್. ಎಸ್. ಎಲ್. ಸಿ. ಮಟ್ಟದಲ್ಲಿ ೬ ಪಠ್ಯ ಪುಸ್ತಕಗಳು ಇವೆ. ಇವುಗಳ ಬಗ್ಗೆ ವರ್ಕ್‌ಷಾಪ್‌ನ್ನು ಕಂಡಕ್ಟ್ ಮಾಡಿ ಅದರ ಮೂಲಕ ಪಠ್ಯಪುಸ್ತಕಗಳನ್ನು ಸಂಪೂರ್ಣವಾಗಿ ಪುನರ್‌ರಚನೆ ಮಾಡುವುದಕ್ಕೆ ನಾವು ಏರ್ಪಾಡು ಮಾಡುತ್ತಿದ್ದೇವೆ. ಸೈಂಟಿಫಿಕ್ ಟೆಂಪರ್‌ಮೆಂಟ್, ನ್ಯಾಷನಾಲಿಟಿ, ನ್ಯಾಷನಲ್ ಇಂಟಗ್ರೇಷನ್ ಮುಂತಾದ ಅಂಶಗಳಿಗೆ ಹೆಚ್ಚಿನ ಹೊಂದಾಣಿಕೆ ಇರುವಂತಹ ರೀತಿಯಲ್ಲಿ ಪಠ್ಯಪುಸ್ತಕಗಳನ್ನು ಪುನರ್ ರಚನೆ ಮಾಡಲು ನಾವು ವರ್ಕ್‌ಷಾಪ್‌ಗಳನ್ನು ಕಂಡಕ್ಟ್ ಮಾಡಬೇಕೆಂದಿದ್ದೇವೆ ಮತ್ತು ಈ ಮೂಲಕ ಈಗ ಇರುವಂತಹ ನ್ಯೂನತೆಗಳನ್ನೆಲ್ಲಾ ಸರಿಪಡಿಸುತ್ತೇವೆ. ಈ ವರ್ಷ ನಾವು ಪಿ. ಯು. ಸಿ ಮಟ್ಟದಲ್ಲಿ ಕನ್ನಡ ಮತ್ತು ಇಂಗ್ಲಿಷ್ ವಿಷಯಗಳಲ್ಲಿ ವರ್ಕ್‌ಷಾಪ್‌ನ್ನು ಕಂಡಕ್ಟ್ ಮಾಡಿದ್ದೇವೆ. ಇನ್ನು ಮುಂದಕ್ಕೆ ಎಸ್. ಎಸ್. ಎಲ್. ಸಿ ಮಟ್ಟದಲ್ಲಿಯೂ ಸಹ ಮಾಡುತ್ತೇವೆ. ಉಪಾಧ್ಯಾಯರುಗಳಿಗೂ ಸಹ ಓರಿಯೆಂಟೇಷನ್ ಕೋರ್ಸ್‌ಗಳನ್ನು ಕಂಡಕ್ಟ್ ಮಾಡಬೇಕೆಂದು ಹಲವಾರು ಮಾನ್ಯ ಸದಸ್ಯರು ಸೂಚನೆ ಕೊಟ್ಟರು. ಇದು ಒಳ್ಳೆಯ ಸಲಹೆ ಇವರುಗಳು ಬಿ. ಇಡಿ. ಪಾಸ್ ಮಾಡಿ ಎಷ್ಟೋ ವರ್ಷಗಳಾಗಿರುತ್ತದೆ. ಅವರು ಓದಿದ ಕಾಲಕ್ಕೂ ಮತ್ತು ಇಲ್ಲಿಯವರೆಗೂ ಅನೇಕ ಬದಲಾವಣೆಗಳಾಗಿರುತ್ತವೆ. ಆದ್ದರಿಂದ ಜಿಲ್ಲಾ ಮಟ್ಟದಲ್ಲಿ ಎಲ್ಲಾ ಉಪಾಧ್ಯಾಯರುಗಳಿಗೂ ಸಹ ಹೊಸ ಹೊಸ ವಿಷಯಗಳ ಬಗ್ಗೆ ತರಬೇತಿ ಕೊಟ್ಟರೆ, ಆದ್ದರಿಂದ ಅವರು ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದಕ್ಕೆ ಸುಲಭವಾಗುತ್ತದೆ. ಆದ್ದರಿಂದ ಉಪಾಧ್ಯಾಯರ ಸಂಘದ ವತಿಯಿಂದ ಓರಿಯೆಂಟೇಷನ್ ಕೋರ್ಸ್‌ಗಳನ್ನು ಕಂಡಕ್ಟ್ ಮಾಡಬೇಕೆಂದಿದ್ದೇವೆ ಮತ್ತೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ, ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳಿಗೆ, ಎಸ್. ಎಸ್. ಎಲ್. ಸಿ ಮತ್ತು ಪಿ. ಯು. ಸಿ. ಪರೀಕ್ಷೆಗಳಿಗೆ ಕುಳಿತುಕೊಳ್ಳುವ ಸಂದರ್ಭಗಳಲ್ಲಿ ಸ್ಪೆಷಲ್ ಕೋಚಿಂಗ್‌ನ್ನು ಸರ್ಕಾರದ ಶಾಲೆಗಳಲ್ಲಿ ಕೊಡಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ, ಇದರ ಜೊತೆಗೆ ಪ್ರತಿಯೊಂದು ಶಾಲೆ ಮತ್ತು ಪ್ರತಿಯೊಂದು ಕಾಲೇಜಿನಲ್ಲಿಯೂ ಸಹ ಸ್ಟಾಫ್ ಕೌನ್ಸಿಲ್ ಮೆಂಬರ್‌ಗಳು ವರ್ಷದಲ್ಲಿ ನಾಲ್ಕು ಸಲ ಭೇಟಿಯಾಗಿ ತಮ್ಮ ಶಾಲಾಕಾಲೇಜುಗಳಲ್ಲಿ ಏನೇನು ಪ್ರಗತಿಯಾಗಿದೆ ಎಂಬುದನ್ನು ನೋಡುವಂತೆ ತಿಳಿಸಿದ್ದೇವೆ. ಇದರ ಜೊತೆಗೆ ಆ ವರ್ಷದ ಕೊನೆಯಲ್ಲಿ ಎಷ್ಟು ಪಾಠಗಳ ಬೋಧನೆಯಾಗಿದೆ, ಸರಿಯಾಗಿ ಆಗದಿದ್ದರೆ ಕಾರಣವೇನು ಎಂಬುದನ್ನೆಲ್ಲಾ ಚರ್ಚೆ ಮಾಡುವುದಕ್ಕೋಸ್ಕರವಾಗಿ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಮತ್ತು ವಿದ್ಯಾರ್ಥಿಗಳ ತಂದೆ ತಾಯಿಗಳನ್ನು ಕರೆಸಿಕೊಂಡು ಕೂಲಂಕುಷವಾಗಿ ಚರ್ಚೆ ಮಾಡಬೇಕೆಂದು ಸಹ ತಿಳಿಸಿದ್ದೇವೆ. ವರ್ಷದಲ್ಲಿ ನಾಲ್ಕು ಸಲ ಭೇಟಿಯಾಗಿ ಆಯಾ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ಮತ್ತು

ಪಠ್ಯಪುಸ್ತಕಗಳ ವಿಷಯದಲ್ಲಿ ಎಷ್ಟು ಭೋಧನೆಯಾಗಿದೆ ಎಂಬ ಬಗ್ಗೆ ಚರ್ಚೆ ನಡೆಸಬೇಕೆಂದು ನಾವು ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. ಇದು ಅನುದಾನ ಪಡೆಯುವಂತಹ ಶಾಲಾ ಕಾಲೇಜುಗಳಿಗೂ ಸಹ ಅನ್ವಯವಾಗುತ್ತದೆ.

ಇನ್ನು ಶಾಲಾಭಿವೃದ್ಧಿ ಸಮಿತಿಗಳನ್ನು ರಚನೆ ಮಾಡಿ ೧೦–೧೫ ವರ್ಷಗಳ ಮೇಲಾಯಿತು. ಈ ಕಾರಣದಿಂದ ಈ ಶಾಲೆಗಳ ಅಭಿವೃದ್ಧಿ ಆಗಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಈ ಸಮಿತಿಗಳವರ ಹತ್ತಿರ ಈಗ ಯಾವ ವಿಧವಾದ ಮಾಹಿತಿಯೂ ಇಲ್ಲ. ಈ ಕಾರಣದಿಂದ ಈ ಶಾಲಾಭಿವೃದ್ಧಿ ಸಮಿತಿಗಳನ್ನು ಪುನರ್ ರಚನೆ ಮಾಡುತ್ತಿದ್ದೇವೆ. ಆಯಾ ವಿಧಾನಸಭಾ ಸದಸ್ಯರ ಕ್ಷೇತ್ರಗಳಲ್ಲಿ ಎಷ್ಟು ಶಾಲೆಗಳು ಬರುತ್ತವೋ, ಅಷ್ಟು ಶಾಲೆಗಳಿಗೂ ವಿಧಾನಸಭಾ ಸದಸ್ಯರು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಇವರ ಜೊತೆಗೆ ಆಯಾ ಊರಿನ ಪುರಸಭಾ ಅಧ್ಯಕ್ಷರು, ಗಣ್ಯ ವ್ಯಕ್ತಿಗಳು, ನಿವೃತ್ತರಾದಂಥ ಶಿಕ್ಷಣ ತಜ್ಞರನ್ನು ಒಳಗೊಂಡಂತೆ ೯ ಜನ ಸದಸ್ಯರುಗಳು ಇರುವಂತಹ ಶಾಲಾಭಿವೃದ್ಧಿ ಸಮಿತಿಗಳನ್ನು ಪುನರ್ ರಚನೆ ಮಾಡುತ್ತಿದ್ದೇವೆ. ಈ ಸಮಿತಿಯವರು ಒಂದು ವರ್ಷದಲ್ಲಿ ೩ ಸಭೆಗಳನ್ನು ಕಡ್ಡಾಯವಾಗಿ ನಡೆಸಲೇಬೇಕೆಂದು ನಾವು ಆದೇಶ ಕೊಡುತ್ತಿದ್ದೇವೆ.

ಇನ್ನು ಅನುದಾನ ಪಡೆಯುವಂತಹ ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಭದ್ರತೆ ಎಂಬುದೇ ಇಲ್ಲವಾಗಿದೆ. ಉಪಾಧ್ಯಾಯರುಗಳನ್ನು ಏಕಾಏಕಿ ಕೆಲಸದಿಂದ ತೆಗೆದು ಹಾಕುವುದರ ಮೂಲಕ ಅವರಿಗೆ ಭಯ ಹುಟ್ಟಿಸುತ್ತಿದ್ದಾರೆ. ಇದರ ಜೊತೆಗೆ ಸಂಬಳ ಸರಿಯಾಗಿ ಕೊಡುತ್ತಿಲ್ಲ ಹಾಗೂ ಇವರಿಂದ ಹಣ ಸುಲಿಗೆ ಮಾಡುವುದರ ಮೂಲಕ ಹಲವಾರು ರೀತಿಯ ಕಿರುಕುಳ ಕೊಡುತ್ತಿದ್ದಾರೆಂದು ಸರ್ಕಾರಕ್ಕೆ ದೂರುಗಳು ಬರುತ್ತಿವೆ. ಈ ಕಾರಣದಿಂದ ಈ ಉಪಾಧ್ಯಾಯರುಗಳಿಗೆ ಭದ್ರತೆ ಕೊಡಬೇಕೆಂಬ ದೃಷ್ಟಿಯಿಂದ ಸರ್ಕಾರದ ಅನುಮತಿ ಇಲ್ಲದೆ ಕೆಲಸದಿಂದ ತೆಗೆಯಬಾರದೆಂದು ಆಜ್ಞೆ ಹೊರಡಿಸಿದ್ದೇವೆ. ತಪ್ಪು ಮಾಡಿದ್ದರೆ ಸಸ್ಪೆಂಡ್ ಮಾಡಬಹುದೇ ಹೊರತು ಸರ್ಕಾರದ ಅನುಮತಿ ಇಲ್ಲದೆ ಕೆಲಸದಿಂದ ಏಕಾಏಕಿ ಇನ್ನು ಮುಂದಕ್ಕೆ ತೆಗೆದುಹಾಕುವಂತಿಲ್ಲ.

ಇನ್ನು ಅನುದಾನ ಪಡೆಯುವಂತಹ ಶಾಲಾಭಿವೃದ್ಧಿ ಮಂಡಲಿಯವರು ಅನುದಾನ ಪಡೆಯುವ ಸಲುವಾಗಿ ಎ.ಇ.ಓ. ಕಛೇರಿಗೆ ಅರ್ಜಿ ಹಾಕಿದ ೩೦ ದಿವಸಗಳಲ್ಲಿ ಎ.ಇ.ಓ. ಅವರು ಅನುದಾನ ಪಡೆಯಲು ಅರ್ಹರಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು. ೩೦ ದಿವಸಗಳಲ್ಲಿ ಇವರು ಉತ್ತರ ಕೊಡಲು ವಿಫಲರಾದರೆ ಸಂಬಂಧಪಟ್ಟವರು ನೇರವಾಗಿ ಸಿ.ಪಿ.ಐ.ನವರಿಗೆ ಮನವಿ ಮಾಡಿಕೊಳ್ಳಬಹುದು. ಸಿ.ಪಿ.ಐ. ಅವರು ಒಂದು ತಿಂಗಳೊಳಗಾಗಿ ಇವರ ಸಮಸ್ಯೆಯನ್ನು ಬಗೆಹರಿಸಬೇಕು. ಮತ್ತು ಹಣದ ಪಾವತಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಏಕೆಂದರೆ, ಈಗ ಎ.ಇ.ಓ. ಅವರ ಕಛೇರಿಯಲ್ಲಿ ಇವರಿಗೆ ಆಗುತ್ತಿದೆ ಎಂದು ಹೇಳಲಾದ ಕಿರುಕುಳವನ್ನು ತಪ್ಪಿಸಲು ಈ ವ್ಯವಸ್ಥೆಯನು ಜಾರಿಗೆ ತಂದಿದ್ದೇವೆ. ಈಗ ಏನು ನಡೆಯುತ್ತಿದೆ ಎಂದರೆ, ಹೀಗೆ ಬಂದಂಥ ಅರ್ಜಿಗಳನ್ನು ಮಾರ್ಚಿ ೩೧ರವರೆಗೆ ಇಟ್ಟುಕೊಂಡು. ಸಂಬಂಧಪಟ್ಟವರು ಮಾಮೂಲಿ ಕೊಟ್ಟರೆ ಮಾತ್ರ ಅನುದಾನವನ್ನು ಬಿಡುಗಡೆ ಮಾಡುವಂತಹ ಪದ್ಧತಿ ಇದೆ. ಈ ಪದ್ಧತಿಯನ್ನು ತಪ್ಪಿಸಬೇಕು ಮತ್ತು ಇವರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದುಕೊಂಡು ಇಂತಹ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಮತ್ತೆ ಕೆಲವೊಂದು ಪೋಸ್ಟ್‌ಗಳನ್ನು ಎ.ಇ.ಓ. ಮತ್ತು ಡಿ.ಡಿ.ಪಿ.ಐ.ನವರು ಅಪ್ರೂವ್ ಮಾಡಬೇಕಾಗಿದೆ. ಅವರೆ ಇವರುಗಳು ತಿಂಗಳುಗಟ್ಟಲೆಯಾದರೂ ಅಪ್ರೂವ್ ಮಾಡದೆ ಸಂಬಂಧಪಟ್ಟವರಿಂದ ಏನಾದರು ಸಹಾಯ ಪಡೆದ ನಂತರ ಅಪ್ರೂವ್ ಮಾಡುತ್ತಿದ್ದರ. ಆದರೆ ಇನ್ನು ಮುಂದಕ್ಕೆ ಇದಕ್ಕೆಲ್ಲಾ ಅವಕಾಶವಿರುವುದಿಲ್ಲ. ಪೋಸ್ಟ್‌ಗಳನ್ನು ಅಪ್ರೂವ್ ಮಾಡಬೇಕೆಂದು ಮನವಿಗಳು ಬಂದ ಒಂದು ತಿಂಗಳೊಳಗಾಗಿ ಅಪ್ರೂವ್ ಮಾಡಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಈ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಬೇಕು. ಒಂದು ತಿಂಗಳೊಳಗಾಗಿ ಉತ್ತರ ಬರದಿದ್ದರೆ ಸಂಬಂಧಪಟ್ಟವರು ಮೇಲಿನ ಅಧಿಕಾರಿಗಳಿಗೆ ಅಪೀಲ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ ಮೇಲಿನ ಅಧಿಕಾರಿಗಳು ಇಂತಹ ಅಪೀಲ್‌ಗಳನ್ನು ಒಂದು ತಿಂಗಳೊಳಗಾಗಿ ನಿಖಾಲೆ ಮಾಡಬೇಕೆಂದು ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದೇವೆ. ಒಟ್ಟಿನಲ್ಲಿ ಈ ಇಲಾಖೆಯಲ್ಲಿರುವಂತಹ ಭ್ರಷ್ಟಾಚಾರವನ್ನ ಒಮ್ಮೇಲೆ ತೆಗೆಯಬೇಕೆಂದರೆ ಆಗುವುದಿಲ್ಲ. ಇದನ್ನು ಹಂತ ಹಂತವಾಗಿ ಮಾಡಬೇಕಾಗಿದೆ. ಯಾವ ಯಾವ ಜಾಗಗಳಲ್ಲಿ ಈ ಭ್ರಷ್ಟಾಚಾರ ಎಂಬುದು ಇದೆಯೋ ಅದನ್ನು ಹೋಗಲಾಡಿಸಲು ನಾವು ಸೂಕ್ತ ಪರಿಹಾರವನ್ನು ಕಂಡುಹಿಡಿಯುತ್ತೇವೆ. ಇದನ್ನು ಸಂಪೂರ್ಣವಾಗಿ ತೆಗೆದು ಹಾಕುತ್ತೇನೆಂದು ಹೇಳುವ ಮಟ್ಟಕ್ಕೆ ನಾನು ಹೋಗುವುದಿಲ್ಲ. ಇದು ಕಷ್ಟದ ಕೆಲಸವಾದರೂ ಸಹ ಇದನ್ನು ಹೋಗಲಾಡಿಸಲು ಪ್ರಾಮಾಣಿಕವಾದಂಥ ಪ್ರಯತ್ನ ಮಾಡುತ್ತಿದ್ದೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಇನ್ನು ಮಾನ್ಯ ಸದಸ್ಯರ ಕ್ಷೇತ್ರಗಳಲ್ಲಿ ಬರುವ ಸಾಲಿನಲ್ಲಿ ಸರ್ಕಾರದ ಶಾಲೆಗಳು ಏನಾದರೂ ಮಂಜೂರಾಗಬೇಕಾಗಿದ್ದರೆ ಹಾಗೂ ಅವಶ್ಯಕತೆ ಇದ್ದರೆ ನನಗೆ ಬರೆದು ತಿಳಿಸಬೇಕೆಂದು ನಾನು ಎಲ್ಲ ಶಾಸಕರಿಗೂ ಪತ್ರಗಳನ್ನು ಬರೆದಿದ್ದೇನೆ. ಅದರ ಪ್ರಕಾರ ಹಲವಾರು ಶಾಸಕರು ನನಗೆ ಉತ್ತರ ಬರೆದು ಕಳುಹಿಸಿಕೊಟ್ಟಿದ್ದಾರೆ. ಉಳಿದವರೂ ಸಹ ಬೇಗ ಬರೆದು ತಿಳಿಸಿದರೆ ಒಳ್ಳೆಯದು. ಮುಂದಿನ ವರ್ಷ ಹೊಸ ಶಾಲೆಗಳನ್ನು ಪ್ರಾರಂಭ ಮಾಡಬೇಕಾದರೆ ಅಕ್ಟೋಬರ್ ೩೦ ರೊಳಗಾಗಿ ಸರ್ಕಾರಕ್ಕೆ ಅರ್ಜಿಗಳು ಬರಬೇಕಾಗುತ್ತದೆ. ಅಪ್ಲಿಕೇಷನ್ಸ್ ಬಂದ ಮೇಲೆ ನಾವು ಅಲ್ಲಿಗೆ ಕಮಿಟಿಯನ್ನು ಕಳಿಸಿ, ಅಲ್ಲಿ ಶಾಲೆಗಳ ಅವಶ್ಯಕತೆ ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲನೆ ಮಾಡಿ ನಂತರ ಜನವರಿ ತಿಂಗಳಲ್ಲಿ ಶಾಲೆಗಳಿಗೆ ಪರವಾನಗಿ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಮುಂಚಿತವಾಗಿ ಪರವಾನಗಿ ಕೊಟ್ಟರೆ, ಆ ಶಾಲೆಗೆ ಕಟ್ಟಡ ಇದೆಯೋ ಇಲ್ಲವೋ ಎಂಬುದನ್ನು ನೋಡುವುದಕ್ಕೆ ಅವಕಾಶವಾಗುತ್ತದೆ. ಮತ್ತು ಅದರಲ್ಲಿ ಹಲವಾರು ಲೋಪದೋಷಗಳನ್ನು ತಪ್ಪಿಸುವುದಕ್ಕೆ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆಕಡೆ ಮತ್ತು ಈ ಕಡೆಯ ಸದಸ್ಯರು ಈ ವಿಷಯದಲ್ಲಿ ಸಂಪೂರ್ಣವಾದ ಸಹಕಾರವನ್ನು ನೀಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ೩,೯೫೩ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ. ಇದನ್ನು ಭರ್ತಿ ಮಾಡುವ ಸಲುವಾಗಿ ಶ್ರೀಮಾನ್ ಖರ್ಗೆಯವರು ಆಗಾಗ್ಗೆ ಹೇಳುತ್ತಿರುತ್ತಾರೆ. ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಕಾಂತಾರವರು, ಮಾನ್ಯ ವಿಶ್ವನಾಥಪಾಟೀಲ್‌ರವರು, ಹೈದರಾಬಾದ್ ಕರ್ನಾಟಕಕ್ಕೆ ಬಹಳ ಅನ್ಯಾಯವಾಗುತ್ತಿದೆ ಯೆಂದು ಹೇಳಿರುತ್ತಾರೆ. ಇದನ್ನು ನಾಲ್ಕು ಭಾಗಗಳಾಗಿ ಪುನರ್ ವಿಂಗಡಣೆ ಮಾಡಿ ೪ ಉಪ ಸಮಿತಿಗಳನ್ನು ರಚನೆಮಾಡಿ, ಆಯ್ಕೆ ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಸಮಿತಿಗಳನ್ನು ಇನ್ನು ಕೆಲವು ದಿನಗಳಲ್ಲಿ ರಚನೆ ಮಾಡುತ್ತೇವೆ. ಖಾಲಿ ಇರುವ ಉಪಾಧ್ಯಾಯರ ಹುದ್ದೆಗಳನ್ನು ನವೆಂಬರ್ ೧೫ರೊಳಗಾಗಿ ನೇಮಕ ಮಾಡಬೇಕೆಂದು ಇಲಾಖೆಗೆ ಆದೇಶವನ್ನು ಕೊಟ್ಟಿದ್ದೇನೆ. ಅವರು ಬಹಳ ಮುತುವರ್ಜಿ ವಹಿಸಿ, ಆಸಕ್ತಿ ವಹಿಸಿ ಕೆಲಸವನ್ನು ಮಾಡಬೇಕು. ಏಕೆಂದರೆ, ಉಪಾಧ್ಯಾಯರ ಹುದ್ದೆಗಳು ಖಾಲಿಯಿದ್ದರೆ, ಶಾಲೆಗಳನ್ನು ನಡೆಸಿ ಪ್ರಯೋಜನವಿಲ್ಲ. ವಿದ್ಯಾರ್ಥಿಗಳಿಗೆ ಉಪಯೋಗವಿಲ್ಲದ ಶಾಲೆ ಇದ್ದರೇನು, ಇಲ್ಲದಿದ್ದರೇನು ? ಶಾಲೆ ಇರಬೇಕಾದರೆ, ಉಪಾಧ್ಯಾಯರು ಇರಬೇಕು. ಕಟ್ಟಡ ಇಲ್ಲದೇ ಇದ್ದರೂ ಪರವಾಗಿಲ್ಲ. ಉಪಾಧ್ಯಾಯರಿಲ್ಲದೇ ಇದ್ದರೆ, ವಿದ್ಯಾರ್ಥಿಗಳು ಏನು ಕಲಿಯುತ್ತಾರೆ ಆದುದರಿಂದಾಗಿ, ನಾವು ಉಪಾಧ್ಯಾಯರ ನೇಮಕಕ್ಕೆ ಆದ್ಯತೆಯನ್ನು ಕೊಟ್ಟು, ಅದನ್ನು ಭರ್ತಿ ಮಾಡಬೇಕೆಂಬುದೇ ನಮ್ಮ ಆಶಯವಾಗಿದೆ. ಇದೇ ರೀತಿಯಲ್ಲಿ ಕಿರಿಯ ಕಾಲೇಜುಗಳಲ್ಲಿ ೧೫೦೩ ಹುದ್ದೆಗಳು ಖಾಲಿ ಇವೆ. ಅವನ್ನು ಭರ್ತಿ ಮಾಡುವ ಸಲುವಾಗಿ ಈಗಾಗಲೇ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ನಮ್ಮ ಇಲಾಖೆಯ ಕಮಿಷನರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರ ನೇತೃತ್ವದಲ್ಲಿ ಒಂದು ಸಮಿತಿ ರಚನೆಯಾಗಿದೆ. ಅದಕ್ಕೆ ಸದಸ್ಯರುಗಳಾಗಿ, ಡೈರೆಕ್ಟರ್ ಆಫ್ ಕೊಲೆಜಿಯೇಟ್ ಎಜುಕೇಷನ್, ಡೈರೆಕ್ಟರ್ ಆಫ್ ಟೆಕ್ನಿಕಲ್ ಬೋರ್ಡ್, ನವರು ಇರುತ್ತಾರೆ ಆಯಾ ಸಬ್ಜೆಕ್ಟ್‌ಗೆ ಸಂಬಂಧಪಟ್ಟ ಶಿಕ್ಷಕರನ್ನು ಆಯ್ಕೆ ಮಾಡುವಾಗ ಆಯಾಯ ಸಬ್‌ಜಕ್ಟ್‌ಗೆ ಸಂಬಂಧಪಟ್ಟ ಪ್ರತಿನಿಧಿಗಳನ್ನು ಕರೆಸಿ ವಿಶ್ವವಿದ್ಯಾನಿಲಯಗಳಿಂದ ಆಯ್ಕೆ ಮಾಡಬೇಕು. ಈ ಆಯ್ಕೆಯನ್ನು ನವೆಂಬರ್ ಒಂದರೊಳಗಾಗಿ ಪೂರ್ತಿ ಮಾಡಬೇಕೆಂದು ಸರ್ಕಾರದ ಆದೇಶವಾಗಿದೆ. ಪರೀಕ್ಷಾ ಮಂಡಲಿಯನ್ನು ಪುನರ್‌ವಿಂಗಡನೆ ಮಾಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ (In the academic level), ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಇವರು ಸುಪೀರಿಯರ್ ಆಫೀಸರ್ ಆಗಿರುತ್ತಾರೆ. ಅವರು ಮತ್ತೊಬ್ಬರ ಅಧ್ಯಕ್ಷತೆಯಲ್ಲಿ ಸದಸ್ಯರಾಗಿ ಕೆಲಸ ಮಾಡುವುದು ಚೆನ್ನಾಗಿ ಕಾಣುವುದಿಲ್ಲ. How can he work under the Director of Technical Education ?

SRI M. RAGAUPATHI.—I am allways subject to correction; I will consider your suggestion.

SRI M. VEERAPPA MOILY.—It is the question of academic education. I agree with you. ಪರೀಕ್ಷಾ ಮಂಡಲಿಗಳನ್ನು ಮಹಾರಾಷ್ಟ್ರದಲ್ಲಿ ಪುನರ್ ವಿಂಗಡಣೆ ಮಾಡಿದ್ದಾರೆ. ಅದೇ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ೩ ಭಾಗಗಳಾಗಿ ಪುನರ್ ವಿಂಗಡಣೆ ಮಾಡುವ ಸಲುವಾಗಿ ಮಹಾರಾಷ್ಟ್ರಕ್ಕೆ ಒಂದು ಸಮಿತಿಯನ್ನು ಕಳಿಸುತ್ತಿದ್ದೇವೆ. ತಮಿಳು ನಾಡಿನಲ್ಲೂ ಪುನರ್ ವಿಂಗಡಣೆಯಾಗಿದೆ. ಅಲ್ಲಿಗೂ ಕೂಡ ಒಂದು ಸಮಿತಿಯನ್ನು ಕಳಿಸುತ್ತೇವೆ.

ಕಮಿಷನರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ರವರ ನೇತೃತ್ವದಲ್ಲಿ. ಡೈರೆಕ್ಟರ್ ಆಫ್ ಟೆಕ್ಸ್ಟ್ ಬುಕ್ಸ್ ಡೈರೆಕ್ಟರ್ ಆಫ್ ಪ್ರಿಯೂನಿವರ್ಸಿಟಿ ಬೋರ್ಡ್ ಮತ್ತು ಸೆಕೆಂಡರಿ ಎಕ್ಸಾಮಿನೇಷನ್ ನಿರ್ದೇಶಕರು ಇದಕ್ಕೆ ಸದಸ್ಯರುಗಳಾಗಿರುತ್ತಾರೆ ಅವರು ಅಲ್ಲಿ ಪರಿಶೀಲನೆ ಮಾಡಿ ಕೊಂಡು ಬಂದ ನಂತರ ಪುನರ್ ವಿಂಗಡಣೆ ಮಾಡುವುದು ನಮ್ಮ ಉದ್ದೇಶವಾಗಿದೆ. ಏತಕ್ಕೆ ಪುನರ್ ವಿಂಗಡಣೆ ಮಾಡಬೇಕೆಂದರೆ, ಪರೀಕ್ಷೆಗಳಲ್ಲಿ ಅಥವಾ ಮಾರ್ಕ್ಸ್ ಕಾರ್ಡ್‌ಗಳಲ್ಲಿ ಏನಾದರೂ ಲೋಪದೋಷ ಬಂದಾಗ, ಅವರು ಬೆಂಗಳೂರಿಗೆ ಬರಬೇಕಾಗುತ್ತದೆ ಇದನ್ನು ತಪ್ಪಿಸಿ ಎಂದು ಹಲವಾರು ಸದಸ್ಯರು ಸೂಚನೆ ಮಾಡಿದ್ದಾರೆ ಅದಕ್ಕೋಸ್ಕರವಾಗಿ ಅಧಿಕಾರ ವಿಕೇಂದ್ರೀಕರಣವಾಗಬೇಕೆನ್ನುವ ದೃಷ್ಟಿಯಿಂದ ಗುಲ್ಬರ್ಗ ಮತ್ತು ಧಾರವಾಡ, ಈ ಎರಡು ಭಾಗದಲ್ಲಿ ಪರೀಕ್ಷಾ ಮಂಡಲಿಗಳನ್ನು ಸ್ಥಾಪನೆ ಮಾಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಮತ್ತೊಂದು ವಿಚಾರವನ್ನು ತಮಗೆ ಹೇಳಬೇಕೆಂದರೆ. ಯಾರು ಹಳ್ಳಿಗಾಡಿನಿಂದ ಬಂದ ವಿದ್ಯಾರ್ಥಿಗಳಿದ್ದಾರೆ, ಅವರಲ್ಲಿ ಶೇಕಡಾ ೪೮ ರಷ್ಟು ಪಾಸಾಗಿದ್ದಾರೆ ಪಟ್ಟಣ ಪ್ರದೇಶದಿಂದ ಬಂದಂತಹ ವಿದ್ಯಾರ್ಥಿಗಳಲ್ಲಿ ಶೇಕಡಾ ೫೨ ರಷ್ಟು ಪಾಸಾಗಿದ್ದಾರೆ. ಅಂತರ ಕಡಿಮೆಯಾಗಿದೆ. ಇವತ್ತು ಹಳ್ಳಿಗಾಡಿನಿಂದ ಬಂದಂತಹ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡುತ್ತಿದ್ದಾರೆನ್ನುವ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತಿತರ ಸದಸ್ಯರು ರೆಸಿಡೆನ್ಷಿಯಲ್ ಸ್ಕೂಲುಗಳ ಬಗ್ಗೆ ಹೇಳಿದ್ದಾರೆ. ನಾವು ಹರಿಜನ ಗಿರಿಜನ ವಿದ್ಯಾರ್ಥಿಗಳಿಗಾಗಿ ೪ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ ಆ ನಾಲ್ಕು ಶಾಲೆಗಳು ಉತ್ತಮ ರೀತಿಯಲ್ಲಿ ನಡೆಯಬೇಕೆಂಬ ಉದ್ದೇಶದಿಂದ ನಾವು ಏನು ಸ್ಥಾಪನೆ ಮಾಡಿದ್ದೇವೆಯೋ, ಆ ಉದ್ದೇಶ ಸಫಲವಾಗಲಿಲ್ಲವೆಂದು ಏನು ಹೇಳಿದ್ದಾರೆ ಅದು ಭಾಗಶಃ ನಿಜ. ಆದುದರಿಂದ ಈ ನಾಲ್ಕು ಶಾಲೆಗಳನ್ನು ಕೇಂದ್ರೀಯ ಶಾಲೆಗಳೇನಿವೆ, ಆ ಗುಣಮಟ್ಟಕ್ಕೆ ಏರಿಸಬೇಕೆಂದು ಮೂರು ಸಭೆಗಳನ್ನು ಮಾಡಿ, ಈಗ ಹಲವಾರು ಕಾರ್ಯಕ್ರಮಗಳನು ತೆಗೆದುಕೊಳ್ಳುತ್ತಿದ್ದೇವೆ ಈ ವರ್ಷದ ಒಳಗಡೆ ಈ ನಾಲ್ಕು ಶಾಲೆಗಳನ್ನು ಉತ್ತಮ ಶಾಲೆಗಳನ್ನಾಗಿ ಪರಿವರ್ತನೆ ಮಾಡುತ್ತೇವೆ. ಆ ದೆಶೆಯಲ್ಲಿ ಹೆಚ್ಚಿಗೆ ಹಣ ಖರ್ಚಾದರೂ ಚಿಂತೆಯಿಲ್ಲ. ಒಂದೊಂದು ಶಾಲೆಗೆ ಈಗ ತತ್‌ಕ್ಷಣ ಅಭಿವೃದ್ಧಿ ಮಾಡುವುದಕ್ಕೆ ೪ ಲಕ್ಷ ರೂಪಾಯಿಗಳು ಬೇಕಾಗುತ್ತದೆಂದು ಅಂದಾಜು ಮಾಡಿದ್ದೇವೆ. ಈ ನಾಲ್ಕು ಶಾಲೆಗಳಿಗೆ ಒಟ್ಟು ೧೬ ಲಕ್ಷ ರೂ. ಖರ್ಚು ಮಾಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಅದನ್ನು ಮಾಡುತ್ತೇವೆ, ಇವತ್ತಿನ ದಿವಸ ಟೆಕ್ಸ್ಟ್ ಬುಕ್ಸ್ ಅನ್ನು ರಚನೆ ಮಾಡಿ ಕೆಲವಕ್ಕೆ ೧೦ ವರ್ಷವಾಗಿದೆ. ಕೆಲವಕ್ಕೆ ಐದು ವರ್ಷವಾಗಿದೆ ಅದಕ್ಕೋಸ್ಕರವಾಗಿ ನಾವು ಒಂದು ಎಕ್ಸ್‌ಪರ್ಟ್ ಕಮಿಟಿ ಎಂದು ನೇಮಕ ಮಾಡಿದ್ದೇವೆ. ಅದರಲ್ಲಿ ಉಪಾಧ್ಯಾಯರು ಸಾಹಿತಿಗಳು ಮತ್ತು ಲೇಖಕರು, ಅಂದರೆ ಆ ವಿಷಯಕ್ಕೆ ಸಂಬಂಧಪಟ್ಟವರು ಇರುತ್ತಾರೆ. ಅದರ ಮೂಲಕ ಈ ವೈಜ್ಞಾನಿಕ ಪಠ್ಯ ಪುಸ್ತಕಗಳೇನಿದೆ, ಅದನ್ನು ಬದಲಾವಣೆ ಮಾಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಇವತ್ತಿನ ಸಮಾಜಕ್ಕೆ ಹೊಂದಿಕೊಳ್ಳುವಂತಹ ಸಮಾಜವಾದಿ ಸಮಾಜವನ್ನು ನಿರ್ಮಾಣವಾಗುವಂತಹದಕ್ಕೆ ಅನುವು ಆಗುವ ರೀತಿಯಲ್ಲಿ ಈ ಪುಸ್ತಕಗಳನ್ನು ಬರಸಬೇಕು ಎನ್ನುವುದೇ ನಮ್ಮ ಉದ್ದೇಶವಾಗಿದೆ.

ಶ್ರೀ ಬಸವಲಿಂಗಪ್ಪ.—ಹಾಗಾದರೆ ಹಳೇ ಸರಕೆಲ್ಲಾ ಹೋಗುತ್ತದೆ.

ಶ್ರೀ ಎಂ. ರಘುಪತಿ.—ನಿಮ್ಮ ಭಾಷೆಯಲ್ಲಿ ಹೇಳಬೇಕಾದರೆ. ಎಲ್ಲಾ ಹಳೆ ಸರಕು ಹೋಗುತ್ತದೆ

ಸಾಧರಣವಾಗಿ ಮಂತ್ರಿಗಳಿಗೆ ಸನ್ಮಾನವನ್ನು ಜನರು ಮಾಡುತ್ತಿದ್ದರು. ನಾವೆಲ್ಲರೂ ಸನ್ಮಾನವನ್ನು ಮಾಡಿಸಿಕೊಂಡಿದ್ದೇವೆ, ಇನ್ನು ಮುಂದೆ ಯಾರು ಪರೀಕ್ಷೆಗಳಲ್ಲಿ ರ್‍ಯಾಂಕುಗಳನ್ನು ಪಡೆಯುತ್ತಾರೋ ಅಂದರೆ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಯಾರು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗುತ್ತಾರೋ ಅಂತಹವರನ್ನು ಕರೆದು ಇನ್ನು ಮುಂದೆ ಸನ್ಮಾನ ಮಾಡುತ್ತೇವೆ. ಈ ವರ್ಷ ಗಾಂಧಿ ಜಯಂತಿಯನ್ನು ಆಚರಿಸುವಾಗ, ಅಂತಹ ಮಕ್ಕಳನ್ನು ಗುರುತಿಸಿ ಸನ್ಮಾನ ಮಾಡಿ ಮತ್ತೆ ಪಾರಿತೋಷಕಗಳನ್ನು ಕೊಡುತ್ತೇವೆ. ಅದೇ ಸಂದರ್ಭದಲ್ಲಿ ಒಳ್ಳೆಯ ರೀತಿಯಲ್ಲಿ ಪಾಠ ಮಾಡುವುದಕ್ಕೆ ಹೆಸರಾದವರನ್ನು ಕರೆದು ಅವರಿಗೂ ಸನ್ಮಾನವನ್ನು ಮಾಡುತ್ತೇವೆ, ಏಕೆಂದರೆ. ಇದರಿಂದ ವಿದ್ಯಾರ್ಥಿಗಳಲ್ಲಿ ಪೈಪೋಟಿ ಬಂದು ಸರ್ಕಾರದಿಂದ ಪಾರಿತೋಷಕವನ್ನು ಪಡೆಯಬೇಕೆಂದು ಚೆನ್ನಾಗಿ ಓದುತ್ತಾರೆ, ಮತ್ತೆ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳನ್ನು ಯಾವಾಗ ನಡೆಸಬೇಕೆಂದು ಸಮಯವನ್ನೂ ನಿಗಧಿ ಮಾಡಿದ್ದೇವೆ ಆ ನಿಗದಿತ ಸಮಯದೊಳಗೆ ಪರೀಕ್ಷೆಗಳನ್ನು ನಡೆಸಬೇಕೆಂಬುದೇ ನಮ್ಮ ಉದ್ದೇಶವಾಗಿದೆ. ಪರೀಕ್ಷೆಗಳನ್ನು ನಡೆಸುವ ಬಗ್ಗೆ ಒಂದು ಕ್ಯಾಲೆಂಡರ್ ಸಿಸ್ಟಮ್‌ನ್ನು ಸಹ ಮಾಡಿದ್ದೇವೆ. ಅದು ಬಹಳ ಉದ್ದವಾಗಿದೆ ಆದ್ದರಿಂದ ಈಗ ಅದನ್ನು ಓದುವುದಿಲ್ಲ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಪ್ರತಿವರ್ಷ ಏಪ್ರಿಲ್ ತಿಂಗಳ ೫ನೇ ತಾರೀಖು ಪ್ರಾರಂಭ

ವಾಗುತ್ತದೆ. ಪ್ರಿಯೂನಿವರ್ಸಿಟಿಯ ಪರೀಕ್ಷೆ ಏಪ್ರಿಲ್ ತಿಂಗಳ ೨೫ನೆ ತಾರೀಕು ಪ್ರಾರಂಭ ವಾಗುತ್ತದೆ. ಮತ್ತೆ ಎಸ್ ಎಸ್.ಎಲ್.ಸಿ.ಗೆ ಅಡ್‌ಮಿಷನ್‌ನ್ನು ಪ್ರತಿವರ್ಷ ಜೂನ್ ತಿಂಗಳ ೩ನೇ ತಾರೀಖಿನಂದು ಪ್ರಾರಂಭವಾಗುತ್ತದೆ. ಪ್ರಿಯೂನಿವರ್ಸಿಟಿಗೆ ಜೂನ್ ೧೫ರಿಂದ ಅಡ್‌ಮಿಷನ್ ಪ್ರಾರಂಭವಾಗುತ್ತದೆ. ಎಂಟರೆನ್ಸ್ ಎಕ್ಸಾಮಿನೇಷನಲ್ಲಿ ಪಡೆದ ಅಂಕಗಳ ಮೇಲೆ ವಿದ್ಯಾರ್ಥಿಗಳ ಗುಣ ಮಟ್ಟವನ್ನು ಅಳೆಯಬೇಕೆಂದು ಕೆಲವರು ಹೇಳಿದ್ದಾರೆ. ಆದರೆ ಅದು ಸರಿಯಾದ ಅಭಿಪ್ರಾಯವಲ್ಲ. ಎರಡು ವರ್ಷ ಪಿ.ಯು.ಸಿ. ಓದಿದಕ್ಕೆ ಆ ವಿದ್ಯಾರ್ಥಿಗೆ ಬೆಲೆ ಕೊಡಬೇಕು. ಆದುದರಿಂ ಪಿ.ಯು.ಸಿ ಪರೀಕ್ಷೆಯಲ್ಲಿ ಪಡೆದ ೫೦ ಅಂಕಗಳನ್ನು ಹಾಗು ಎಂಟರೆನ್ಸ್ ಪರೀಕ್ಷೆಯಲ್ಲಿ ಪಡೆದ ೫೦ ಅಂಕಗಳನ್ನು ಒಟ್ಟಿಗೆ ಸೇರಿಸುವಂತಹ ನಿಯಮವನ್ನು ಅಳವಡಿಸಿದ್ದೇವೆ. ಇದರಿಂದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುತ್ತದೆ. ಕೆಲವರು, ಪ್ರಿಯೂನಿವರ್ಸಿಟಿ ಫಲಿತಾಂಶ ಬಂದ ಮೇಲೆ ಈ ಎಂಟರೆನ್ಸ್ ಎಕ್ಸಾಮಿನೇಷನ್ನನ್ನು ಮಾಡಿ ಎಂದು ಹೇಳಿದರು. ಅದನ್ನು ನಾನು ಪರಿಶೀಲನೆ ಮಾಡಿದೆ, ಪ್ರಿಯೂನಿವರ್ಸಿಟಿ ಫಲಿತಾಂಶ ಬಂದ ಮೇಲೆ ಇದನ್ನು ನಡೆಸಿದರೆ ಬಹಳ ನಿಧಾನವಾಗುತ್ತದೆ. ಮೊದಲೇ ಮಾಡಿದರೆ ಆಗಸ್ಟ್ ೩೦ನೇ ತಾರೀಖಿನ ಒಳಗೆ ಅಥವಾ ಸೆಪ್ಟೆಂಬರ್ ೧೫ನೇ ತಾರೀಖಿನೊಳಗೆ ವಿದ್ಯಾರ್ಥಿ ಸೇರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಇಲ್ಲದೇ ಹೋದರೆ ಸರಿಯಾದ ಕಾಲದಲ್ಲಿ ವಿದ್ಯಾರ್ಥಿ ಗಳನ್ನು ಸೇರಿಸಿಕೊಳ್ಳುವುದಕ್ಕಾಗುವುದಿಲ್ಲ, ಅದಕೋಸ್ಕರ ಈ ಪದ್ಧತಿಯನ್ನು ನಾವು ಅನುಸರಿಸುತ್ತಿದ್ದೇವೆ. ಮತ್ತೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗೆ ಹಣವನ್ನು ಕೊಡುತ್ತೇವೆ. ಇದರ ಜೊತೆಗೆ ಕೆಲವು ದಾನಿಗಗಳು ಸಹ ಹಣವನ್ನು ಸಹ ಕೊಡುತ್ತಿದ್ದಾರೆ ಆ ದಾನಿಗಳ ನಾವು ಹಣ ಕೊಟ್ಟರೆ, ಆಯಾ ಶಾಲೆಗಳಿಗೆ ನಮ್ಮ ಹೆಸರುಗಳನ್ನು ಇಡಬೇಕೆಂದು ಹಲವಾರು ಸೂಚನೆಗಳು ಬಂದಿವೆ. ಆ ಕಾರ್ಯಕ್ರಮವನ್ನು ನಾವು ಅಳವಡಿಸುತ್ತಿದ್ದೇವೆ ಅದು ಹೇಗೆಂದರೆ, ೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ೪ ಕೊಠಡಿಗಳು ಇರುವ ಶಾಲೆಯನ್ನು ಕಟ್ಟಿಸಿ ಯಾರು ದಾನ ಮಾಡುತ್ತಾರೋ, ಆ ದಾನಿಗಳ ಹೆಸರನ್ನು ಆ ಶಾಲೆಗೆ ಇಡುತ್ತೇವೆ. ಜೂನಿಯರ್ ಕಾಲೇಜುಗಳಿಗೆ ಯಾರು ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೋ ಅವರ ಹೆಸರನ್ನು ಆ ಜೂನಿಯರ್ ಕಾಲೇಜಿಗೆ ಇಡುತ್ತೇವೆ ಹಾಗೆಯೇ ಯಾರು ಒಂದುವರೆ ಲಕ್ಷ ರೂಪಾಯಿಗಳನ್ನು ಕಾಲೇಜುಗಳನ್ನು ಕಟ್ಟುವುದಕ್ಕೆ ಕೊಡುತ್ತಾರೊ ಅವರ ಹೆಸರನ್ನು ಆ ಕಾಲೇಜಿಗೆ ಇಡುತ್ತೇವೆ. ಈ ರೀತಿ ದಾನ ಮಾಡುವ ದಾನಿಗಳು ಮುಂದೆ ಬರುತ್ತಾರೆಂದು ನಾವು ನಿರೀಕ್ಷಿಸಿಕೊಂಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಎಷ್ಟು ದಾನಿಗಳು ಬರುತ್ತಾರೆಂದು ನಿಮ್ಮ ನಿರೀಕ್ಷೆ ಇದೆ ?

ಶ್ರೀ ಎಂ. ರಘುಪತಿ.—ಮಾನ್ಯ ಬಸವಲಿಂಗಪ್ಪನವರು ಮಾನ್ಯ ಕೌಜಲಗಿಯವರಂತಹವರು ಮುಂದೆ ಬಂದರೆ ಬಹಳ ಜನ ದಾನಿಗಳು ಮುಂದೆ ಬರುತ್ತಾರೆಂದು ತಿಳಿದುಕೊಂಡಿದ್ದೇನೆ ಇನ್ನು ಖಾಸಗಿ ಶಾಲೆಗಳಲ್ಲಿ ಇವತ್ತು ಶಿಕ್ಷಣವನ್ನು ಅಕಾಡೆಮಿಕ್ ಆಗಿ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಶಿಕ್ಷಣದಲ್ಲಿ ಆಸಕ್ತಿ ಇರುವ ವ್ಯಕ್ತಿಗಳಲ್ಲಿ ಖಾಸಗಿ ಶಾಲೆಗಳು ಈ ದಿನ ಉಳಿದಿಲ್ಲ. ಎಲ್ಲಾ ವ್ಯಾಪಾರಿ ಕೇಂದ್ರಗಳ ತರಹ ಅವರು ಕೆಲಸ ಮಾಡುತ್ತಿರುವುದನ್ನು ನಾನು ಪ್ರವಾಸ ಮಾಡಿದ ಸಮಯದಲ್ಲಿ ನೋಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಕೆಲವರು ಮಾತ್ರ ವ್ಯಾಪಾರಿ ಮನೋಭಾವವನ್ನು ಹೊಂದಿರುತ್ತಾರೆ ಅಷ್ಟೇ.'

ಶ್ರೀ ಎಂ. ರಘುಪತಿ.—ಕ್ಯಾನ್ಸರ್ ಕಾಯಿಲೆ ಎಷ್ಟು ಬೇಕು ಸ್ವಾಮಿ, ಜಾಸ್ತಿ ಬೇಕಾಗಿಲ್ಲ. ಸ್ವಲ್ಪ ಮಾತ್ರ ಮನುಷ್ಯನ ದೇಹಕ್ಕೆ ಪ್ರವೇಶ ಮಾಡಿದರೆ ಸಾಕು ಎಷ್ಟು ತಿಂದು ಹಾಕಬೇಕೊ, ಅಷ್ಟನ್ನೂ ತಿಂದುಹಾಕುತ್ತದೆ. ಈ ವ್ಯಾಪಾರಿ ದೃಷ್ಟಿಯಿಂದ ಕೆಲವರು ಶಾಲೆಗಳನ್ನು ಪ್ರಾರಂಭ ಮಾಡಲು ಪ್ರವೇಶ ಮಾಡಿದ್ದಾರೆ. ಅವರಿಗೆ ಹಣ ಗಳಿಸುವುದೇ ಮೂಲ ಉದ್ದೇಶವೆಂದು ಕಾಣುತ್ತದೆ. ಇದರನ್ನು ಯಾವ ರೀತಿ ಕಂಟ್ರೋಲ್ ಮಾಡಬೇಕು ಎನ್ನುವುದೇ ಕಷ್ಟದ ಕೆಲಸವಾಗಿದೆ. ನಾನು ಹೋದ ಕಡೆಗಳಲ್ಲೆಲ್ಲಾ ಜನರು ಈ ವಂತಿಗೆ ಪದ್ಧತಿಯನ್ನು ನಿಲ್ಲಿಸಬೇಕೆಂದು ಮನವಿ ಸಲ್ಲಿಸುತ್ತಿದ್ದಾರೆ, ಜನರ ಅಭಿಪ್ರಾಯ ಕ್ಕನುಗುಣವಾಗಿ, ಪ್ರಜಾಪ್ರಭುತ್ವ ನೀತಿಗನುಗುಣವಾಗಿ, ಸ್ವಲ್ಪದಾದರು ಸಮಾಜವಾದಿ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವ ರೀತಿಯಲ್ಲಿ ಈ ವಂತಿಕೆ ಪದ್ಧತಿಯನ್ನು ರದ್ದು ಮಾಡಿದ್ದೇವೆ. ವಂತಿಕೆಯನ್ನು ರದ್ದು ಮಾಡಿದಾಗ ಸರ್ಕಾರದಿಂದ ಅನುದಾನ ಪಡೆಯುವ ಕೆಲವು ಶಾಲೆಗಳಿಗೆ ತೊಂದರೆ ಯಾಗಿರುವುದು ನಿಜ, ಇಲ್ಲ ಎಂದು ನಾನು ಹೇಳುವುದಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಗೂ ಅವನ ಅರ್ಹತೆ ಆಧಾರದ ಮೇಲೆ ಸೀಟು ಸಿಗಲಿ ಎನ್ನುವ ನೀತಿಯನ್ನು ಇಟ್ಟುಕೊಂಡು ನಮ್ಮ ಸರ್ಕಾರ

ಪಂತಿಕೆಯನ್ನು ವಸೂಲಿಮಾಡುವುದನ್ನು ನಿಷೇಧಿಸಿತು. ಈ ರೀತಿ ರದ್ದು ಮಾಡಿರುವುದು ಸರಿಯಲ್ಲ ವೆಂದು ಹಲವಾರು ಜನರ ಅಭಿಪ್ರಾಯ ಬಂತು.

ಆದೇ ಪ್ರಕಾರ ಸಮಿತಿಯನ್ನು ರಚನೆ ಮಾಡಿದ್ದೇವೆ. ಈ ಬಗ್ಗೆ ವಿಧಾನಸಭೆಯ ಸದಸ್ಯರನ್ನು ಮತ್ತು ವಿಧಾನ ಪರಿಷತ್‌ನ ಸದಸ್ಯರನ್ನು ಕರೆದಿದ್ದವು. ಮಾನ್ಯ ಬಸವಲಿಂಗಪ್ಪನವರೂ ಬಂದಿದ್ದರು ಮಾನ್ಯ ವೀರಪ್ಪ ಮೊಯಿಲಿಯವರು ಫೋನ್ ಮಾಡಿ ಈ ಸಭೆಗೆ ಕರೆದಾಗ ಅವರು ಊರಲ್ಲಿ ಇರಲಿಲ್ಲ. ಎಲ್ಲಾ ಕಡೆಯ ಸದಸ್ಯರನ್ನು ಕರೆದು ಶಿಕ್ಷಣ ತಜ್ಞರನ್ನು ಕರೆದು ಶಾಲೆಗಳನ್ನು ನಡೆಸುವವರನ್ನು ಕರೆದು ಮತ್ತು ಇವಕ್ಕೆ ಸಂಬಂಧಪಟ್ಟ ಹಲವಾರು ಜನರನ್ನು ಕರೆದು ಸಭೆ ನಡೆಸಿದ್ದೇವೆ. ಈ ಬಗ್ಗೆ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದವು. ಅಷ್ಟರೊಳಗೆ ತಡೆಯಾಜ್ಞೆ ಬಂತು. ಮಾನ್ಯ ಅಧ್ಯಕ್ಷರೇ, ಸುಮಾರು ೧೦ ರಿಂದ ೧೨ ಸಾವಿರ ಪತ್ರಗಳು ಬಂದಿದೆ. ಅದರಲ್ಲಿ ಕೆಲವೇ ಕೆಲವರು ಮಾತ್ರ ಇದು ಸರಿಯಲ್ಲ ಎಂದು ಬರೆದಿದ್ದಾರೆ. ಬಹುತೇಕ ಜನರು ಇದು ಉತ್ತಮವಾದ ಕಾರ್ಯ ಎಂದು ಪ್ರಶಂಸೆ ಮಾಡಿದ್ದಾರೆ. ಖಾಸಗಿಯವರು ಮಕ್ಕಳ ತಂದೆ ತಾಯಿಗಳನ್ನು ಶೋಷಣೆ ಮಾಡುತ್ತಾ ಇದ್ದಾರೆ ಈ ಕ್ರಮ ಅದನ್ನು ತಡೆಗಟ್ಟಲು ಉತ್ತಮವಾದೀತು, ಇದು ಒಳ್ಳೆಯ ಪದ್ಧತಿ ಎಂದು ಬಹು ಸಂಖ್ಯಾತ ಜನರು ಎಂದು ಬರೆದಿದ್ದಾರೆ. ಬೇಕಾದರೆ ತಮಗೆ ಆ ಪತ್ರವನ್ನು ಕೊಡಲು ನಾನು ತಯಾರಾಗಿದ್ದೇನೆ. ಮತ್ತೆ ಹಲವಾರ ಜನ ಪತ್ರ ಬರೆದಿದ್ದಾರು. ಉಪಾಧ್ಯಾಯರುಗಳು ಪತ್ರ ಬರೆದಿದ್ದರು. ಏನೆಂದರೆ ನಾವುಗಳು ಪಡೆಯುವುದು ಒಂದು ಸಂಬಳವಾದರೆ, ಸಹಿ ಮಾಡುವುದು ಮತ್ತೊಂದು ಸಂಬಳಕ್ಕೆ ಎಂದು ಬರೆದಿದ್ದಾರೆ. ಇದರಿಂದ ನಾವುಗಳು ಇವೊತ್ತು ಮಾನಸಿಕ ಹಿಂಸೆಗೆ ಗುರಿಯಾಗಿದ್ದೇವೆಂದು ಮತ್ತು ಇನ್ನು ಕೆಲವು ವಿಷಯಗಳ ಬಗ್ಗೆ ಬರೆದಿದ್ದಾರೆ. ಹಳ್ಳಿಗಾಡಿನಿಂದಲೂ ಇದರ ಬಗ್ಗೆ ಬಹಳಷ್ಟು ಪತ್ರಗಳು ಬಂದಿವೆ. ಅದನ್ನು ಗಮನಿಸಿದರೆ. ಹಳ್ಳಿಗಾಡಿನ ಜನತೆಗೂ ಇದರ ಒಂದು ಪರಿಣಾಮದ ಬಿಸಿ ತಟ್ಟಿದೆ ಎಂದು ನನಗೆ ಮನವರಿಕೆಯಾಗಿದೆ. ಆದರೆ ನೀವು ಖಾಸಗಿ ಶಾಲೆಗಳಿಗೆ ಏಕೆ ಪರವಾನಗಿ ಕೊಡುತ್ತೀರಿ ಎಂದು ಎಂದು ಕೇಳಿದರೆ ಅದಕ್ಕೆ ನನ್ನ ಹತ್ತಿರ ಉತ್ತರ ಇಲ್ಲ. ಮತ್ತು ನಾನು ಉತ್ತರ ಕೊಡುವ ಪರಿಸ್ಥಿಯಲ್ಲಿ ಇಲ್ಲ. ಕಾರಣಗಳು ನಿಮಗೂ ಗೊತ್ತೆ ಇದೆ. ಆದರೆ ಉತ್ತಮವಾದ ವ್ಯಕ್ತಿಗಳನ್ನು ನಾವು ಪ್ರೋತ್ಸಾಹ ಮಾಡುವುದು ನಮ್ಮ ಉದ್ದೇಶ ಅಧ್ಯಕ್ಷರೇ. ಈಗ ಕೋರ್ಟಿನ ತಡೆಯಾಜ್ಞೆ ಬಂದಮೇಲೆ, ಹಲವಾರು ಜನರು ಕೇಳುತ್ತಾ ಇದ್ದಾರೆ. ಈಗ ಮೊದಲಿಗಿಂತಲೂ ಜಾಸ್ತಿ ಹಣವನ್ನು ಖಾಸಗಿ ಸಂಸ್ಥೆಯವರು ತೆಗೆದುಕೊಳ್ಳುತ್ತಾ ಇದ್ದಾರೆ ಎಂದು. ಆದರೆ ಏನು ಮಾಡುವುದು ? ಅವರು ಏನು ತೀರ್ಮಾನ ಕೊಡುತ್ತಾರೋ ಅದಕ್ಕೆ ನಾವು ತಲೆ ಬಾಗಬೇಕಾಗಿದೆ. ಆದುದರಿಂದ ಏನು ತೀರ್ಪನ್ನು ಕೊಡುತ್ತಾರೋ ಅದನ್ನು ನಾವು ಕಾಯ್ದು ನೋಡುತ್ತಾ ಇದ್ದೇವೆ. ಅಲ್ಲಿಯವರೆಗೆ ತೊಂದರೆಯಾಗುತ್ತದೆ. ಅದು ನನಗ ಗೊತ್ತಿದೆ. ಜನರು ಅಲ್ಲಿಯವರೆಗೆ ತಡೆದುಕೊಳ್ಳಬೇಕು; ಬೇರೆ ವಿಧಿ ಇಲ್ಲ. ಏಕೆಂದರೆ ಇದು ನಾನು ಸೃಷ್ಟಿ ಮಾಡಿದವಲ್ಲ.

ಇನ್ನು ಲೈಬ್ರರಿಗಳ ವಿಷಯದಲ್ಲಿ ಹೇಳುವುದಾದರೆ. ಈ ಲೈಬ್ರರಿ ವಿಚಾರದಲ್ಲಿ ಹಲವಾರು ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಹೇಳುವುದಿಷ್ಟೆ. ನನ್ನ ಹತ್ತಿರ ಹಣ ಇಲ್ಲ. ಇರುವ ಹಣ ಸಾಲದು, ಇರುವ ಹಣದಲ್ಲಿಯೇ ನಾವು ಕೆಲಸ ಮಾಡಿಕೊಂಡು ಹೋಗ ಬೇಕಾಗಿದೆ. ನಮ್ಮಲ್ಲಿ ಇರುವುದು ೧೫೫ ಲಕ್ಷ ರೂಪಾಯಿಗಳು. ಅದರಲ್ಲಿ ೧೧೦ ಲಕ್ಷ ರೂಪಾಯಿಗಳ ವರೆಗೆ ಸಂಬಳ ಸಾರಿಗೆ ಹೊರಟು ಹೋಗುತ್ತದೆ. ಇನ್ನೂ ಕೇವಲ ೪೦ ಲಕ್ಷ ರೂಪಾಯಿಗಳು ಮಾತ್ರ ನಮ್ಮ ಕೈಯಲ್ಲಿ ಉಳಿಯುತ್ತದೆ. ಆ ಮಿತಿಯಲ್ಲಿಯೇ ನಾವು ಕೆಲಸ ಮಾಡಬೇಕಾಗುತ್ತವೆ. ಹಿಂದೆ ಒಂದು ಪದ್ಧತಿ ಇತ್ತು ಮಾನ್ಯ ಮೊಯಿಲಿಯವರ ಕಾಲದಲ್ಲಿ ಇದ್ದ ಪದ್ಧತಿ ಏನೆಂದರೆ, ಪುಸ್ತಕಗಳನ್ನು ಬಲ್ಕ್ ಪರ್ಚೇಸ್ ಮಾಡುವುದಕ್ಕೆ ಅದರ ಮೂಲಕ ಸಾಹಿತಿಗಳಿಗೆ, ಲೇಖಕರಿಗೆ ಉತ್ತೇಜನ ಕೊಡ ಬೇಕು ಎಂದು ಉದ್ದೇಶವಿತ್ತು. ಆದರೆ ಈಗ ಎರಡು ವರ್ಷಗಳಿಂದ ಅದನ್ನು ನಿಲ್ಲಿಸಿದ್ದೇವೆ. ಕಾರಣ ಹಣದ ಅಭಾವ. ಹಣದ ಅಭಾವದಿಂದಾಗಿ ಉತ್ತಮವಾದಂತಹ ಆ ಕಾರ್ಯಕ್ರಮವನ್ನು ನಿಲ್ಲಿಸಬೇಕಾಗಿ ಬಂತು. ಆದಕ್ಕೋಸ್ಕರನೇ ಡೆಲ್ಲಿಯಲ್ಲಿ ನಾಶನಲ್ ಬುಕ್ ಟ್ರಸ್ಟ್ ಎಂದು ಇದೆ. ಅದೇ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಕೂಡಾ ಕರ್ನಾಟಕ ಬುಕ್ ಟ್ರಸ್ಟ್ ಎಂದು ಮಾಡುತ್ತಾ ಇದ್ದೇವೆ. ಆ ಟ್ರಸ್ಟನ್ನು ರಚನೆ ಮಾಡಿ ಆದರ ಮೂಲಕ ಉದ್ದೇಶಿತ ಕಾರ್ಯವನ್ನು ನಿರ್ವಹಿಸುತ್ತವೆ. ಶ್ರೀಮಾನ್ ಮೊಯಿಲಿಯವರು ಪುಸ್ತಕಗಳನ್ನು ತೆಗೆದು ಕೊಳ್ಳುತ್ತೇವೆ. ಹಾಗೆಯೇ ಯಾರ್ಯಾರು ಉತ್ತಮ ಲೇಖಕರು ಬರೆದಿದ್ದಾರೆ ಅವರ ಪುಸ್ತಕಗಳನ್ನು ತೆಗೆದುಕೊಳ್ಳುತ್ತೇವೆ, ಮಾನ್ಯ ನಾರಾಯಣಕುಮಾರ್ ಅವರು ಕನ್ನಡ ಹೋರಾಟಗಾರರು ಅವರು ಬರೆದ ಪುಸ್ತಕವನ್ನೂ ಸಹ ತೆಗೆದು ಕೊಳ್ಳುತೇವೆ. ಒಟ್ಟಿ

ನಲ್ಲಿ ಉದ್ದೇಶಿತ ಕಾರ್ಯವನ್ನು ನಾವು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರೇ, ಇನ್ನೂ ಮೊಬೈಲ್ ಲೈಬ್ರರೀಸ್ ಬಗ್ಗೆ ಮಾನ್ಯ ಖರ್ಗೆಯವರು ಮತ್ತು ಇತರ ಸದಸ್ಯರು ಮಾತನಾಡಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ನಾಲ್ಕು ಮೊಬೈಲ್ ಲೈಬ್ರರಿಗಳು ಇವೆ. ಅವುಗಳು ಬೆಂಗಳೂರು, ಮೈಸೂರು, ಧಾರವಾಡ ಮತ್ತು ಬೆಳಗಾವಿಯಲ್ಲಿ ಇವೆ. ಇನ್ನೂ ಎರಡನ್ನು ಸ್ಥಾಪನೆ ಮಾಡಬೇಕೆಂದು ನಾವು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಅವುಗಳಲ್ಲಿ ಒಂದನ್ನು ಮಂಗಳೂರಿನಲ್ಲಿಯೂ ಇನ್ನೊಂದನ್ನು ಗುಲ್ಬರ್ಗದಲ್ಲಿಯೂ ಸ್ಥಾಪನೆ ಮಾಡಬೇಕೆಂದು ಇದ್ದೇವೆ. ಯಾಕೆಂದರೆ ಗುಲ್ಬರ್ಗವನ್ನು ಕೈಬಿಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ನಮ್ಮ ಗುಲ್ಬರ್ಗ ಜಿಲ್ಲೆ ಯಾವಾಗಲೂ ಕೊನೆಯಲ್ಲಿ ಬರುತ್ತದೆ.

ಶ್ರೀ ಎಂ. ರಘುಪತಿ.—ಏನು ಮಾಡುವುದು ಅದು ರಾಜ್ಯದ ಕೊನೆಯಲ್ಲಿ ಇದೆ. ಹಾಗೆಯೇ ಈ ಮೊಬೈಲ್ ಲೈಬ್ರರಿಗಳಿಗೆ ಉತ್ತಮವಾದ ಸಾಹಿತಿಗಳ ಹೆಸರನ್ನು ಇಡಬೇಕೆಂದು ಯೋಚನೆ ಮಾಡಿದ್ದೇವೆ. ಆದಕ್ಕಾಗಿ ಆ ಸಾಹಿತಿಗಳ ಒಪ್ಪಿಗೆಗಾಗಿ ಕೇಳಿದ್ದೇವೆ. ಅವರುಗಳು ಒಪ್ಪಿಗೆಯನ್ನೂ ಕೊಟ್ಟಿದ್ದಾರೆ. ಆದಕ್ಕಾಗಿ ಈ ಸಂದರ್ಭದಲ್ಲಿ ನಾನು ಅವರನ್ನು ಅಭಿನಂದಿಸುತ್ತಾ ಇದ್ದೇನೆ. ಬೆಂಗಳೂರಿನ ಲೈಬ್ರರಿಗೆ ಮಾನ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಹೆಸರನ್ನು ಇಡಬೇಕೆಂದು ನಿರ್ಣಯ ಮಾಡಿದ್ದೇವೆ. ಅದಕ್ಕೆ ಅವರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಮೈಸೂರಿನಲ್ಲಿ ಮಾನ್ಯ ಡಾಕ್ಟರ್ ಕೆ.ವಿ. ಪುಟ್ಟಪ್ಪನವರ ಹೆಸರನ್ನು ನಾಮಕರಣ ಮಾಡಬೇಕೆಂದು ನಿರ್ಣಯಿಸಿ ಅವರನ್ನು ಕೇಳಿದಾಗ ಅವರೂ ಕೂಡಾ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಹಾಗೆಯೇ ಮಾನ್ಯ ಶಿವರಾಮ ಕಾರಂತರ ಹೆಸರನ್ನು ಬೆಳಗಾವಿಯ ಲೈಬ್ರರಿಗೆ ಇಡಬೇಕೆಂದು ಮಾಡಿದ್ದೇವೆ. ಈ ಮಹಾನ್ ಸಾಹಿತಿಗಳೆಲ್ಲರೂ ಜ್ಞಾನ ಪೀಠ ಪ್ರಶಸ್ತಿಯನ್ನು ಪಡೆದವರು ಆಗಿದ್ದಾರೆ. ಹಾಗೆಯೇ ದಿವಂಗತ ದ. ರಾ. ಬೇಂದ್ರೆಯವರ ಹೆಸರನ್ನು ಧಾರವಾಡದ ಲೈಬ್ರರಿಗೆ ಇಡಬೇಕೆಂದು ಮಾಡಿದ್ದೇವೆ. ಹಾಗೆಯೇ ಬೆಂಗಳೂರಿನಲ್ಲಿರುವ ಸೆಂಟ್ರಲ್ ಲೈಬ್ರರಿಯನ್ನು ಇನ್ನು ಮುಂದೆ ರೆಫರೆನ್ಸ್ ಲೈಬ್ರರಿಯಾಗಿ ಮಾಡುತ್ತಾ ಇದ್ದೇವೆ. ಏಕೆಂದರೆ ರೀಸರ್ಚ್ ಮಾಡುವವರಿಗೆ ಮತ್ತು ಪುಸ್ತಕಗಳನ್ನು ಓದುವುದಕ್ಕೋಸ್ಕರ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಕೇಂದ್ರ ಗ್ರಂಥಾಲಯವನ್ನು ಇಂದಿರಾನಗರದಲ್ಲಿ ಕಟ್ಟುವುದಕ್ಕೆ ಅಂದಾಜನ್ನು ತಯಾರು ಮಾಡಿದ್ದೇವೆ. ಅದನ್ನು ಕಟ್ಟುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ ಇದ್ದೇನೆ. ಮತ್ತೆ ರಾಜಾರಾಮ್ ಮೋಹನರಾಯ್ ಟ್ರಸ್ಟ್ ಮೂಲಕ ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಾ ಇದ್ದೇವೆ. ಅದು ಹಳ್ಳಿಗಾಡಿನಲ್ಲಿರುವ ಗ್ರಂಥಾಲಯಗಳಿಗೆ ಸಹಾಯ ಆಗುತ್ತದೆ. ಅವರು ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಾ ಇದ್ದಾರೆ. ಇದನ್ನು ಈ ಸಾರಿ ವ್ಯಾಪಕವಾಗಿ ಬಳಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಇನ್ನೂ ಪೀಣ್ಯದಲ್ಲಿ ಒಂದು ಟೆಕ್ನಿಕಲ್ ಲೈಬ್ರರಿ ಅಂದರೆ, ಟೆಕ್ನಿಕಲ್ ಸಬ್ಜೆಕ್ಟ್ಸ್‌ಗೆ ಸಂಬಂಧಪಟ್ಟ ಹಾಗೆ ಇಂಡಸ್ಟ್ರೀಯಲಿಸ್ಟ್ಸ್‌ಗಳನ್ನು ಪಾಲುದಾರನ್ನಾಗಿ ಮಾಡಿಕೊಂಡು ಒಂದು ಲೈಬ್ರರಿಯನ್ನು ಸ್ಥಾಪನೆ ಮಾಡಬೇಕೆಂದಿದ್ದೇವೆ. ಅದರ ಮೂಲಕ ಎಂಟರ್‌ಪ್ರೈಸರ್ಸ್ ಏನು ಇರುತ್ತಾರೆ ಅವರಿಗೆ ಅದು ಅನುಕೂಲವಾಗಬೇಕೆಂದು, ಅದನ್ನು ಪ್ರಪ್ರಥಮವಾಗಿ ಪೀಣ್ಯದಲ್ಲಿ ಪ್ರಾರಂಭ ಮಾಡಬೇಕೆಂದು ಏರ್ಪಾಡು ಮಾಡುತ್ತಾ ಇದ್ದೇವೆ.

ಹಾಗೆಯೇ ಈ ಒಂದು ಶಾಲೆಯಲ್ಲಿ ಮಕ್ಕಳಿಗೆ ಟೀಚಿಂಗ್ ಏಡ್ಸ್ ಕೊಡಬೇಕು ಎನ್ನುವ ಉದ್ದೇಶ ಇದೆ. ಅದರ ಮೂಲಕ ಬೋಧನೆ ಮಾಡಬೇಕೆಂದು ಮಾನ್ಯ ಶ್ರೀ ರಮೇಶ್‌ರವರು ಹೇಳಿದರು. ಟೀಚಿಂಗ್ ಏಡ್ಸ್ ಮೂಲಕ ವಿದ್ಯಾ ಬೋಧನೆ ಮಾಡಬೇಕೆಂದು ಈ ವರ್ಷದಿಂದಲೇ ಕಾರ್ಯಕ್ರಮ ತೆಗೆದುಕೊಂಡು ನಾಲ್ಕು ವಿಭಾಗಗಳಲ್ಲಿ ಪ್ರೊಜೆಕ್ಟರ್ಸ್‌ಗಳನ್ನು ಮತ್ತು ಫಿಲಂಸ್‌ನ್ನು, ಅಂದರೆ, ಸೈನ್ಸ್, ಲಿಟರರಿ, ಆರ್ಟ್, ಇದಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ಹಳ್ಳಿಯ ವಿದ್ಯಾರ್ಥಿಗಳಿಗೆ ತೋರಿಸಬೇಕು ಅದರ ಮೂಲಕ ಪಾಠವನ್ನು ಕಲಿಸುವುದಕ್ಕೆ ಏರ್ಪಾಡು ಮಾಡಬೇಕು ಎಂದು ಮಾಡಿದ್ದೇವೆ. ಏಕೆಂದರೆ, ಕೆಲವು ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ಕಂಪ್ಯೂಟರ್ ಯುಗದಲ್ಲಿ ಇದ್ದಾರೆ. ಆದರೆ ಇನ್ನೂ ನಮ್ಮ ಹಳ್ಳಿಗಾಡಿನ ವಿದ್ಯಾರ್ಥಿಗಳು ೧೯ನೆಯ ಶತಮಾನದಲ್ಲಿ ಉಳಿದುಕೊಂಡಿದ್ದಾರೆ. ಅದರ ನಡುವೆ ಈ ತಾರತಮ್ಯ ಏನಿದೆ, ಕಂದಕ ಏನಿದೆ ಅದನ್ನು ಕಡಿಮೆ ಮಾಡುವುದು ನಮ್ಮ ಉದ್ದೇಶ. ಈ ಒಂದು ಕಾರ್ಯಕ್ರಮವನ್ನು ಈ ಸಾರಿ ಜಾರಿಗೆ ತರುತ್ತಾ ಇದ್ದೇವೆ.

ಇನ್ನು ವೃತ್ತಿಪರಶಿಕ್ಷಣಕ್ಕೆ ನಾವು ಹೆಚ್ಚು ಆದ್ಯತೆಯನ್ನು ಕೊಡಬೇಕಾಗಿದೆ. ಮಾನ್ಯ ರಾಣಿಯವರು ಹೇಳಿದರು ವೃತ್ತಿಪರಶಿಕ್ಷಣವನ್ನು ಈ ಸಾರಿ ಕಡಿಮೆ ಮಾಡಿದ್ದಾರೆ ಎಂದಿದ್ದಾರೆ. ಅದು ನಿಜ ಕಡಿಮೆಯಾಗಿದೆ. ಅದಕ್ಕೋಸ್ಕರ ಒಂದು ಕಾರ್ಯಕ್ರಮವನ್ನು ರೂಪಿಸುತ್ತೇವೆ. ೧೯೮೬–೮೭ನೇ ಶೈಕ್ಷಣಿಕ ವರ್ಷದಿಂದ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಶಾಲೆಯಲ್ಲಿ ಈ ಒಂದು ವೊಕೇಷನಲ್ ಗೈಡೆನ್ಸ್ ಕೋರ್ಸನ್ನು ಪ್ರಾರಂಭ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಇದನ್ನು ೭ನೇ ತರಗತಿಯಿಂದ ಪ್ರಾರಂಭ ಮಾಡಬೇಕೆಂದಿದ್ದೇವೆ. ಪ್ರೀ ಯೂನಿವರ್ಸಿಟಿಯ ವರೆವಿಗೂ ಅವರಿಗೆ ಅವಕಾಶ ಮಾಡಿ ಕೊಡುತ್ತಿದ್ದೇವೆ. ಈಗ ತಮಗೆ ಹೇಳಬೇಕಾದರೆ ಹಳ್ಳಿಗಳಲ್ಲಿ ಕೊಳವೆ ಬಾವಿಗಳು ಇವೆ. ಮೆಷನರಿಗಳು ಇವೆ. ಪಂಪ್‌ಸೆಟ್‌ಗಳು ಇವೆ. ಅವುಗಳನ್ನು ರಿಪೇರಿ ಮಾಡುವುದಕ್ಕೆ ಹಳ್ಳಿಗಳಲ್ಲಿ ತಜ್ಞರು ಇರುವುದಿಲ್ಲ. ಏಳನೇ ತರಗತಿಯಿಂದ ಇಂಥ ವೃತ್ತಿಗಳಲ್ಲಿ ವಿದ್ಯಾರ್ಥಿಗಳು ತರಬೇತಿಯನ್ನು ಹೊಂದಿದ್ದರೆ ಅವರು ತಮ್ಮ ಸ್ವತಃ ಕಾಲ ಮೇಲೆ ನಿಂತು ಜೀವನ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ವಿಶ್ವವಿದ್ಯಾನಿಲಯಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಮಾಡಬೇಕೆನ್ನುವ ಉದ್ದೇಶದಿಂದ ನಾವು ಈ ವೃತ್ತಿ ಶಿಕ್ಷಣವನ್ನು ಕೊಡುತ್ತಿದ್ದೇವೆ. ಇದರಿಂದ ಸ್ವಂತ ಉದ್ಯೋಗವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ತಮಗೆ ಹೇಳಬೇಕಾದರೆ ೧೯೮೦–೮೧ ರಲ್ಲಿ ೨೮೯೮ ವಿದ್ಯಾರ್ಥಿಗಳು ಇದ್ದರು. ಈಗ ೧೯೮೪–೮೫ನೇ ಸಾಲಿನಲ್ಲಿ ಸುಮಾರು ೬೦೦೦ ಜನ ವಿದ್ಯಾರ್ಥಿಗಳು ತರಬೇತಿಯನ್ನು ಪಡೆಯುತ್ತಿದ್ದಾರೆ ದಿನೇ ದಿನೇ ಇವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಅವರಿಗೆ ತಮ್ಮ ಕಾಲಮೇಲೆ ತಾವು ನಿಂತು ಉದ್ಯೋಗ ಮಾಡಬೇಕೆನ್ನುವ ಆಸೆ ಜಾಸ್ತಿಯಾಗುತ್ತಿದೆ. ಅದಕ್ಕೆ ಸರ್ಕಾರ ಕೂಡ ಪ್ರೋತ್ಸಾಹ ಕೊಡುತ್ತಿದ್ದೇವೆ. ಇದಕ್ಕಾಗಿ ಸುಮಾರು ೬೦ ಕೇಂದ್ರಗಳನ್ನು ನಾವು ಈ ವರ್ಷ ಸೆಲೆಕ್ಟ್ ಮಾಡಿ ಅಲ್ಲಿನ ವಿದ್ಯಾರ್ಥಿಗಳನ್ನು ಮದ್ರಾಸ್‌ಗೆ ಕಳುಹಿಸಿ ಅವರಿಗೆ ಟೀಚಿಂಗ್ ಕೊಡಿಸುತ್ತೇವೆ. ಮತ್ತು ಅಲ್ಲಿನ ಉಪಾಧ್ಯಾಯರು ಬಂದು ಟ್ರೈನಿಂಗ್ ಸಹ ಕೊಡುತ್ತಾರೆ. ಅವರಿಗೆ ಬೇರೆ ಬೇರೆ ಅವಕಾಶಗಳನ್ನು ಸಹ ಕಲ್ಪಿಸಿ ಕೊಡುತ್ತಿದ್ದೇವೆ. ತಾಂತ್ರಿಕ ಶಾಲೆಗಳಿಗೆ ಅವರಿಗೆ ಇಂತಿಷ್ಟು ಸೀಟುಗಳನ್ನು ಕಾಯ್ದಿರಿಸಿ ಆದ್ಯತೆಯನ್ನು ಕೊಡುತ್ತಿದ್ದೇವೆ. ಅವರು ಬಿ.ಕಾಂ. ಪರೀಕ್ಷೆಗೂ ಕೂಡ ಹೋಗಬಹುದು. ಅವರಿಗೆ ಪ್ರತ್ಯೇಕವಾದ ಚಾನಲ್ಸ್‌ಗಳನ್ನು ತೆರೆದಿದ್ದೇವೆ. ಇದರಿಂದ ಸರ್ಕಾರದ ಮೇಲೆ ಒತ್ತಡ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ. ನಾವು ಈ ಜೀವನ ಶಿಕ್ಷಣ ವೃತ್ತಿಯನ್ನು ಮುಂದಿನ ವರ್ಷದಿಂದ ಸುಮಾರು ೨೦೦ ಶಾಲೆಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ಇನ್ನು ತಾಂತ್ರಿಕ ಶಿಕ್ಷಣದ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸುಮಾರು ೫೧ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಇವೆ. ಇಲ್ಲಿ ಸುಮಾರು ೫೬೪ ಜನರು ಅಭ್ಯಾಸ ಮಾಡುತ್ತಿದ್ದಾರೆ ಅನುದಾನ ಪಡೆಯುತ್ತಿರುವ ಶಾಲೆಗಳು ಸುಮಾರು ಎಂಟು ಇವೆ. ಇಲ್ಲಿ ಸುಮಾರು ೧೨೮೪ ಜನರು ವ್ಯಾಸಂಗ ಮಾಡುತ್ತಿದ್ದಾರೆ ಇನ್ನು ಖಾಸಗಿ ಶಾಲೆಗಳು ಸುಮಾರು ೬೬ ಇವೆ. ಇಲ್ಲಿ ಸುಮಾರು ೬೫೩೦ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಒಟ್ಟಾರೆ ೧೨,೬೦೦ ಜನ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ತಾಂತ್ರಿಕ ಶಾಲೆಗಳಲ್ಲಿ ಹಳ್ಳಿಯಿಂದ ಬಂದಂತಹ ಮಕ್ಕಳಿಗೆ ಶೇಕಡ ೨೦ ರಷ್ಟು ಸೀಟುಗಳನ್ನು ನಿಗದಿ ಮಾಡಿದ್ದೇವೆ ಇದರಿಂದ ಹಳ್ಳಿಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ಅನುಕೂಲವಾಗುತ್ತದೆ ಮತ್ತು ತಾಂತ್ರಿಕ ಶಾಲೆಗಳಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೂ ಮೀಸಲಾತಿಯನ್ನು ಕೊಟ್ಟಿದ್ದೇವೆ. ಹಿಂದೆ ತಾಂತ್ರಿಕ ಶಾಲೆಗಳಿಗೆ ಅರ್ಜಿಯನ್ನು ಸಲ್ಲಿಸಬೇಕಾಗಿದ್ದರೂ ಸಹ ೪೫ ಪರ್ಸೆಂಟ್ ಅಂಕಗಳು ಬಂದಿರಬೇಕೆಂದು ಇತ್ತು. ಆದರೆ ಎಷ್ಟೋ ಜನ ವಿದ್ಯಾರ್ಥಿಗಳಿಗೆ ಇದರಿಂದ ಅರ್ಜಿಯನ್ನು ಸಲ್ಲಿಸಲು ಅವಕಾಶವೇ ಇರುತ್ತಿರಲಿಲ್ಲ ಇದನ್ನು ಸರ್ಕಾರ ಮನಗಂಡು ೪೦ ಪರ್ಸೆಂಟ್ ಅಂಕಗಳು ಪಡೆದಿದ್ದರೆ ಸಾಕು ಅವರು ಅರ್ಜಿಯನ್ನು ಸಲ್ಲಿಸಬಹುದೆಂದು ಮಾಡಿದ್ದೇವೆ. ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂಜಿನಿಯರಿಂಗ್ ಸರ್ಕಾರಿ ಕಾಲೇಜುಗಳು ನಾಲ್ಕು ಇವೆ. ಅನುದಾನ ಪಡೆಯುತ್ತಿರುವ ಶಾಲೆಗಳು ೫ ಇವೆ. ಖಾಸಗಿ ಶಾಲೆಗಳು ಸುಮಾರು ೨೧ ಇವೆ. ಇದರಲ್ಲಿ ಮೈನಾರಿಟಿಗೆ ಸೇರಿದವುಗಳು ಸುಮಾರು ೬ ಕಾಲೇಜುಗಳು ಇವೆ. ಮತ್ತೆ ಸಂಜೆ ಇಂಜಿನಿಯರಿಂಗ್ ಕಾಲೇಜುಗಳು ಸುಮಾರು ನಾಲ್ಕು ಇವೆ. ಒಟ್ಟು ೪೪ ಇಂಜಿನಿಯರಿಂಗ್ ಕಾಲೇಜುಗಳಿವೆ ಈ ೪೪ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆಂದರೆ ಸುಮಾರು ೧೧,೯೦೦ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇದರಲ್ಲಿ ಸುಮಾರು ೫–೬ ವರ್ಷಗಳ ಅಂಕಿ ಅಂಶಗಳನ್ನು ನಾವು ನೋಡಿದಾಗ ಕರ್ನಾಟಕ ರಾಜ್ಯದ ಮಕ್ಕಳಿಗೆ ಎಷ್ಟು ಅವಕಾಶಗಳು ಸಿಕ್ಕಿವೆ ಬೇರೆ ರಾಜ್ಯದ ಮಕ್ಕಳಿಗೆ ಎಷ್ಟು ಅವಕಾಶಗಳು ಸಿಕ್ಕವೆ ಎಂಬುವುದು ತಮಗೆ ಗೊತ್ತಾಗುತ್ತದೆ. ೧೯೮೧–೮೨ನೇ ಸಾಲಿನಲ್ಲಿ ನಮ್ಮ ಕರ್ನಾಟಕ ರಾಜ್ಯದವರಿಗೆ ಸಿಕ್ಕಿದಂತಹ ಸೀಟುಗಳು ೨.೩.೨೦ ಅದೇ ಹೊರ ರಾಜ್ಯದವರಿಗೆ ಸಿಕ್ಕಿದ ಸೀಟುಗಳು ೨,೯೨೩. ಮತ್ತೆ ೧೯೮೨–೮೩ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದವರಿಗೆ ಸಿಕ್ಕಿದ ಸೀಟುಗಳು ೨,೯೬೫ ಹೊರ ರಾಜ್ಯದವರಿಗೆ ಸಿಕ್ಕಿದ ಸೀಟುಗಳು ೩.೭೫೮ ಮತ್ತೆ ೧೯೮೩–೮೪ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದವರಿಗೆ ಸಿಕ್ಕಿದ ಸೀಟುಗಳು ೨೫೫೦

ಆದರೆ ಹೊರ ರಾಜ್ಯದವರಿಗೆ ಸಿಕ್ಕಿದ ಸೀಟುಗಳು ೪,೪೨೧ ಸೀಟುಗಳು ಸಿಕ್ಕಿದೆ. ಅದೇ ೧೯೮೪-೮೫ನೇ ಸಾಲಿನಲ್ಲಿ ಅಂದರೆ ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಂತ ಹಂತವಾಗಿ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆಂದು ಹೇಳಿದ್ದೆವು. ಮತ್ತು ಶೇಕಡ ೪೦ರಷ್ಟು ಸರ್ಕಾರದ ಹಿಡಿತವಿಟ್ಟುಕೊಂಡಿದ್ದರಿಂದ ನಮ್ಮ ಕರ್ನಾಟಕ ರಾಜ್ಯದ ಮಕ್ಕಳಿಗೆ ಸುಮಾರು ೪,೦೪೫ ಸೀಟುಗಳು ದೊರೆತರೆ ಅದೇ ಹೊರ ರಾಜ್ಯದ ಮಕ್ಕಳಿಗೆ ಸುಮಾರು ೩,೪೬೫ ಸೀಟುಗಳು ದೊರೆತಿವೆ. ಈಗ ಈ ಇಂಜನಿಯರಿಂಗ್ ಕಾಲೇಜಿನವರು ಕೋರ್ಟಿಗೆ ಹೋಗಿದ್ದಾರೆ. ಕೋರ್ಟಿನ ತೀರ್ಮಾನ ಏನು ಬರುತ್ತದೆಯೋ ನಾವು ಕಾದು ನೋಡಬೇಕಾಗುತ್ತದೆ. ಮತ್ತೆ ನಾನು ಈ ಖಾಸಗಿ ಮಾಲೀಕರ ಜೊತೆಯಲ್ಲಿ ೪-೫ ಸಾರಿ ಮಾತುಕತೆ ನಡೆಸಿದ್ದೇನೆ. ಅವರು ಯಾವುದೇ ಒಂದು ರೀತಿಯ ಒಪ್ಪಂದಕ್ಕೆ ಬರಲಿಲ್ಲ. ನಾನು ಪದೇ ಪದೇ ಈ ಮಾತನ್ನು ಹೇಳಿದ್ದೇನೆ. ಏನೆಂದರೆ ನೀವು ಹೊರ ರಾಜ್ಯದವರಿಗೆ ಮಾಡುವ ಸೆ ವೆಯನ್ನು ನಮ್ಮ ಕರ್ನಾಟಕ ರಾಜ್ಯದವರಿಗೆ ಮಾಡಿ ಎಂದು. ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಶೇಕಡ ೬೦ರಷ್ಟು ಸೀಟುಗಳನ್ನು ಕೊಡಿ ಎಂದು ನಾನು ಹೇಳಿದ್ದೇನೆ. ಅವರು ಒಪ್ಪಿಕೊಳ್ಳಲಿಲ್ಲ. ಅವರಿಗೆ ಗೊತ್ತಿದೆ ಕಾರಣ ಇವರಿಂದ ಹೆಚ್ಚು ಲಾಭ ಸಂಪಾದನೆ ಮಾಡಬಹುದು. ನಮ್ಮ ರಾಜ್ಯದವರಿಗೆ ಕೊಟ್ಟರೆ ಅವರಿಗೆ ಲಾಭ ಬರುವುದಿಲ್ಲವೆಂದು. ಈ ಬಗ್ಗೆ ಹಿಂದಿನ ಶಿಕ್ಷಣ ಮಂತ್ರಿಗಳಾದಂಥ ರಾಚಯ್ಯನವರು ಒಂದು ವೈಟ್ ಪೇಪರ್ ಇಟ್ಟಿದ್ದರು. ಇವರಿಗೆ ೪೦ ಪರ್ಸೆಂಟ್ ಸೀಟು ಕೊಟ್ಟರೂ ಸುಮಾರು ೪೦ ಲಕ್ಷ ರೂಪಾಯಿಗಳ ಆದಾಯ ಬರುತ್ತದೆ.

ಈಗ ೨೮ ಖಾಸಗಿ ಕಾಲೇಜುಗಳು ಏನಿವೆ ಇವೆಲ್ಲವನ್ನೂ ರಾಷ್ಟ್ರೀಕರಣ ಮಾಡಬೇಕೆಂದು ಮಾನ್ಯ ಸದಸ್ಯರುಗಳಾದ ವೆಂಕಟರಾಮಯ್ಯನವರು, ಭೂಪತಿಯವರು, ಖರ್ಗೆಯವರು, ರಮೇಶ್‌ಕುಮಾರ್ ರವರು, ಎಲ್ಲರೂ ಹೇಳಿದರು. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ನೀವು ಅನುದಾನ ನಿಯಮಾವಳಿಗಳ ಕೆಳಗಡೆ ಬನ್ನಿ. ಎಲ್ಲಾ ಕಾಲೇಜುಗಳಿಗೂ ಅನುದಾನ ಕೊಡುತ್ತೇವೆ. ಅನುದಾನ ಕೊಟ್ಟು ನೀವು ಸೀಟುಗಳನ್ನು ಹೇಗೆ ವಿತರಣೆ ಮಾಡಬೇಕೆಂದು ನಾವು ನಿಗದಿ ಮಾಡುತ್ತೇವೆ ಎಂದು ಹೇಳಿದರೆ, ಅವರು ಅದಕ್ಕೆ ತಯಾರಾಗಿಲ್ಲ. ಏತಕ್ಕೆಂದರೆ, ನಾನು ಹಲವಾರು ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹೈಕೋರ್ಟಿಗೆ ಹೋಗಿದ್ದಾರೆ, ತಡೆಯಾಜ್ಞೆ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆರ್ಡಿನೆನ್ಸ್ ಇಷ್ಯೂ ಮಾಡಿದರೆ ಅವರಪ್ಪ ಒಪ್ಪಬೇಕಾಗುತ್ತದೆ, ಆರ್ಡಿನೆನ್ಸ್ ಇಷ್ಯೂ ಮಾಡಿ, ಅವರು ಹೇಗೆ ಒಪ್ಪುವುದಿಲ್ಲ ?

ಶ್ರೀ ಎಂ. ರಘುಪತಿ.— ಕೋರ್ಟಿನಲ್ಲಿ ಏನಾಗುತ್ತದೆ ನೋಡೋಣ. ಅಲ್ಲಿವರೆಗೆ ಸ್ವಲ್ಪ ಕಾಯೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ಪರವಾಗಿ ಸ್ವಲ್ಪ ಸರಿಯಾಗಿ ಕೋರ್ಟಿನಲ್ಲಿ ವಾದ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ, ನೀವು ಅವರು ಕೇಳುವಷ್ಟು ಹಣ ಕೊಡುವುದಿಲ್ಲ. ನೀವು ಏನಾದರೂ ಗ್ರಾಂಟ್ ಇನ್ ಏಡ್ ಕೊಡುವುದಿಲ್ಲ ಎಂದರೆ............

ಶ್ರೀ ಎಂ. ಭೂಪತಿ.—ಕೋಳಿ ಕೇಳಿ ಮಸಾಲೆ ಅರೆದ ಹಾಗೆ ಆಯಿತು.

ಶ್ರೀ ಎಂ. ರಘುಪತಿ.—ಇದು ರಷ್ಯಾ ದೇಶ ಅಲ್ಲ. ಚೀನಾ ದೇಶ ಅಲ್ಲ. ಇದು ಭಾರತ ದೇಶ. ಇಲ್ಲಿ ಪ್ರಜಾಪ್ರಭುತ್ವದ ಪ್ರಕಾರ ಕೆಲಸ ಮಾಡುತ್ತಿದ್ದೇವೆ. ವಾಸ್ತವಾಂಶಕ್ಕೂ ಬೇರೆದಕ್ಕೂ ಬಹಳ ಅಂತರ ಇದೆ.

ಅಧ್ಯಕ್ಷರು.—ರಘುಪತಿಯವರೆ, ನೀವು ಅವರಿಗೆ ಉತ್ತರ ಕೊಡುವುದು ಬೇಡ, ನೀವು ಬೇಗನೆ ಉತ್ತರ ಮುಗಿಸಿ.

ಶ್ರೀ ಎಂ. ರಘುಪತಿ.—ಇವತ್ತು ಸರಕಾರದ ಪತಿಯಿಂದ ೪೬೦೦ ರಷ್ಟು ಸೀಟುಗಳಿಗೆ ಕರ್ನಾಟಕದ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತದೆಂಬ ಅನಿಸಿಕೆ ಇದೆ. ಕೋರ್ಟಿನಲ್ಲಿ ಏನಾಗುತ್ತದೋ ನೋಡೋಣ ಬೇರೆ ಹೊರ ರಾಜ್ಯದವರಿಗೆ ಎಷ್ಟು ಸಿಗುತ್ತದೆ ಎಂದರೆ ೩,೬೦೦ ಸೀಟುಗಳು ಸಿಗುತ್ತವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕೋರ್ಟಿನಲ್ಲಿ ನಮ್ಮ ಸರಕಾರದ ಪರವಾಗಿ ಚೆನ್ನಾಗಿ ಕೇಸ್ ತೆಗೆದುಕೊಳ್ಳುವುದಕ್ಕೆ ಹೇಳಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಅದೇ ಆಗುವುದು.........

ಶ್ರೀ ಎಂ. ವೀರಪ್ಪ ಮೊಯಿಲಿ.—ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ದಯಮಾಡಿ ಸ್ವಲ್ಪ ಪರಿಶೀಲನೆ ಮಾಡಲಿ ಎಂದು.

ಅಧ್ಯಕ್ಷರು.—ಈಗ ಅವರು ಉತ್ತರ ಮುಗಿಸಲಿ ಮತ್ತೆ ಅವಕಾಶ ಕೊಡುತ್ತೇನೆ. ಮಾನ್ಯ ಧರ್ಮಸಿಂಗ್‌ರವರೇ, ಸಂಪ್ರದಾಯ ಮುರಿಯುವುದು ಬೇಡ. ತಮಗೆ ಅವಕಾಶ ಕೊಡುತ್ತೇನೆ. ಅವರು ಉತ್ತರ ಹೇಳಿ ಮುಗಿಸಲಿ.

ಶ್ರೀ ಎಂ. ರಘುಪತಿ.—ಇನ್ನೊಂದು ಐದು ನಿಮಿಷ, ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೇಗ ಮುಗಿಸಿ.

ಅಧ್ಯಕ್ಷರು.—ಅವರೂ ಸಹಿತ ಹೇಳುತ್ತಾರೆ. ಬೇಗ ಮುಗಿಸಿ ಎಂದು.

ಶ್ರೀ ಎಂ. ರಘುಪತಿ.—ಶ್ರೀಮಾನ್ ಖರ್ಗೆಯವರು ಸಿ.ಪಿ.ಎಡ್. ಬಿ.ಪಿ.ಎಡ್. ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾನು ಸವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಮುಂದೆ ಕರ್ನಾಟಕ ರಾಜ್ಯದಲ್ಲಿ ತಜ್ಞರ ಒಂದು ಅನುಮತಿ ಇಲ್ಲದೆ, ಐ.ಟಿ.ಐ., ಟಿ.ಟಿ.ಐ., ಬಿ.ಪಿ.ಎಡ್., ಬಿ.ಎಡ್., ಸಿ.ಪಿ.ಎಡ್., ಕಾಲೇಜುಗಳಿಗೆ ಇನ್ನು ಮುಂದಕ್ಕೆ ಪರವಾನಗಿ ಕೊಡುವುದಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಅವಶ್ಯಕತೆ ಇದ್ದರೆ ಮಾತ್ರ ಕೊಡುತ್ತೇವೆ. ಈಗಿರುವ ಸಂಖ್ಯೆಯನ್ನು ನೋಡಿದಾಗ ಇನ್ನು ಎರಡು ಮೂರು ವರ್ಷ, ಈ ಕಾಲೇಜುಗಳು ನಮಗೆ ಬೇಕಾಗಿಲ್ಲ ಎಂದು ನನಗನ್ನಿಸುತ್ತದೆ. ಅವಶ್ಯಕತೆ ಇದ್ದರೆ ಮಾತ್ರ ಈ ಸಂಸ್ಥೆಗಳನ್ನು ತಗೆಯಬಹುದೇ ಹೊರತು, ಇಲ್ಲದೇ ಹೋದರೆ ಪ್ರಯೋಜನ ಇಲ್ಲ. ಹಲವಾರು ಸದಸ್ಯರು ಒಂದು ಸಲಹೆಯನ್ನು ಮಾಡಿದರು. ಶಿಕ್ಷಣದಲ್ಲಿ ಹೆಣ್ಣುಮಕ್ಕಳಿಗೆ ಪ್ರಾಶಸ್ತ್ಯ ಹೆಚ್ಚಿನ ಅವಕಾಶ ಕೊಡಿ ಎಂದು, ಇದರ ಬಗ್ಗೆ ಅವರು ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡುತ್ತಾರೆ ಎಂದು ಹೇಳಿದರು. ನರ್ಸರಿ ಟ್ರೈನಿಂಗ್ ಕಾಲೆಗಳಲ್ಲಿ ಇನ್ನು ಮುಂದೆ ಅವರಿಗೆ ಮಾತ್ರ ಟ್ರೈನಿಂಗ್ ಕೊಡುತ್ತೇವೆ. ಇನ್ನು ಮುಂದೆ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಶೇಕಡಾ ೪೦ರಷ್ಟು ಹೆಣ್ಣುಮಕ್ಕಳಿಗೆ ಮೀಸಲಾಗಿಡಬೇಕೆಂದು ನಾವು ಆಜ್ಞೆಯನ್ನು ಹೊರಡಿಸುತ್ತಿದ್ದೇವೆ. ಏಕೆಂದರೆ ಅವರು ಹೆಚ್ಚಿನ ಇಂಟರೆಸ್ಟಿನಿಂದ ಪಾಠವನ್ನು ಕಲಿಸುವ ಪರಿಪಾಠವನ್ನು ಹೊಂದಿರುತ್ತಾರೆ. ಅದಕ್ಕೋಸ್ಕರ ಅವರಿಗೆ ಹೆಚ್ಚಾಗಿ ಈ ಶಾಲೆಗಳಲ್ಲಿ ಉತ್ತೇಜನ ಕೊಡಬೇಕೆಂದು ನಮ್ಮ ಉದ್ದೇಶ. ಕಾಲೇಜು ಶಿಕ್ಷಣ ಇಲಾಖೆಯ ಬಗ್ಗೆ ಮಾನ್ಯ ಖರ್ಗೆಯವರು ಮಾತನಾಡಿದರು. ಕರ್ನಾಟಕದಲ್ಲಿ ಫಸ್ಟ್ ಗ್ರೇಡ್ ಕಾಲೇಜುಗಳು ಇರುವುದು ೨೨. ಅದರಲ್ಲಿ ಸಿಟಿಯಲ್ಲಿರುವುದು ೭ ಮಾತ್ರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೨೨ ಅಲ್ಲ, ೫೯.

ಶ್ರೀ ಎಂ. ರಘುಪತಿ.—ಈಗಿರುವುದು ೫೯ ಈ ವರ್ಷ ೧೮ ಕೊಡುತ್ತೇವೆಂದು ಹೇಳಿದ್ದೇವೆ. ಅದನ್ನೂ ಸೇರಿಸಿಕೊಂಡು ಹೇಳಿದೆ. ೭ ಸಿಟಿಯಲ್ಲಿ ಇದೆ. ನಾವು ಈಗ ಏನು ೧೫ ಕಾಲೇಜುಗಳಿಗೆ ಪರವಾನಗಿಯನ್ನು ಕೊಟ್ಟಿದ್ದೇವೆ, ಅದರಲ್ಲಿ ಒಂದೇ ಒಂದನ್ನು ಬಿಟ್ಟು, ಬೆಂಗಳೂರು ನಗರದಲ್ಲಿ ಒಂದನ್ನು ಬಿಟ್ಟು, ಮಿಕ್ಕಿದ್ದೆಲ್ಲಾ ಹಳ್ಳಿಗಾಡಿನಲ್ಲಿ ಕೊಟ್ಟಿದ್ದೇವೆ. ಪಟ್ಟಣ ಪ್ರದೇಶದಲ್ಲಿ ಮೂರು ಕೊಡಬೇಕೆಂದು ಬರೆದಿದ್ದರು. ಅದರಲ್ಲಿ ಒಂದು ಮಾತ್ರ ಪಟ್ಟಣ ಪ್ರದೇಶದಲ್ಲಿ ಬರುತ್ತದೆ. ಮಿಕ್ಕಿದ್ದು ಹಳ್ಳಿಗಾಡಿನಲ್ಲಿ ಬರುತ್ತದೆ. ಶ್ರೀಮಾನ್ ಡಿ.ಎ. ಚೆನ್ನಪ್ಪನವರು, ಉಪಾಧ್ಯಾಯರ ಕೊರತೆ ಇದೆ, ಕಾಲೇಜುಗಳಲ್ಲಿ ಪ್ರೊಫೆಸರ್ಸ್, ರೀಡರ್ಸ್ ಕೊರತೆ ಇದೆ, ಸರ್ಕಾರದ ಕಾಲೇಜಿನಲ್ಲಿ ಕೊರತೆ ಇದೆ ಎಂದು ಹೇಳಿದ್ದಾರೆ. ಇದಕ್ಕೆ ಆಗಲೇ ಕಾರ್ಯಕ್ರಮ ತೆಗೆದುಕೊಳ್ಳಲು ಆದೇಶ ಕೊಟ್ಟಿರುತ್ತೇವೆ ಇನ್ನು ಒಂದು ವಾರದ ಒಳಗಾಗಿ ಭರ್ತಿ ಮಾಡಬೇಕೆಂದು ಆದೇಶ ಕೊಟ್ಟಿರುತ್ತೇನೆ. ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳ ಬಹುದಿನಗಳ ಬೇಡಿಕೆ ಏನೆಂದರೆ, ನಾವು ಕಾಲೇಜಿನಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ನಮಗೆ ಬಡ್ತಿ ಸಿಗುವುದಿಲ್ಲ ನಾವು ಹಾಗೇ ನಿವೃತ್ತಿಯಾಗುತ್ತೇವೆ ಎಂಬುದು ಇವರ ಬಹುದಿನಗಳ ಬೇಡಿಕೆಯಾಗಿತ್ತು. ಈ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ. ಅದೇನೆಂದರೆ, ೧೬ ವರ್ಷ ಅವರು ಲೆಕ್ಚರ್ಸ್ ಆಗಿ ಕೆಲಸ ಮಾಡಿದರೆ ಅವರಿಗೆ ರೀಡರ್ ಆಗಿ ಟೈಮ್ ಬಾಂಡ್ ಕಾಲಮಿತಿ ಬಡ್ತಿಯನ್ನು ಕೊಡುತ್ತೇವೆ. ಮತ್ತು ಅವರು ಪಿ.ಹೆಚ್.ಡಿ. ಪಡೆದಿದ್ದರೆ ಇದಕ್ಕೆ ೧೨ ವರ್ಷಗಳ ಸೇವೆ ಸಾಕು ಎಂದು ಒಂದು ಆಜ್ಞೆ

ಯನ್ನು ಹೊರಡಿಸಿದ್ದೇವೆ. ಇದರಿಂದ ಉಪಾಧ್ಯಾಯರಿಗೆ ಬಹಳ ಅನುಕೂಲವಾಗುತ್ತದೆ. ಇದರಿಂದ ಒಂದೇ ಜಾಗದಲ್ಲಿ ನಿಂತಿರುವ ಉಪಾಧ್ಯಾಯರುಗಳಿಗೆ ಮುಂದೆ ಹೋಗುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ವಿಶ್ವವಿದ್ಯಾನಿಲಯಗಳ ಬಗ್ಗೆ ನಾನು ಹೇಳಬೇಕಾದರೆ ಇವತ್ತಿನ ದಿವಸ ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ರಾಜ್ಯದಲ್ಲಿಯೇ ಅಲ್ಲ, ಇಡೀ ಭಾರತ ದೇಶದಲ್ಲಿಯೇ ಶಿಕ್ಷಣ ಗುಣಮಟ್ಟ ಕಡಿಮೆಯಾಗಿದೆ. ನ್ಯಾಷನಲ್ ಕಮಿಷನ್ ಫಾರ್ ಟೀಚರ್ಸ್ ಇವರು ಒಂದು ಕಮಿಷನ್ ಏರ್ಪಾಡು ಮಾಡಿದ್ದರು. ಕಾಲೇಜು ಟೀಚರ್ಸ್‌ನಲ್ಲಿ ಎಷ್ಟು ಜನ ಪಿ.ಹೆಚ್.ಡಿ. ಪಡೆದವರು ಇದ್ದಾರೆ ಎಂದರೆ, ಶೇಕಡಾ ೭ ರಷ್ಟು ಮಾತ್ರ ಪಿ.ಹೆಚ್.ಡಿ. ಪಡೆದವರು ಇದ್ದಾರೆ. ಅದೇ ಯೂನಿವರ್ಸಿಟಿಯಲ್ಲಿ ಲೆಕ್ಚರರ್ಸ್ ೪೭ ಪರ್ಸೆಂಟ್, ರೀಡರ್ಸ್ ೭೫ ಪರ್ಸೆಂಟ್ ಪ್ರೊಫೆಸರ್ಸ್ ೮೫ ಪರ್ಸೆಂಟ್ ಪಿ.ಹೆಚ್.ಡಿ. ಪಡೆದವರು ಇದ್ದಾರೆ ಎಂದು ತಿಳಿದು ಬಂದಿದೆ. ಅಂದರೆ ಪಿ. ಹೆಚ್. ಡಿ. ಪಡೆದವರು ಕಾಲೇಜುಗಳಲ್ಲಿ ಟೀಚಿಂಗ್ ಮಾಡಬೇಕೆಂದು ಇದ್ದರೆ ಅದರಲ್ಲಿ ತಾರತಮ್ಯ ಬಹಳ ಇದೆ. ಮತ್ತು ಇದರಿಂದ ಏನಾಗಿದೆ ಎಂದರೆ ನಮ್ಮ ಎಜುಕೇಷನ್ ಸ್ಟಾಂಡರ್ಡ್ ಕಡಿಮೆಯಾಗಿದೆ. ಯೂನಿವರ್ಸಿಟಿಗಳಲ್ಲಿ ಎಕ್ಸಾಮಿನೇಷನ್ ರಿಫಾರ್ಮ್ಸ್ ಮಾಡಬೇಕು. ವಿಶ್ವವಿದ್ಯಾನಿಲಯಗಳ ಆಡಳಿತದಲ್ಲಿ ಒಂದು ಮಾರ್ಪಾಡನ್ನು ಮಾಡಬೇಕೆಂದು ಹೇಳಿ ೧೯೭೭-೮೦ ರಲ್ಲಿ ಡಾ|| ರಾಜ್ ಅವರ ನೇತೃತ್ವದಲ್ಲಿ ಒಂದು ಆಯೋಗವನ್ನು ಕರ್ನಾಟಕ ಸರಕಾರದವರು ರಚನೆ ಮಾಡಿದ್ದರು. ಅದು ೧೯೮೦ರಲ್ಲಿ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿತು. ೧೯೮೧ ರಲ್ಲಿ ವರದಿಯನ್ನು ಕೊಟ್ಟರೂ ಸಹ ನಾಲ್ಕು ವರ್ಷಗಳಿಂದ ಯಾವ ಕಾರಣಕ್ಕೋ ಅದು ಮೂಲೆಗೆ ಸೇರಿತ್ತು. ಈಗ ಇದನ್ನು ಜಾರಿಗೆ ತರಬೇಕೆಂದು ಈ ಕೆಲಸವನ್ನು ಪೂರ್ತಿ ಮಾಡಿದ್ದೇನೆ. ಈ ಅಧಿವೇಶನದಲ್ಲೇ ವಿಶ್ವವಿದ್ಯಾನಿಲಯ ಕಾಯಿದೆಗೆ ತಿದ್ದುಪಡಿಯನ್ನು ತರಬೇಕೆಂದು ಹೇಳಿ ನಿರ್ಣಯ ಮಾಡಿದ್ದೇವೆ ಅದನ್ನು ಸಭೆಯ ಮುಂದೆ ಮಂಡನೆ ಮಾಡುತ್ತೇನೆಂದು ತಿಳಿಸುತ್ತೇನೆ.

ಅನಂತರ ವಿಶ್ವವಿದ್ಯಾನಿಲಯದ ಮಂಡಳಿಯನ್ನು ರಚನೆಮಾಡಿದ್ದೇವೆ. ಆ ಮಂಡಲಿಯಲ್ಲಿ ಕರ್ನಾಟಕ ರಾಜ್ಯದ ೭ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು ಸದಸ್ಯರಾಗಿದ್ದಾರೆ. ಶಿಕ್ಷಣ ಸಚಿವರು ಅದರ ಅಧ್ಯಕ್ಷರಾಗಿದ್ದಾರೆ. ಒಂದು ವಿಶ್ವವಿದ್ಯಾನಿಲಯದಿಂದ ಇನ್ನೊಂದು ವಿಶ್ವವಿದ್ಯಾನಿಲಯಕ್ಕೆ ಯಾವುದೇ ವಿಧದಲ್ಲಿ ಹೆಚ್ಚಿನ ವಿಚಾರ ಇದ್ದು, ಯಾವುದೇ ಸಮಸ್ಯೆಗಳು ಬಂದರೆ ಆ ಮಂಡಲಿಯಲ್ಲಿ ಚರ್ಚೆ ಮಾಡಿ, ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಿದೆ. ಆಗಸ್ಟ್ ೧ನೇ ತಾರೀಕಿನಿಂದ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಆದೇಶ ಮಾಡಿದೆವು. ಅದೇ ಪ್ರಕಾರ ಕಾಲೇಜುಗಳು ಕರ್ನಾಟಕದಲ್ಲಿ ಪ್ರಾರಂಭವಾದವು. ಅಷ್ಟೇ ಅಲ್ಲ ಪರೀಕ್ಷೆಗಳನ್ನು ನಿಗದಿಯಾದ ವೇಳೆಗೆ ನಡೆಸಬೇಕೆಂದು ಒಂದು ನಿರ್ಣಯ ಮಾಡಿದೆವು. ಅದೇ ಪ್ರಕಾರ ನಡೆಯುತ್ತಿವೆ. ಈ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಹಿಂದೆ ನಡೆದ ಪರೀಕ್ಷೆಗಳನ್ನು ಒಂದೇ ವಾರದಲ್ಲಿ ಮಾಡಿದೆವು. Common Examination programmes of the Universities. ಎಂದು ಹೇಳಿ ನಿರ್ಣಯ ಮಾಡಿ, ಈಗ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಪರೀಕ್ಷೆಗಳನ್ನು ನಡೆಸುವುದಕ್ಕೆ ಒಂದೇ ಕಾಲಕ್ಕೆ ಸಾಮಾನ್ಯವಾಗಿ ನಡೆಸುವುದಕ್ಕೆ ಏರ್ಪಾಡು ಮಾಡಿದೆವು. ಫಲಿತಾಂಶ ಕೂಡ ಒಂದೇ ಕಾಲಕ್ಕೆ ಬರಬೇಕೆಂದು ಮಾಡಿದ್ದೇವೆ. ಒಂದು ವಿಶ್ವವಿದ್ಯಾನಿಲಯದಿಂದ ಇನ್ನೊಂದು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡುವುದಕ್ಕೆ ಅವಕಾಶ ಇದ್ದರೆ ಅದಕ್ಕೂ ನಿರ್ಣಯ ತೆಗೆದುಕೊಳ್ಳಲಾಗುವುದು. ರಾಜ್ ಆಯೋಗದ ಶಿಫಾರಸ್ಸುಗಳನ್ನು ಚರ್ಚೆಮಾಡಿ, ತಾತ್ಕಾಲಿಕ ಮಾಹಿತಿಗಳ ಬಗ್ಗೆ ಹೇಳಿದ್ದೇವೆ. ಇದನ್ನು ಬಗೆಹರಿಸುವುದಕ್ಕೆ ವಿಶ್ವವಿದ್ಯಾನಿಲಯದ ಅಂತರ ಮಂಡಲಿಯಲ್ಲಿ ಚರ್ಚೆ ಮಾಡುವುದಕ್ಕೆ ಒಂದು ವಿಷಯವನ್ನು ಇಟ್ಟಿದ್ದೇವೆ. ಅದನ್ನು ಚರ್ಚೆ ಮಾಡಿ ಇತ್ಯರ್ಥ ಮಾಡುತ್ತೇವೆ ಎಂಬುದನ್ನು ಈ ಸಂದರ್ಭದ ತಿಳಿಸುತ್ತೇನೆ. ಇನ್ನು ವಿದ್ಯಾರ್ಥಿಗಳಿಗೆ ಸೆನೆಟ್‌ನಲ್ಲಿ ಪ್ರಾತಿನಿಧ್ಯ ಕೊಡುವ ವಿಷಯ ಅಂತರ ವಿಶ್ವವಿದ್ಯಾನಿಲಯದ ಸಭೆಯಲ್ಲಿ ಇದನ್ನು ಚರ್ಚೆ ಮಾಡುವುದಕ್ಕಾಗಿ ಇಟ್ಟಿದ್ದೇವೆ. ಚರ್ಚೆಮಾಡಿ ಯಾವತರಹ ಚುನಾವಣೆ ಮಾಡಲಿಕ್ಕೆ ಆಯೋಗ ಮಾಡಬೇಕೆಂಬುದನ್ನು ಡಿಸ್‌ಕಸ್ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ

ಶ್ರೀ ಬಿ. ಬಸವಲಿಂಗಪ್ಪ.—ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಮಾಡಬೇಕು.

ಶ್ರೀ ಎಂ. ರಘುಪತಿ.—ಹೌದು ಹೌದು.

ಅಧ್ಯಕ್ಷರು.—ಬಸವಲಿಂಗಪ್ಪನವರೇ, ನೀವು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಅತ್ಯವಶ್ಯಕವಾಗಿ ಕೇಳಬೇಕಾದ ವಿಚಾರ ಬಂದಾಗ, ಮಾನ್ಯ ಸದಸ್ಯರನ್ನು ಕೇಳಿದರೆ......

ಅಧ್ಯಕ್ಷರು.— ಆ ಮೇಲೆ ಕೇಳಬೇಕು.

ಶ್ರೀ ಎಂ. ರಘುಪತಿ.— ಶ್ರೀಮಾನ್ ರತ್ನಾಕರ್‌ರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. "Mode of appointment of examiners change" ಇದನ್ನು ಬದಲಾಯಿಸಬೇಕು. ಈಗಾಗಲೇ ವಿಶ್ವವಿದ್ಯಾನಿಲಯದ ಕಾಯಿದೆಯಲ್ಲಿ ಇದೆ. ಅದಕ್ಕನುಗುಣವಾಗಿ ಬದಲಾವಣೆ ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಮತ್ತು ಗುಲ್ಬರ್ಗಾ ಮಂಗಳೂರು ವಿಶ್ವವಿದ್ಯಾನಿಲಯಗಳು, ಯು. ಜಿ. ಸಿ. ಯಿಂದ ಅನುದಾನ ಪಡೆಯುತ್ತಿವೆ. ಎರಡು ವಿಶ್ವವಿದ್ಯಾನಿಲಯಗಳಿಗೆ ಅನುದಾನ ಕೊಡಬೇಕೆಂದು ಅಕ್ಟೋಬರ್‌ನಿಂದ ಸತತ ಪ್ರಯತ್ನ ಮಾಡುತ್ತಿದ್ದೇವೆ. ನೀವು ಯಾವ ತರಹ ತಿದ್ದುಪಡಿಯನ್ನು ಮಾಡಬೇಕೆಂದು ಇದ್ದೀರೋ ಅದನ್ನು ಹೇಳಿ ಎಂದು ಹೇಳಿದೆ. ಪೂರ್ತಿ ತಿದ್ದುಪಡಿಗಳನ್ನು ಮಾಡಬೇಕೆಂದು ಹೇಳಿದೆ. ಒಂದು ತಿದ್ದುಪಡಿಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದೆ. ಅಫಿಲಿಯೇಷನ್ ವಿಷಯದಲ್ಲಿ ಯೂನಿವರ್ಸಿಟಿ ಶಿಫಾರಸ್ ಮಾಡಿದರೆ ಮಾತ್ರ ಮಾಡುತ್ತೇವೆಂದು ಹೇಳಿದೆ. ಯೂನಿವರ್ಸಿಟಿಯವರು ೧೦ ಇಂಜಿನಿಯರಿಂಗ್ ಕಾಲೇಜುಗಳನ್ನು ತೆಗೆಯಬೇಕೆಂದು ನಿರ್ಣಯ ತೆಗೆದುಕೊಂಡರೆ ಅದಕ್ಕೆ ಆಗ ನಮ್ಮ ಹತ್ತಿರ ಹಣ ಇರಬೇಕು. ಇಲ್ಲದಿದ್ದರೆ ಹಣಕಾಸಿನ ಪರಿಸ್ಥಿತಿ ಮತ್ತು ಅವಶ್ಯಕ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ತಿದ್ದುಪಡಿ ಮಾಡಿ, ಸಚಿವ ಸಂಪುಟದಲ್ಲಿ ಒಪ್ಪಿಗೆಯನ್ನು ಪಡೆದು ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿದ್ದೇವೆ. ಅವರು ಅಧಿವೇಶನದಲ್ಲಿ ಇಡಿ ಎಂದು ಹೇಳಿರುತ್ತಾರೆ. ಈ ವಿಚಾರದಲ್ಲಿ ಮಾನ್ಯ ಜನಾರ್ಧನ ಪೂಜಾರಿಯವರಿಗೂ ಭೇಟಿ ಮಾಡಿದ್ದೇನೆ ಮಾನ್ಯ ವೀರೇಂದ್ರ ಪಾಟೀಲರನ್ನೂ ಭೇಟಿ ಮಾಡಿದ್ದೇನೆ ಹಾಗೂ ಪತ್ರವನ್ನೂ ಬರೆದಿದ್ದೇನೆ ಮಾನ್ಯ ಕೆ. ಸಿ. ಪಂತ್‌ರವರಿಗೂ ಪತ್ರ ಬರೆದೆ. ಬೇಕಾದರೆ ನಾನು ಚರ್ಚೆ ಮಾಡುವುದಕ್ಕೆ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಬರುತ್ತೇನೆ. ಅಲ್ಲಿ ಕುಳಿತುಕೊಂಡು ಇದನ್ನು ಇತ್ಯರ್ಥ ಮಾಡಬೇಕೆಂದು ಕೇಳಿಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಒಳ್ಳೆಯ ಉದ್ದೇಶದಿಂದ ಅಫಿಲಿಯೇಷನ್ ಅಮೆಂಡ್‌ಮೆಂಟ್ ತಂದಿದೆ. ಆದರೆ ಇನ್ನೊಬ್ಬರು ಕೊಡಬೇಕೆಂದು ಹೇಳುತ್ತೀರಿ. ಸರ್ಕಾರದ ಹಿಡಿತ ಇರುವುದಿಲ್ಲ. ನೀವು ಏನಾದರೂ ಮಾಡಿ ರಕ್ಷಿಸುವ ವ್ಯವಸ್ಥೆ ಮಾಡಿ.

ಶ್ರೀ ಎಂ. ರಘುಪತಿ.— ಅದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಸಿಗುತ್ತದೆ ಎನ್ನುವ ನಂಬಿಕೆ ಇದೆ. ಅದಕ್ಕೆ ನಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾಗಬೇಕು. ಮಾನ್ಯ ಶ್ರೀನಿವಾಸ್ ಮತ್ತು ಪಾಟೀಲರ ಕೋರಿಕೆಯೂ ಇದೆ. ಸಹ್ಯಾದ್ರಿ ವಿಶ್ವವಿದ್ಯಾಲಯವನ್ನು ಅನುದಾನ ಪಡೆದ ಕೂಡಲೇ ಪ್ರಾರಂಭ ಮಾಡುತ್ತೇವೆ ಅಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ. ಟೆಕ್ನಿಕಲ್ ಯೂನಿವರ್ಸಿಟಿ ಸ್ಥಾಪನೆ ಮಾಡಬೇಕೆಂದು ಕೇಂದ್ರಸರ್ಕಾರದ ಯು.ಜಿ.ಸಿ. ಅಧಿಕಾರಿಗಳು ಬಂದಿದ್ದರು. ಅವರ ಜೊತೆ ಚರ್ಚೆ ಮಾಡಿದ್ದೇನೆ. ಶ್ರೀಮಾನ್ ಕೆ.ಸಿ. ಪಂತರ್‌ರವರ ಜೊತೆಯಲ್ಲೂ ಚರ್ಚೆ ಮಾಡಿದ್ದೇನೆ. ೧೯೮೩–೮೪ ರಲ್ಲಿ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಹೇಳಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. Director of Technical Education ನಲ್ಲಿ ಏನು ಶಿಕ್ಷಣ ತಜ್ಞರು ಇದ್ದಾರೆ ಅವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದ್ದೇವೆ. ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ನಮ್ಮ ಉದ್ದೇಶ ಇದೆ. ಕೇಂದ್ರಸರ್ಕಾರದ ಸಂಪೂರ್ಣ ನೆರವು ಸಿಗುತ್ತದೆಂಬ ನಂಬಿಕೆ ಇದೆ. ಶ್ರೀಮಾನ್ ಭೂಪತಿಯವರು ಪ್ರಸ್ತಾಪ ಮಾಡಿದ್ದಾರೆ. ಪಿ. ಜಿ. ಸೆಂಟರನ್ನು ಅಲ್ಲಿಂದ ಸ್ಥಳಾಂತರ ಮಾಡಬೇಕೆಂದು ಉದ್ದೇಶ ಇಲ್ಲ. ಬಳ್ಳಾರಿ ಮತ್ತು ಸೊಂಡೂರಿನ ಜನತೆಯಲ್ಲಿ ಸ್ವಲ್ಪ ಗೊಂದಲವಾಗಿದೆ. ಇದನ್ನು ಸರಿ ಮಾಡುತ್ತೇನೆ. ಪಿ. ಜಿ. ಸೆಂಟರ್ ಎಲ್ಲಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಅದರ ಬಗ್ಗೆ ಸಂಗ್ರಹಗಳನ್ನು ಮಾಡುತ್ತಿದ್ದೇವೆ. ಈ ಸಂಗ್ರಹಕ್ಕನುಗುಣವಾಗಿ, ಎಲ್ಲಿ ಪಿ. ಜಿ. ಸೆಂಟರ್ ಮಾಡಬೇಕೆನ್ನುವ ನಿರ್ಣಯ ತೆಗೆದುಕೊಳ್ಳುತ್ತೇವೆ.

ಇನ್ನು ದಾವಣಗೆರೆಯಲ್ಲಿ ಪಿ. ಜಿ. ಸೆಂಟರ್ ಅನ್ನು ರೆಕಗ್ನೈಸ್ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುತ್ತೇನೆ. ಅದನ್ನು ರೆಕಗ್ನೈಸ್ ಮಾಡುತ್ತೇನೆ, ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಒಂದೇ ಒಂದು ವಿಷಯವನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅದೇನೆಂದರೆ ಪಠ್ಯಪುಸ್ತಕಗಳ ವಿಷಯ. ಅಧ್ಯಕ್ಷರೇ, ತಮಗೆ ಹೇಳಬೇಕಾಗಿದ್ದರೆ ಈ ಒಂದು

ನೂತನ ಕಾರ್ಯಕ್ರಮವನ್ನು ಕ್ರಾಂತಿ ಕಾರ್ಯಕ್ರಮವಾಗಿ ಜಾರಿಗೆ ತಂದಿದ್ದೇವೆ. ಬಡಮಕ್ಕಳು ಹಳ್ಳಿಗಾಡಿನಲ್ಲಿ ಓದುವವರು ಯಾರು ಇದ್ದರು ಅವರಿಗೆ ಈ ಪುಸ್ತಕಗಳು ಸಿಗಬೇಕು ಎನ್ನುವುದೇ ನನ್ನ ಒಂದು ಆಸೆ. ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆಲ್ಲಾ ಹೇಳುತ್ತೇನೆ. ಕಳೆದ ೫ ವರ್ಷಗಳಿಂದಲೂ ಈ ಪುಸ್ತಕಗಳ ವಿತರಣೆ ಯಾವ ರೀತಿ ಇತ್ತು ಎಂದರೆ ಈ ಖಾಸಗಿ ಮಾಲೀಕರು ಇವನ್ನು ಮಾರುತ್ತಿದ್ದಾರಲ್ಲ? ಅವರು ಜನವರಿಯಲ್ಲಿ ೫೦ ರಷ್ಟು ಪುಸ್ತಕಗಳನ್ನು ತೆಗೆದುಕೊಂಡು ವಿತರಣೆ ಮಾಡುತ್ತಿದ್ದರು. ಈವೊತ್ತಿನ ದಿವಸ ಇದರ ಬಗ್ಗೆ ಯಾರೂ ಮಾತನಾಡಲಿಲ್ಲ. ಇದರಲ್ಲಿ ಕೆಲವು ತೊಂದರೆಗಳಾಗಿವೆ. ಇಲ್ಲ ಅಂತ ಅಲ್ಲ. ತಮಗೆ ಹೇಳಬೇಕಾದರೆ ಒಂದು ಕೆಲಸ ನಮ್ಮ ನಿರೀಕ್ಷೆಗಿಂತ ಮೀರಿದೆ. ನಾವು ೭೦ ಲಕ್ಷ ಪುಸ್ತಕಗಳನ್ನು ಮುದ್ರಣ ಮಾಡಿಸಬೇಕಾಗಿತ್ತು. ಅದು ಸ್ವಲ್ಪ ಕಡಿಮೆಯಾಗಿದೆ. ಒಟ್ಟಿನಲ್ಲಿ ತಮಗೆ ಈಗ ಹೇಳಬೇಕಾದರೆ ಈ ಒಂದು ಪುಸ್ತಕದ ವಿತರಣೆಯನ್ನು ಆಗಸ್ಟ್ ೧೫ ರೊಳಗೆ ಮುಗಿಸುತ್ತೇನೆಂದು ಹೇಳುತ್ತೇನೆ. ತಮಗೆ ಬೇಕಾದರೆ ಇದರ ಬಾಕಿ ಅಂಶಗಳನ್ನು ಕೊಡುತ್ತೇನೆ. ಈಗ ಶ್ರೀ ಮಾನ್ ವೀರಪ್ಪ ಮೊಯ್ಲಿ ಅವರು ಕೇಳಿದರು. ಅದರ ಪ್ರಕಾರ ಈಗ ಒಂದು ಪುಸ್ತಕವನ್ನು ತಯಾರು ಮಾಡಿದ್ದೇವೆ. ಅದನ್ನು ಎಲ್ಲಾ ಸದಸ್ಯರಿಗೂ ಕಳುಹಿಸಿ ಕೊಡುತ್ತೇನೆ. ಈ ಪುಸ್ತಕಗಳು ಎಲ್ಲೆಲ್ಲಿ ಎಷ್ಟೆಷ್ಟು ಸರಬರಾಜು ಆಗಿದೆ ಎನ್ನುವುದನ್ನೂ ಸಹ ಹೇಳುತ್ತೇನೆ. ಇದರಲ್ಲಿ ಕೆಲವು ಲೋಪ ದೋಷಗಳಾಗಿರ ಬಹುದು ಆದರೆ ಈ ಬಗ್ಗೆ ನಮ್ಮ ಕೈಲಾದ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ ಎಂದು ಅಷ್ಟು ಮಾತ್ರ ತಿಳಿಸುತ್ತೇನೆ. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿರ ಬಹುದು. ಮುಂದಕ್ಕೆ ಇದರ ಬಗ್ಗೆ ನಾವು ಒಂದು ನಿರ್ಣಯ ಮಾಡಿದ್ದೇವೆ. ಏನೆಂದರೆ ನ್ಯಾಷನಲ್ ಟೆಕ್ಸ್ಟ್ ಬುಕ್ಸ್ ಸೊಸೈಟಿ ಅಂತ ಮಾಡಿ ಅದರ ಮುಖಾಂತರ ವಿತರಣೆ ಮಾಡಬೇಕೆಂದು ಇದ್ದೇವೆ. ಮುಂದೆ ತಾಲ್ಲೂಕು ಎ.ಇ.ಓ. ಗಾಗಲಿ ಅಥವಾ ಉಪಾಧ್ಯಾಯರಿಗಾಗಲಿ ಇದರ ಜವಾಬ್ದಾರಿ ಇರುವುದಿಲ್ಲ ಅವರಿಂದ ವಿತರಣೆಯಾಗುವುದನ್ನು ತಪ್ಪಿಸುತ್ತೇವೆ. ಈ ಒಂದು ಹೊಸ ಕಾರ್ಯಕ್ರಮ ಮಾಡಿದಾಗ ಕೆಲವು ಲೋಪದೋಷಗಳಾಗಿವೆ. ಎಂದು ನಾನು ತಿಳಿದು ಕೊಂಡಿದ್ದೇನೆ. ಆದುದರಿಂದ ಇದಕ್ಕೆ ಒಂದು ಹೊಸ ರೂಪ ಕೊಡುವುದು ಒಳ್ಳೆಯದು ಎಂದು ತಿಳಿದು ನಾನು ಆಗಲೇ ಹೇಳಿದ ಹಾಗೆ ನ್ಯಾಷನಲ್ ಟೆಕ್ಸ್ಟ್ ಬುಕ್ಸ್ ಸೊಸೈಟಿ ಅಂತ ಅದರ ಮುಖಾಂತರ ವಿತರಣೆ ಆಗುವ ಹಾಗೆ ಮಾಡಬೇಕೆಂದು ಮಾಡಿದ್ದೇವೆ ಈಗಾಗಲೇ ನ್ಯಾಷನಲ್ ಟೆಕ್ಸ್ಟ್ ಬುಕ್ಸ್ ಸೊಸೈಟಿ ಅಂತ ಮಹಾರಾಷ್ಟ್ರದವರು ಮಾಡಿದ್ದಾರೆ. ತಮಿಳುನಾಡಿನವರು ಮಾಡಿದ್ದಾರೆ. ಈ ಬಗ್ಗೆ ಪರಿಶೀಲಿಸಿ ನೋಡಿಕೊಂಡು ಬರಲು ನಮ್ಮ ಅಧಿಕಾರಿಗಳು ಅಲ್ಲಿಗೆಲ್ಲಾ ಕಳುಹಿಸಿದ್ದೇವೆ. ಅವರು ಇದರ ಬಗ್ಗೆ ಸರ್ಕಾರಕ್ಕೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಆ ವಿಚಾರದಲ್ಲಿ ಸರ್ಕಾರ ಇಷ್ಟರಲ್ಲೇ ತೀರ್ಮಾನ ತೆಗೆದುಕೊಂಡು ನ್ಯಾಷನಲ್ ಟೆಕ್ಸ್ಟ್ ಬುಕ್ಸ್ ಸೊಸೈಟಿ ಅನ್ನುವುದನ್ನು ರಚನೆ ಮಾಡುತ್ತೇವೆ. ಅವರೇ ಈ ಟೆಕ್ಸ್ಟ್ ಬುಕ್ಸ್‌ಗಳನು ಮುದ್ರಣ ಮಾಡಿ ಬರುವ ವರ್ಷ ಪ್ರಾರಂಭವಾಗುವ ವೇಳೆಗೆ ಈ ಎಲ್ಲಾ ಪುಸ್ತಕಗಳನ್ನು ಸಹ ಆ ಮಕ್ಕಳಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತದೆ ಎಂದು ಹೇಳಬಯಸುತ್ತೇನೆ. ಈಗ ಇದರಲ್ಲಿ ಹಲವಾರು ಲೋಪದೋಷಗಳು ಇವೆ. ಇಲ್ಲ ಅಂತಲ್ಲ. ಮುದ್ರಣದಲ್ಲಿ ತಪ್ಪು ಇದೆ ಎಂದು ಹೇಳಿದ್ದಾರೆ. ಮಾರ್ಕ್ಸ್‌ಕಾರ್ಡ್‌ನಲ್ಲಿ ಹಲವಾರು ಲೋಪದೋಷಗಳು ಇವೆ ಎಂದು ಹೇಳಿದ್ದಾರೆ. ಇದುವರೆಗೆ ಏನೋ ಒಂದು ಕೃಪಾಕಟಾಕ್ಷದಿಂದ ನಡೆಯುತ್ತಿತ್ತು. ಮುಂದೆ ಆದು ಹಾಗಾಗುವುದಿಲ್ಲ. ಕೆಲವರು ಕಂಪ್ಯೂಟರ್‌ನಿಂದ ಕೆಲವು ಲೋಪದೋಷಗಳಾಗಿವೆ ಎಂದು ಹೇಳಿದರು. ನಾವು ಇದಕ್ಕೆಲ್ಲಾ ಪರಿಶೀಲನೆ ಮಾಡುವುದಕ್ಕೆ ಒಂದು ಸ್ಕ್ರೀನಿಂಗ್ ಕಮಿಟಿ ಮಾಡಿದ್ದೇವೆ. ಮುಂದೆ ಇದರ ಬಗ್ಗೆ ಯಾವ ರೀತಿಯಾಗಿಯೂ ಅನ್ಯಾಯವಾಗದಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಮುಂದಕ್ಕೆ ಮಾರ್ಕ್‌ಕಾರ್ಡ್ ಸರಿಯಾಗಿ ಸುವ್ಯವಸ್ಥಿತವಾದ ರೀತಿಯಲ್ಲಿ ಪೂರೈಸುವ ಹಾಗೆ ಮಾಡುತ್ತೇನೆ. ಹಾಗೆಯೇ ಕೆಲವು ಸದಸ್ಯರು ಮೈಗ್ರೇಷನ್ ಸರ್ಟಿಫಿಕೇಟ್ ಬಗ್ಗೆ ಎಲಿಜಿಬಿಲಿಟಿ ಸರ್ಟಿಫಿಕೇಟ್ ಕೊಡಬೇಕೆಂತಲೂ ಮತ್ತು ಎಲಿಜಿಬಿಲಿಟಿ ಸರ್ಟಿಫಿಕೇಟ್ ೧೫ ದಿವಸದೊಳಗೆ ಕೊಡಬೇಕೆಂತಲೂ ಆದೇಶ ಕೊಡುತ್ತೇನೆ.

ಇನ್ನು ಕೊನೆಯದಾಗಿ ಹೇಳಬೇಕಾದರೆ ನವೆಂಬರ್ ಒಂದನೇ ತಾರೀಖಿನಿಂದ ಬಡಮಕ್ಕಳಿಗೆ ಸಮವಸ್ತ್ರವನ್ನು ಕೊಡುವುದಕ್ಕೆ ಆರಂಭ ಮಾಡುತ್ತೇವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆಗಸ್ಟ್ ೧೫ ರಿಂದಲೇ ಏತಕ್ಕೆ ಆರಂಭ ಮಾಡಬಾರದು ?

ಶ್ರೀ ಎಂ. ರಘುಪತಿ.—ಹಾಗೆ ಆಗುವುದಿಲ್ಲ. ಏತಕೆಂದರೆ ನಾವು ಈ ಕೆಲಸವನ್ನು ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ಗೆ ವಹಿಸಿದ್ದೇವೆ. ನೀವು ಹೇಳಿದಹಾಗೆ ನಾವೇನಾದರೂ ಅಷ್ಟು ಬೇಗನೆ ಮಾಡುವುದಕ್ಕೆ ಹೊರಟರೆ ಅದನ್ನು ಬೇರೆಯವರಿಗೇನಾದರೂ ವಹಿಸಿಬಿಟ್ಟರೆ ನಾಳೆ ಏನಾದರೂ ಇದರ ಬಗ್ಗೆ ಆಪಾದನೆಗೆ ಗುರಿಯಾದರೆ ಅಥವಾ ಇದರಲ್ಲಿ ಭ್ರಷ್ಟಾಚಾರ ನಡೆದಿದೆ ಎನ್ನುವ ಶಂಕೆ ಬಂದರೆ ಕಷ್ಟವಾಗುತ್ತದೆ. ಹಾಗೆ ಇರಕೂಡದು ಎಂದು ನಾವು ಇದನ್ನು ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ನಿಗೆ ವಹಿಸಿ ಕೊಡುತ್ತೇವೆ. ಅವರು ಬಟ್ಟೆಕೊಡುತ್ತಾರೆ ಅವರು ಬಟ್ಟೆ ಕೊಟ್ಟಮೇಲೆ ಸಮವಸ್ತ್ರ ಹೊಲಿಯುವುದಕ್ಕೆ ತಡವಾಗಬಾರದು ಎಂದು ತಕ್ಷಣವಾಗಿ ಇದನ್ನು ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಕೊಟ್ಟು, ಹೊಲಿಸುವ ಕಾರ್ಯಕ್ರಮವನ್ನು ಮಾಡುತ್ತೇವೆ ಆದುದರಿಂದ ಈ ಒಂದು ಕಾರ್ಯಕ್ರಮವನ್ನು ನವೆಂಬರ್ ಒಂದನೇ ತಾರೀಕಿನಿಂದ ಜಾರಿಗೆ ತರಬೇಕು ಎಂದು ನಿರ್ಣಯ ಮಾಡಿದ್ದೇವೆ. ಇನ್ನು ಇದರಬಗ್ಗೆ ಹಲವಾರು ಸದಸ್ಯರುಗಳು ಹಲವಾರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಕಡೆಯ ಮಾನ್ಯ ಸದಸ್ಯರುಗಳೂ ಸಹ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಕಡೆಯ ಮಾನ್ಯ ಸದಸ್ಯರುಗಳೂ ಸಹ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನೆಲ್ಲಾ ನಾನು ಗಣನೆಗೆ ತೆಗೆದುಕೊಂಡು ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಈಹೊತ್ತು ಇದರ ಬಗ್ಗೆ ನಡೆದಂಥ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲ ಸದಸ್ಯರೂ ಸಹ ಇದಕ್ಕೆ ತಮ್ಮ ಸಹಕಾರ ಕೊಟ್ಟು, ಈ ಶಿಕ್ಷಣ ಪದ್ಧತಿಯಲ್ಲಿ ಏನೇನು ಲೋಪದೋಷಗಳು ಇವೆ. ಅದನ್ನು ಸರಿಮಾಡಬೇಕು ಎಂದು ಏನು ಹೇಳಿದ್ದಾರೆ. ಅದಕ್ಕನು ಗುಣವಾಗಿ ಅವರುಗಳು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನೆಲ್ಲಾ ನಾನು ಗಮನಕ್ಕೆ ತೆಗೆದು ಕೊಂಡು ಕಾರ್ಯರೂಪಕ್ಕೆ ಎಷ್ಟು ಆಗುತ್ತದೋ ಅಷ್ಟು ಬರುವ ಹಾಗೆ ಮಾಡುತ್ತೇನೆಂದು ಮಾನ್ಯ ಸದಸ್ಯರೆಲ್ಲರಿಗೂ ನನ್ನಧನ್ಯವಾದಗಳನ್ನರ್ಪಿಸಿ ಮುಂದೂ ಎಲ್ಲರೂ ನನಗೆ ಸಹಕಾರ ಕೊಡಬೇಕೆಂದು ಹೇಳಿ ಈ ಬೇಡಿಕೆಗೆ ತಮ್ಮೆಲ್ಲರ ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಈ ಬೇಡಿಕೆ ಬಗ್ಗೆ ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಈಗಾಗಲೇ ೪ ಕಡೆ ಗಾಂಧಿಯನ್ ಟೈಪ್‌ಹೈಸ್ಕೂಲ್ಸ್ ಮಾಡಿದ್ದೇವೆಂದು ಅನೌನ್ಸ್ ಮಾಡಿದ್ದಾರೆ. ಆ ನಾಲ್ಕನ್ನು ಎಲ್ಲೆಲ್ಲಿ ಮಾಡಿದ್ದಾರೆ ಅನ್ನುವುದನ್ನು ಹೇಳುತ್ತಾರೆಯೋ ?

ಎರಡನೆಯದಾಗಿ, ಈ ಟ್ರೈಬಲ್ ಬೆನಿಫಿಟ್ ಸ್ಕೀಮ್‌ನಲ್ಲಿ ಏನಾಗಿದೆ ಎಂದರೆ ಇದರ ಬಗ್ಗೆ ಮ್ಯಾನೇಜ್‌ಮೆಂಟ್‌ನವರು ೩ ಪರ್ಸೆಂಟ್ ಕೊಡಬೇಕು. ಅನೇಕ ಪ್ರೈವೇಟ್ ಇನ್ಸ್‌ಟಿಟ್ಯೂಷನ್ನವರು ಕೊಡುವುದಿಲ್ಲ. ಇದರಿಂದ ಅವರು ನಿವೃತ್ತರಾಗುವ ಸಮಯದಲ್ಲಿ ಡಿ. ಸಿ. ಆರ್ ಜಿ. ಏನು ಸಿಗಬೇಕೋ ಅದು ಸಿಗುವುದಕ್ಕೆ ತೊಂದರೆಯಾಗಿದೆ. ಇದರಿಂದ ಅನೇಕ ಲೆಕ್ಚರರ್ಸ್‌ಗೆ, ಉಪಾಧ್ಯಾಯರಿಗೆ ತೊಂದರೆಯಾಗಿದೆ. ಇದನ್ನು ಸರ್ಕಾರವೇ ಏತಕ್ಕೆ ವಹಿಸಿಕೊಳ್ಳಬಾರದು, ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಮೂರನೆಯದಾಗಿ ಇನ್ನು ಬಿಲ್ಡಿಂಗ್ ಎಕ್ವಿಪ್‌ಮೆಂಟ್ಸ್ ಮತ್ತು ಫರ್ನೀಚರ್ ಇವನ್ನು ಈ ವರ್ಷವೇ ಒದಗಿಸಿಕೊಡಿ ಎಂದು ಹೇಳಿದ್ದೇನೆ. ಇದಕ್ಕೆ ಡೆಫನೆಟ್ ಆಗಿ ಇಂತಿಷ್ಟು ಹಣ ಕೊಡಿ ಎಂದು ಹೇಳಿದ್ದೇನೆ. ಇದಕ್ಕೆ ಎಷ್ಟು ಹಣ ಕೊಟ್ಟಿದ್ದೀರಾ? ಈ ವರ್ಷ ಎಷ್ಟು ಹೈಸ್ಕೂಲ್ ಬಿಲ್ಡಿಂಗ್ ಅನ್ನು ಎಷ್ಟು ಕಾಲೇಜು ಬಿಲ್ಡಿಂಗ್ ಅನ್ನು ಕಟ್ಟುವುದಕ್ಕೆ ತೆಗೆದುಕೊಳ್ಳುತ್ತೀರಾ ಅನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಂ. ರಘುಪತಿ.—ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಟ್ರೈಬಲ್ ಬೆನಿಫಿಟ್ ಸ್ಕೀಂ ಬಗ್ಗೆ ಹೇಳಿದರು. ಇದರಲ್ಲಿ ಏನು ಇದೆ ಎಂದರೆ ಒಂದು ಭಾಗದಷ್ಟು ಮ್ಯಾನೇಜ್‌ಮೆಂಟಿನವರು ಕೊಡಬೇಕು, ಒಂದು ಭಾಗದಷ್ಟು ಉಪಾಧ್ಯಾಯರು ಕೊಡಬೇಕು, ಒಂದು ಭಾಗದಷ್ಟು ಸರ್ಕಾರ ಕೊಡಬೇಕು ಅಂತ ಇದೆ. ಈಗ ಉಪಾಧ್ಯಾಯರದ್ದು ಮತ್ತು ಸರ್ಕಾರದ್ದು ಈ ಎರಡು ಭಾಗವನ್ನು ಸರ್ಕಾರವೇ ಕೊಡಬೇಕಾಗುತ್ತದೆ. ಮ್ಯಾನೇಜ್‌ಮೆಂಟಿನವರು ಅವರದ್ದು ಒಂದು ಭಾಗದಷ್ಟು ಹಣವನ್ನು ಅವರೇ ಕೊಡಬೇಕು.ಬಹುತೇಕ ಮ್ಯಾನೇಜ್‌ಮೆಂಟಿನವರು ಕೊಡುವುದಿಲ್ಲ.ಅವರು ಆ ಹಣವನ್ನು ಕೊಡದೇ ಇರುವುದರಿಂದ ನಿವೃತ್ತರಾದಂಥಾ ಉಪಾಧ್ಯಾಯರುಗಳಿಗೆ ಸಹಾಯ ಸಿಕ್ಕುವುದಿಲ್ಲ. ಈ ಮೂರಕ್ಕೂ ಸೇರಿದ ಹಾಗೆ ನಾವು ಈಗ ಒಂದು ಅಮೆಂಡ್‌ಮೆಂಟ್ ತರುತ್ತೇವೆ. ಅವಾಗ ಸರ್ಕಾರವೇ ವಹಿಸಿಕೊಳ್ಳುತ್ತದೆ.

ಇನ್ನು ಗಾಂಧಿಯನ್ ಟ್ರೈಪ್ಸ್ ಆಫ್ ಹೈಸ್ಕೂಲ್ಸ್ ೪ ಶಾಲೆಗಳನ್ನು ಎಲ್ಲೆಲ್ಲಿ ಮಾಡಿದ್ದೀರಾ ಎಂದು ಕೇಳಿದರು. (೧) ಬೆಂಗಳೂರಿನಲ್ಲಿ (೨) ಗುಲ್ಬರ್ಗದಲ್ಲಿ (೩) ಮೈಸೂರಿನಲ್ಲಿ ಮತ್ತು (೪) ಬೆಳಗಾಂನಲ್ಲಿ. ಈ ನಾಲ್ಕು ಕಡೆ ಈಗಾಗಲೇ ಮಾಡಿದ್ದೇವೆ. ೧೯೮೬-೮೭ಕ್ಕೆ ಇನ್ನೂ ನಾಲ್ಕು ಗಾಂಧಿಯನ್ ಟ್ರೈಪ್ಸ್ ಆಫ್ ಹೈಸ್ಕೂಲ್ಸ್ ಅನ್ನು ಮಾಡಬೇಕು ಅಂತ ಇದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿದ್ಯಾ ಮಂತ್ರಿಗಳು ಸ್ಫಟಿಕವಾದಂಥ ಮಾತನ್ನು ಹೇಳಿದ್ದಾರೆ, ಭರವಸೆಗಳನ್ನೆಲ್ಲಾ ಕೊಟ್ಟಿದ್ದಾರೆ, ಹೊಸ ನೀತಿಯನ್ನು ಪ್ರಕಟಣೆ ಮಾಡಿದ್ದಾರೆ, ಸಂತೋಷ, ಅವರಿಗೆ ವಂದನೆಗಳು. ನಾನು ಈಗ ಒಂದೆರಡು ಪ್ರಶ್ನೆಗಳನ್ನು ಕೇಳುತ್ತೇನೆ. ಒಂದನೆಯದು, ಕೇಂದ್ರೀಯ ವಿದ್ಯಾ ಸಂಸ್ಥೆಗಳನ್ನು ಮಾಡಬೇಕು ಎಂದು ಕೇಂದ್ರ ಸರ್ಕಾರದವರು ಹೇಳಿದ್ದಾರೆ, ಅದರ ಬಗ್ಗೆ ನೀವು ಏನೂ ಹೇಳಲಿಲ್ಲ. ಎರಡನೆಯದು, ಸ್ಪೆಷಲ್ ಕಾಂಪೋನೆಂಟ್ ಪ್ಲಾನ್ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಯಾರು ಹಿಂದುಳಿದವರು, ಬಡವರು ಇದ್ದಾರೆ ಅವರಿಗೆ ವಿಶೇಷವಾಗಿರತಕ್ಕಂಥ ಶಾಲೆಗಳನ್ನು ಪ್ರಾರಂಭ ಮಾಡಲಿಕ್ಕೆ ಅನುಕೂಲತೆಗಳನ್ನು ಕೊಡಬೇಕು, ಕಿತ್ತೂರುರಾಣಿ ಚೆನ್ನಮ್ಮ ಶಾಲೆಯ ಮಾದರಿಯಲ್ಲಿ ಮಾಡಬೇಕು ಎಂದು ಹೇಳಿದ್ದಾರೆ. ಶಿವಮೊಗ್ಗದಲ್ಲಿ ಈ ರೀತಿ ಪ್ರಾರಂಭ ಮಾಡುವುದಕ್ಕೆ ೩ ವರ್ಷ ತೆಗೆದುಕೊಂಡಿದ್ದಾರೆ, ಇನ್ನೂ ಸರ್ಕಾರದ ಹುಕುಂ ಹೋಗಿಲ್ಲ. ಆರ್ಟಿಕಲ್ ೪೧ರ ಪ್ರಕಾರ ರೈಟ್ ಟು ಎಜುಕೇಷನ್ ಎಂದು ಇದೆ, ಆರ್ಟಿಕಲ್ ೪೫ರ ಪ್ರಕಾರ ಕಂಪಲ್ಸರಿ ಎಜುಕೇಷನ್ ಮಾಡಬೇಕು ಎಂದು ಇದೆ. ಈ ಬಗ್ಗೆ ಸರ್ಕಾರದ ನೀತಿಯನ್ನು ಪ್ರಕಟಣೆ ಮಾಡಿಲ್ಲ. ಕಡ್ಡಾಯ ಶಿಕ್ಷಣದ ಬಗ್ಗೆ ಸರ್ಕಾರದ ಧ್ಯೇಯಧೋರಣೆಗಳನ್ನು ಪ್ರಕಟಣೆ ಮಾಡಲಿಲ್ಲ, ಅದನ್ನು ದಯಮಾಡಿ ಹೇಳಬೇಕು.

ಶ್ರೀ ಎಂ. ರಘುಪತಿ.—ಸ್ಪೆಷಲ್ ಕಾಂಪೋನೆಂಟ್ ಸ್ಕೀಮನ್ನು ಜಾರಿಗೆ ಕೊಡಬೇಕು ಎಂದು ಆದೇಶ ಕೊಟ್ಟಿದೆ. ಅದೇ ಪ್ರಕಾರ ಶಿವಮೊಗ್ಗ ಇನ್‌ಸ್ಟಿಟ್ಯೂಟ್‌ಗೂ ಸಿಗುತ್ತದೆ. ಇವರುಗಳು ಲ್ಯಾಪ್ಸ್ ಮಾಡದ ಹಾಗೆ ನೋಡಿಕೊಳ್ಳುತ್ತೇವೆ. ಆಮೇಲೆ ಕೇಂದ್ರೀಯ ವಿದ್ಯಾಲಯಗಳ ಬಗ್ಗೆ ಕೇಂದ್ರದವರು ನಮಗೆ ಬರೆದಿದ್ದರು, ಕರ್ನಾಟಕದಲ್ಲಿ ಸ್ಥಾಪನೆ ಮಾಡುತ್ತೇವೆ ಎಂದು. ಮತ್ತೆ ಅವರಿಂದ ಉತ್ತರ ಬಂದಿಲ್ಲ. ಆಮೇಲೆ, ಪಬ್ಲಿಕ್ ಸ್ಕೂಲ್ಸ್ ಬಗ್ಗೆ ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅದರಲ್ಲಿ ಇಂಗ್ಲೀಷೂ ಇರಬೇಕು, ಕನ್ನಡವೂ ಇರಬೇಕು.

ಶ್ರೀ ಎಂ. ರಘುಪತಿ.—ಅದರಲ್ಲಿ ಕನ್ನಡ ಇರಬೇಕು. ಆಮೇಲೆ ಕಂಪಲ್ಸರಿ ಎಜುಕೇಷನ್ ಬಗ್ಗೆ ಹೇಳಿದ್ದಾರೆ, ಅದಕ್ಕೆ ಪ್ರೈಮರಿ ಎಜುಕೇಷನ್ ಮಿನಿಸ್ಟರ್‌ರವರು ಹೇಳುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ಟೇ ಆರ್ಡರ್ ಬಗ್ಗೆ ವಾದವಿವಾದ ಇದೆ. ಇದಕ್ಕೆ ಯಾರು ಲಾಯರ್; ಎಂದು ಡಿಸ್ಪ್ಯೂಟ್ ಬಂತು. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಗವರ್ನಮೆಂಟ್ ಪ್ಲೀಡರ್‌ಗೆ ಆರ್ಡರ್ ಮಾಡುತ್ತಾ ಇದ್ದಾರೆ. ನ್ಯಾಯವಾಗಿ ಇದಕ್ಕೆ ಅಡ್ವೊಕೇಟ್ ಜನರಲ್‌ರವರನ್ನು ಮಾಡಬೇಕಾಗಿದೆ. ಇಂತಹ ಗಹನವಾದ ವಿಷಯದ ಬಗ್ಗೆ ಸರ್ಕಾರ ತೀವ್ರ ಗಮನ ಹರಿಸಬೇಕು. ಅವರು ಸ್ಟೇ ಕೊಟ್ಟರು, ಇವರು ಅಬ್ಜಕ್ಷನ್ ಹಾಕಿದರು. ಈಗ ಗವರ್ನಮೆಂಟ್ ಪ್ಲೀಡರನ್ನು ಮಾಡಿದರೆ ಅಂತೂ ನಾಳೆ ತಲೆತಗ್ಗಿಸಬೇಕಾಗುತ್ತದೆ. ಸರ್ಕಾರದ ಮೇಲೆ ನಮ್ಮ ಮೇಲೆ ತಮಾಷೆ ಮಾಡಿಕೊಂಡು ನಡೆಯುತ್ತಾರೆ. ಆಮೇಲೆ ಏಳನೇ ತರಗತಿಯಾದ ಮೇಲೆ ಆಪ್ಟಿಟ್ಯೂಟ್ ಟೆಸ್ಟ್ ಅಥವಾ ಬ್ರಿಡ್ಜ್ ಕೋರ್ಸನ್ನು ಶುರು ಮಾಡುತ್ತೇವೆಂದು ಹೇಳಿದ್ದಾರೆ. ಇದು ನಿಜವಾಗಿ ನಡೆಯುವುದಲ್ಲ. ಇಂತಹ ಒಂದು ಕ್ರಮವನ್ನು ಬಿಡಬೇಕು, ಅವು ಬಹಳ ಚಿಕ್ಕ ಮಕ್ಕಳು. ಕೆಲವು ಟೀಚರ್ಸ್ ಮಕ್ಕಳನ್ನು ಮುಂದಕ್ಕೆ ಕಳಿಸುವುದು, ಇಟ್ಟುಕೊಳ್ಳುವುದು, ಹೀಗೆ ಇಲ್ಲದ ಕೆಲಸ ನಡೆಯುತ್ತದೆ. ಆದುದರಿಂದ ಇದನ್ನು ಬಿಡಬೇಕು ಎಂದು ಹೇಳುತ್ತೇನೆ. ಆಮೇಲೆ ಕೋಲಾರದಲ್ಲಿ ಮೆಡಿಕಲ್ ಕಾಲೇಜು ಬೇಕು ಎಂದು ಹೇಳಿದ್ದೆ, ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಮತ್ತು ಸ್ಟೇ ಬಗ್ಗೆ ಆಸಕ್ತಿ ವಹಿಸಲಿಲ್ಲ.

ಶ್ರೀ ಎಂ. ರಘುಪತಿ.—ಈಗ ಸ್ಟೇ ವಿಷಯದಲ್ಲಿ ತಾವು ಕೇಳಿದಿರಿ. ನಾನು ಸ್ಟೇ ವಿಷಯವನ್ನು ಹೇಳಬೇಕಾದರೆ, ಸ್ಟೇ ಕೊಡುವುದಕ್ಕೆ ಮೊದಲೇ ಕೇವಿಯಟ್ ಹಾಕಿಸಿದ್ದೆ. ಸ್ಟೇ ಕೊಟ್ಟಿರುವುದರ ಬಗ್ಗೆ ಆಸಕ್ತಿ ವಹಿಸಲಿಲ್ಲ ಎಂದು ಹೇಳಬಾರದು. ಕೇವಿಯಟ್ ಹಾಕಿಸಿದರೂ ಸ್ಟೇ ಕೊಟ್ಟಿದ್ದಾರೆ. ಡಿವಿಜನ್ ಬೆಂಚ್‌ಗೆ ಇಮ್ಮಿಡಿಯೇಟಾಗಿ ಮೂವ್ ಮಾಡಿದರು. ಅಲ್ಲಿ ಸಿಂಗಲ್ ಜಡ್ಜ್ ನಿಕಾಲೆ ಮಾಡಿಕೊಳ್ಳಿ ಎಂದರು. ಅಡ್ವೋಕೇಟ್ ಜನರಲ್ ಅಪಿಯರ್ ಆಗಲಿಲ್ಲ. ೧೯೮೧ರಲ್ಲಿ ನಡೆದ ತಕರಾರಿನಲ್ಲಿ ಖಾಸಗಿ ಸಂಸ್ಥೆಗಳ ಪರವಾಗಿ ವಾದ ಮಾಡಿದ್ದರು. ಅದಕ್ಕೋಸ್ಕರ ನೀತಿ ಪ್ರಶ್ನೆಯಾಗಿರುವುದರಿಂದ ಅವರು ಅಪಿಯರ್ ಆಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಡೆಲ್ಲಿ ಮುಂತಾದ ಕಡೆಯಿಂದ ವಕೀಲರನ್ನು ತಂದು ಆರ್ಗ್ಯು ಮಾಡುತ್ತಾ ಇದ್ದಾರೆ. ಇವರು ಗವರ್ನಮೆಂಟ್ ಪ್ಲೀಡರನ್ನು ಇಟ್ಟುಕೊಂಡು ಮಾಡುತ್ತಾ ಇದ್ದಾರೆ. You must get the best of the lawyer and argue out.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ, ನನಗೆ ನಂದಿಹಳ್ಳಿಯ ಸ್ನಾತಕೋತ್ತರ ಕೇಂದ್ರದ ಬಗ್ಗೆ ಬಹಳ ಸ್ಪಷ್ಟವಾದಂಥ ಸರ್ಕಾರದ ನಿಲುವು ಬೇಕಾಗಿತ್ತು. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದನ್ನು ನೋಡಿದರೆ ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ ಆಯಿತು. ಬಳ್ಳಾರಿಯಲ್ಲಿ ಹೊಸ ಸ್ನಾತಕೋತ್ತರ ಕೇಂದ್ರವನ್ನು ಕೊಡಿಸುತ್ತೇವೆ, ಸರ್ಕಾರದ ಆಜ್ಞೆ ಮಾಡಿಸುತ್ತೇವೆ ಎಂದು ಮಾನ್ಯ ಕೃಷಿ ಸಚಿವರು ಭರವಸೆ ಕೊಟ್ಟು ಬಂದಿದ್ದಾರೆ, ಅದು ಪತ್ರಿಕೆಯಲ್ಲೆಲ್ಲಾ ಬಂದಿದೆ. ನಂದಿ ಹಳ್ಳಿಯಲ್ಲಿ ಸ್ನಾತಕೋತ್ತರ ಸೆಂಟರ್ ಇದೆ, ಮೂರುವರೆ ಕೋಟಿ ರೂಪಾಯಿ ಕೊಟ್ಟು ಕನ್ನಡ ಮತ್ತು ಹೊಸ ಕೋರ್ಸನ್ನು ಕೊಟ್ಟಿದ್ದಾರೆ, ಅಡ್ಮಿಷನ್ ಕೊಟ್ಟಿದ್ದಾರೆ. ಆ ಕೇಂದ್ರವನ್ನು ತೆಗೆದು ಬಳ್ಳಾರಿಯಲ್ಲಿ ಹಾಕುತ್ತಾರೆ ಎನ್ನುವ ವದಂತಿ ಬಂದು, ಅಲ್ಲಿ ಮುಷ್ಕರವಾಗಿದೆ. ಮಾನ್ಯ ಸಚಿವರೇ ಒಪ್ಪಿಕೊಳ್ಳುತ್ತಿರುವ ಹಾಗೆ, ನಂದಿಹಳ್ಳಿಯಲ್ಲಿರುವುದನ್ನು ತೆಗೆದು ಬಳ್ಳಾರಿಯಲ್ಲಿ ಹಾಕಬೇಕೇ, ಬಳ್ಳಾರಿ ಜಿಲ್ಲೆಯಲ್ಲಿ ಪಿ.ಜಿ. ಸೆಂಟರ್ ಮಾಡುವುದಕ್ಕೆ ಒಳ್ಳೆಯ ಸ್ಥಳವಿಲ್ಲವೇ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಹೇಳಿಕೆ ಕೊಡಬೇಕು. ಇನ್ನು ಕ್ಯಾಲೆಂಡರ್ ಇಯರ್ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಲಿಲ್ಲ. ನಮ್ಮ ರಾಜ್ಯದಲ್ಲಿರತಕ್ಕ ಯೂನಿವರ್ಸಿಟಿಗಳಲ್ಲಿ ಕ್ಯಾಲೆಂಡರ್ ಇಯರ್ ಫಿಕ್ಸ್ ಮಾಡಬೇಕಾದರೆ ಒಂದೊಂದು ಯೂನಿವರ್ಸಿಟಿ ಒಂದೊಂದು ತಿಂಗಳಲ್ಲಿ ಪ್ರಾರಂಭವಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಒಂದು ಡಿಗ್ರಿಯಿಂದ ಪಿ.ಜಿ. ಕೋರ್ಸಿಗೆ ಹೋಗಬೇಕಾದರೆ ತೊಂದರೆಯಾಗತ್ತದೆ. ಆದ್ದರಿಂದ ಕ್ಯಾಲೆಂಡರ್ ಇಯರ್ ಎಲ್ಲಾ ಯೂನಿವರ್ಸಿಟಿಗಳಿಗೆ ಒಂದೇಸಾರಿ ಫಿಕ್ಸ್ ಮಾಡಬೇಕು. ಮತ್ತೆ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಪ್ಲಿಮೆಂಟರಿ ಎಕ್ಸಾಮಿನೇಷನ್ಸ್ ನಡೆಸಬೇಕಾದರೆ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ನಡೆಯತಕ್ಕ ಎಕ್ಸಾಮಿನೇಷನ್ಸ್ ಕೆಲವು ಸಲ ಡಿಸೆಂಬರ್ ಅಥವಾ ಜನವರಿವರೆಗೆ ತಳ್ಳಿಕೊಂಡು ಹೋಗುತ್ತದೆ. ಹೀಗಾಗಿ ವಿದ್ಯಾರ್ಥಿಗಳಿಗೆ ಒಂದು ವರ್ಷ ವೇಸ್ಟಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು ಎಂದು ಕೇಳುತ್ತೇನೆ. ಮತ್ತೆ ಪೂರ್ ಬಾಯ್ಸ್ ಫಂಡ್‌ನಲ್ಲಿ ೧೯೮೪–೮೫ರಲ್ಲಿ ಎಷ್ಟು ಕಲೆಕ್ಟ್ ಮಾಡಿದ್ದಾರೆ, ಎಷ್ಟು ವಿದ್ಯಾರ್ಥಿಗಳಿಗೆ ಉಪಯೋಗ ಮಾಡಿದ್ದಾರೆ ಎಂಬ ಅಂಕಿಸಂಖ್ಯೆಗಳಿಲ್ಲ. ೧೯೮೪–೮೫ರಲ್ಲಿ ಎಷ್ಟು ಕಲೆಕ್ಟಾಗಿದೆ, ಎಷ್ಟು ಜನರಿಗೆ ಉಪಯೋಗ ಮಾಡಿದ್ದೀರಿ ಎಂಬ ಅಂಕಿಸಂಖ್ಯೆಗಳನ್ನು ಕೊಟ್ಟರೆ ಒಳ್ಳೆಯದಾಗುತ್ತದೆ. ಆಮೇಲೆ ಡೀಸೆಂಟ್ರಲೈಸೇಷನ್ ಆಫ್ ಬೋರ್ಡ್ ಬಗ್ಗೆ ಹೇಳಿದರು, ಮಹಾರಾಷ್ಟ್ರ, ತಮಿಳುನಾಡಿಗೆ ಎರಡು ಸಮಿತಿಗಳನ್ನು ಕಳುಹಿಸಿಕೊಟ್ಟು ಅಲ್ಲಿ ಸ್ಟಡಿ ಮಾಡಿಕೊಂಡು ಬಂದು ಅಭಿಪ್ರಾಯ ಕೊಟ್ಟಮೇಲೆ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಡೀಸೆಂಟ್ರಲೈಸೇಷನ್ ಬೋರ್ಡ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಕಮಿಟಿಗಳನ್ನು ಏಕೆ ಕಳಿಸಬೇಕು ಎಂದು ಅರ್ಥವಾಗುವುದಿಲ್ಲ. ಅಲ್ಲಿ ಏನು ವ್ಯವಸ್ಥೆ ಇದೆ ಎಂಬ ಬಗ್ಗೆ ಸರ್ಕಾರದ ಲೆವೆಲ್‌ನಲ್ಲಿ ರಿಪೋರ್ಟ್ ತರಿಸಿಕೊಂಡರೆ ಸಾಕಾಗುತ್ತದೆ. ಪಿ.ಯು.ಸಿ. ಡೈರೆಕ್ಟರ್‌ನ್ನು, ಎಸ್.ಎಸ್.ಎಲ್.ಸಿ. ಡೈರೆಕ್ಟರನ್ನು ಕಳಿಸಿದರೆ ಡೆಫಿನೆಟಲೀ ಡೀಸೆಂಟ್ರಲೈಸ್ ನಾಟ್ ನೆಸಸರಿ ಎಂದು ಹೇಳುತ್ತಾರೆ. ಏಕೆಂದರೆ, ದೇ ವಾಂಟ್ ಪವರ್. ಆದಕಾರಣ ಸ್ಪಷ್ಟಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ನಂದಿಹಳ್ಳಿ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಅಲ್ಲಿ ಎರಡು ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದಾರೆ, ಅದು ಮುಂದುವರಿಯುತ್ತದೆ. ಬಳ್ಳಾರಿಯಲ್ಲಿ ಸ್ಥಾಪನೆ ಮಾಡುವ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ. ಆಮೇಲೆ ಕ್ಯಾಲೆಂಡರ್ ಇಯರ್ ಬಗ್ಗೆ ಹೇಳಿದ್ದಾರೆ. ಆಗಸ್ಟ್ ಒಂದನೇ ತಾರೀಖು ಎಲ್ಲಾ ಕಾಲೇಜುಗಳು ಪ್ರಾರಂಭವಾಗಬೇಕು ಎಂದು ವಿಶ್ವವಿದ್ಯಾನಿಲಯಗಳು ನಿಗದಿಮಾಡಿರುವ ತಾರೀಖು ಎಂದು ಹೇಳಿದ್ದೇನೆ, ಆಮೇಲೆ ಸಪ್ಲಿಮೆಂಟರಿ ಎಕ್ಸಾಮಿನೇಷನ್ ನಡೆಸುವುದರ ಬಗ್ಗೆ ಹೇಳಿದ್ದಾರೆ ಅದು ಯೂನಿವರ್ಸಿಟಿಗಳಿಗೆ ಸಂಬಂಧಪಟ್ಟ ವಿಷಯ. ಅಂತರ ವಿಶ್ವವಿದ್ಯಾನಿಲಯ ಮಂಡಲಿಯಲ್ಲಿ ಚರ್ಚೆಮಾಡಿ ಲೋಪದೋಷ ಇದ್ದರೆ ಅವನ್ನು ಸರಿಮಾಡುವುದಕ್ಕೆ ಏರ್ಪಾಡು ಮಾಡುತ್ತಾರೆ. ಆಮೇಲೆ ಸಮಿತಿ ಏಕೆ ಕಳುಹಿಸುತ್ತೀರಿ ಅಂದರೆ, ಯಾವರೀತಿ ವರ್ಕಿಂಗ್ ಸಿಸ್ಟಂ ಮಾಡಿದ್ದಾರೆ, ಯಾವರೀತಿ ಪುನರ್ವಿಂಗಡಣೆ ಮಾಡಿದ್ದಾರೆ, ಯಾವರೀತಿ ಸ್ಟಾಫ್ ಪ್ಯಾಟ್ರನ್ ಮಾಡಿದ್ದಾರೆ ಎಂದು ಅಡ್ಮಿನಿಸ್ಟ್ರೇಷನ್‌ಗೋಸ್ಕರ ಕಳುಹಿಸುತ್ತಿದ್ದೇವೆಯೇ ಹೊರತು ಬೇರೇದಕ್ಕೆ ಅಲ್ಲ. ಅದನ್ನು ತಿಳಿದುಕೊಂಡು ಬಂದು ಅಭಿಪ್ರಾಯ ಕೊಟ್ಟಮೇಲೆ ನಿಮ್ಮೆಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡುತ್ತೇವೆಂದು ಹೇಳುತ್ತೇನೆ. ಆಮೇಲೆ ಪೂರ್ ಬಾಯ್ಸ್

ಫಂಡ್ ಎಷ್ಟು ಕಲೆಕ್ಟಾಗಿದೆ ಎಂದು ಕೇಳಿದ್ದಾರೆ, ಅದು ೪ ಲಕ್ಷ ರೂಪಾಯಿ ಆಗಿದೆ, ಯಾರು ಯಾರಿಗೆ ಕೊಟ್ಟಿದ್ದಾರೆಂದು ಕೇಳಿದ್ದಾರೆ, ಯಾರು ಯಾರಿಗೆ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ನಾನು ವಿವರಣೆ ಕೊಡುತ್ತೇನೆ.

ಶ್ರೀ ಪಂಪಾಪತಿ.—ನಮ್ಮ ಶಿಕ್ಷಣ ಸಚಿವರು ದಾವಣಗೆರೆ ಸ್ನಾತಕೋತ್ತರ ಕೇಂದ್ರವನ್ನು ಮುಂದುವರಿಸುವುದರ ಬಗ್ಗೆ ಆದೇಶ ಕೊಟ್ಟಿದ್ದಾರೆ, ಅವರಿಗೆ ಧನ್ಯವಾದಗಳು. ಏಕೆಂದರೆ, ದಾವಣಗೆರೆಯಲ್ಲಿ ಗೊಂದಲಮಯ ವಾತಾವರಣ ಉಂಟು ಮಾಡಿತ್ತು. ಅದನ್ನು ಪರಿಹಾರ ಮಾಡಿದ್ದಾರೆ, ಅದಕ್ಕೋಸ್ಕರ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಎಲ್ಲರೂ ವಿದ್ಯಾಭ್ಯಾಸದ ಬಗ್ಗೆ ಮಾತನಾಡಿದ್ದಾರೆ. ನಾನು ಅದರ ಬಗ್ಗೆ ಏನೂ ಹೇಳಲಿಲ್ಲ, ಹೇಳುವುದು ಉಳಿದಿಲ್ಲ. ಆದರೆ ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ, ಅವರ ಆಟಪಾಟಗಳ ಬಗ್ಗೆ ಹೇಳುವುದಾದರೆ ಅನೇಕ ಕಡೆ ಶಾಲೆಗಳಲ್ಲಿ ಮೈದಾನವೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿರತಕ್ಕ ಶಾಲೆಗಳು ಹೆಚ್ಚು ಇರುವುದು ನಮ್ಮ ರಾಜ್ಯದಲ್ಲಿ. ಆದುದರಿಂದ ವಿದ್ಯಾರ್ಥಿಗಳಿಗೆ ಯೋಗ ಶಿಕ್ಷಣವನ್ನು ಒದಗಿಸುವುದಾದರೆ ಅವರ ಆರೋಗ್ಯಕ್ಕೆ ತುಂಬ ಅನುಕೂಲವಾಗುತ್ತದೆ. ಅದರ ಬಗ್ಗೆ ಸರ್ಕಾರದ ಮೂಲಕ ಏನಾದರೂ ಕಾಯಿದೆ ರೂಪದಲ್ಲಿ ತಂದು ವ್ಯವಸ್ಥೆಯನ್ನು ಮಾಡಿದರೆ, ವಿದ್ಯಾರ್ಥಿಗಳಿಗೆ ಯೋಗ ಶಿಕ್ಷಣ ಕೊಟ್ಟರೆ ತುಂಬ ಅನುಕೂಲವಾಗುತ್ತದೆ. ಈ ಬಗ್ಗೆ ತಾವು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ರಘುಪತಿ.—ಸದಸ್ಯಕ್ಕಿಂತೂ ಇಲ್ಲ. ಇನ್ನು ಹಳ್ಳಿಗಳಲ್ಲಿ ಈ ಆಟ ಪಾಠಗಳ ಬಗ್ಗೆ ಮಕ್ಕಳಿಗೆ ಹೆಚ್ಚಿನ ಆಸಕ್ತಿ ಕೊಡಬೇಕೆಂದು ಡಿ.ಸಿ. ಗಳಿಗೆ ಲೆಟರ್ ಬರೆಯುತ್ತಿದ್ದೇವೆ. ಸರ್ಕಾರಿ ಜಮೀನು ಎಲ್ಲಿ ಇದೆ, ಅಲ್ಲಿ ನಿಗದಿ ಮಾಡಿ ಮಕ್ಕಳಿಗೆ ಆಟ ಆಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಪ್ರತಿಯೊಂದು ಸ್ಕೂಲಿನಲ್ಲಿಯೂ ಸುಲಭವಾದ ಆಟ ಅಂದರೆ ಕಬಡಿ, ಫುಟ್‌ಬಾಲ್, ಇಂತಹ ಆಟಗಳಿಗೆ ಬೇಕಾಗತಕ್ಕ ಸಲಕರಣೆಗಳನ್ನು ಒದಗಿಸಬೇಕೆಂದು ಮಾಡಿದ್ದೇವೆ ಅದಕ್ಕೆ ಒಂದು ಸ್ಕೀಮು ತಯಾರು ಮಾಡುತ್ತಿದ್ದೇವೆ. ಆ ಒಂದು ಸ್ಕೀಮಿನ ಪ್ರಕಾರ ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಆಟ ಪಾಠಗಳಲ್ಲಿ ಆಸಕ್ತಿ ವಹಿಸಲಿಕ್ಕೆ ಅವಕಾಶವಾಗುತ್ತದೆ.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಮಂತ್ರಿಗಳು ಸರ್ಕಾರಿ ಮುದ್ರಣಾಲಯದ ವಿಚಾರದ ಬಗ್ಗೆ ಏನೂ ಹೇಳಲಿಲ್ಲ. ಇಲ್ಲಿರತಕ್ಕ ಕೇಂದ್ರ ಸರ್ಕಾರದ ಮುದ್ರಣಾಲಯದಲ್ಲಿ ವರ್ಕ್‌ಲೋಡ್ ಜಾಸ್ತಿಯಾಗಿದೆ. ಓವರ್‌ಟೈಮ್ ಕೊಟ್ಟು ಕೆಲಸ ತೆಗೆದುಕೊಳ್ಳುತ್ತಿದ್ದಾರೆ. ಗುಲ್ಬರ್ಗದಲ್ಲಿ ಒಂದು ಮುದ್ರಣಾಲಯ ಇದೆ, ಅಲ್ಲಿ ವರ್ಕ್ ಕಡಿಮೆ ಇದೆ, ಅಲ್ಲಿಗೆ ಷಿಫ್ಟ್ ಮಾಡುವುದರಿಂದ ಡಬ್ಬಲ್ ವರ್ಕ್ ತೆಗೆದು ಕೊಳ್ಳಬಹುದು. ಇನ್ನು ಗುಲ್ಬರ್ಗ ಟೆಕ್ಸ್ಟ್ ಬುಕ್ ಪ್ರೆಸ್ ಬಗ್ಗೆ ಅಲ್ಲಿಗೆ ಡೆಪ್ಯುಟಿ ಡೈರೆಕ್ಟರ್‌ರನ್ನು ಹಾಕಿಲ್ಲ. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು ಹಾಗೆ ಎಕ್ಸ್‌ಪ್ಯಾಂಡ್ ಮಾಡಲಿಕ್ಕೆ ವಿಚಾರ ಮಾಡಬೇಕು.

ಶ್ರೀ ಎಂ. ರಘುಪತಿ.—ನಾನು ಸರ್ಕಾರಿ ಮುದ್ರಣಾಲಯದ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಅಲ್ಲಿರತಕ್ಕ ನೌಕರಿ ಸಿಬ್ಬಂದಿವರ್ಗದವರ ಹಲವು ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಅವರ ಜೊತೆ ಒಪ್ಪಂದವಾಗಿದೆ. ಹಾಗೆಯೇ ಅಲ್ಲಿಯ ಮುದ್ರಣಾಲಯವನ್ನು ಎಕ್ಸ್‌ಪ್ಯಾಂಡ್ ಮಾಡುವ ಬಗ್ಗೆ ಯೋಜನೆ ನಮ್ಮಲ್ಲಿದೆ, ಅದನ್ನು ಕಾರ್ಯಗತ ಮಾಡುತ್ತೇವೆ. ಟೆಕ್ಸ್ಟ್‌ಬುಕ್ ಪ್ರೆಸ್ ಏನಿದೆ ಅದನ್ನು ಎಕ್ಸ್‌ಪ್ಯಾಂಡ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ನಾನೇ ಆ ಸ್ಥಳಕ್ಕೆ ಖುದ್ದಾಗಿ ಅಧಿವೇಶನ ಮುಗಿದ ತಕ್ಷಣ ಹೋಗುತ್ತೇನೆ. ಯಾವ ತರಹ ಎಕ್ಸ್‌ಪ್ಯಾಂಡ್ ಮಾಡಲಿಕ್ಕೆ ಸಾಧ್ಯವಾಗುತ್ತದೆ ಅದನ್ನು ನೋಡಿಕೊಂಡು ಮಾಡುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಲೇಬರ್ ಸ್ಕೂಲ್ ಪಾಲಿಸಿ ಪ್ರಕಾರ ಅನುದಾನ ಪಡೆಯುತಕ್ಕ ಕಾಲೇಜುಗಳಲ್ಲಿ ಅಡ್ಮಿಷನ್ ಆಗುವಾಗ ೪೦ ಪರ್ಸೆಂಟ್ ಮಹಿಳೆಯರಿಗೆ ರಿಸರ್ವೇಷನ್ ಇಟ್ಟಿದ್ದಾರೆ. ಸ್ವಾಗತ. ಆದರೆ ೬೦ ಪರ್ಸೆಂಟ್ ಇದ್ದವರಿಗೆ ಮಾತ್ರ ಸೀಟುಗಳನ್ನು ಕೊಡುತ್ತಿದ್ದಾರೆ ೪೦ ಪರ್ಸೆಂಟ್ ಒಳಗಡೆ ಇರತಕ್ಕ ಮಕ್ಕಳಿಗೂ ಅಡ್ಮಿಷನ್ ಕೊಡಲಿಕ್ಕೆ ಸಾಧ್ಯವೇ ?

ಶ್ರೀ ಎಂ. ರಘುಪತಿ.—ಈಗ ಖಾಸಗಿ ಶಾಲೆಗಳಲ್ಲಿ ಅನುದಾನ ಪಡೆಯುತ್ತಿದ್ದಾರೆ. ಅದು ನಮ್ಮ ಕ್ಯಾಪಿಟೇಷನ್ ಅಬಾಲಿಷನ್ ಆಕ್ಟ್ ಪ್ರಕಾರ ಒಂದೊಂದು ಶಾಲೆಗಳಿಗೂ ನಾವು ಆಯ್ಕೆ ಸಮಿತಿಗಳನ್ನು ರಚನೆ ಮಾಡುತ್ತಿದ್ದೇವೆ. ಆಯ್ಕೆ ಸಮಿತಿ ರಚನೆ ಮಾಡಿದಮೇಲೆ ಅದರಲ್ಲಿ ತಜ್ಞರು ಇರುತ್ತಾರೆಯೋ

ಹೊರತು ಬೇರೆಯವರು ಇರುವುದಿಲ್ಲ. ಲೇಬರ್ ಪಾಲಿಸಿ ಪ್ರಕಾರ ೪೦ ಪರ್ಸೆಂಟ್ ಅಂಕಗಳು ಎಂದು ಹೇಳಿದರೂ ಇದನ್ನೆಲ್ಲಾ ಆ ಸಮಿತಿಗೆ ವಹಿಸುತ್ತೇವೆ ಅವರು ನಿರ್ಣಯ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಎಂ. ಇದಿನಬ್ಬ.—ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡುವ ಬಗ್ಗೆ ಅನೇಕ ಸದಸ್ಯರು ಪ್ರಸ್ತಾಪ ಮಾಡಿದರು ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಇನ್ನು ಕೋಮು ಸಾಮರಸ್ಯ ಉಂಟುಮಾಡತಕ್ಕಂಥ ಮತ್ತು ಜಾತ್ಯಾತೀತ ಮನೋಭಾವ ಉಂಟುಮಾಡತಕ್ಕಂಥಾದ್ದನ್ನು ಪಾಠಪ್ರವಚನಗಳಲ್ಲಿ ತರಲಿಕ್ಕೆ ಸರ್ಕಾರದ ನಿಲುವು ಏನು ?

ಶ್ರೀ ಎಂ. ರಘುಪತಿ.—ಅದರಲ್ಲಿ ನಿರ್ವಿವಾದ ಜಾತ್ಯಾತೀತ ಮನೋಭಾವ ಉಂಟುಮಾಡತಕ್ಕ ಪಠ್ಯಪುಸ್ತಕಗಳು ಬರಲೇಬೇಕು. ಅದನ್ನು ನಾನು ಒಪ್ಪುತ್ತೇನೆ ಇನ್ನು ಮಿಡ್ ಡೇ ಮೀಲ್ಸ್ ಬಗ್ಗೆ ಮಾನ್ಯ ಗೋವಿಂದಗೌಡರು ಉತ್ತರ ಹೇಳುತ್ತಾರೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ರಾಣಿ ಚನ್ನಮ್ಮ ಮಹಿಳಾ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುತ್ತೇನೆಂದು ಹಿಂದಿನ ಶಿಕ್ಷಣ ಸಚಿವರು ಹೇಳಿದ್ದರು, ಅದರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ,

ಶ್ರೀ ಎಂ. ರಘುಪತಿ.—ಅದರ ಬಗ್ಗೆ ಇನ್ನೂ ನಿರ್ಣಯವನ್ನು ತೆಗೆದುಕೊಂಡಿಲ್ಲ. ಹಣಕಾಸಿನ ಪರಿಸ್ಥಿತಿ ಸರಿಯಾದರೆ ಮಾಡಲಿಕ್ಕೆ ಅಡ್ಡಿ ಇಲ್ಲ.

ಶ್ರೀ ಕೆ. ಮಲ್ಲಪ್ಪ.—ಎರಡನೇ ವರ್ಷದ ಪಿ.ಯು.ಸಿ. ಪರೀಕ್ಷೆ ಆದಮೇಲೆ ಎಂ.ಬಿ.ಬಿ.ಎಸ್. ಮತ್ತು ಬಿ. ಇ. ಕೋರ್ಸ್‌ಗೆ ಸೀಟು ಬೇಕೆಂದರೆ ಎಂಟ್ರೆನ್ಸ್ ಎಕ್ಸಾಮಿನೇಷನ್ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೀರಿ. ಅದರಲ್ಲಿ ಅವನು ೫೦ ಅಂಕಗಳನ್ನು ಪಡೆಯಬೇಕು. ಅವನಿಗೆ ೯೯.೮ ಪರ್ಸೆಂಟ್ ಬಂದರೂ ಪ್ರವೇಶಕ್ಕೆ ಅವಕಾಶ ಇಲ್ಲ. ೧೪ ಸಾವಿರ ಜನ ಮೆಡಿಕಲ್ ಮತ್ತು ಬಿ.ಇ. ಕೋರ್ಸ್‌ಗೆ ಪ್ರವೇಶ ಇದ್ದರೆ ೨ ಲಕ್ಷ ಜನ ವಿದ್ಯಾರ್ಥಿಗಳು ಎಂಟ್ರೆನ್ಸ್ ಎಕ್ಸಾಮಿನೇಷನ್ ತೆಗೆದುಕೊಳ್ಳುತ್ತಾರೆ. ೫೦ ಅಂಕಗಳನ್ನು ಪಡೆಯದೆ ಫೈಲ್ ಆಗತಕ್ಕವರು ಎಂಟ್ರೆನ್ಸ್ ಎಕ್ಸಾಮಿನೇಷನ್ ತೆಗೆದುಕೊಳ್ಳುತ್ತಾರೆ. ಇದರಿಂದ ಅವರ ತಂದೆ ತಾಯಿಗಳಿಗೆ ಹೊರೆಯಾಗುತ್ತದೆ. ಆದ್ದರಿಂದ, ಪಿ.ಯು.ಸಿ. ಪರೀಕ್ಷೆ ಫಲಿತಾಂಶ ಬಂದಮೇಲೆ ಅದರಲ್ಲಿ ೫೦ ಅಂಕಗಳು ಮೇಲ್ಪಟ್ಟು ಯಾರಿಗೆ ಬಂದಿರುತ್ತದೆ ಅವರಿಗೆ ಎಂಟ್ರೆನ್ಸ್ ಎಕ್ಸಾಮಿನೇಷನ್ ತೆಗೆದುಕೊಳ್ಳಲಿಕ್ಕೆ ಅವಕಾಶ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಇನ್ನು ೫೦ ಸಾವಿರ ರೂಪಾಯಿ ಸಹಾಯಧನ ಕೊಟ್ಟಿರತಕ್ಕ ದಾನಿಗಳ ಹೆಸರನ್ನು ಹೈಸ್ಕೂಲಿನಲ್ಲಿ ಹಾಕಲಿಕ್ಕೆ ಸಾಧ್ಯವೇ ? ಖಾಸಗಿ ಪಾಲಿಟೆಕ್ನಿಕ್‌ನಲ್ಲಿ ಕ್ಯಾಪಿಟೇಷನ್ ಫೀ ರದ್ದು ಮಾಡತಕ್ಕ ವ್ಯವಸ್ಥೆ ಮಾಡುತ್ತೇವೆಂದು ಹೇಳಿದಿರಿ, ಅದನ್ನು ಅನುಸರಿಸಿದ್ದೀರಾ ?

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಏನೆಲ್ಲಾ ಹೇಳಿದ್ದಾರೆ ಅದಕ್ಕೆ ನಾನು ಉತ್ತರ ಹೇಳತಕ್ಕದ್ದು ಇಷ್ಟೆ. ಮಾನ್ಯ ಸದಸ್ಯರು ೫೦ ಪರ್ಸೆಂಟ್ ವಿಚಾರವನ್ನು ಹೇಳಿದ್ದಾರೆ. ಆ ಹುಡುಗನಿಗೆ ೫೦ ಪರ್ಸೆಂಟ್ ಅಂಕಗಳು ಬಂದಿರಲೇಬೇಕು. ಅದರಲ್ಲಿ ಯಾವುದೇ ವಿಧವಾದ ಸಡಿಲತೆ ಇಲ್ಲ. ಪಿ.ಯು.ಸಿ. ಪರೀಕ್ಷೆ ಫಲಿತಾಂಶ ಬಂದಮೇಲೆ ಪ್ರವೇಶ ಪರೀಕ್ಷೆ ನಡೆಸಬೇಕೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದಕ್ಕೆ ಒಂದು ತಜ್ಞರ ಸಮಿತಿ ಇದೆ, ಅವರ ಅಭಿಪ್ರಾಯವನ್ನು ಕೇಳುತ್ತೇನೆ. ಉಪಕುಲಪತಿಗಳವರ ಅಭಿಪ್ರಾಯ ಕೇಳುತ್ತೇನೆ. ಕ್ಯಾಲೆಂಡರ್ ಆಫ್ ಇಯರ್‌ನ್ನು ನಾವು ಕೀಪ್‌ಅಪ್ ಮಾಡಲಿಕ್ಕೆ ಕಷ್ಟ ಸಾಧ್ಯ ಎಂದು ಹೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಖಾಸಗಿ ಶಾಲಾ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಲಿಕ್ಕೆ ಸರ್ಕಾರಕ್ಕೆ ಆಸಕ್ತಿ ಇದೆಯೇ ?

ಶ್ರೀ ಎಂ. ರಘುಪತಿ.—ಮಾಡಬೇಕೆಂದು ಆಸೆ ಇದೆ, ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ.

ಶ್ರೀ ಬಿ. ಎ. ತಂಗಲ್.—ಹಿಂದುಳಿದ ಪ್ರದೇಶವಾದ ಬಿಜಾಪುರದಲ್ಲಿ ಸ್ನಾತಕೋತ್ತರ ಕೇಂದ್ರ ತೆರೆಯಲಿಕ್ಕೆ ಉದ್ದೇಶ ಇದೆಯೇ ?

ಶ್ರೀ ಎಂ. ರಘುಪತಿ.—ಉದ್ದೇಶ ಇದೆ. ಆದರೆ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ.

ಶ್ರೀ ಕೆ. ಎ. ಪಾಟೀಲ್.—ರ್‍ಯಾಂಕ್ ಪಡೆದಂಥ ವಿದ್ಯಾರ್ಥಿಗಳಿಗೆ ಪಾರಿತೋಷಕವನ್ನು ಕೊಡುವ ಬದಲು ಸ್ಕಾಲರ್‌ಷಿಪ್ ಕೊಟ್ಟರೆ ಅನುಕೂಲವಾಗುತ್ತದೆ, ಇನ್ನೊಂದು ವಿಚಾರ ಅಂದರೆ ವಿಜಾಪುರ ಸೈನಿಕ ಶಾಲೆಯು ನಾಡದರಿಯಲ್ಲಿ, ಕಿತ್ತೂರು ಚೆನ್ನಮ್ಮ ರಾಣಿ ಹೆಣ್ಣು ಮಕ್ಕಳ ಶಾಲೆಯಂತೆ ಪ್ರತಿ ಜಿಲ್ಲೆಯಲ್ಲಿ ಒಂದೊಂದು ಶಾಲೆಗಳನ್ನು ತೆಗೆದರೆ ಅನುಕೂಲವಾಗುತ್ತದೆ ಈ ವಿಚಾರ ಸರ್ಕಾರದ ಮುಂದೆ ಇದೆಯೇ ?

ಶ್ರೀ ಎಂ. ರಘುಪತಿ.—ರ್‍ಯಾಂಕ್ ಪಡೆದಂಥ ವಿದ್ಯಾರ್ಥಿಗಳಿಗೆ ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರದ ಸ್ಕಾಲರ್‌ಷಿಪ್ ಸಿಕ್ಕುತ್ತದೆ. ಇನ್ನು ಪ್ರತಿ ಜಿಲ್ಲೆಗೂ ಒಂದೊಂದು ಶಾಲೆಗಳನ್ನು ತೆರೆಯುವ ಬಗ್ಗೆ ಹೇಳಿದ್ದಾರೆ. ಹಂತ ಹಂತವಾಗಿ ಈ ಶಾಲೆಗಳನ್ನು ಎಲ್ಲಾ ಜಿಲ್ಲೆಗಳಿಗೂ ಅಳವಡಿಸಬೇಕೆನ್ನುವ ನೀತಿ ಇದೆ. ೫ ವರ್ಷಗಳಲ್ಲಿ ಆ ಕಾರ್ಯಕ್ರಮ ಪೂರೈಸಬೇಕಾಗುತ್ತದೆ. ಇನ್ನು ಮಾನ್ಯ ವೆಂಕಟರಾಮಯ್ಯನವರು ಬ್ರಿಡ್ಜ್ ಕೋರ್ಸ್ ಬಗ್ಗೆ ಹೇಳಿದ್ದಾರೆ. ಆ ಬ್ರಿಡ್ಜ್ ಕೋರ್ಸ್ ತರಬೇತಿ ಕೊಡಲಿಕ್ಕೋಸ್ಕರ ನಡೆಸುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಇವೊತ್ತು ಶಿಕ್ಷಣ ಮಟ್ಟ ಕುಸಿಯುತ್ತಿದೆ, ಕಾರಣ ಇವೊತ್ತು ಸಾಮಾನ್ಯವಾಗಿ ಹೆಚ್ಚು ಪರ್‌ಸೆಂಟ್ ತೆಗೆದುಕೊಂಡಿರತಕ್ಕಂಥ ಬಿ.ಎ. ಎಂ.ಎ. ಪದವೀಧರರು ಜಾಸ್ತಿ ಸಂಬಳ ಸಿಗುತ್ತದೆಂದು ಬೇರೆ ಬೇರೆ ಕಡೆ ಹೋಗುತ್ತಿದ್ದಾರೆ. ಆದ್ದರಿಂದ, ಅವರಿಗೆ ಹೆಚ್ಚಿನ ವೇತನ ಕೊಟ್ಟು ಸರ್ಕಾರದ ಶಾಲೆಗಳಲ್ಲಿ ಅಪಾಯಿಂಟ್ ಮಾಡಿಕೊಳ್ಳಲಿಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಂ. ರಘುಪತಿ.—ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಕೊಡತಕ್ಕ ವೇತನಶ್ರೇಣಿಯನ್ನು ಖಾಸಗಿಯವರು ಯಾರೂ ಕೊಡುತ್ತಿಲ್ಲ. ಆದ್ದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಪಿ. ಎಸ್. ರಾಣೆ.—ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವುದಕ್ಕೆ ಮುಂದೆ ಬರುತ್ತಿಲ್ಲ ಅವರಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದೇನೆ. ಈ ವಿಷಯದಲ್ಲಿ ಹಿಂದಿನ ಸರ್ಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಜನರಲ್ ಸ್ಕೂಲ್ ಎಂದು ಮಾಡಿ ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳು ಇಬ್ಬರ ಸಲುವಾಗಿ ಹೈಸ್ಕೂಲು ಶಾಲಾ ಕಾಲೇಜುಗಳನ್ನು ತೆರೆಯಬೇಕೆಂದು ಒಂದು ವ್ಯವಸ್ಥೆಯನ್ನು ಮಾಡಿದ್ದರು. ಆ ವ್ಯವಸ್ಥೆಯನ್ನು ತಾವು ಅಳವಡಿಸಿಕೊಳ್ಳುತ್ತೀರಾ ? ಹಳ್ಳಿಗಾಡು ಪ್ರದೇಶಗಳಲ್ಲಿ ಮಕ್ಕಳ ಆಟಪಾಠಗಳ ಸಲುವಾಗಿ ವಿಶೇಷವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಜಿಲ್ಲಾಧಿಕಾರಿಗಳವರಿಗೆ ಆದೇಶವನ್ನು ಕೊಟ್ಟಿದ್ದೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಭಾಷಣ ಮಾಡುವಾಗ ಶಾರೀರಿಕ ಶಿಕ್ಷಣ ಕೊಡಲು ಹೆಚ್ಚಿನ ರೀತಿಯಲ್ಲಿ ಹಳ್ಳಿಗಾಡಿನ ಪ್ರದೇಶಗಳಲ್ಲಿರತಕ್ಕ ಮಕ್ಕಳಿಗೆ ಅನುಕೂಲವಾಗುವಂತೆ ವ್ಯವಸ್ಥೆಯನ್ನು ಮಾಡುತ್ತೀರಾ ? ಮಾನ್ಯ ಮಂತ್ರಿಗಳು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಪುರಸ್ಕಾರ ನೀಡುತ್ತೇವೆಂದು ಹೇಳಿದ್ದಾರೆ. ನಿಮ್ಮ ವರದಿಯಲ್ಲಿ ನೋಡಿದಾಗ ಇಡೀ ರಾಜ್ಯದಲ್ಲಿ ಕೇವಲ ೬ ಜೂನಿಯರ್ ತಾಂತ್ರಿಕ ಶಾಲೆಗಳು ಇವೆ. ಹಿಂದೆ ನಾಲ್ಕು ಜಿಲ್ಲೆಗಳಲ್ಲಿ ವೃತ್ತಿಪರ ಶಿಕ್ಷಣ ಕೊಡಲು ಪ್ರತ್ಯೇಕ ಶಾಲೆಗಳನ್ನು ತೆರೆಯಲಾಗಿತ್ತು. ವೃತ್ತಿಪರ ಶಿಕ್ಷಣ ಕೊಡಲು ಪ್ರತಿಯೊಂದು ಜಿಲ್ಲೆಯಲ್ಲೂ ಜೂನಿಯರ್ ಕಾಲೇಜುಗಳನ್ನು ತೆರೆಯಲಾಗುತ್ತದೆಯೇ ?

ಶ್ರೀ ಎಂ. ರಘುಪತಿ.—ಈಗಿರತಕ್ಕ ಶಾಲೆಗಳಲ್ಲಿ ವೃತ್ತಿಪರ ಶಿಕ್ಷಣಕ್ಕೆ ಸಂಬಂಧಪಟ್ಟಹಾಗೆ ಸಬ್ಜೆಕ್ಟ್ ಇಂಟ್ರಡ್ಯೂಸ್ ಮಾಡಿದ್ದೇವೆ. ಮಕ್ಕಳ ಆಟಪಾಠಗಳ ಬಗ್ಗೆ ಮತ್ತು ಶಾರೀರಕ ಶಿಕ್ಷಣ ಕೊಡುವ ಬಗ್ಗೆ ಮಾನ್ಯಸದಸ್ಯರು ಹೇಳಿದ್ದಾರೆ. ಅದನ್ನು ಮಾಡಬೇಕೆನ್ನುವುದು ಸರ್ಕಾರದ ಉದ್ದೇಶವಿದೆ ಅದನ್ನು ಮಾಡುತ್ತಿದ್ದೇವೆ.

ಶ್ರೀ ಕೆ. ಎಂ. ಮುನಿಯಪ್ಪ.—ತಾಂತ್ರಿಕ ಮಹಾ ವಿಶ್ವವಿದ್ಯಾಲಯವನ್ನು ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರ ಹುಟ್ಟೂರಾದ ಮುದ್ದೇನಹಳ್ಳಿಯಲ್ಲಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ? ಅಥವಾ ಇನ್ನೆಲ್ಲಿ ಸ್ಥಾಪಿಸಲಾಗುವುದು ಅದರ ಬಗ್ಗೆ ಮಾನ್ಯಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಎಂ. ರಘುಪತಿ.—ಮಾನ್ಯ ಮುನಿಯಪ್ಪನವರ ಮತಕ್ಷೇತ್ರವಾದ ಚಿಕ್ಕಬಳ್ಳಾಪುರದಲ್ಲಿ ಸ್ಥಾಪಿಸಬೇಕೆನ್ನುವುದೇ ಸರ್ಕಾರದ ಉದ್ದೇಶ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೆ, ನಾವು ಬೆಳಿಗ್ಗೆ ಪಾರ್ಟಿ ಮೀಟಿಂಗ್‌ಗೆ ಬಂದಿದ್ದೆವು. ನಮಗೆ ಬೆಳಿಗ್ಗೆ ೭ ಗಂಟೆಗೆ ಕೆಲಸ ಶುರುವಾಗಿದೆ. ಈಗಾಗಲೇ ಸುಮಾರು ೮ ಗಂಟೆಯು

ಮೇಲಾಗಿದೆ. ಈ ರೀತಿಯಾದರೆ ಹೇಗೆ ? ನಾವು ಇನ್ನು ಎಷ್ಟು ಸಮಯ ಸಭೆಯಲ್ಲಿ ಕುಳಿತುಕೊಳ್ಳ ಬೇಕು ? ಪುನಃ ಬೆಳಿಗ್ಗೆ ಸಭೆಗೆ ಬರಬೇಕಲ್ಲ.

ಶ್ರೀ ಬಿ. ವಿ. ತಂಗಲ್.—ನಾವೆಲ್ಲಾ ಬೆಳಿಗ್ಗೆ ಬಂದವರು, ಎಷ್ಟು ಸಮಯ ಸಭೆಯಲ್ಲಿ ಕುಳಿತು ಕೊಳ್ಳಬೇಕು ?

ಶ್ರೀ ಎಂ. ರಘುಪತಿ.—ಈಗ ಮಾನ್ಯ ಗೋವಿಂದೇಗೌಡರು ಉತ್ತರ ಹೇಳಲಿ, ಆಮೇಲೆ ಎಲ್ಲರೂ ಕ್ಲಾರಿಫಿಕೇಸನ್ ಕೇಳಿ.

ಶ್ರೀ ಕೆ. ಕೆಂಪೇಗೌಡ.—ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರವಾದ ಪಾಂಡವಪುರದಲ್ಲಿ ಫಸ್ಟ್ ಗ್ರೇಡ್ ಕಾಲೇಜು ತೆರೆಯಲು ಅನುಮತಿ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ಅದನ್ನು ಪರಿಶೀಲನೆಮಾಡುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಅಳವಡಿಸುವುದರಿಂದ ಅದರ ಯಶಸ್ಸಿಗೆ ಪ್ರತಿ ವ್ಯಕ್ತಿಯೂ ವಿದ್ಯಾವಂತನಾಗಬೇಕು. ಈ ದಿಸೆಯಲ್ಲಿ ಪ್ರಾಥಮಿಕ ಶಿಕ್ಷಣ ಪ್ರಧಾನ ಪಾತ್ರ ವಹಿಸುತ್ತದೆ. ಪ್ರಜೆಯೇ ಸಾರ್ವಭೌಮನಾಗಿ ಪ್ರಭುತ್ವದ ಹೊಣೆಯನ್ನು ಹೊತ್ತಿ ರುವಾಗ, ಅವನ ವಿಚಾರ ಶಕ್ತಿಯನ್ನು ಉಜ್ವಲಗೊಳಿಸಲು ಶಿಕ್ಷಣ ಅತ್ಯಾವಶ್ಯಕ. 'ಆದುದರಿಂದಲೇ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡಬೇಕಾಗಿದೆ ಸರ್ಕಾರ ಈ ಬಗ್ಗೆ ಹೆಚ್ಚು ಚಿಂತನೆ ಮಾಡುತ್ತದೆ.

ಶ್ರೀ ರಮೇಶ್‌ಕುಮಾರ್.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ. ಬರೆದುಕೊಂಡು ಬಂದಿರುವುದನ್ನು ಓದುತ್ತಾ ಇದ್ದಾರೆ.

ಶ್ರೀ ಎಂ. ರಘುಪತಿ.—ಮಾನ್ಯ ಮಂತ್ರಿಗಳು ಅದರಲ್ಲಿರುವುದನ್ನು ಪೂರ್ತಿ ಓದುತ್ತಾ ಇಲ್ಲ, ಪಾಯಿಂಟ್ಸ್ ಓದುತ್ತಾ ಇದ್ದಾರೆ.

ಶ್ರೀ ಎಚ್. ಜಿ. ಗೋವಿಂದೇಗೌಡ.—ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಯವರು ಮಾತನಾಡುವಾಗ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಸರ್ಕಾರ ಆದ್ಯತೆ ಕೊಟ್ಟಿಲ್ಲವೆಂದು ತಿಳಿಸಿ ದ್ದಾರೆ. ಅಕ್ಷರ ಸೇನೆಯಡಿಯಲ್ಲಿ ೮೦೦ ಪೂರ್ವ ಪ್ರಾಥಮಿಕ ಶಾಲೆಗಳು ಪ್ರಾರಂಭವಾಗುವುದಕ್ಕೆ ಮೊದಲು ೧೭೧೮ ಪೂರ್ವ ಪ್ರಾಥಮಿಕ ಶಾಲೆಗಳನ್ನೂ ಸೇರಿಸಿ ಒಟ್ಟು ೨೫೧೮ ಪೂರ್ವ ಪ್ರಾಥಮಿಕ ಶಾಲೆಗಳನ್ನು ಸರ್ಕಾರ ಸ್ಥಾಪಿಸಿದೆ. ಇದಲ್ಲದೆ ಸಮಾಜ ಕಲ್ಯಾಣ ಇಲಾಖೆಯವರು ೭೮೦೦ ಪೂರ್ವ ಪ್ರಾಥಮಿಕ ಶಾಲೆಗಳನ್ನೂ, ಖಾಸಗೀ ಸಂಸ್ಥೆಗಳು ೧೩೭೩ ಶಾಲೆಗಳನ್ನೂ ಆಶ್ರಮಶಾಲೆಗಳು ೧೨೫, ಸ್ಥಳೀಯ ಸಂಸ್ಥೆಗಳು ೧೧೧೯೭ ಶಾಲೆಗಳನ್ನು ಒಟ್ಟು ೧೯೯೯೨ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ೪.೩೮ ಲಕ್ಷ ಮಕ್ಕಳಿ ದ್ದಾರೆ. ಶಾಲಾ ಮಾತೆಯರು ೧೪೨೮೭ ಜನರಿದ್ದಾರೆ. ಮಾನ್ಯ ಸದಸ್ಯರಾದ ಖರ್ಗೆಯವರು ಹೇಳಿ ದ್ದರಿಂದ ಇದನ್ನೆಲ್ಲಾ ಹೇಳಬೇಕಾಗಿದೆ. ಸರ್ಕಾರ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಹೆಚ್ಚು ಆದ್ಯತೆ ಕೊಟ್ಟಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನುದಾನದ ತಾರತಮ್ಯ ಹಳೇ ಮೈಸೂರಿನ ಹಳ್ಳಿಗಳಲ್ಲಿ ಕೊಡುವ ಶೇಕಡ ೭೫ರಷ್ಟು, ಪಟ್ಟಣಗಳಲ್ಲಿ ಕೊಡುವ ಶೇಕಡ ೫೦ರಷ್ಟು ಹಾಗೂ ಬಾಂಬೆ ಕರ್ನಾಟಕದಲ್ಲಿ ಕೊಡುವ ಶೇಕಡ ೨೫ರ ಅನುದಾನದ ತಾರತಮ್ಯವನ್ನು ಸರಿಪಡಿಸ ಲಾಗುವುದು. ಎಲ್ಲಾ ಮಕ್ಕಳಿಗೂ ಶಿಕ್ಷಣವನ್ನು ಕೊಡಬೇಕೆಂದಿದ್ದೇವೆ. ಆದಕ್ಕಾಗಿಯೇ ಉಚಿತ ಪಠ್ಯಪುಸ್ತಕ ಹಾಗೂ ಉಚಿತ ಉಡುಪನ್ನು ಹಂಚುತ್ತಿರುವುದು. ಇದರಿಂದ ಮಕ್ಕಳು ಆಕರ್ಷಿತರಾಗಿ ಶಾಲೆಗೆ ಬರುವುದರಲ್ಲಿ ಸಂಶಯವಿಲ್ಲ. ಎಲ್ಲಾ ಶಾಲೆಗಳಿಗೂ ಪೂರ್ವ ಪ್ರಾಥಮಿಕ ಶಾಲೆಗಳನ್ನು ಕೊಡ ಬೇಕೆಂದು ತಿಳಿಸಿದ್ದೀರಿ. ಇದು ಸ್ವಾಗತಾರ್ಹ ಸಲಹೆ. ಕ್ರಮೇಣ ಏಕೋಪಾಧ್ಯಾಯ ಶಾಲೆಗಳಿಗೆ ಪೂರ್ವ ಪ್ರಾಥಮಿಕ ಶಾಲೆಗಳನ್ನು ಕೊಡಲಾಗುವುದು.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನಾವು ಅವರಿಗೆ ಸಹಕಾರ ಮಾಡುತ್ತಿದ್ದೇವೆ. ಆಡಳಿತ ಪಕ್ಷದ ಸದಸ್ಯರಿಗೆ ಸ್ವಲ್ಪ ಹೇಳಿ.

ಅಧ್ಯಕ್ಷರು.—ಮೊದಲು ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಎಚ್. ಜಿ. ಗೋವಿಂದೇಗೌಡ.—ಮಾನ್ಯ ಸದಸ್ಯರುಗಳು ಮಾತನಾಡುವಾಗ ಶಾಲೆಗಳಿಗೆ ಉಪಾಧ್ಯಾಯರನ್ನು ಕೊಡಲಿಲ್ಲವೆಂದು ಹೇಳಿದ್ದಾರೆ. ಈಗ ಎಲ್ಲಾ ಕಡೆ ಶಿಕ್ಷಕರನ್ನು ನೇಮಕ ಮಾಡಲಾಗುತ್ತಿದೆ. ೧೯ ಸಾವಿರದ ೩೩೦ ಖಾಲಿ ಜಾಗಗಳಿಗೆ ಅಭ್ಯರ್ಥಿಗಳನ್ನು ನೇಮಿಸಲಾಗಿದೆ. ಜಿಲ್ಲಾ ನೇಮಕಾತಿ ಸಮಿತಿ ಮೂಲಕ ನೇಮಕ ಮಾಡಿ ಕೊಂಡಿರುವವರ ಪೈಕಿ ಈಗಾಗಲೇ ೧೬ ಸಾವಿರದ ೮೩೩ ಜನ ಡ್ಯೂಟಿಗೆ ಹಾಜರಾಗಿದ್ದಾರೆ. ಇನ್ನು ಈಗ ಉಳಿದಿರುವ ೨೪೯೭ ಖಾಲಿ ಜಾಗಗಳಿಗೆ ಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳ ಆಯ್ಕೆ ಸಧ್ಯದಲ್ಲೇ ಮಾಡಿಕೊಳ್ಳಲಾಗುತ್ತದೆ.

ಎ.ಇ.ಒ.ಗಳಿಗೆ ಹೊರೆ ಹೆಚ್ಚು ಎಂದಿದ್ದಾರೆ. ಅವರಿಗೆ ಮೋಟಾರ್ ಬೈಸಿಕಲ್ ಕೊಡಿಸುವ ವಿಚಾರವನ್ನು ಆಲೋಚಿಸಲಾಗುವುದು. ೨೦ ಲಕ್ಷ ರೂಪಾಯಿಗಳನ್ನು ಪುಸ್ತಕಗಳನ್ನು ಹಂಚಲು ಸಾರಿಗೆ ವೆಚ್ಚವನ್ನಾಗಿ ಕೊಡಲಾಗಿದೆ. ಪೀಠೋಪಕರಣ, ಪಾಠೋಪಕರಣ, ಕಟ್ಟಡಗಳ ನಿರ್ಮಾಣ ಇವುಗಳಿಗೆ ಹೆಚ್ಚಿನ ಗಮನ ಹರಿಸಬೇಕೆಂದು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಸರ್ಕಾರವು ಇದರ ಕಡೆಗೆ ಗಮನ ಹರಿಸಿದೆ. ಪಠ್ಯ ಪುಸ್ತಕಗಳ ಹಂಚಿಕೆಗಾಗಿ ಇಡೀ ರಾಜ್ಯಾದ್ಯಂತ ೨೦ ಲಕ್ಷ ರೂ.ಗಳನ್ನು ಸಾಗಾಣಿಕೆ ವೆಚ್ಚಕ್ಕಾಗಿ ಬಿಡುಗಡೆ ಮಾಡಿ, ಆ ಒಂದು ಜವಾಬ್ದಾರಿಯನ್ನು ಎ.ಇ.ಒ. ಗಳಿಗೆ ಕೊಟ್ಟಿದ್ದೇವೆ. ಅವರು ಪುಸ್ತಕಗಳನ್ನು ಹಂಚತಕ್ಕ ವ್ಯವಸ್ಥೆಯನ್ನು ಮಾಡುತ್ತಾರೆ. ಇದಕ್ಕಾಗಿ ಯಾರಿಂದಲೂ ದುಡ್ಡನ್ನು ವಸೂಲು ಮಾಡತಕ್ಕ ಅವಶ್ಯಕತೆ ಇಲ್ಲ. ಉಪಾಧ್ಯಾಯರೂ ಕೊಡಬೇಕಾಗಿಲ್ಲ. ತಂದೆತಾಯಿಗಳೂ ಕೊಡಬೇಕಾಗಿಲ್ಲ. ಎಲ್ಲವನ್ನೂ ಸರ್ಕಾರವೇ ನಿರ್ವಹಿಸುತ್ತದೆ.

೧೯೮೪-೮೫ನೇ ಸಾಲಿನಲ್ಲಿ ಒಟ್ಟು ೯ ಕೋಟಿ ರೂಪಾಯಿಗಳ ಬೆಲೆ ಬಾಳುವ ಪಾಠೋಪಕರಣ, ಪೀಠೋಪಕರಣ, ಕಟ್ಟಡಗಳು ನಿವೇಶನಗಳು ಇವುಗಳನ್ನು ದಾನಿಗಳಿಂದ ಪಡೆಯಲಾಗಿ, ಎನ್.ಆರ್. ಇ.ಪಿ. ಯಲ್ಲೂ ಸಹ ಕಟ್ಟಡಗಳಿಗೆ ಹಣ ಪಡೆಯಲಾಗಿರುತ್ತದೆ. ಪೂರ್ವ ಪ್ರಾಥಮಿಕ ಶಾಲೆಗಳಿಗೆ ಹೆಣ್ಣು ಮಕ್ಕಳನ್ನೇ ತೆಗೆದುಕೊಳ್ಳಬೇಕೆಂದು ತಿಳಿಸಿದ್ದಾರೆ. ಈಗಲೂ ಹೆಣ್ಣು ಮಕ್ಕಳನ್ನೇ ಶಾಲಾ ಮಾತೆಯರನ್ನಾಗಿ ತೆಗೆದುಕೊಳ್ಳಲಾಗುತ್ತಿದೆ. ಹೆಣ್ಣು ಮಕ್ಕಳನ್ನು ದೂರದ ಶಾಲೆಗಳಿಗೆ ಹಾಕಿದರೆ ಅದರಿಂದ ತೊಂದರೆಯಾಗುತ್ತದೆಂದು ತಿಳಿಸಿದ್ದಾರೆ. ಅದರ ಬಗ್ಗೆ ಸಹ ಪರಿಶೀಲನೆ ಮಾಡಲಾಗುವುದು.

ಶ್ರೀಮಾನ್ ವೇದಾಂತ ಹೆಮ್ಮಿಗೆಯವರು ಜೀವನ ಶಿಕ್ಷಣವನ್ನು ಕೊಡಬೇಕೆಂದು ತಿಳಿಸಿದ್ದಾರೆ. ಈ ಬಗ್ಗೆ ಈಗಾಗಲೇ ಡಾ|| ನರಸಿಂಹಯ್ಯನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಮಾನ್ಯ ಸದಸ್ಯರ ಸಲಹೆ ಉತ್ತಮವಾಗಿದೆ. ಖಾಸಗೀ ಶಾಲೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಇದು ಸದ್ಯಕ್ಕೆ ಸಾಧ್ಯವಾಗದಿದ್ದರೂ ಇರುವ ಅವ್ಯವಸ್ಥೆಯನ್ನು ಸರಿಪಡಿಸಲು ಪ್ರಯತ್ನಿಸಲಾಗುವುದು. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶಿಕ್ಷಕರನ್ನು ನೇಮಕ ಮಾಡಬೇಕೆಂದು ತಿಳಿಸಿದ್ದಾರೆ. ಇದು ಉತ್ತಮ ಸಲಹೆ. ಇದನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಉತ್ತಮವಾಗಿ ಕೆಲಸ ಮಾಡಿದವರಿಗೆ ಪ್ರಶಸ್ತಿಯನ್ನು ಕೊಡಬೇಕೆಂದೂ ತಿಳಿಸಿದ್ದಾರೆ. ಇದು ಉತ್ತಮ ಸಲಹೆ, ನರ್ಸರಿ ಶಾಲೆಯಲ್ಲಿ ಹಣ ವಸೂಲಿ ಮಾಡುತ್ತಿದ್ದಾರೆಂದು ತಿಳಿಸಿದ್ದಾರೆ. ಈ ಬಗ್ಗೆ ಈಗಾಗಲೇ ಒಂದು ಸಮಿತಿಯನ್ನು ಶ್ರೀ ಭರತ್ ಕಾರ್ಯದರ್ಶಿಗಳು, ಇವರ ನೇತೃತ್ವದಲ್ಲಿ ರಚಿಸಲಾಗಿದೆ. ನಂತರ ಮಾನ್ಯ ಚನ್ನಪ್ಪನವರು ಕಟ್ಟಡಗಳು ಸೋರುತ್ತಿವೆ, ಪಾಠೋಪಕರಣ, ಪೀಠೋಪಕರಣಗಳ ಅವಶ್ಯಕತೆ ಇದೆ ಎಂದು ತಿಳಿಸಿದ್ದಾರೆ. ಸರ್ಕಾರದ ಜೊತೆ ಸಾರ್ವಜನಿಕರೂ ಸಹಕರಿಸಬೇಕು. ಮಧ್ಯಾಹ್ನದ ಉಪಹಾರವನ್ನು ಉತ್ತಮ ಪಡಿಸಬೇಕೆಂದು ತಿಳಿಸಿದ್ದಾರೆ. ಇದನ್ನು ಪರಿಶೀಲಿಸಲಾಗುವುದು. ಮಾನ್ಯ ಬಚ್ಚೇಗೌಡರು ಅಕ್ಷರಸೇನೆ ೫ ಜಿಲ್ಲೆಗಳಲ್ಲಿದೆ. ಅದನ್ನು ರಾಜ್ಯಾದ್ಯಂತ ವಿಸ್ತರಿಸಬೇಕೆಂದು ತಿಳಿಸಿದ್ದಾರೆ. ಆರ್ಥಿಕ ಪರಿಸ್ಥಿತಿ ಉತ್ತಮಗೊಂಡ ಮೇಲೆ ಇದನ್ನು ಪರಿಶೀಲಿಸಲಾಗುವುದು. ನಂತರ ನಿರುದ್ಯೋಗಿ ಪದವೀಧರರನ್ನು ಸಾಂಪ್ರದಾಯರಹಿತ ಶಾಲೆಗಳಿಗೆ ನೇಮಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ಈಗ ನಿರುದ್ಯೋಗಿಗಳನ್ನೇ ನೇಮಿಸಿಕೊಳ್ಳಲಾಗುತ್ತಿದೆ. ಎ.ಇ.ಒ. ಗಳಿಗೆ ಮೋಟಾರ್ ಬೈಸಿಕಲ್ಲನ್ನು ಕೊಡಿಸಿಕೊಡಬೇಕೆಂದೂ ತಿಳಿಸಿದ್ದಾರೆ. ಆ ಸಲಹೆ ಉತ್ತಮವಾಗಿದೆ. ಅದನ್ನು ಪರಿಶೀಲಿಸಲಾಗುವುದು. ಶ್ರೀಮಾನ್ ರತ್ನಾಕರ್‌ರವರು ಅನುದಾನ ಪಡೆಯುವ ಶಾಲೆಗಳು ಅನ್ಯಾಯ ಮಾಡುತ್ತಿವೆ ಎಂದು ತಿಳಿಸಿದ್ದಾರೆ. ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ. ಡೊನೇಷನ್ ತೆಗೆದುಕೊಳ್ಳುವುದನ್ನು ತಪ್ಪಿಸಲು ಸಮಿತಿ ರಚನೆಯಾಗಿದೆ. ಉಪಾಧ್ಯಾಯರಿಲ್ಲವೆಂದಿದ್ದಾರೆ. ಈಗ ನೇಮಿಸಲಾಗಿದೆ. ಶ್ರೀಮಾನ್ ಭೂಪತಿಯವರು ಶಾಲೆಯ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಪ್ರಮಾಣವನ್ನು ಕಡಿಮೆ ಮಾಡುವ ಬಗ್ಗೆ ಹೇಳಿದ್ದಾರೆ. ಇದು

ಉತ್ತಮ ಸಲಹೆ. ಪರಿಶೀಲಿಸಲಾಗುವುದು. ಮಿಲಿಟರಿ ಟ್ರೈನಿಂಗ್ ಕೊಡಬೇಕೆಂದಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಬಹುಶಃ ಅದು ಕಷ್ಟವಾಗುತ್ತದೆ. ಕ್ರಮೇಣ ಪರಿಶೀಲಿಸಬಹುದು. ಪ್ರಾಥಮಿಕ ಸರ್ಕಾರಿ ಶಾಲೆಗಳಲ್ಲಿ ಪ್ರಗತಿ ಕಡಿಮೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದಕ್ಕೆ ಕಾರಣ ಖಾಸಗಿ ಶಾಲೆಗಳವರು ಮೆರಿಟ್ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಉಳಿದ ವಿದ್ಯಾರ್ಥಿಗಳನ್ನು ನಾವು ಸರ್ಕಾರಿ ಶಾಲೆಗೆ ಸೇರಿಸಿಕೊಳ್ಳಬೇಕಾಗುತ್ತದೆ. ಸರ್ಕಾರಿ ಶಾಲೆಯಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳವರ ಮಕ್ಕಳು ಇರುವುದರಿಂದ, ಸರ್ಕಾರಿ ಶಾಲೆಗಳಲ್ಲಿ ಪ್ರಗತಿ ಮಂದವಾದಂತೆ ಕಣ್ಣಿಗೆ ಕಾಣಿಸುತ್ತದೆ. ಮಾನ್ಯ ವೆಂಕಟರಾಮಯ್ಯನವರು ಶಾಲೆಗಳು ಜೋಪಡಿಯಲ್ಲಿ ನಡೆಯುತ್ತಿವೆ ಎಂಬುದಾಗಿ ತಿಳಿಸಿದ್ದಾರೆ. ಸರ್ಕಾರ ಸಾಕಷ್ಟು ಕಟ್ಟಡಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡುತ್ತಿದೆ. ಎನ್.ಆರ್.ಇ.ಪಿ.ಯಲ್ಲೂ ಕಟ್ಟಡಕ್ಕಾಗಿ ಹಣವನ್ನು ಪಡೆಯಲಾಗುತ್ತಿದೆ. ಮಕ್ಕಳ ಸಂಖ್ಯೆ ಹೆಚ್ಚಿದಂತೆಲ್ಲಾ ಸಮಸ್ಯೆ ಸಾಮಾನ್ಯವಾಗಿ ಹೆಚ್ಚಾಗುತ್ತಿದೆ ಡ್ರಾಫ್ಟ್ ಔಟ್ಸ್ ಹೆಚ್ಚುತ್ತಿದೆ ಎಂಬುದಾಗಿ ತಿಳಿಸಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಪ್ರೈಮರಿ ೪ನೇ ತರಗತಿ ಮುಗಿಯುವುದರಲ್ಲಿ ೪೪ ಪರ್ಸೆಂಟ್ ಡ್ರಾಪ್ಔಟ್ಸ್ ಇದೆ. ಎಂಬುದಾಗಿ ತಿಳಿಸಿದ್ದಾರೆ. ಇದನ್ನು ತೊಡೆದುಹಾಕಲು ಉಚಿತ ಪಠ್ಯಪುಸ್ತಕಗಳನ್ನು ೧ ರಿಂದ ೭ನೇ ತರಗತಿಯವರೆಗೆ ಹಾಗೂ ೧ ರಿಂದ ೨ನೇ ತರಗತಿಯ ಮಕ್ಕಳಿಗೆ ಉಚಿತ ಉಡುಪುಗಳನ್ನು ಕೊಡಲಾಗುತ್ತಿದೆ. ಇವರಿಂದ ಸಮಸ್ಯೆ ಪರಿಹಾರವಾಗಬಹುದು. ಮಾನ್ಯ ಸದಸ್ಯರುಗಳು ಡೊನೇಷನ್ ಬಗ್ಗೆ ಹೇಳಿದ್ದಾರೆ. ಇದನ್ನು ತಡೆಗಟ್ಟಲು ಈಗಾಗಲೇ ಶ್ರೀ ಭರತ್‌ರವರನ್ನು ಕಾರ್ಯದರ್ಶಿಗಳನ್ನಾಗಿ ಮಾಡಿ ಇವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಕೆಲವು ಕಡೆಗಳಲ್ಲಿ ಉಪಾಧ್ಯಾಯರಿಲ್ಲ, ಪರೀಕ್ಷೆ ಮಾಡಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಈಗ ಜಿಲ್ಲಾ ನೇಮಕಾತಿ ಸಮಿತಿಗಳನ್ನು ಮಾಡಿದ್ದೇವೆ. ೧೯,೩೩೦ ಖಾಲಿ ಜಾಗಗಳಿದ್ದು ೧೬,೮೩೩ ಅಭ್ಯರ್ಥಿಗಳು ಡಿ.ಎಲ್.ಆರ್.ಸಿ. ಮುಖಾಂತರ ನೇಮಕವಾಗಿದ್ದಾರೆ. ಇನ್ನು ಉಳಿದಿರುವ ೨೪೯೭ ಖಾಲಿ ಸ್ಥಳಗಳಿಗೆ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತಿದೆ. ಪೀಠೋಪಕರಣಗಳು ಶಾಲೆಗಳಲ್ಲಿ ಇಲ್ಲ ಎಂಬುದಾಗಿ ತಿಳಿಸಿದ್ದಾರೆ. ಈ ವಿಷಯವನ್ನೆಲ್ಲಾ ಈಗಾಗಲೇ ತಿಳಿಸಲಾಗಿದೆ. ಇದಕ್ಕೆ ಸಾರ್ವಜನಿಕರ ಸಹಾಯವೂ ಬೇಕಾಗುತ್ತದೆ. ಈಗ್ಗೆ ಎರಡು ವರ್ಷಗಳಿಂದ ೯ ಕೋಟಿ ರೂಪಾಯಿಗಳ ಪಾಠೋಪಕರಣ ಹಾಗೂ ಪೀಠೋಪಕರಣಗಳನ್ನು ದಾನದ ರೂಪದಲ್ಲಿ ಪಡೆಯಲಾಗಿದ್ದು. ಅವುಗಳನ್ನು ಎಲ್ಲ ಶಾಲೆಗಳಿಗೆ ಹಂಚಲಾಗಿದೆ. ಡಿ.ಎಲ್.ಆರ್.ಸಿ. ಸಚೇತನಗೊಳಿಸಬೇಕೆಂದು ತಿಳಿಸಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಖಾಸಗಿ ಶಾಲೆಗಳಲ್ಲಿ ಉತ್ತಮ ಶಿಕ್ಷಣವೇನಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಇದು ಬಹಳ ಮಟ್ಟಿಗೆ ನಿಜ. ಖಾಸಗಿ ಶಾಲೆಗಳು ತೆಗೆದುಕೊಂಡು ಉಳಿದ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ಪಡೆಯುತ್ತಾರೆ. ಎಲ್ಲ ಮಕ್ಕಳೂ ೩೫ ಪರ್ಸೆಂಟ್‌ನ್ನು ಪಡೆದಿರತಕ್ಕಂತಹ ಮಕ್ಕಳನ್ನು ಅಡ್ಮಿಟ್ ಮಾಡಿಕೊಂಡು ಅವರಿಗೆ ಪಾಠವನ್ನು ಹೇಳಬೇಕಾಗುತ್ತದೆ. ಆವಾಗ ಅವರ ಗುಣಮಟ್ಟ ಸ್ವಲ್ಪ ವ್ಯತ್ಯಾಸವಾಗತಕ್ಕಂತಹದ್ದು ಸ್ವಾಭಾವಿಕ ಎನ್ನತಕ್ಕಂತಹ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಳ್ಳಿಮಕ್ಕಳಿಗೆ ಹೆಚ್ಚು ಪ್ರವೇಶಾವಕಾಶ ಶಾಲಾಕಾಲೇಜುಗಳಲ್ಲಿ ಇರಬೇಕಾಗುತ್ತದೆಂದು ಹೇಳಿದ್ದಾರೆ. ಕೆಲವು ಕಾನೂನಿನ ತೊಡಕು ಇರುವುದರಿಂದ ಆ ರೀತಿ ಮಾಡಲು ಸಾಧ್ಯವಾಗದಿರಬಹುದು. ಆದರೂ ಮಾನ್ಯ ಸದಸ್ಯರ ಸಲಹೆಯನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದು. ನಂತರ ಮಾನ್ಯ ಯಡಿಯೂರಪ್ಪನವರು ಖಾಸಗಿ ಶಾಲೆಗಳು ವ್ಯಾಪಾರಕ್ಕೆ ಇಳಿದಿವೆ ಎಂಬುದಾಗಿ ತಿಳಿಸಿದ್ದಾರೆ. ಈ ಬಗ್ಗೆ ಈಗಾಗಲೇ ಸಮಿತಿಯನ್ನು ರಚಿಸಲಾಗಿದೆ ಎಂಬುದಾಗಿ ನಾನು ಈಗಾಗಲೇ ಹೇಳಿದ್ದೇನೆ. ಉಚಿತ ಪಠ್ಯಪುಸ್ತಕಗಳನ್ನು ಹಾಗೂ ಉಡುಪನ್ನು ಉಚಿತವಾಗಿ ಕೊಡುವುದು ಸರಿಯಲ್ಲ ಎಂಬುದಾಗಿ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಮಕ್ಕಳನ್ನು ಹೆಚ್ಚು ಸಂಖ್ಯೆಯಲ್ಲಿ ಶಾಲೆಗೆ ಆಕರ್ಷಿಸಿ ಡ್ರಾಪ್ಔಟ್‌ನ ಅನಾಹುತವನ್ನು ತಪ್ಪಿಸಲು ಈ ವ್ಯವಸ್ಥೆ ಮಾಡಲಾಗಿದೆ. ಅನೇಕ ತಂದೆತಾಯಿಗಳಿಗೆ ಪುಸ್ತಕಗಳನ್ನು ಸಹ ಒದಗಿಸಲು ಶಕ್ತರಾಗಿರಲಿಲ್ಲ. ಶಿಶುವಿಹಾರವನ್ನು ಕೊಟ್ಟಿಲ್ಲವೆಂದು ತಿಳಿಸಿದ್ದಾರೆ. ಅಕ್ಷರ ಸೇನೆಯನ್ನು ತೆಗೆದುಕೊಂಡು ಜಿಲ್ಲೆಗಳಲ್ಲಿ ಶಿಶುವಿಹಾರವನ್ನು ಏಕೋಪಾಧ್ಯಾಯ ಶಾಲೆಗಳಿಗೆ ಕೊಟ್ಟಿದೆ. ಎ.ಇ.ಓ. ಗಳಿಗೆ ವಾಹನ ಬೇಕೆಂದು ಹೇಳಿದ್ದಾರೆ. ಇದರ ವ್ಯವಸ್ಥೆ ಬಗ್ಗೆ ಆಲೋಚಿಸಲಾಗುತ್ತಿದೆ. ಡಿ.ಎಲ್.ಆರ್.ಸಿ.ಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎಂಬುದಾಗಿ ತಿಳಿಸಿದ್ದಾರೆ. ವಯಸ್ಸು ಹಾಗೂ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆರಿಸಲಾಗಿದೆ. ಮಾನ್ಯ ಸದಸ್ಯರಾದ ಡಿಸೋಜರವರು ವಿದ್ಯಾ ಇಲಾಖೆಯಲ್ಲಿ ಹೆಚ್ಚಿನ ರೀತಿಯಲ್ಲಿ ಪ್ರಯೋಗ ನಡೆಸಲಾಗುತ್ತಿದೆ ಎಂಬುದಾಗಿ ತಿಳಿಸಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಕೆಲವು ಬದಲಾವಣೆಗಳು ಅತ್ಯಾವಶ್ಯಕ. ಸನ್ನಿವೇಶ ಹಾಗೂ ಪರಿಸ್ಥಿತಿಗೆ ಅನುಗುಣವಾಗಿ ಬದಲಾವಣೆಯಾಗಬೇಕಾಗುತ್ತದೆ. ಹಳ್ಳಿಗಳಲ್ಲಿ ಉಪಾಧ್ಯಾಯರಿಲ್ಲ. ಉತ್ತಮ ಶಿಕ್ಷಣವಿಲ್ಲವೆಂದಿದ್ದಾರೆ.

೩೦೦ ಜನಸಂಖ್ಯೆಗಿಂತ ಹೆಚ್ಚಾಗಿರುವ ಊರುಗಳಿಗೆಲ್ಲಾ ಶಾಲೆಗಳನ್ನು ಕೊಡಲಾಗಿದೆ. ಪುಸ್ತಕಗಳಿಲ್ಲವೆಂದಿದ್ದಾರೆ. ಇದಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಪೀಠೋಪಕರಣ ಇಲ್ಲ. ಕಟ್ಟಡಗಳಿಲ್ಲ ಎಂಬುದಾಗಿಯೂ ಹೇಳಿದ್ದಾರೆ. ಇದಕ್ಕೆ ಈಗಾಗಲೇ ಉತ್ತರ ಕೊಡಲಾಗಿದೆ. ೬೦ ರಿಂದ ೭೦ ಮಕ್ಕಳನ್ನು ಒಂದೊಂದು ತರಗತಿಯಲ್ಲಿ ಇಟ್ಟಿದ್ದಾರೆ, ಇದನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ಇದು ಉತ್ತಮವಾದ ಸಲಹೆ. ಇದರ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ, ಡಾ|| ತಿಪ್ಪೇಸ್ವಾಮಿಯವರು ೬ ವರ್ಷದಿಂದ ೧೪ ವರ್ಷದ ಮಕ್ಕಳು ಎಷ್ಟು ಜನ ಶಾಲೆಗೆ ಹೋಗುತ್ತಿದ್ದಾರೆಂದು ಹೇಳಿದ್ದಾರೆ. ೫೫.೪೬ ಲಕ್ಷ ಮಕ್ಕಳು ಶಾಲೆಯಲ್ಲಿ ಓದುತ್ತಿದ್ದಾರೆ. ಅಕ್ಷರ ಸೇನೆ ತರಗತಿಗಳು ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಈಗ ನಡೆಸಲಾಗುತ್ತಿರುವ ಮೇಲ್ವಿಚಾರಣೆಯನ್ನು ಬಿಗಿಗೊಳಿಸಲಾಗುವುದು. ತಂದೆತಾಯಿಗಳು ಉಚಿತ ಪಠ್ಯಪುಸ್ತಕಗಳನ್ನು ಕೊಂಡುಕೊಳ್ಳಲು ಚೈತನ್ಯವಿಲ್ಲವೆಂದು ಬರೆದು ಕೇಳಿಕೊಳ್ಳಬೇಕೆಂದು ತಿಳಿಸಿದ್ದಾರೆ. ಈ ಸಲಹೆಯನ್ನು ಸಹ ಪರಿಶೀಲಿಸಲಾಗುವುದು. ಪೂರ್ವ ಪ್ರಾಥಮಿಕ ಶಾಲೆಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದು ತಿಳಿಸಿದ್ದಾರೆ. ಇದು ಉತ್ತಮ ಸಲಹೆ. ಇದೇ ರೀತಿಯ ಪ್ರಶ್ನೆಗಳನ್ನು ಮಾನ್ಯ ಸದಸ್ಯರುಗಳಾದ ಶ್ರೀ ಜಿ. ಎಸ್. ಆಚಾರ್‌ರವರು ಕೇಳಿದ್ದಾರೆ. ಶ್ರೀ ರಮೇಶ್ ಕುಮಾರ್‌ರವರು ಹೇಳಿದ್ದಾರೆ. ಶ್ರೀ ರಾಮಯ್ಯನವರು ಹೇಳಿದ್ದಾರೆ. ಶ್ರೀ ಕಾಂತಾರವರು ಹೇಳಿದ್ದಾರೆ. ಅದೇ ರೀತಿ ಮಾನ್ಯ ಶ್ರೀ ರಾಣೆಯವರು ಹೇಳಿದ್ದಾರೆ. ಈ ರೀತಿ ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಎಲ್ಲ ಸದಸ್ಯರುಗಳೂ ಹೇಳಿದ್ದಕ್ಕೆಲ್ಲಾ ಉತ್ತರವನ್ನು ಹೇಳಬೇಕಾದರೆ ಬಹಳ ಕಷ್ಟವಾಗುತ್ತದೆ. ಸಮಯದ ಅಭಾವ ಕೂಡ ಇದೆ. ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಆಗತಕ್ಕ ಕೆಲವು ವ್ಯತ್ಯಾಸಗಳ ಬಗ್ಗೆಯೂ ಕೂಡ ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರುಗಳು ಕೊಟ್ಟಂತಹ ಸಲಹೆಗಳನ್ನೆಲ್ಲಾ ಸಾಧ್ಯವಾದ ಮಟ್ಟಿಗೂ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಖಡ್ಡಾಯವಾಗಿ ಶಾಲೆಗೆ ಹೋಗತಕ್ಕ ಮಕ್ಕಳ ವಯಸ್ಸು ೫ ವರ್ಷ ೧೦ ತಿಂಗಳು ಇರಬೇಕೆಂಬ ನಿಯಮ ಇದೆ. ಇದರಿಂದ ಬಹಳ ಜನ ಮಕ್ಕಳು ಒಂದೊಂದು ವರ್ಷ ಹಾಳಾಗುತ್ತಿದೆ. ಕಾರಣ ಎರಡು ವರ್ಷ ೯ ತಿಂಗಳು ಆಗಿದ್ದಂತಹ ಮಕ್ಕಳನ್ನು ಶಾಲೆಗೆ ಸೇರಿಸಲು ಹೋದರೆ ಅವರು ಸೇರಿಸುವುದಿಲ್ಲ. ಮುಂದಿನ ಸಾರಿ ಬನ್ನಿ ಎಂಬುದಾಗಿ ಹೇಳುತ್ತಾರೆ. ಆದ್ದರಿಂದ ೨ ವರ್ಷ ೯ ತಿಂಗಳು ಆದಂತಹ ಮಕ್ಕಳನ್ನು, ಕಾನ್ವೆಂಟಿನಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ಇರುವಂತೆ ಪ್ರೀಪ್ರೈಮರಿ ಸೆಂಟರ್ಸ್‌ನಲ್ಲಿಟ್ಟು ನಂತರ ೫ ವರ್ಷ ೧೦ ತಿಂಗಳು ಆದ ನಂತರ ಒಂದನೇ ತರಗತಿಗೆ ಸೇರಿಸುವಂತಹ ವ್ಯವಸ್ಥೆಯಾಗಬೇಕು. ಇದರಲ್ಲಿ ಒಂದೆರಡು ತಿಂಗಳು ಈಚೆ, ಆಚೆ ಆಗಿದ್ದರೂ ಶಾಲೆಗೆ ಸೇರಿಸಬೇಕು. ಆ ಬಗ್ಗೆ ಸರ್ಕಾರ ಏನಾದರೂ ವ್ಯವಸ್ಥೆ ಮಾಡುತ್ತದೆಯೇ ಎಂಬುದಾಗಿ ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸುತ್ತೇನೆ.

ಶ್ರೀ ಬಿ. ಎ. ಉಪ್ಪಿನ್.—ಖಾಸಗಿಯವರು ನಡೆಸುತ್ತಿರುವ ಪ್ರೌಢಶಾಲೆಗಳನ್ನು ಅವರು ಇಚ್ಛಿಸಿದಲ್ಲಿ ಸರ್ಕಾರ ವಹಿಸಿಕೊಳ್ಳುವುದೆ ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಕಾನೂನು ರೀತಿ ಸರಿಯಾಗಿದ್ದರೆ ವಹಿಸಿಕೊಳ್ಳಲಾಗುವುದು.

ಶ್ರೀ ಎಸ್. ಕೆ. ಕಾಂತ.—ಎನ್.ಆರ್.ಡಬ್ಲ್ಯೂ.ಎಸ್. ಮೂಲಕ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ಆದರೆ ಪಟ್ಟಣಗಳಲ್ಲಿ ಆ ವ್ಯವಸ್ಥೆ ಇಲ್ಲ. ಅವರಿಗೆ ಹಣ ಎಲ್ಲಿಂದ ಬರಬೇಕು ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಪಟ್ಟಣಗಳಲ್ಲಿ ಪುರಸಭೆಯವರು ಮತ್ತು ನಗರಗಳಲ್ಲಿ ನಗರಸಭೆಯವರು ಶಾಲೆಗಳ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು. ಪುರಸಭೆಯವರು ದುಡ್ಡಿಲ್ಲ ಎನ್ನುತ್ತಿದ್ದಾರೆ, ನಗರಸಭೆಯವರು ಮುಂದೆ ಬಂದಿದ್ದಾರೆ. ಪುರಸಭೆಯವರು ಸಾರ್ವಜನಿಕರಿಂದ ಹಣ ಸಂಗ್ರಹ ಮಾಡಿದರೆ ನಾವು ಸ್ವಲ್ಪ ಅದಕ್ಕೆ ಕೂಡಿಸಿ ಕೊಡುತ್ತೇವೆ.

ಶ್ರೀ ಕೆ. ಮಲ್ಲಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಯಾರಾದರೂ ಖಾಸಗಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಮುಂದೆ ಬಂದರೆ ಅವರಿಗೆ ಸರ್ಕಾರ ಪ್ರಾರಂಭದಿಂದ ಅನುದಾನ ಕೊಡುತ್ತದೆಯೆ ?

ಶ್ರೀ ಎಂ. ರಘುಪತಿ.—ಇಲ್ಲ. ಅದು ಸಾಧ್ಯವಿಲ್ಲ.

ಶ್ರೀ ಬಿ. ವಿ. ತುಂಗಲ್.—ಘಟಪ್ರಭಾ, ಮಲಪ್ರಭಾ ನೀರಾವರಿ ಪ್ರದೇಶಗಳಲ್ಲಿ ನೀರಾವರಿ ಆದಮೇಲೆ ಸುಮಾರಾಗಿ ಅನೇಕರು ಊರು ಬಿಟ್ಟು ಹೋಗಿದ್ದಾರೆ. ಆದ್ದರಿಂದ, ಅವರು ಈಗ ವಾಸಿಸುತ್ತಿರತಕ್ಕ ಕಡೆ ೬೦–೭೦ ಹುಡುಗರು ಇದ್ದರೆ ಶಾಲೆಗಳನ್ನು ತೆಗೆಯುವ ಬಗ್ಗೆ ವಿಚಾರ ಮಾಡಿದ್ದೀರಾ ?

ಶ್ರೀ ಎಂ. ರಘುಪತಿ.—ಅದನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಪಂಪಾಪತಿ.—ಉಪಾಧ್ಯಾಯರು ಇಲ್ಲದಿರುವ ಶಾಲೆಗಳಿಗೆ ಎಷ್ಟು ದಿನಗಳಲ್ಲಿ ಉಪಾಧ್ಯಾಯರನ್ನು ನೇಮಿಸತಕ್ಕ ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ೩ ಸಾವಿರ ಮಂದಿ ಉಪಾಧ್ಯಾಯರನ್ನು ಒಂದು ತಿಂಗಳೊಳಗೆ ನೇಮಿಸಿ ಅವರನ್ನು ಉಪಾಧ್ಯಾಯರಿಲ್ಲದಿರುವ ಶಾಲೆಗಳಿಗೆ ಕಳುಹಿಸಿಕೊಡುತ್ತೇವೆ.

SRI BLASIUS M. D' SOUZA.—Has the Government decided to compulsorily promoted the students up to 7th Standard ?

XX XX XX

SRI M. RAGHUPATHI —It is under active consideration of the Government.

ಶ್ರೀ ಯು. ಭೂಪತಿ.—ಪ್ರಾಥಮಿಕ ಶಾಲೆಗಳಿಗೆ ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆಯೂ ಜಾಸ್ತಿಯಾಗುತ್ತಿದೆ ಎಂದು ಹೇಳಿದಿರಿ ಈ ಸಂಖ್ಯೆ ಜಾಸ್ತಿಯಾಗುತ್ತಿದೆ ಎಂದು ಹೇಳುವುದಕ್ಕೆ ಸೆನ್ಸಸ್ ಆಧಾರ ಎಂದು ಹೇಳುತ್ತೀರಿ. ಈಗ ರೆಗ್ಯುಲರ್ಸ್ ಆಗಿ ಎಷ್ಟು ಜನ ವಿದ್ಯಾರ್ಥಿಗಳು ಬರುತ್ತಿದ್ದಾರೆ ? ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹಳ್ಳಿಗಳಲ್ಲಿ ವಸತಿ ಸೌಕರ್ಯ ಇಲ್ಲದಿರುವುದರಿಂದ ಬಹಳಷ್ಟು ಜನ ತೊಂದರೆ ಪಡುತ್ತಿದ್ದಾರೆ. ಅನೇಕರು ಪ್ರಾಥಮಿಕ ಶಾಲೆಗಳಲ್ಲೇ ವಸತಿ ಗೃಹಗಳನ್ನು ಮಾಡಿಕೊಂಡು ಶಾಲೆ ನಡೆಸುವ ಉದಾಹರಣೆಗಳು ಇವೆ. ಇದರಿಂದ ಮಹಿಳಾ ಶಿಕ್ಷಕರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಸತಿ ಗೃಹಗಳನ್ನು ಒದಗಿಸುವುದಕ್ಕೆ ಸರ್ಕಾರದ ಕಾರ್ಯಕ್ರಮ ಇದೆಯೇ ?

ಶ್ರೀ ಹೆಚ್.ಜಿ. ಗೋವಿಂದೇಗೌಡ.—ಮಾನ್ಯ ಸದಸ್ಯರೇನು ಅಭಿಪ್ರಾಯ ಪಟ್ಟಿದ್ದಾರೆ ಅದು ಸೂಕ್ತವಾದುದು. ಸರ್ಕಾರದ ಹಣಕಾಸಿನ ಪರಿಸ್ಥಿತಿ ಸುಧಾರಿಸಿದಾಗ ಖಂಡಿತವಾಗಿ ಅದನ್ನು ದೀರ್ಘವಾಗಿ ಯೋಚಿಸಿ ಮಾಡುತ್ತೇವೆ.

ಶ್ರೀ ಯು. ಭೂಪತಿ.—ತಮಗೆ ಸೆನ್ಸಸ್ ಬಿಟ್ಟು ಬೇರೆ ಏನಾದರೂ ಆಧಾರ ಇದೆಯೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಕೆ. ಕೆಂಪೇಗೌಡ.—ಹಳ್ಳಿಗಳಲ್ಲಿ ಬಹಳಷ್ಟು ಮಂದಿ ಶಿಕ್ಷಕರು ರಾಜಕಾರಣ ಮಾಡುತ್ತಾರೆಂದು ಎಲ್ಲಾ ಸದಸ್ಯರು ಮಾತನಾಡಿದ್ದಾರೆ. ಆದ್ದರಿಂದ ಅವರನ್ನು ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆ ಮಾಡತಕ್ಕದ್ದು ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಶ್ರೀ ಹೆಚ್.ಜಿ. ಗೋವಿಂದೇಗೌಡ.—ಈ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ, ಇದನ್ನು ಬರುವ ವರ್ಷ ಪರಿಶೀಲಿಸಿ ತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಿ. ಎಸ್. ರಾಣೆ.—ಸೂಪಾ ತಾಲ್ಲೂಕಿನಲ್ಲಿ ಶಿಕ್ಷಕರಿಲ್ಲದೆ ೧೯ ಶಾಲೆಗಳು ಮುಚ್ಚಿವೆ ಎಂದು ಹೇಳಿದ್ದಾರೆ. ಅಲ್ಲಿ ಕೂಡಲೇ ಶಿಕ್ಷಕರನ್ನು ನೇಮಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ? ಸೂಪಾ ತಾಲ್ಲೂಕಿನಲ್ಲಿ ಎ.ಇ.ಓ. ಕಚೇರಿ ದವಾಖಾನೆಯಲ್ಲಿ ನಡೆಯುತ್ತಿದೆ. ಅದಕ್ಕೆ ಹೊಸದಾಗಿ ಕಟ್ಟಡ ಕಟ್ಟುತ್ತೀರಾ? ಮತ್ತು ಭ್ರಷ್ಟ ಅಧಿಕಾರಿಗಳ ಬಗ್ಗೆ ಹೇಳಿದ್ದೆ, ಅವರ ಬಗ್ಗೆ ತುರ್ತು ಕ್ರಮ ತೆಗೆದು ಕೊಳ್ಳುತ್ತೀರಾ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಸೂಪದಲ್ಲಿ ತಾವೇನು ಶಿಕ್ಷಕರು ಇಲ್ಲವೆಂದು ಹೇಳುತ್ತಿದ್ದೀರಿ ಅಲ್ಲಿ ಜಾಗ್ರತೆ ಶಿಕ್ಷಕರನ್ನು ನೇಮಿಸತಕ್ಕ ವ್ಯವಸ್ಥೆ ಮಾಡುತ್ತೇವೆ. ಇಲ್ಲದಿದ್ದರೆ ಬೇರೆ ಕಡೆಯಿಂದಾದರೂ ತಂದು ಹಾಕುತ್ತೇವೆ. ಎ.ಇ.ಓ. ಕಚೇರಿಗೆ ಬಾಡಿಗೆ ಕೊಡಲಿಕ್ಕೆ ಸರ್ಕಾರ ಸಿದ್ಧವಿದೆ. ಸದಸ್ಯರು ಯಾವುದಾದರೂ ಸೂಕ್ತ ಕಟ್ಟಡವನ್ನು ಒದಗಿಸಿಕೊಟ್ಟರೆ ಕೂಡಲೇ ಬಾಡಿಗೆಗೆ ತೆಗೆದು ಕೊಳ್ಳುತ್ತೇವೆ.

ಪ್ರಸ್ತಾವ

ಅಧ್ಯಕ್ಷರು.—ಚರ್ಚೆಗ ಉತ್ತರ ಮುಕ್ತಾಯವಾಯಿತು ಈಗ ಪ್ರಸ್ತಾಪ ಏನೆಂದರೆ:

'೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೯-೧೦ ೧೪-೧೩ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾತಿ ಮಾಡಿದ್ದೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರ್ಮಾಡುವುದು.'

ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಬೇಡಿಕೆ ಸಂಖ್ಯೆ ೯-ಲೇಖನ ಸಾಮಾಗ್ರಿ ಮತ್ತು ಮುದ್ರಣ

'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೪೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡುವುದು.'

ಬೇಡಿಕೆ ಸಂಖ್ಯೆ ೧೦-ಉಚ್ಚ ಶಿಕ್ಷಣ

'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೩,೨೫,೧೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೫,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುಧಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರ್ಮಾಡುವುದು.'

ಬೇಡಿಕೆ ಸಂಖ್ಯೆ ೧೪-ಸೆಕೆಂಡರಿ ಶಿಕ್ಷಣ

'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೨,೫೦,೪೬,೦೦೦ ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡುವುದು.'

ಬೇಡಿಕೆ ಸಂಖ್ಯೆ ೧೩-ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ

'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೧೪,೮೬,೩೧,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡುವುದು.'

ಅಧ್ಯಕ್ಷರು.—ಸಭೆಯು ಇಲ್ಲಿಗೆ ಮುಕ್ತಾಯವಾಗಿ ನಾಳೆ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶ ಗೊಳ್ಳುವುದು.

(ಸಭೆಯು ರಾತ್ರಿ ಎಂಟು ಗಂಟೆ ಇಪ್ಪತ್ತೆಂಟು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ೭ನೇ ಆಗಸ್ಟ್ ೧೯೮೫ ರ ಬುದವಾರ ಬೆಳಿಗ್ಗೆ ಹನ್ನೊಂದು ಗಂಟೆಗೆ ಸೇರುವುದಾಗಿ ನಿಶ್ಚಯಿಸಲಾಯಿತು.)